ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆರಗ ಸೇರಿ ನಾಲ್ವರಿಗೆ ಬದಲಿ ನಿವೇಶನ ಹಂಚಿಕೆ ಪ್ರಕರಣ: 'ಸುಪ್ರೀಂ' ತರಾಟೆ

ಆಯುಕ್ತರ ವರ್ಗಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದ ಬಡಾವಣೆಯಲ್ಲಿ ಬಹು ಜನರಿಗೆ ಪರ್ಯಾಯ ನಿವೇಶನಗಳನ್ನು ಹಂಚಿಕೆ ಮಾಡಿದ ಕಾರಣಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಯುಕ್ತ ಎಂ.ಬಿ. ರಾಜೇಶ ಗೌಡ ಅವರನ್ನು ಸುಪ್ರೀಂ ಕೋರ್ಟ್ ಗುರುವಾರ ತರಾಟೆಗೆ ತೆಗೆದುಕೊಂಡಿದೆ.

ಕೋರ್ಟ್ ಆದೇಶದ ಬಗ್ಗೆ ಅವಿಧೇಯತೆ ತೋರಿದ್ದಕ್ಕೆ ರಾಜೇಶ ಗೌಡ ಅವರನ್ನು ಪ್ರಾಧಿಕಾರದಿಂದ ವರ್ಗಾವಣೆ ಮಾಡಬೇಕು ಎಂದೂ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ಸುಪ್ರೀಂ ಕೋರ್ಟ್ 2021ರ ಅಕ್ಟೋಬರ್ 29ರಂದು ಹೊರಡಿಸಿದ ಆದೇಶಕ್ಕೆ ವ್ಯತಿರಿಕ್ತವಾಗಿ ಬಿಡಿಎ ತೀರ್ಮಾನ ತೆಗೆದುಕೊಂಡಿದ್ದಕ್ಕೆ ನ್ಯಾಯಮೂರ್ತಿಗಳಾದ ಎಸ್.ಅಬ್ದುಲ್ ನಜೀರ್ ಹಾಗೂ ಸಂಜೀವ್ ಖನ್ನಾ ಅವರನ್ನು ಒಳಗೊಂಡ ದ್ವಿಸದಸ್ಯ ಪೀಠ ತೀವ್ರ ಅಸಮಾಧಾನ ವ್ಯಕ್ತಪಡಿಸಿತು. ಡಾ.ಶಿವರಾಮ ಕಾರಂತ ಬಡಾವಣೆಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ವೇಳೆ ನ್ಯಾಯಪೀಠವು ಬಿಡಿಎ ಅಧಿಕಾರಿಗಳ ಧೋರಣೆಗೆ ಕಿಡಿಕಾರಿತು.

'ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಪರ್ಯಾಯ ನಿವೇಶನಗಳ ಹಂಚಿಕೆಯನ್ನು ನಾವು ನಿರ್ಬಂಧಿಸಿದ್ದೇವೆ. ಆಯುಕ್ತರು ನಮ್ಮ ಆದೇಶವನ್ನು ಉಲ್ಲಂಘಿಸಿದ್ದಾರೆ ಹಾಗೂ ಪ್ರಾಧಿಕಾರಕ್ಕೆ ಭಾರಿ ಆರ್ಥಿಕ ನಷ್ಟ ಉಂಟು ಮಾಡಿದ್ದಾರೆ. ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಆರ್‌ಎಂವಿ (2ನೇ ಹಂತ ಎಕ್ಸ್‌ಟೆನ್ಶನ್) ಬಡಾವಣೆಯಲ್ಲಿ ₹9 ಕೋಟಿಯಿಂದ ₹10 ಕೋಟಿ ಮೌಲ್ಯದ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ' ಎಂದು ನ್ಯಾಯಪೀಠ ಹೇಳಿದೆ.

ಮರು ಸ್ವಾಧೀನ ಪಡೆದಿರುವ ಅಥವಾ ಪೂರ್ಣ ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಸಾರ್ವಜನಿಕ ಹರಾಜಿನ ಮೂಲಕ ಮಾತ್ರ ನಿವೇಶನಗಳನ್ನು ಹಂಚಿಕೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ 2021ರ ಅಕ್ಟೋಬರ್ 29ರಂದು ಆದೇಶಿಸಿತ್ತು. ಆದರೆ, ಪ್ರಾಧಿಕಾರವು ಸುಪ್ರೀಂ ಕೋರ್ಟ್ ಆದೇಶವನ್ನು ಉಲ್ಲಂಘಿಸಿ ಅಭಿವೃದ್ಧಿ

ಮುಖ್ಯಾಂಶಗಳು

- ಕಾರ್ಯದರ್ಶಿ, ಉಪ ಕಾರ್ಯದರ್ಶಿಗಳ ವರ್ಗಾವಣೆ ಬಗ್ಗೆಯೂ ಪರಿಶೀಲನೆ
- ಕ್ಷಮೆ ಕೋರಿದ ಬಿಡಿಎ ವಕೀಲರು

ಹೊಂದಿದ ಬಡಾವಣೆಯಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ ಸೇರಿದಂತೆ ನಾಲ್ವರಿಗೆ ಪರ್ಯಾಯ ನಿವೇಶನಗಳನ್ನು ಹಂಚಿಕೆ ಮಾಡಿತ್ತು. ಬಳಿಕ ಮಧ್ಯಂತರ ಅರ್ಜಿ ಸಲ್ಲಿಸಿ, ತನ್ನ ಆದೇಶವನ್ನು ಮಾರ್ಪಾಡು ಮಾಡುವಂತೆ ಕೋರಿತ್ತು.

ಬಿಡಿಎ ಪರ ವಕೀಲರು ನ್ಯಾಯಾಲಯದ ಕ್ಷಮೆ ಕೋರಿದರು. 'ಪರ್ಯಾಯ ನಿವೇಶನಗಳನ್ನು ಹಂಚಿಕೆ ಮಾಡುವ ಮೊದಲು ಆದೇಶ ಮಾರ್ಪಾಡು ಮಾಡಬೇಕು ಎಂಬುದಾಗಿ ಬಿಡಿಎ ಮನವಿ ಮಾಡಬೇಕಿತ್ತು' ಎಂದು ಅವರು ಹೇಳಿದರು.

'ನ್ಯಾಯಾಲಯದ ಆದೇಶ ಉಲ್ಲಂಘಿಸಿದ ಬಳಿಕ ಆಯುಕ್ತರು ಮಧ್ಯಂತರ ಅರ್ಜಿ ಸಲ್ಲಿಸಿದ್ದಾರೆ. ಇದರ ಅರ್ಥವೇನು? ಜಿ ಕೆಟಗರಿ ನಿವೇಶನ ಹಂಚಿಕೆಯೇ ಅಕ್ರಮ. ಎಚ್‌ಎಸ್‌ಆರ್ ಬಡಾವಣೆಯಲ್ಲಿ ಅಕ್ರಮವಾಗಿ ನಿವೇಶನ ಪಡೆದ ವ್ಯಕ್ತಿಯು ಆರ್‌ಎಂವಿಯಲ್ಲಿ ಪರ್ಯಾಯ ನಿವೇಶನವನ್ನು ಪಡೆದಿದ್ದು ಹೇಗೆ' ಎಂದು ನ್ಯಾಯಪೀಠವು ಪ್ರಶ್ನಿಸಿತು.

'ಆಯುಕ್ತರು ಕೋವಿಡ್ ಪೀಡಿತರಾಗಿದ್ದಾರೆ. ಹಾಗಾಗಿ, ಅವರು ವಿಚಾರಣೆಗೆ ಹಾಜರಾಗಿಲ್ಲ' ಎಂದು ಬಿಡಿಎ ಪರ ವಕೀಲರು ಹೇಳಿದರು. 'ಪ್ರಾಧಿಕಾರದಿಂದ ರಾಜೇಶ ಗೌಡ ಅವರನ್ನು ಕೂಡಲೇ ವರ್ಗಾವಣೆ ಮಾಡಬೇಕು. ಅವರಿಗೆ ಸುಪ್ರೀಂ ಕೋರ್ಟ್ ಆದೇಶಗಳ ಬಗ್ಗೆ ಗೌರವವೇ ಇಲ್ಲ. ಇಂದಿನಿಂದ ಅವರು ಯಾವುದೇ ಪ್ರಮುಖ ಆದೇಶಗಳಿಗೆ ಸಹಿ ಹಾಕುವಂತಿಲ್ಲ. ಇದು ಕೋರ್ಟ್‌ನ ಆದೇಶ' ಎಂದು ನ್ಯಾಯಪೀಠವು ಮೌಖಿಕವಾಗಿ ಹೇಳಿತು.

ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದ ಬಿಡಿಎ ಕಾರ್ಯದರ್ಶಿ ಹಾಗೂ ಉಪ ಕಾರ್ಯದರ್ಶಿಗಳನ್ನು ಸಹ ವರ್ಗಾವಣೆ ಮಾಡುವ ಬಗ್ಗೆ ಪರಿಶೀಲನೆ ನಡೆಸುವುದಾಗಿ ನ್ಯಾಯಪೀಠವು ಹೇಳಿತು. 'ನಿವೇಶನದ ಅಕ್ರಮ ಹಂಚಿಕೆಯಲ್ಲಿ ಅವರೂ ಭಾಗಿಯಾಗಿದ್ದಾರೆ' ಎಂದು ನ್ಯಾಯಪೀಠ ಹೇಳಿತು.

ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿಯ 20ನೇ ವರದಿಯನ್ನು ಸಮಿತಿಯ ಪರವಾಗಿ ವಕೀಲ ಸಂಜಯ್ ಎಂ. ನುಲಿ ನ್ಯಾಯಪೀಠಕ್ಕೆ ಸಲ್ಲಿಸಿದರು.

ಈದ್ಗಾ ಮೈದಾನ ಕ್ರೀಡೆಗಷ್ಟೇ ಸೀಮಿತ

ಬೆಂಗಳೂರು: 'ಚಾಮರಾಜಪೇಟೆ ಮೈದಾನವು ಕ್ರೀಡೆಗಳಿಗೆ ಮಾತ್ರವೇ ಸೀಮಿತವಾಗಿರಬೇಕು' ಎಂದು ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

'ಮೈದಾನದ ಮಾಲೀಕತ್ವ ಕಂದಾಯ ಇಲಾಖೆಗೆ ಸೇರಿದೆ' ಎಂಬ ಸರ್ಕಾರದ ಆದೇಶವನ್ನು ಪ್ರಶ್ನಿಸಿ ವಕ್ಫ್ ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಮತ್ತು ಬೆಂಗಳೂರು ಜಿಲ್ಲೆ ವಕ್ಫ್ ಸಲಹಾ ಸಮಿತಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ಮುಸ್ಲಿಂ ಸಮುದಾಯದವರು ರಂಜಾನ್ ಮತ್ತು ಬಕ್ರೀದ್ ವೇಳೆ ಮಾತ್ರವೇ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಬಹುದು. ಬೇರೆ ಸಂದರ್ಭಗಳಲ್ಲಿ ಪ್ರಾರ್ಥನೆಗೆ ಅವಕಾಶ ಇಲ್ಲ' ಎಂದು ನ್ಯಾಯಪೀಠ ಹೇಳಿದೆ.

ವಿಚಾರಣೆ ವೇಳೆ ವಕ್ಫ್ ಮಂಡಳಿ ಪರ ಹಿರಿಯ ವಕೀಲ ಜಯಕುಮಾರ್ ಎಸ್.ಪಾಟೀಲ, 'ಇದು ವಕ್ಫ್ ಮಂಡಳಿಗೆ ಸೇರಿದ ಜಾಗ ಎಂಬುದನ್ನು ಈ ಹಿಂದೆಯೇ ನಿರ್ಧರಿಸಿ, 1965ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. ಆದರೆ, ಬಿಬಿಎಂಪಿ ಜಂಟಿ ಆಯುಕ್ತರು ತಮ್ಮ ಅಧಿಕಾರ ಮೀರಿ ಆದೇಶ ಹೊರಡಿಸಿದ್ದಾರೆ' ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ, 'ಮೈಸೂರು ಭೂ ಕಂದಾಯ ಕಾಯ್ದೆಯ ಕಲಂ 36ರ ಪ್ರಕಾರ ಮೈದಾನವು ರಾಜ್ಯ ಸರ್ಕಾರದ ಸ್ವತ್ತು. 1965ರಲ್ಲಿ ಸರ್ಕಾರ ಜಮೀನಿನ ಸರ್ವೇ ನಡೆಸಿದಾಗ ಯಾರೂ ಆಕ್ಷೇಪ ವ್ಯಕ್ತಪಡಿಸಿಲ್ಲ. ಕಳೆದ 57 ವರ್ಷಗಳಿಂದಲೂ ಈ ಸ್ಥಿರಾಸ್ತಿ ಸರ್ಕಾರದ ಹೆಸರಿನಲ್ಲಿದೆ. ಹಾಗಾಗಿ, ಬಿಬಿಎಂಪಿ ಪಶ್ಚಿಮ ವಲಯದ ಜಂಟಿ ಆಯುಕ್ತರ ಆದೇಶ ಕಾನೂನುಬದ್ಧವಾಗಿಯೇ ಇದೆ' ಎಂದು ಪ್ರತಿಪಾದಿಸಿದರು.

ಇದಕ್ಕೆ ನ್ಯಾಯಪೀಠ, 'ಇದನ್ನೂ ಮತ್ತೊಂದು ಹುಬ್ಬಳ್ಳಿ ಈದ್ಗಾ ಮೈದಾನದ ವಿವಾದದಂತೆ ಮಾಡಬೇಡಿ' ಎಂದು ಮೌಖಿಕವಾಗಿ ಕುಟುಕಿತಲ್ಲದೆ, 'ಪ್ರತಿ ಶುಕ್ರವಾರದ ಪ್ರಾರ್ಥನೆಗೆ ಇಲ್ಲಿ ಅವಕಾಶ ಇರುವುದಿಲ್ಲ. ಪ್ರಕರಣ ಇತ್ಯರ್ಥ ಆಗುವವರೆಗೆ ಮೈದಾನವನ್ನು ಕ್ರೀಡೆಗಳ ಉಪಯೋಗಕ್ಕೆ ಮಾತ್ರ ಸೀಮಿತಗೊಳಿಸಿ ಯಥಾಸ್ಥಿತಿ ಕಾಯ್ದುಕೊಳ್ಳಬೇಕು' ಎಂದು ಅದೇಶಿಸಿ ವಿಚಾರಣೆ ಮುಂದೂಡಿತು.



ಪೆಗಾಸಸ್: 'ಸುಪ್ರೀಂ'ಗೆ ವರದಿ ಸಲ್ಲಿಸಿದ ನ್ಯಾ. ರವೀಂದ್ರನ್ ನೇತೃತ್ವದ ಸಮಿತಿ

'ತನಿಖೆಗೆ ಸಹಕರಿಸದ ಕೇಂದ್ರ'

ನವದೆಹಲಿ (ಪಿಟಿಐ): 'ಇಸ್ರೇಲ್‌ನ ಪೆಗಾಸಸ್ ಕುತಂತ್ರಾಂಶವನ್ನು ಕಾನೂನುಬಾಹಿರವಾಗಿ ಬಳಕೆ ಮಾಡಿರುವ ಕುರಿತ ತನಿಖೆಗೆ ಕೇಂದ್ರ ಸರ್ಕಾರವು ಸಹಕಾರ ನೀಡಿಲ್ಲ' ಎಂದು ಈ ಸಂಬಂಧ ತನಿಖೆ ನಡೆಸಲು ರಚನೆಯಾಗಿದ್ದ ಸಮಿತಿಯು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ವರದಿಯಲ್ಲಿ ಹೇಳಿದೆ.

ಈ ಕುರಿತು ತನಿಖೆ ಕೈಗೊಂಡಿದ್ದ ನಿವೃತ್ತ ನ್ಯಾಯಮೂರ್ತಿ ಆರ್.ವಿ.ರವೀಂದ್ರನ್ ನೇತೃತ್ವದ ಸಮಿತಿಯು ನ್ಯಾಯಾಲಯಕ್ಕೆ ಗುರುವಾರ ಅಂತಿಮ ವರದಿ ಸಲ್ಲಿಸಿದ್ದು, ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಹಿಮಾ ಕೊಹ್ಲಿ ಅವರನ್ನೊಳಗೊಂಡ ತ್ರಿಸದಸ್ಯ ಪೀಠವು ಇದರ ಪರಿಶೀಲನೆ ನಡೆಸಿತು.

'ಪರೀಕ್ಷೆಗಾಗಿ ತಾಂತ್ರಿಕ ಸಮಿತಿಗೆ ಒಟ್ಟು 29 ಮೊಬೈಲ್‌ಗಳನ್ನು ಒದಗಿಸಲಾಗಿತ್ತು. ಈ ಪೈಕಿ ಐದು ಮೊಬೈಲ್‌ಗಳಲ್ಲಿ ಒಂದು ಬಗೆಯ ಕುತಂತ್ರಾಂಶ ಪತ್ತೆಯಾಗಿದೆ. ಬೇಹುಗಾರಿಕೆ ನಡೆಸಲೆಂದೇ ಇದನ್ನು ಬಳಸಲಾಗಿದೆಯೇ ಎಂಬುದು ಖಾತರಿಯಾಗಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ. ಸಮಿತಿಯು ಒಟ್ಟು ಮೂರು ಹಂತಗಳನ್ನು ಒಳಗೊಂಡ ಸುದೀರ್ಘ ವರದಿ ಸಲ್ಲಿಸಿದೆ. ಇದನ್ನು ಸಾರ್ವಜನಿಕವಾಗಿ ಬಿಡುಗಡೆಗೊಳಿಸದಂತೆ ಮನವಿಯನ್ನೂ ಮಾಡಲಾಗಿದೆ' ಎಂದು ಪೀಠ ಹೇಳಿದೆ.

'ನಾಗರಿಕರ ಗೋಪ್ಯತೆಯ ಹಕ್ಕು ರಕ್ಷಿಸುವ, ಭವಿಷ್ಯದಲ್ಲಿ ಕೈಗೊಳ್ಳಬೇಕಿರುವ ಕ್ರಮ ಹಾಗೂ ಹೊಣೆಗಾರಿಕೆ ವಿಚಾರವಾಗಿ ವರದಿಯಲ್ಲಿ ಹಲವು ಸಲಹೆಗಳನ್ನು ನೀಡಲಾಗಿದೆ. ಗೋಪ್ಯತೆಯ ರಕ್ಷಣೆ ಹಾಗೂ

ಕುಂದುಕೊರತೆ ಪರಿಹಾರ ಕಾರ್ಯವಿಧಾನವನ್ನು ಸುಧಾರಿಸುವ ಸಲುವಾಗಿ ಕಾನೂನಿನಲ್ಲಿ ತಿದ್ದುಪಡಿ ಮಾಡುವ ಅಗತ್ಯವಿದೆ ಎಂದೂ ವರದಿಯಲ್ಲಿ ಉಲ್ಲೇಖಿಸಲಾಗಿದೆ. ದೇಶದ ಸೈಬರ್ ಭದ್ರತೆಯನ್ನು ಹೆಚ್ಚಿಸುವುದರ ಜೊತೆಗೆ ಅದರ ಸುಧಾರಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂಬ ಸಲಹೆಯನ್ನೂ ಸಮಿತಿ ನೀಡಿದೆ' ಎಂದು ಪೀಠ ತಿಳಿಸಿದೆ.

'ಮರುಪರಿಶೀಲಿಸಿದ ವರದಿಯನ್ನು ದೂರುದಾರರಿಗೆ ಒದಗಿಸಬೇಕು' ಎಂದು ಹಿರಿಯ ವಕೀಲರಾದ ಕಪಿಲ್ ಸಿಬಲ್ ಹಾಗೂ ರಾಕೇಶ್ ದ್ವಿವೇದಿ ಅವರು ಪೀಠವನ್ನು ಒತ್ತಾಯಿಸಿದರು. 'ವರದಿಯನ್ನು ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುತ್ತೇವೆ' ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದರು.

ತನಿಖಾ ಸಮಿತಿಗೆ ಕೇಂದ್ರ ಸರ್ಕಾರ ಸಹಕರಿಸಿಲ್ಲ ಎಂದು ಪೀಠ ಹೇಳಿದಾಗ, 'ಈ ಬಗ್ಗೆ ನನಗೆ ಮಾಹಿತಿ ಇಲ್ಲ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಪ್ರತಿಕ್ರಿಯಿಸಿದರು.

ನಾಲ್ಕು ವಾರಗಳ ಬಳಿಕ ಈ ಸಂಬಂಧದ ವಿಚಾರಣೆ ನಡೆಸುವುದಾಗಿ ನ್ಯಾಯಾಲಯ ಹೇಳಿತು.

ಇಸ್ರೇಲ್‌ನ ಕುತಂತ್ರಾಂಶ ಪೆಗಾಸಸ್ ಬಳಸಿ ವಿರೋಧ ಪಕ್ಷಗಳ ನಾಯಕರು, ಪತ್ರಕರ್ತರು, ಸಾಮಾಜಿಕ ಹೋರಾಟಗಾರರು ಹಾಗೂ ಇತರರ ಮೇಲೆ ಬೇಹುಗಾರಿಕೆ ನಡೆಸಿರುವ ಆರೋಪದ ಬಗ್ಗೆ ತನಿಖೆ ನಡೆಸುವಂತೆ ಕೋರಿ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು.

> **ತನಿಖೆಗೆ ಕೇಂದ್ರ ಸರ್ಕಾರ ಸಹಕರಿಸಿಲ್ಲ ಎಂದು ತನಿಖಾ ಸಮಿತಿ ಹೇಳಿದೆ. ಈ ವಿಚಾರದಲ್ಲಿ ಕೇಂದ್ರವು ಮಹತ್ವದ್ದಾಗಿರುವ ಏನನ್ನೋ ಮುಚ್ಚಿಡಲು ಪ್ರಯತ್ನಿಸುತ್ತಿರುವುದಕ್ಕೆ ಇದು ಸಾಕ್ಷಿ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ಮುಖಂಡ

> **ರಾಹುಲ್ ಗಾಂಧಿ ಅವರು ಪೆಗಾಸಸ್ ವಿಚಾರ ಮುಂದಿಟ್ಟುಕೊಂಡು ಬಿಜೆಪಿ ವಿರುದ್ಧ ದೇಶದ್ರೋಹದಂತಹ ಗಂಭೀರ ಆರೋಪಗಳನ್ನು ಮಾಡಿದ್ದರು ಈಗ ಅವರು ಕ್ಷಮೆ ಕೇಳಲಿದ್ದಾರೆಯೇ?**
> **ರವಿಶಂಕರ್ ಪ್ರಸಾದ್,** ಬಿಜೆಪಿ ಮುಖಂಡ

ಈ ಸಂಬಂಧ ತನಿಖೆಗಾಗಿ ಸೈಬರ್ ಭದ್ರತೆ, ಡಿಜಿಟಲ್ ವಿಧಿವಿಜ್ಞಾನ, ನೆಟ್‌ವರ್ಕ್ ಮತ್ತು ಹಾರ್ಡ್‌ವೇರ್ ವಿಷಯದಲ್ಲಿ ಪರಿಣತಿ ಹೊಂದಿದ್ದ ನವೀನ್‌ಕುಮಾರ್ ಚೌಧರಿ, ಪಿ.ಪ್ರಬಹರನ್ ಮತ್ತು ಅಶ್ವಿನ್ ಅನಿಲ್ ಗುಮಾಸ್ತೆ ಅವರನ್ನೊಳಗೊಂಡ ಸಮಿತಿಯೊಂದನ್ನು ಸುಪ್ರೀಂ ಕೋರ್ಟ್ ಹೋದ ವರ್ಷ ರಚಿಸಿತ್ತು. ನಿವೃತ್ತ ನ್ಯಾಯಮೂರ್ತಿ ರವೀಂದ್ರನ್ ಅವರಿಗೆ ಇದರ ಮೇಲ್ವಿಚಾರಣೆ ಜವಾಬ್ದಾರಿ ನೀಡಲಾಗಿತ್ತು. ಮಾಜಿ ಐಪಿಎಸ್ ಅಧಿಕಾರಿ ಅಲೋಕ್ ಜೋಶಿ ಹಾಗೂ ಸೈಬರ್ ಭದ್ರತಾ ತಜ್ಞ ಸಂದೀಪ್ ಒಬೆರಾಯ್ ಅವರನ್ನು ಸಹಾಯಕರನ್ನಾಗಿ ನೇಮಿಸಲಾಗಿತ್ತು.

'ಪ್ರಜಾಪ್ರಭುತ್ವ ದುರ್ಬಲಗೊಳಿಸಲು ಪೆಗಾಸಸ್ ಬಳಸಿದ ಕೇಂದ್ರ': 'ಪೆಗಾಸಸ್ ಕುರಿತ ತನಿಖೆಗೆ ಕೇಂದ್ರ ಸರ್ಕಾರ ಸಹಕರಿಸಲಿಲ್ಲ ಎಂದು ತನಿಖಾ ಸಮಿತಿ ತನ್ನ ವರದಿಯಲ್ಲಿ ತಿಳಿಸಿದೆ. ಕೇಂದ್ರದ ಈ ಧೋರಣೆಯು ಅದು ಪೆಗಾಸಸ್ ಕುತಂತ್ರಾಂಶ ಬಳಸಿಕೊಂಡು ಪ್ರಜಾಪ್ರಭುತ್ವ ದುರ್ಬಲಗೊಳಿಸಲು ಯತ್ನಿಸಿತ್ತು ಎಂಬುದನ್ನು ಒಪ್ಪಿಕೊಂಡಂತಿದೆ' ಎಂದು ಕಾಂಗ್ರೆಸ್ ಆರೋಪಿಸಿದೆ.

'ಕೇಂದ್ರವು ಪೆಗಾಸಸ್ ಅನ್ನು ಅಸ್ತ್ರವಾಗಿ ಬಳಸಿಕೊಂಡು ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಾಶಪಡಿಸಲು ಮುಂದಾಗಿತ್ತು. ಪೆಗಾಸಸ್ ಈ ದೇಶದ ಕಾನೂನು ಹಾಗೂ ಸಂವಿಧಾನಕ್ಕೆ ವಿರೋಧವಾದುದು. ಕೇಂದ್ರ ತಪ್ಪು ಮಾಡಿದೆ. ಹೀಗಾಗಿ ಮೌನಕ್ಕೆ ಜಾರಿದೆ. ಕೆಲವೊಮ್ಮೆ ಮೌನವೇ ಎಲ್ಲದಕ್ಕೂ ಉತ್ತರವಾಗುತ್ತದೆ' ಎಂದು ಕಾಂಗ್ರೆಸ್ ವಕ್ತಾರ ಗೌರವ್ ವಲ್ಲಭ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

'ರಾಹುಲ್, ಕಾಂಗ್ರೆಸ್ ಕ್ಷಮೆ ಕೇಳಲಿ': 'ಪರೀಕ್ಷೆಗೊಳಪಡಿಸಿದ್ದ ಮೊಬೈಲ್‌ಗಳ ಪೈಕಿ ಐದರಲ್ಲಿ ಒಂದು ಬಗೆಯ ಕುತಂತ್ರಾಂಶ ಪತ್ತೆಯಾಗಿದೆ. ಬೇಹುಗಾರಿಕೆ ನಡೆಸಲೆಂದೇ ಇದನ್ನು ಬಳಸಲಾಗಿದೆಯೇ ಎಂಬುದು ಖಾತರಿಯಾಗಿಲ್ಲ ಎಂದು ತನಿಖಾ ಸಮಿತಿ ತನ್ನ ವರದಿಯಲ್ಲಿ ತಿಳಿಸಿದೆ. ಕೇಂದ್ರವು ಯಾರ ಮೇಲೂ ಗೂಢಚರ್ಯೆ ನಡೆಸಿಲ್ಲ ಎಂಬುದು ಇದರಿಂದ ಸಾಬೀತಾಗಿದೆ. ಹೀಗಾಗಿ ಕಾಂಗ್ರೆಸ್ ಹಾಗೂ ಆ ಪಕ್ಷದ ಮುಖಂಡ ರಾಹುಲ್ ಗಾಂಧಿ ಕ್ಷಮೆ ಕೇಳಬೇಕು' ಎಂದು ಬಿಜೆಪಿ ಒತ್ತಾಯಿಸಿದೆ.

'ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸಲು ಕಾಂಗ್ರೆಸ್ ಹಲವು ಸುಳ್ಳುಗಳನ್ನು ಹೇಳಿತ್ತು. ಈಗ ಆ ಪಕ್ಷದ ಬಣ್ಣ ಬಯಲಾಗಿದೆ' ಎಂದು ಬಿಜೆಪಿ ಮುಖಂಡ ರವಿಶಂಕರ್ ಪ್ರಸಾದ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಟೋಕನ್ ಖರೀದಿಗೆ ಸರತಿ ಸಾಲು ತಪ್ಪಿಸಲು ಬರಲಿದೆ ಹೊಸ ವ್ಯವಸ್ಥೆ

ಮೆಟ್ರೊ: ಕ್ಯೂಆರ್ ಕೋಡ್ ಟಿಕೆಟ್

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಮೆಟ್ರೊ ರೈಲು ನಿಲ್ದಾಣಗಳಲ್ಲಿ ಟಿಕೆಟ್‌ಗಾಗಿ(ಟೋಕನ್) ಸಾಲುಗಟ್ಟಿ ನಿಲ್ಲುವುದನ್ನು ತಪ್ಪಿಸಲು ಕ್ಯೂಆರ್(ಕ್ವಿಕ್ ರೆಸ್ಪಾನ್ಸ್) ಕೋಡ್ ಟಿಕೆಟ್ ವ್ಯವಸ್ಥೆ ಜಾರಿಗೆ ತರಲು ಬಿಎಂಆರ್‌ಸಿಎಲ್ ಮುಂದಾಗಿದ್ದು, ಕೆಲವೇ ದಿನಗಳಲ್ಲಿ ಜಾರಿಗೆ ಬರಲಿದೆ.

ನಿಲ್ದಾಣಗಳ ಕೌಂಟರ್‌ಗಳಲ್ಲಿ ಟೋಕನ್ ಪಡೆದು ಪ್ರಯಾಣಿಸುವವರು ಇನ್ನು ಮುಂದೆ ತಮ್ಮ ಮೊಬೈಲ್ ಫೋನ್‌ನಲ್ಲೇ ಕ್ಯೂಆರ್ ಕೋಡ್ ಟಿಕೆಟ್ ಪಡೆದುಕೊಳ್ಳಬಹುದು. ಈ ಸಂಬಂಧ ಪೇಟಿಎಂ ಜತೆ ಬಿಎಂಆರ್‌ಸಿಎಲ್ ಒಪ್ಪಂದ ಮಾಡಿಕೊಂಡಿದೆ.

ಪ್ರಯಾಣ ಆರಂಭಿಸುವ ನಿಲ್ದಾಣ ಮತ್ತು ತಲುಪಬೇಕಾದ ನಿಲ್ದಾಣಗಳನ್ನು ನಮೂದಿಸಿ ಪೇಟಿಎಂ ಮೂಲಕವೇ ಹಣ ಪಾವತಿಸಿದರೆ ಕ್ಯೂಆರ್ ಕೋಡ್ ಸೃಷ್ಟಿಯಾಗುತ್ತದೆ. ಈ ಕ್ಯೂಆರ್ ಕೋಡ್‌ಗಳನ್ನು ಸ್ಕ್ಯಾನ್ ಮಾಡಲು ಎಲ್ಲಾ ಮೆಟ್ರೊ ನಿಲ್ದಾಣಗಳ ಪ್ರವೇಶ ಮತ್ತು ನಿರ್ಗಮನ ಗೇಟ್‌ಗಳಲ್ಲಿ ಸ್ಕ್ಯಾನಿಂಗ್ ಉಪಕರಣಗಳನ್ನು ಅಳವಡಿಸಲಾಗಿದೆ.

ಪ್ರಜಾವಾಣಿ ವಿಶೇಷ

ಮೆಟ್ರೊ ಪ್ರವೇಶ ದ್ವಾರಗಳಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನರ್ ಅಳವಡಿಸಿರುವುದು

ಹೊಸದಾಗಿ ಅಳವಡಿಸಿರುವ ಆ ಉಪಕರಣಕ್ಕೆ ಮೊಬೈಲ್ ಫೋನ್‌ನಲ್ಲಿ ಇರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿದರೆ ಗೇಟ್ ತೆರೆದುಕೊಳ್ಳುತ್ತದೆ. ನಿರ್ಗಮನ ಸಂದರ್ಭದಲ್ಲೂ ಸ್ಕ್ಯಾನ್ ಮಾಡಿ ಹೊರಗೆ ಹೋಗಬಹುದು.

'ಈ ಹೊಸ ಉಪಕರಣಗಳನ್ನು ಎಲ್ಲಾ ನಿಲ್ದಾಣಗಳಲ್ಲೂ ಅಳವಡಿಸಲಾಗಿದ್ದು, ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆಯೇ ಎಂಬುದನ್ನು ಪರೀಕ್ಷಿಸಲಾಗುತ್ತಿದೆ. ಯಶಸ್ವಿಯಾದರೆ ಸೆಪ್ಟೆಂಬರ್ 15ರ ವೇಳೆಗೆ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

'ನಿಲ್ದಾಣಗಳ ಕೌಂಟರ್‌ಗಳಲ್ಲಿ ಟೋಕನ್ ಪಡೆದು ಪ್ರಯಾಣಿಸುವವರು ಸಾಲಿನಲ್ಲಿ ನಿಲ್ಲುವುದು ತಪ್ಪಲಿದೆ. ಮನೆಯಲ್ಲೇ ಕುಳಿತು ಕ್ಯೂಆರ್ ಕೋಡ್ ಟಿಕೆಟ್ ಸಿದ್ಧಪಡಿಸಿಕೊಂಡು ಬಂದರೆ ಅದನ್ನು ನಿಲ್ದಾಣದ ಪ್ರವೇಶ ಗೇಟ್‌ನಲ್ಲಿ ಸ್ಕ್ಯಾನ್ ಮಾಡಿ ಒಳಹೋಗಬಹುದು. ಮನೆಯಲ್ಲಿ ಕುಳಿತು ಚಿತ್ರಮಂದಿರಗಳ ಟಿಕೆಟ್ ಖರೀದಿಸಿ ಸ್ಕ್ಯಾನ್ ಮಾಡಿ ಒಳಹೋಗುವ ಮಾದರಿಯಲ್ಲೇ ಮೆಟ್ರೊ ರೈಲು ಪ್ರಯಾಣಿಕರು ಟಿಕೆಟ್‌ಗಳನ್ನೂ ಖರೀದಿಸಬಹುದು' ಎಂದು ವಿವರಿಸಿದರು.

'ಸ್ಮಾರ್ಟ್ ಕಾರ್ಡ್‌ಗಳನ್ನು ಆ್ಯಪ್ ಮೂಲಕ ಮೊಬೈಲ್ ಫೋನ್‌ನಲ್ಲೇ ರೀಚಾರ್ಜ್ ಮಾಡಿಕೊಳ್ಳಲು ಈಗಾಗಲೇ ಅವಕಾಶ ಇದೆ. ದಿನದ ಪಾಸ್‌ಗಳನ್ನು ಕ್ಯೂಆರ್ ಕೋಡ್ ಮೂಲಕವೇ ಖರೀದಿಸಲು ಅವಕಾಶ ಆಗುವಂತೆ ಮಾಡುವ ಪ್ರಯತ್ನ ನಡೆಯುತ್ತಿದೆ. ಮುಂದಿನ ದಿನಗಳಲ್ಲಿ ಅದು ಕೂಡ ಸಾಧ್ಯವಾಗಲಿದೆ' ಎಂದು ಅವರು ಹೇಳಿದರು.

'ಶಾಲೆ ಮಾರಾಟಕ್ಕೆ ಶಿಫಾರಸು ಮಾಡಿಲ್ಲ'

ಬೆಂಗಳೂರು: 'ಚಿಕ್ಕಪೇಟೆಯಲ್ಲಿ ರಜತಾ ಕಾಂಪ್ಲೆಕ್ಸ್ ಸ್ವತ್ತಿಗೆ ಸಂಬಂಧಿಸಿದಂತೆ ಗುತ್ತಿಗೆ, ಕ್ರಮ ಅಥವಾ ಹರಾಜಿಗೆ ಸಂಬಂಧಿಸಿದಂತೆ ಯಾವ ಕ್ರಮ ಕೈಗೊಳ್ಳಬೇಕು ಎಂದು ಕಂದಾಯ ಇಲಾಖೆಗೆ ಪತ್ರ ಬರೆಯಲಾಗಿತ್ತು ಅಷ್ಟೆ. ಹರಾಜು ಮಾಡಿ ಎಂದು ಹೇಳಿಲ್ಲ' ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಶ್ರೀನಿವಾಸ್ ತಿಳಿಸಿದರು.

'ರಜತಾ ಕಾಂಪ್ಲೆಕ್ಸ್‌ನಲ್ಲಿ ಶಾಲೆ ಇದೆ. ಈ ಕಾಂಪ್ಲೆಕ್ಸ್ ಬಗ್ಗೆ ಅಸೋಸಿಯೇಷನ್ ಬರೆದಿರುವ ಪತ್ರಕ್ಕೆ ಸಂಬಂಧಿಸಿದಂತೆ ಯಾವ ಕ್ರಮ ಕೈಗೊಳ್ಳಬೇಕು ಎಂಬ ಸ್ಪಷ್ಟನೆ ಕೋರಲಾಗಿದೆ. ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಗಣೇಶೋತ್ಸವಕ್ಕೆ ಸಂಬಂಧಿಸಿದಂತೆ ಏಳು ಸಂಘಟನೆಗಳು ಮನವಿಪತ್ರ ಸಲ್ಲಿಸಿವೆ. ಇದರಲ್ಲಿ ಐದು ಸಂಘಟನೆಗಳು ಗಣೇಶೋತ್ಸವಕ್ಕೆ ಅನುಮತಿ ಕೇಳಿದ್ದರೆ, ಎರಡು ಸಂಘಟನೆಗಳು ಅನುಮತಿ ನೀಡಬಾರದು ಎಂದು ಮನವಿ ಮಾಡಿವೆ. ಸರ್ಕಾರ ಹಾಗೂ ಹೈಕೋರ್ಟ್ ಯಾವ ನಿರ್ದೇಶನ ನೀಡುತ್ತವೆಯೋ ಅದರಂತೆ ನಡೆದುಕೊಳ್ಳಲಾಗುತ್ತದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಡಿಆರ್‌ಡಿಒ ಮುಖ್ಯಸ್ಥರಾಗಿ ಸಮೀರ್ ಕಾಮತ್

ನವದೆಹಲಿ (ಪಿಟಿಐ): ಖ್ಯಾತ ವಿಜ್ಞಾನಿ ಸಮೀರ್ ವಿ.ಕಾಮತ್ ಅವರು ರಕ್ಷಣಾ ಸಚಿವಾಲಯದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಮುಖ್ಯಸ್ಥ ಹಾಗೂ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.

ಸಮೀರ್ ವಿ.ಕಾಮತ್

ರಕ್ಷಣಾ ಸಚಿವಾಲಯವು ಈ ಸಂಬಂಧ ಗುರುವಾರ ಆದೇಶ ಹೊರಡಿಸಿದೆ. ಕಾಮತ್ ಅವರು ಈ ಮೊದಲು ಡಿಆರ್‌ಡಿಒದ ನೌಕಾ ವ್ಯವಸ್ಥೆ ಮತ್ತು ಸರಕು ವಿಭಾಗದ ಮಹಾ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದರು.

ತೆಲಂಗಾಣಕ್ಕೆ ಬಸ್ ಸೇವೆ ಹೆಚ್ಚಿಸಲು ಮಾತುಕತೆ

ಬೆಂಗಳೂರು: ತೆಲಂಗಾಣ ಮತ್ತು ಕರ್ನಾಟಕ ನಡುವೆ ಸಾರಿಗೆ ಬಸ್‌ಗಳ ಸೇವೆ ಹೆಚ್ಚಿಸುವ ನಿಟ್ಟಿನಲ್ಲಿ ಎರಡೂ ರಾಜ್ಯಗಳ ಸಾರಿಗೆ ಸಂಸ್ಥೆಗಳ ಅಧಿಕಾರಿಗಳು ಬುಧವಾರ ಸಭೆ ನಡೆಸಿದರು.

ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಗೆ ಭೇಟಿ ನೀಡಿದ್ದ ತೆಲಂಗಾಣ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿ.ಸಿ. ಸಜ್ಜನರ್ ಜತೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್, ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ಎಸ್. ಭರತ್, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎಂ.ರಾಚಪ್ಪ, ಭದ್ರತಾ ಮತ್ತು ಜಾಗೃತಿ ವಿಭಾಗದ ನಿರ್ದೇಶಕ ನವೀನ್ ಭಟ್ ಚರ್ಚೆ ನಡೆಸಿದರು ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಪಿಆರ್‌ಒ ಟಿ.ಎಸ್.ಲತಾ ಅವರು ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಕಚೇರಿಗೆ ಭೇಟಿ ನೀಡಿದ್ದ ವಿ.ಸಿ.ಸಜ್ಜನರ್ ಅವರಿಗೆ ವಿ.ಅನ್ಬುಕುಮಾರ್ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು

ದೆಹಲಿ ಸರ್ಕಾರ ಉರುಳಿಸಲು ಯತ್ನ: ಎಎಪಿ ಆರೋಪ

'40 ಶಾಸಕರಿಗೆ ₹800 ಕೋಟಿ ಆಮಿಷ'

ನವದೆಹಲಿ: ಬಿಜೆಪಿ ವಿರುದ್ಧದ ಹೋರಾಟವನ್ನು ಎಎಪಿ ಇನ್ನಷ್ಟು ತೀವ್ರಗೊಳಿಸಿದೆ. ತನ್ನ 40 ಶಾಸಕರನ್ನು ಸೆಳೆದುಕೊಳ್ಳಲು ಬಿಜೆಪಿ ಯತ್ನಿಸಿದೆ ಎಂದು ಎಎಪಿ ಗುರುವಾರ ಆರೋಪಿಸಿದೆ. 40 ಶಾಸಕರು ಪಕ್ಷ ಬದಲಿಸಿದರೆ ಒಟ್ಟು ₹800 ಕೋಟಿ ನೀಡುವುದಾಗಿ ಆಮಿಷವನ್ನೂ ಒಡ್ಡಿದೆ ಎಂದೂ ಎಎಪಿ ಆರೋಪಿಸಿದೆ. ಇದಕ್ಕೂ ಮುನ್ನ, 12 ಶಾಸಕರು ಎಎಪಿ ನಾಯಕರ ಸಂಪರ್ಕಕ್ಕೆ ಸಿಗುತ್ತಿಲ್ಲ ಎಂಬ ಗುಲ್ಲು ಹಬ್ಬಿತ್ತು.

40 ಶಾಸಕರಿಗೆ ತಲಾ ₹20 ಕೋಟಿಯಂತೆ ₹800 ಕೋಟಿ ಬಿಜೆಪಿಗೆ ಎಲ್ಲಿಂದ ಬಂತು ಎಂದು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಪ್ರಶ್ನಿಸಿದ್ದಾರೆ. ಬಿಜೆಪಿಯ 'ಆಪರೇಷನ್ ಕಮಲ' ವಿಫಲವಾಗಿದೆ ಎಂದಿರುವ ಅವರು ಪಕ್ಷದ ಶಾಸಕರನ್ನು ರಾಜಘಾಟ್‌ಗೆ ಕರೆದೊಯ್ದು ಅಲ್ಲಿ ಪ್ರಾರ್ಥನೆ ಮಾಡಿದ್ದಾರೆ.

ಹಲವು ನಾಟಕೀಯ ವಿದ್ಯಮಾನಗಳಿಗೆ ದೆಹಲಿಯ ರಾಜಕಾರಣ ಗುರುವಾರ ಸಾಕ್ಷಿಯಾಯಿತು. 12 ಶಾಸಕರು ಎಎಪಿ ನಾಯಕರ ಸಂಪರ್ಕಕ್ಕೆ ಸಿಗುತ್ತಿಲ್ಲ ಎಂಬ ಸುದ್ದಿ ಹರಿದಾಡಿದ ಬಳಿಕ, ಎಎಪಿ ಶಾಸಕರ ಸಭೆಯನ್ನು

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಪಕ್ಷದ ಶಾಸಕರ ಜೊತೆ ಗುರುವಾರ ರಾಜಘಾಟ್‌ಗೆ ಭೇಟಿ ನೀಡಿ ಮಹಾತ್ಮ ಗಾಂಧಿ ಅವರ ಸಮಾಧಿ ಮುಂದೆ ಪ್ರಾರ್ಥನೆ ಸಲ್ಲಿಸಿದರು —ಪಿಟಿಐ ಚಿತ್ರ

ಕೇಜ್ರಿವಾಲ್ ಕರೆದರು. ಎಎಪಿಯ 62 ಶಾಸಕರ ಪೈಕಿ 53 ಶಾಸಕರು ಸಭೆಯಲ್ಲಿ ಭಾಗಿಯಾಗಿದ್ದರು.

ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಸೇರಿದಂತೆ ಏಳು ಶಾಸಕರು ನಗರದಲ್ಲಿ ಇಲ್ಲದ ಕಾರಣ ಸಭೆಗೆ ಬಂದಿಲ್ಲ. ಸ್ಪೀಕರ್ ರಾಮ್‌ನಿವಾಸ್ ಗೋಯಲ್ ಅವರು ವಿದೇಶ ಪ್ರವಾಸದಲ್ಲಿದ್ದಾರೆ. ಸತ್ಯೇಂದ್ರ ಜೈನ್ ಅವರು ಜೈಲಿನಲ್ಲಿದ್ದಾರೆ. ಹೀಗಾಗಿ ಇವರು ಸಭೆಗೆ ಬಂದಿಲ್ಲ ಎಂದು ಸಭೆಯ ಬಳಿಕ ಎಎಪಿ ಹೇಳಿದೆ. ಸಿಸೋಡಿಯಾ ಮತ್ತು ಗೋಯಲ್ ಬಿಟ್ಟು, ಇತರ ಆರು ಶಾಸಕರು ಮೊಬೈಲ್‌ನ ಲೌಡ್‌ಸ್ಪೀಕರ್ ಮೂಲಕ ಸಭೆಯಲ್ಲಿ ಹಾಜರಿದ್ದ ಶಾಸಕರ ಜತೆ ಮಾತನಾಡಿದರು ಎಂದು ಎಎಪಿ ತಿಳಿಸಿದೆ.

'ದೆಹಲಿ ಸರ್ಕಾರವನ್ನು ಉರುಳಿಸುವುದಕ್ಕಾಗಿ ಬಿಜೆಪಿ ₹800 ಕೋಟಿ ಇರಿಸಿಕೊಂಡಿದೆ. ಆದರೆ, ದೇಶದ ಜನರಿಗೆ ಈ ಹಣದ ಮೂಲ ಯಾವುದೆಂದು ತಿಳಿಯಬೇಕು. ಇದು ಜಿಎಸ್‌ಟಿಯಿಂದ ಬಂದ ಹಣವೇ ಅಥವಾ ಪಿಎಂ ಕೇರ್ಸ್ ನಿಧಿಯಿಂದ ಬಂದ ಹಣವೇ? ಅಥವಾ ಅವರ ಕೆಲವು ಗೆಳೆಯರು ಈ ನಿಧಿಯನ್ನು ಕೊಟ್ಟಿದ್ದಾರೆಯೇ' ಎಂದು ಕೇಜ್ರಿವಾಲ್ ಪ್ರಶ್ನಿಸಿದ್ದಾರೆ.

ಪಕ್ಷ ಒಡೆಯುವ ಯತ್ನದ ಆರೋಪವನ್ನು ಬಿಜೆಪಿ ಅಲ್ಲಗಳೆದಿದೆ. ಎಎಪಿಯದ್ದು ಸಾರ್ವಜನಿಕವಾಗಿ ನಡೆಸಿದ ನಾಟಕ ಎಂದು ಬಿಜೆಪಿ ಸಂಸದ ಮನೋಜ್ ತಿವಾರಿ ಹೇಳಿದ್ದಾರೆ. ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಎಎಪಿ ಯತ್ನಿಸುತ್ತಿದೆ. ದೆಹಲಿ ಅಬಕಾರಿ ನೀತಿಯ ಕುರಿತು ಕೇಜ್ರಿವಾಲ್ ಏಕೆ ಮೌನವಾಗಿದ್ದಾರೆ ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿಯಿಂದ ರಾಜಘಾಟ್‌ಗೆ ಗಂಗಾಜಲ

ಗಾಂಧಿ ಸ್ಮಾರಕ ರಾಜಘಾಟ್‌ಗೆ ಎಎಪಿ ಶಾಸಕರ ಭೇಟಿಯ ಬಳಿಕ ಬಿಜೆಪಿ ಕಾರ್ಯಕರ್ತರು ಗಾಂಧಿ ಸಮಾಧಿಯ ಮೇಲೆ ಗಂಗಾಜಲ ಚಿಮುಕಿಸಿದರು. ಕೇಜ್ರಿವಾಲ್ ಅವರು ಪದೇ ಪದೇ ಸುಳ್ಳು ಹೇಳುತ್ತಿದ್ದಾರೆ ಎಂದು ಬಿಜೆಪಿ ಸಂಸದ ಮನೋಜ್ ತಿವಾರಿ ಹೇಳಿದ್ದಾರೆ.

ಶುಕ್ರವಾರ, ಆಗಸ್ಟ್ 26, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 237 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಸಪ್ತ ಸಾಗರದಾಚೆ ಎಲ್ಲೋ' ಹೊರಟ ನಾಯಕನ ಜೊತೆಗೆ ಚೈತ್ರಾ ಜೆ. ಆಚಾರ್ ಹೆಜ್ಜೆ ಹಾಕಿದ ಪರಿ

ಹೊರ ರಾಜ್ಯ: ತೂಗುಗತ್ತಿಯಡಿ ಜಾರ್ಖಂಡ್ ಸರ್ಕಾರ
ಶಾಸಕ ರಾಜಾ ಸಿಂಗ್ ಮತ್ತೆ ಬಂಧನ 11
ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಹಿಂದೇಟು 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,775 ▼	17,522 ▼	₹53,480 (ಬೆಂಗಳೂರು) ▲	₹57,700 (ಬೆಂಗಳೂರು) ▲	79.92 ▼

ಟ್ರಸ್ಟ್‌ಗಳಿಗೆ ನೇಮಕ ಆದೇಶ ವಾಪಸ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಟ್ರಸ್ಟ್, ಪ್ರತಿಷ್ಠಾನಗಳಿಗೆ ಅಧ್ಯಕ್ಷ ಮತ್ತು ಸದಸ್ಯರ ನೇಮಕಾತಿಯಲ್ಲಿ ಆಗಿರುವ ಎಡವಟ್ಟುಗಳಿಗೆ ಸಾಹಿತ್ಯಿಕ ವಲಯ, ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಟೀಕೆ ವ್ಯಕ್ತವಾಗುತ್ತಿದ್ದಂತೆ, ಇಡೀ ನೇಮಕಾತಿ ಆದೇಶವನ್ನು ರಾಜ್ಯ ಸರ್ಕಾರ ಗುರುವಾರ ಹಿಂಪಡೆದಿದೆ.

ಆ ಮೂಲಕ, ನೇಮಕಾತಿಗಳು, ನೀತಿ- ನಿಲುವುಗಳ ವಿಚಾರದಲ್ಲಿ ಸರ್ಕಾರ ತೆಗೆದುಕೊಳ್ಳುತ್ತಿರುವ ತೀರ್ಮಾನ ಮತ್ತೊಮ್ಮೆ ಟೀಕೆಗೆ ಗುರಿಯಾಗಿದೆ.

21 ಟ್ರಸ್ಟ್, ಪ್ರತಿಷ್ಠಾನಗಳಿಗೆ ಹೊಸದಾಗಿ ಕಾರ್ಯಕಾರಿ ಸಮಿತಿ ರಚಿಸಿ ಇಲಾಖೆ ಬುಧವಾರ ಆದೇಶ ಹೊರಡಿಸಿತ್ತು. ಕಳೆದ ವರ್ಷ ನಿಧನರಾಗಿರುವ ರಾಜೇಶ್ವರಿ ಪೂರ್ಣಚಂದ್ರ ತೇಜಸ್ವಿ ಅವರನ್ನು ಚಿಕ್ಕಮಗಳೂರಿನ 'ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ'ದ ಸದಸ್ಯರನ್ನಾಗಿ ನೇಮಿಸಲಾಗಿತ್ತು. ಇದಕ್ಕೆ ವ್ಯಾಪಕ ಟೀಕೆ ವ್ಯಕ್ತವಾಗಿತ್ತು.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ವಿಶೇಷ ನ್ಯಾಯಾಲಯ ವ್ಯಾಪ್ತಿ ನಗರ ಪ್ರದೇಶಗಳಿಗೆ ಮಾತ್ರ ಅನ್ವಯ

ಭೂಕಬಳಿಕೆ: ರೈತ ನಿರಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಕಬಳಿಕೆ ಕಾಯ್ದೆ ಇನ್ನು ಮುಂದೆ ಮಹಾನಗರಪಾಲಿಕೆ ಮತ್ತು ನಗರಗಳ ವ್ಯಾಪ್ತಿಗೆ ಮಾತ್ರ ಅನ್ವಯವಾಗಲಿದ್ದು, ಗ್ರಾಮಾಂತರ ಪ್ರದೇಶವನ್ನು ಹೊರಗಿಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸರ್ಕಾರಿ ಭೂಮಿ ಕಬಳಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಉದ್ದೇಶದಿಂದ 2011ರಲ್ಲಿ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ 'ಕರ್ನಾಟಕ ಭೂಕಬಳಿಕೆ(ನಿಷೇಧ) ಕಾಯ್ದೆ'ಗೆ ತಿದ್ದುಪಡಿ ತರಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಕಾಯ್ದೆಯ 'ಸೆಕ್ಷನ್ 2 ಡಿ' ಗೆ ತಿದ್ದುಪಡಿ ತರಲು ಸಮ್ಮತಿ ಕೊಟ್ಟಿದೆ.

ತಿದ್ದುಪಡಿ ಜಾರಿಗೊಂಡ ಬಳಿಕ, ಗ್ರಾಮೀಣ ಪ್ರದೇಶದ ರೈತರ ಭೂಕಬಳಿಕೆ ಪ್ರಕರಣಗಳು ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದಿಲ್ಲ. ರೈತರು ಅನಗತ್ಯವಾಗಿ ಭೂಕಬಳಿಕೆ ವಿಶೇಷ ನ್ಯಾಯಾಲಯಕ್ಕೆ ಅಲೆಯುವುದು ತಪ್ಪುತ್ತದೆ. ಒತ್ತುವರಿಗೆ ಸಂಬಂಧಿಸಿದಂತೆ ಯಾವುದೇ ತಕರಾರುಗಳು ಇದ್ದರೆ ಕಂದಾಯ ಇಲಾಖೆಯೇ ಅದನ್ನು ಪರಿಶೀಲಿಸಿ, ಸೂಕ್ತ ಕ್ರಮ ತೆಗೆದುಕೊಳ್ಳಲಿದೆ.

20,841	4,712	16,129
ದಾಖಲಾದ ಪ್ರಕರಣಗಳು	ಇತ್ಯರ್ಥವಾದ ಪ್ರಕರಣಗಳು	ಬಾಕಿಪ್ರಕರಣಗಳು

ಕೃಷಿ ಕಾರ್ಮಿಕರ ಮಕ್ಕಳಿಗೂ ವಿದ್ಯಾನಿಧಿ

ಮುಖ್ಯಮಂತ್ರಿಯವರ ರೈತ ವಿದ್ಯಾನಿಧಿ ಯೋಜನೆಯನ್ನು ಭೂರಹಿತ ಕೃಷಿ ಕಾರ್ಮಿಕರ ಮಕ್ಕಳಿಗೂ ವಿಸ್ತರಿಸಲು ತೀರ್ಮಾನಿಸಲಾಗಿದೆ.

- **'ಡಿ' ಗ್ರೂಪ್ ಆಯ್ಕೆಗೆ ಸಂದರ್ಶನ ಇಲ್ಲ**

ರಾಜ್ಯ ಸರ್ಕಾರದ 'ಡಿ' ಗ್ರೂಪ್ ನೌಕರರ ಹುದ್ದೆಗಳಿಗೆ ಕೆಪಿಎಸ್‌ಸಿ ನಡೆಸುವ ನೇಮಕಾತಿಗಳಿಗೆ ಇನ್ನು ಮುಂದೆ ಸಂದರ್ಶನ (ವೈವಾ) ಇರುವುದಿಲ್ಲ. ಇದಕ್ಕಾಗಿ ಕರ್ನಾಟಕ ಲೋಕಸೇವಾ ಆಯೋಗದ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದ್ದು, ಕೇವಲ ಲಿಖಿತ ಪರೀಕ್ಷೆ ನಡೆಸಿ ಅದರ ಆಧಾರದಲ್ಲಿ ಆಯ್ಕೆ ಮಾಡಲಾಗುತ್ತದೆ.

- **ಸೆ 12 ರಿಂದ ಅಧಿವೇಶನ**

ಸೆಪ್ಟೆಂಬರ್ 12 ರಿಂದ ವಿಧಾನಮಂಡಲದ ಉಭಯ ಸದನಗಳ ಅಧಿವೇಶನ ನಡೆಯಲಿದೆ. ಒಟ್ಟು 10 ದಿನಗಳ ಕಾಲ ಅಧಿವೇಶನ ನಡೆಯಲಿವೆ.

ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು. ಭೂಕಬಳಿಕೆ ನಿಷೇಧ ಕಾಯ್ದೆ ತಂದಾಗ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಒಂದು ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಲಾಗಿತ್ತು. ಸಣ್ಣ ಪುಟ್ಟ ಒತ್ತುವರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ರೈತರು ವಿಶೇಷ ನ್ಯಾಯಾಲಯಕ್ಕೆ ಬರಬೇಕಾಗಿತ್ತು. ರೈತರು ಇದರಿಂದ ಸಾಕಷ್ಟು ತೊಂದರೆ ಅನುಭವಿಸುತ್ತಿದ್ದರು ಎಂದು ಹೇಳಿದರು.

5ನೇ ಪುಟ ನೋಡಿ

8 ಜಿಲ್ಲೆಗೆ ಹೊಸ ವಿಶ್ವವಿದ್ಯಾಲಯ

ಹೊಸದಾಗಿ ಎಂಟು ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಚಾಮರಾಜನಗರ, ಹಾವೇರಿ, ಹಾಸನ, ಕೊಡಗು, ಕೊಪ್ಪಳ, ಬಾಗಲಕೋಟೆ, ಬೀದರ್ ಮತ್ತು ಮಂಡ್ಯ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಹಾದಿ ಸುಗಮವಾಗಿದೆ. ಮಂಡ್ಯ ವಿಶ್ವವಿದ್ಯಾಲಯ ಹೊರತುಪಡಿಸಿ ಉಳಿದ 7 ವಿಶ್ವವಿದ್ಯಾಲಯಗಳ ಆರಂಭವನ್ನು ಈ ವರ್ಷದ ಬಜೆಟ್‌ನಲ್ಲಿ ಘೋಷಿಸಲಾಗಿತ್ತು.

ಈಗಾಗಲೇ ತಲಾ ₹ 2 ಕೋಟಿಯಂತೆ ಒಟ್ಟು ₹ 14 ಕೋಟಿ ಒದಗಿಸಲಾಗಿದೆ. ಮಂಡ್ಯದ ಸರ್ಕಾರಿ ಕಾಲೇಜನ್ನು ಪೂರ್ಣ ಪ್ರಮಾಣದ ವಿಶ್ವವಿದ್ಯಾಲಯವಾಗಿ ಮಾಡುವ ತೀರ್ಮಾನವನ್ನು ಈಚೆಗೆ ಕೈಗೊಳ್ಳಲಾಗಿತ್ತು. ಅದಕ್ಕೆ ಸಂಪುಟ ಘಟನೋತ್ತರ ಅನುಮೋದನೆ ನೀಡಿದೆ.

ನೀಟ್ ಯುಜಿ–ಸೆ.7ರ ಮೊದಲು ಫಲಿತಾಂಶ

ನವದೆಹಲಿ (ಪಿಟಿಐ): ವೈದ್ಯಕೀಯ ಕಾಲೇಜುಗಳ ಪ್ರವೇಶಕ್ಕಾಗಿ ನಡೆದ ನೀಟ್–ಯುಜಿ ಪರೀಕ್ಷೆಯ ಫಲಿತಾಂಶ ಸೆ.7ರೊಳಗೆ ಪ್ರಕಟವಾಗಲಿದೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ತಾತ್ಕಾಲಿಕ ಕೀ ಉತ್ತರಗಳು, ಒಎಂಆರ್ ಉತ್ತರ ಪತ್ರಿಕೆಯ ಸ್ಕ್ಯಾನ್ ಪ್ರತಿಗಳನ್ನು ಇದೇ 30ರೊಳಗೆ ಎನ್‌ಟಿಎ ತನ್ನ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಿದೆ ಎಂದು ಅವರು ಹೇಳಿದ್ದಾರೆ.

ಭ್ರಷ್ಟಾಚಾರ: ಆರೋಪಪಟ್ಟಿಗೆ ಸಿಗದ ಅನುಮತಿ

ಬೆಂಗಳೂರು: ವಿಶ್ವೇಶ್ವರಯ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣರಾವ್ ಪೇಶ್ವೆ, ನಿವೃತ್ತ ಐಎಎಸ್ ಅಧಿಕಾರಿ ಎಸ್.ಎಂ. ರಾಜು ಸೇರಿದಂತೆ 14 ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ ಪ್ರಸ್ತಾವಗಳು ಹಲವು ವರ್ಷಗಳಿಂದಲೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಬಳಿಯೇ ಉಳಿದಿವೆ.

5

ಪಿಎಂಎಲ್‌ಎ ತೀರ್ಪು ಮರುಪರಿಶೀಲನೆ: ಕೇಂದ್ರಕ್ಕೆ ನೋಟಿಸ್

ನವದೆಹಲಿ: ಹಣ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆಯಡಿ (ಪಿಎಂಎಲ್‌ಎ) ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಗಳನ್ನು ಎತ್ತಿಹಿಡಿದ ತೀರ್ಪು ಮರುಪರಿಶೀಲನೆಗೆ ಸುಪ್ರೀಂ ಕೋರ್ಟ್ ಗುರುವಾರ ಸಮ್ಮತಿಸಿದ್ದು, ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಿದೆ.

11

ಬಿಲ್ಕಿಸ್ ಪ್ರಕರಣ: ಕೇಂದ್ರ, ಗುಜರಾತ್ ಸರ್ಕಾರಕ್ಕೆ ನೋಟಿಸ್

ನವದೆಹಲಿ(ಪಿಟಿಐ): ಬಿಲ್ಕಿಸ್ ಬಾನು ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದ 11 ಅಪರಾಧಿಗಳ ಬಿಡುಗಡೆ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಿದ ಅರ್ಜಿಯ ವಿಚಾರಣೆ ಆರಂಭಿಸಿರುವ ಸುಪ್ರೀಂಕೋರ್ಟ್, ಕೇಂದ್ರ ಸರ್ಕಾರ ಮತ್ತು ಗುಜರಾತ್ ರಾಜ್ಯ ಸರ್ಕಾರಕ್ಕೆ ಪ್ರತಿಕ್ರಿಯೆ ಸಲ್ಲಿಸುವಂತೆ ಗುರುವಾರ ನೋಟಿಸ್ ನೀಡಿದೆ.

11

ಸಂಜೆ 5ರ ಬದಲು ಮಧ್ಯರಾತ್ರಿ ಪ್ರಕಟ

ಮತದಾರರ ಕರಡು ಪಟ್ಟಿ ಗುರುವಾರ ಸಂಜೆ 5ಕ್ಕೆ ವೆಬ್‌ಸೈಟ್‌ನಲ್ಲಿ ಪ್ರಕಟವಾಗುತ್ತದೆ ಎಂದು ಚುನಾವಣೆ ಆಯುಕ್ತ, ಬಿಬಿಎಂಪಿ ಮುಖ್ಯ ಆಯುಕ್ತ ಹೇಳಿದ್ದರು. ಆದರೆ ರಾತ್ರಿ 11ರ ನಂತರ ಕರಡು ಪಟ್ಟಿ ಪ್ರಕಟವಾಯಿತು. ಆದರೆ, 'ಬಿಬಿಎಂಪಿ ಚುನಾವಣೆ 2022'ರ ಲಿಂಕ್‌ನಲ್ಲಿ ವಿವರಣೆ 198 ವಾರ್ಡ್ ಎಂದೇ ಇತ್ತು. '7550ಕ್ಕೂ ಹೆಚ್ಚು ಭಾಗಗಳು ಅಪ್‌ಲೋಡ್ ಆಗುವುದಕ್ಕೆ ಸಮಯ ತೆಗೆದುಕೊಂಡಿತು' ಎಂದು ಬಿಬಿಎಂಪಿಯ ಚುನಾವಣೆ ವಿಭಾಗದ ಸಹಾಯಕ ಆಯುಕ್ತ ಉಮೇಶ್ ಪ್ರತಿಕ್ರಿಯಿಸಿದರು.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಪಿಪಿಎ/ಟಿಪಿ/ಭೂಉಬ/25/2022–23/1036 ದಿನಾಂಕ : 23.08.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಸಿ. ಬಸವರಾಜು ಬಿನ್ ಲೇ॥ ಚಿಕ್ಕಬಸಪ್ಪ	ದೇವನಹಳ್ಳಿ	ಕುಂದಾಣ	ಲಿಂಗಧೀರಗೊಲ್ಲಹಳ್ಳಿ	8/1	0–20	ವ್ಯವಸಾಯ	ವಸತಿ
ಮೇಲ್ಕಂಡ ಭೂಮಾಲೀಕರ ಪರವಾಗಿ ನೋಂದಾಯಿತ ಜಿಪಿಎ ಹಾಗೂ ಜಂಟಿ ಅಭಿವೃದ್ಧಿದಾರರಾದ ಶ್ರೀ ಎ.ಸಿ. ಪ್ರದೀಪ್ ಬಿನ್ ಚಿಕ್ಕಕಾಮಯ್ಯ								

ಷರಾ :-

ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೇಡಿಕೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನುಗಳು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ವಉದ್ಯೋಗ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಪಿ.ಪಿ.ಎ, ದೇವನಹಳ್ಳಿ.

ವಾಸಾಸಂ/ವಾಪ್ರ/ಅಡ್ವಿಟ್/1958/2022–23

ಬಿಬಿಎಂಪಿ: 5 ಲಕ್ಷ ಮತದಾರರು ಹೆಚ್ಚಳ; ಸೆ.2ರವರೆಗೆ ಆಕ್ಷೇಪಣೆಗೆ ಅವಕಾಶ

ಮತದಾರರ ಕರಡು ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 243 ವಾರ್ಡ್‌ವಾರು ಮತದಾರರ ಕರಡು ಪಟ್ಟಿಯನ್ನು ರಾಜ್ಯ ಚುನಾವಣೆ ಆಯೋಗ ಗುರುವಾರ ಪ್ರಕಟಿಸಿದೆ.

ವಿಧಾನಸಭಾ ಕ್ಷೇತ್ರವಾರು 2022ರ ಜುಲೈ 31ರವರೆಗಿನ ಮತದಾರರ ಮಾಹಿತಿಯನ್ನು ಆಧರಿಸಿ ವಾರ್ಡ್‌ವಾರು ಮತದಾರರ ಪಟ್ಟಿ ಕರಡನ್ನು ಸಿದ್ಧಗೊಳಿಸಲಾಗಿದೆ. ಒಟ್ಟು 79 ಲಕ್ಷ ಮತದಾರರಿದ್ದಾರೆ. ಕಳೆದ ಬಾರಿ (2015) ಹೋಲಿಸಿದರೆ 5,20,138 ಮತದಾರರ ಹೆಚ್ಚಾಗಿದ್ದಾರೆ.

ವಾರ್ಡ್‌ವಾರು ಮತದಾರರ ಕರಡು ಪಟ್ಟಿಯನ್ನು ವಲಯ ಜಂಟಿ ಆಯುಕ್ತರ ಕಚೇರಿ ಅಥವಾ ವ್ಯಾಪ್ತಿಯ ಮತದಾರರ ನೋಂದಣಾಧಿಕಾರಿ/ಸಹಾಯಕ ಮತದಾರರ ನೋಂದಣಾಧಿಕಾರಿ ಮತ್ತು ವಾರ್ಡ್ ಕಚೇರಿಗಳಲ್ಲಿ ಹಾಗೂ www.bbmp.gov.inನಲ್ಲಿ ಪ್ರಕಟಿಸಲಾಗಿದೆ. ಸೆ.2ರವರೆಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಸೆ.22ರಂದು ಮತದಾರರ ಅಂತಿಮ ಪಟ್ಟಿ ಬಿಡುಗಡೆಯಾಗಲಿದೆ ಎಂದು ರಾಜ್ಯ ಚುನಾವಣೆ ಆಯೋಗದ ಆಯುಕ್ತ ಬಸವರಾಜು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಹೊಸದಾಗಿ ಮತದಾರರಾಗಿ ನೋಂದಣಿ ಮಾಡಿಕೊಳ್ಳಲು 'ವೋಟರ್ ಹೆಲ್ಪ್‌ಲೈನ್ ಆ್ಯಪ್' ಮತ್ತು ಎನ್‌ವಿಎಸ್‌ಪಿ ಪೋರ್ಟಲ್ ಮೂಲಕವೂ ವಿಧಾನಸಭೆ ಕ್ಷೇತ್ರವಾರು ಅರ್ಜಿ ಸಲ್ಲಿಸಬಹುದು ಎಂದರು.

ಗ್ರಾಮಾಂತರ ಪ್ರದೇಶಗಳಿಗೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿ ಮತದಾನ ಪ್ರಮಾಣ ಕಡಿಮೆ. 2010ರಲ್ಲಿ ಶೇ 44, 2015ರಲ್ಲಿ ಶೇ 49ರಷ್ಟು ಮತದಾನವಾಗಿತ್ತು. 2017ರಲ್ಲಿ ಮುಂಬೈ ಪಾಲಿಕೆ ಚುನಾವಣೆಯಲ್ಲಿ ಶೇ 55ರಷ್ಟು ಮತದಾನವಾಗಿದೆ. ಹೀಗಾಗಿ ಬೆಂಗಳೂರಿನಲ್ಲೂ ಮತದಾನದ ಪ್ರಮಾಣ ಹೆಚ್ಚಾಗಬೇಕು. ಸುಶಿಕ್ಷಿತರು ಹೆಚ್ಚಾಗಿರುವ ನಗರ ಪ್ರದೇಶದಲ್ಲಿ ಮತದಾನ ಪ್ರಮಾಣ ಹೆಚ್ಚು ಮಾಡಲು ಹಲವು ಕ್ರಮಗಳನ್ನು ತೆಗೆದುಕೊಳ್ಳಲು ಯೋಜಿಸಲಾಗಿದೆ ಎಂದರು.

'ಉತ್ತಮ ಆಡಳಿತಕ್ಕೆ ಸೂಕ್ತ ವ್ಯಕ್ತಿಯ ಆಯ್ಕೆ ಅತ್ಯಗತ್ಯ. ಶೇ 40ರಷ್ಟು ಮತದಾನದ ಮೂಲಕ ಆಯ್ಕೆಯಾಗುವ ಸದಸ್ಯರು ಹಾಗೂ ಶೇ 80ರಷ್ಟು ಮತದಾನದಿಂದ ಆಯ್ಕೆಯಾಗುವ ಸದಸ್ಯರಿಗೂ ಸಾಕಷ್ಟು ವ್ಯತ್ಯಾಸ ಇರುತ್ತದೆ' ಎಂದರು.

ಆಧಾರ್ ಲಿಂಕ್ ಶೇ 3: 'ಬೆಂಗಳೂರು ನಗರದಲ್ಲಿ ಮತದಾರರ ಪಟ್ಟಿಗೆ ಆಧಾರ್ ಲಿಂಕ್ ಮಾಡುವ ಪ್ರಕ್ರಿಯೆ ಉಳಿದ ಜಿಲ್ಲೆಗಳಿಗಿಂತ ತೀರಾ ಹಿಂದುಳಿದಿದೆ. ಬೆಂಗಳೂರು ಹೊರತುಪಡಿಸಿದರೆ ಇತರೆ ಜಿಲ್ಲೆಗಳಲ್ಲಿ ಶೇ 30ರಿಂದ 40ರಷ್ಟು ಲಿಂಕ್ ಆಗಿದೆ. ಬೆಂಗಳೂರಿನಲ್ಲಿ ಈ ಪ್ರಮಾಣ ಶೇ 3ರಷ್ಟು ಮಾತ್ರ ಇದೆ' ಎಂದು ಬಿಬಿಎಂಪಿ ಆಡಳಿತ ವಿಭಾಗದ ವಿಶೇಷ ಆಯುಕ್ತ ಹಾಗೂ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ರಂಗಪ್ಪ ಹೇಳಿದರು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಶ್ರೀನಿವಾಸ್, ವಿಶೇಷ ಆಯುಕ್ತ ಡಾ. ಹರೀಶ್ ಕುಮಾರ್, ರಾಜ್ಯ ಚುನಾವಣಾ ಆಯೋಗದ ಕಾರ್ಯದರ್ಶಿಯಾದ ಹೊನ್ನಮ್ಮ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಮತದಾರರ ಕರಡು ಪಟ್ಟಿ

79,08,394	ಒಟ್ಟು ಮತದಾರರು
41,09,496	ಪುರುಷರು
37,97,497	ಮಹಿಳೆಯರು
1,401	ಇತರೆ

ಅತಿ ಕಡಿಮೆ ಮತದಾರರು

ಸಂಖ್ಯೆ	ವಾರ್ಡ್	ಮತದಾರರು
243	ಕೂಡ್ಲು	18,604
229	ಇಬ್ಬಲೂರು	23,014
114	ಮಾರತಹಳ್ಳಿ	23,119
109	[illegible]	23,448
172	ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್	23,516
39	ಕನ್ನರಾಮೇಶ್ವರ	24,928
215	ಕತ್ರಿಗುಪ್ಪೆ	24,986
146	ಡಾ.ರಾಜ್‌ಕುಮಾರ್ ವಾರ್ಡ್	24,767
123	ಜಲಕಂಠೇಶ್ವರ ನಗರ	24,814

ಅತಿಹೆಚ್ಚು ಮತದಾರರಿರುವ ವಾರ್ಡ್

ಸಂಖ್ಯೆ	ವಾರ್ಡ್	ಮತದಾರರು
7	ಥಣಿಸಂದ್ರ	51,653
28	ದೊಡ್ಡಬಿದರಕಲ್ಲು	50,355
35	ಹೆಮ್ಮಿಗೆಪುರ	49,341
86	ಕೆ.ಆರ್.ಪುರ	49,196
226	ಕಾಳೇನ ಅಗ್ರಹಾರ	48,159
4	ಅಟ್ಟೂರು ಲೇಔಟ್	46,310
217	ಉತ್ತರಹಳ್ಳಿ	42,914
218	ಸುಬ್ರಮಣ್ಯಪುರ	42,202
32	ಉಲ್ಲಾಳು	41,981
15	ಕುವೆಂಪುನಗರ	41,629
225	ಗೊಟ್ಟಿಗೆರೆ	41,110
95	ನಾಗವಾರ	40,881
81	ಹೊರಮಾವು	40,655
106	ಹೂಡಿ	40,591
236	ದೇವರಚಿಕ್ಕನಹಳ್ಳಿ	40,429
227	ಬೇಗೂರು	40,230

ಈಗಲೇ ಪರಿಶೀಲಿಸಿಕೊಳ್ಳಿ

'ಮತದಾನದ ದಿನ ಹೆಸರಿಲ್ಲ, ಅಲ್ಲಿದೆ, ಇಲ್ಲಿದೆ ಎಂದು ದೂರುವ ಬದಲು ಕರಡು ಪಟ್ಟಿಯನ್ನು ಮತದಾರರು ಪರಿಶೀಲಿಸಿಕೊಳ್ಳುವುದು ಒಳ್ಳೆಯದು. ಆಗ ಅವರ ಹೆಸರು ಸೇರಿಸಲು ಸಾಧ್ಯವಾಗುತ್ತದೆ. ಎಲ್ಲ ಸಮಸ್ಯೆಗಳನ್ನು ಈಗಲೇ ಪರಿಹರಿಸಿಕೊಳ್ಳಲು ಸಾಧ್ಯವಿರುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'2011ರ ಜನಸಂಖ್ಯೆ ಆಧಾರದಲ್ಲಿ ನಾವು ವಾರ್ಡ್ ವಿಂಗಡಣೆ ಮಾಡಿದ್ದೇವೆ. ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಮತದಾರರ ಸಂಖ್ಯೆ ಹೆಚ್ಚಾಗಿದೆ. 11 ವರ್ಷಗಳಲ್ಲಿ ಕೆಲವು ಭಾಗದಲ್ಲಿ ಜನಸಂಖ್ಯೆ ಹೆಚ್ಚಾಗಿರುವುದೇ ಇದಕ್ಕೆ ಕಾರಣ. ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು 7,500 ಮತಗಟ್ಟೆಗಳನ್ನು ಗುರುತಿಸಲಾಗಿದೆ. ಇನ್ನೂ 1,500 ಮತಗಟ್ಟೆಗಳನ್ನು ಗುರುತಿಸಲಾಗುತ್ತದೆ' ಎಂದರು.

'ಎರಡೂ ಚುನಾವಣೆ ಸಾಧ್ಯ'

'ಬಿಬಿಎಂಪಿ ಹಾಗೂ ವಿಧಾನಸಭೆ ಚುನಾವಣೆ ಎರಡೂ ಒಟ್ಟಿಗೆ ನಡೆಯಬಾರದು ಎಂಬ ನಿರ್ಬಂಧವೇನೂ ಇಲ್ಲ. ಚುನಾವಣೆ ನಡೆಸಲು ನಾವು ಯಾವಾಗಲೂ ಸಿದ್ಧರಿದ್ದೇವೆ' ಎಂದು ಪ್ರಶ್ನೆಯೊಂದಕ್ಕೆ ಆಯುಕ್ತ ಬಸವರಾಜು ಉತ್ತರಿಸಿದರು.

'ಸುಪ್ರೀಂ ಕೋರ್ಟ್ ನಿರ್ದೇಶನದಂತೆಯೇ ಬಿಬಿಎಂಪಿ ಚುನಾವಣೆ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ. ಮತದಾರ ಪಟ್ಟಿ ಪರಿಷ್ಕರಣೆ ವೇಳಾಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಅಂತಿಮ ಪಟ್ಟಿ ಪ್ರಕಟವಾದ ನಂತರ ಚುನಾವಣೆ ವೇಳಾಪಟ್ಟಿ ಪ್ರಕಟಿಸಲಾಗುತ್ತದೆ' ಎಂದು ಹೈಕೋರ್ಟ್‌ನಲ್ಲಿ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿರುವ ಬಗ್ಗೆ ಅವರು ಪ್ರತಿಕ್ರಿಯಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

"WANTED FEMALE Data Entry/ Billing Assistants for retail Kitchenware shop in Jayanagar. Contact: 9845088449/ 9845249799"

JOB'S REQUIREMENTS Salary: 18k Banking Fieldwork, Telecaller backend, Kalyanimotors, Sancity. Qualification: SSLC, PUC Degree: 7483096378

Manager

VISHWAKARMA TRUST, Requires Young, Male Customer Support Manager to maintain entire activities of the Sabha Bhavana. Salary 20,000 + Incentives. Candidates residing in and around Kasthuri Nagar, Bangalore are preferred. Contact: 9880726846, within 15 days.

Multiple Vacancy

HRD, ADMINISTEATION, ACCOUNTS, MANAGER, SUPERVISIR, SOFTWARE,HARDWARE, ELECTRONICS, MECHANICAL, ELECTRICAL ENGINEERS REQUIRED 7676760299/7676760399

REQUIRED TEAMLEADER, Telecaller, & FieldExecutive For BankLoan collection. Direct recruitment to company Contact:- 9620206756, 9620200756.

Part-Time Jobs

MNC CO, Great Opportunity Work from Home, Earn Unlimited, Part/ Full. Time Job: 7019215243/ 9886641282

Wanted

CHEF AND COOK REQUIRED For a leading Indian Bar & Restaurant in Australia.* Minimum 3 years experience in South Indian (Mangalorean) Cuisine at a restaurant or resort.* English literacy required & must be able to pass IELTS with a minimum of 5B and overall. Apply now via phone 6362717590 or email indianchefs2australia@gmail.com

BUSINESS

Business Offers

Finance

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/9606701007

WANTED BUSINESS Partner Veg Hotel 1 Crore Investment Monthly Income 5 Lakhs Contact: 8892501007/ 9606701007

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7411265189

General

EARN 65,000/- to 90,000/- per-month. Setup Paper-bags, Tea-cups, LED-Bulbs unit. We provide free raw material. Buyback Agreement. Contact: 8527650177

EDUCATIONAL

Admission

DIRECT FINAL: LLB (Become Lawyer),B.Tech/ MBA/BCA/BBA/B.Sc/B.Com/ D.Pharm/B.Pharm/BAMS/ BYNS/Nursing/PU/SSLC. Last few seats. Asha Academy, Bangalore. Ph:9448460103/ 7093438248.

Tuitions

WANTED HOME TUTOR Staying Around Kormangala For 6th and 9th STANDARD (ICSE) ALL SUBJECTS 7795000876

REAL ESTATE SELLING

Commercial Land

Mysore

PRIME COMMERCIAL Converted Land 2 Acres on 10 Lane Mysore Express Highway near to exit point and toll is for Sale Suitable for Tech park or Any Commercial Project contact Owner 7676770503/ 9741019028

Sites

Banashankari

"SALE/ PURCHASE of Residential and Commercial properties in Banashankari, Kanakapura Road, Uttarahalli,Jayanagar, J.P.Nagar, Bannergatta Road. 9845286505"

Devanahalli

60X40 RESIDENTIAL corner site (east and North facing) at Devanahalli in Sillicon Valley Layout approved by BIAPA- Airport Authority. For immediate sale: Contact Ph:9886344801

Vishweshwariah Layout

AVAILABLE/ WANTED BDA Sites Vishweshwaraiah Layout Kempegowda Layout 20x30, 30x40, 40x60, 50x80 Contact Genuine Buyers/ Sellers 8892901567/ 9341733480

RENTAL PROPERTIES

Accommodation Available

Commercial

NEWLY BUILT Office / Storage Space for rent GF 300sqft First floor 750sqft at 8th cross Sirsi road Chamarajpet 9845381090

OTHERS

For Sale

OWNER LEAVING IMMEDIATE SALE LEATHER SOFA COT DIWAN FORD IKON DINING TEAPOY. CALL: 9845414482/ 7019263843

PERSONAL

Change of Name

I, DAKSHAYINI KRISHNA, W/o. Krishna. C, Residing at No.190, Sannidhi Road, Near Bugal Rock Park, BWSSB Quarters, Basavanagudi, Bengaluru- 560004, have changed my name from DAKSHAYINI. N. to DAKSHAYINI KRISHNA vide affidavit dated 16.02.2022 before notary Aravind Patil G.G. Bangalore City.

I, HARICHARANA Krishna Murthy (Having Passport No.F0284744) Residing at No.1, Savanadurga, Savanadurga State Forest, Ramanagar, Karnataka- 561201 have changed my name to S. K. HARICHARAN vide affidavit dated 25.08.2022 Sworn before notary: Mahesh. J.J., Ramanagar

I, FATHIMA FARHA NAVEEN W/o. Syed Moizuddin residing at #264, 5th Main Road, 'C' Layout, Bannimantap Mysore- 570015 declare that my husband's name is mentioned in some documents as SYED TAHER ZAMA instead of SYED MOIZUDDIN. Now it is changed to Syed Moizuddin vide affidavit dated 25.08.2022, before notary Hemalatha. P. Bangalore.

I, ALI MAHADI S/O MIR MAZAHAR ALI residing at Alipur Gauribidanur Taluk, Chikkaballapur District, have changed my name to MIR ALI MAHADI and my correct date of birth is 10.05.1972 vide affidavit dated 25.08.2022 before notary N.S Ashok Kumar, Gowribidanur

CHANGE OF NAME

I, POOJA S, D/o. Subramani. K, Residing at No. 321, Annapurneshwari Complex, Jangamakote Cross, Shidlghatta Taluk, Chikkaballapur Dist, Karnataka - 562 102, have changed my name to POOJA VAIBHAVI S vide affidavit dated 19.08.2022, before notary B.M. Chandrashekar, Bangalore. Henceforth I shall be called POOJA VAIBHAVI S only.

I, ARTI DEVJI PATEL R/a. No. 686, Ground Floor, 23rd Cross, Ideal Homes Township, Rajarajeshwari Nagar, Bangalore- 560098, have changed my name to ARTHI DHARMESH vide affidavit dated 13.07.2022 before notary V. Rajashekhara Bangalore.

I, DIVYA LAKSHMANA NAIK, R/a. No. 744, 2nd A Main, OMBR Layout, Banaswadi, Bangalore- 560043, have changed my name to DIVYA RAHGAVA NAIK, vide affidavit dated 13.07.2022 before notary V. Rajashekhara Bangalore.

I, MURTUZA ALI KHAN residing at Alipur Gauribidanur Taluk, Chikkaballapur District, have changed my name to MIR MURTUZA ALI vide affidavit dated 25.08.2022 before notary NS Ashok Kumar, Gowribidanur.

I, MUBARAK Ahamed residing at #10, 3rd D cross, 18th main, BTM 2nd stage, Bangalore South, Bengaluru- 560076 have changed my name to MUBARAK AHAMED SHAIK vide affidavit dated 25/08/2023 before notary H.G. Venkataramu., Bangalore. Henceforth I shall be known as MUBARAK AHAMED SHAIK only

I, DUNDARADDI JAIRAJ HIRENAIKAR S/o Jairaj Vill- Arishinagodi Pt-Chiknargund Tq Nargund Dt- Gadag- 582207. Have changed my name to DUNDARADDI HIRENAYKAR 24/08/2022 Notary RAVI (BA,LLB).

PUBLIC NOTICE

PUBLICATION NOTICE

National Consumer Disputes Redressal Commission, Govt. of India
First Appeal No. 1777/2017 WITH
IA/14398/2017, IA/14399/2017, IA/ 5886/ 2022
(Againts the order dated 10 Jan 2017 in Complaint Number 32/2010 of the State Commission Kerala)

M/S. MAYA REALTORS PVT.LTD. — Petitioner/ Appellant
Versus
T.P. Ghosh & 7 ORS. — Opposite Party/ Respondent (s)

To,
SRI. SATISH MENON, S/O. KIZHEPAT KRISHNAN UNNI MENON, ESSENTIAL CONSTRUELL INDIA PVT. LTD, POONKUNNAM P.O., THRISSUR, KERALA-680022

NOTICE

WHEREAS in the First Appeal No. 1777/2017 filed againt the order dated 10-01-2017 in Complaint No. 32/2010 arising out of the Order of the State Commission, Kerala you have been arrayed as Respondent no. 6
AND WHEREAS hearing notice sent to you by registered post has been received back with a postal remark 'LEFT'
NOW, THEREFORE, TAKE NOTICE through this publication to appear before this Hon'ble Commission in person or through your Councel/ Authorised Representative on 09-09-2022 failing which the appeal will be disposed of on merits in your absence.
Dated this New Delhi the 18 July 2022

Mr. K. Rajeev, Mr. Shinoj K Narayanan & Bijo Mathew
1-101, Bhagyawan Apartment Mayur Vihar, Phase-1 New Delhi-91

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

DH DECCAN HERALD ಪ್ರಜಾವಾಣಿ

BOOK YOUR CLASSIFIEDS ADVERTISEMENT

DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 |
9731810277 | 9901641752 | 9845114560 | 9886213331

condition apply*

dhclassifieds@deccanherald.co.in www.dhclassifieds.com

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: CAO/CN/BNC/64/2022
ದಿನಾಂಕ: 22-08-2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್ ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಕಡೂರು–ಚಿಕ್ಕಮಗಳೂರು–ಬೇಲೂರು ಹೊಸ ಲೈನ್ ಯೋಜನೆಯ ಅಡಿಯಲ್ಲಿ, ಚಿಕ್ಕಮಗಳೂರು (ಹೊರತುಪಡಿಸಿ) ಹಾಗೂ ಹಾಡಿಹಳ್ಳಿ (ಒಳಗೊಂಡಂತೆ) ಈ ನಿಲ್ದಾಣಗಳ ನಡುವೆ ರೈಲ್ವೇ ವಿದ್ಯುದೀಕರಣ, ಸಿಗ್ನಲ್ ಮತ್ತು ದೂರಸಂಪರ್ಕ ಹಾಗೂ ಸಾಮಾನ್ಯ ವಿದ್ಯುತ್ ಕೆಲಸಗಳನ್ನು ಒಳಗೊಂಡಂತೆ, ಚೇನೇಜ್ 45775 ಮತ್ತು ಚೈನೇಜ್ 54880 (9.105 ಕಿ.ಮೀ.) ವರೆಗೆ ಹೊಸ ಬ್ರಾಡ್‌ಗೇಜ್ ಲೈನ್‌ಗಳನ್ನು ನಿರ್ಮಾಣ ಮಾಡುವುದು.	ರೂ. 1,38,16,00,000/-
(ಟೆಂಡರು ಉಲ್ಲೇಖ ಸಂ. CKM-HADIHALLI-EPC-01)	

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17–11–2022, 16:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ಕಾಮಗಾರಿ / ನಿರ್ಮಾಣ ಬೆಂಗಳೂರು ದಂಡು

PUB/313/AAD/PRB/SWR/2022-23

S.W.Railways SWRRLY SWRRLY

ಭಾಷಾ ಕೋರ್ಸ್ ಪ್ರವೇಶಕ್ಕೆ ಆಹ್ವಾನ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಕೇಂದ್ರವು ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಜಪಾನೀಸ್, ಕೊರಿಯನ್, ಚೀನಿ ಭಾಷೆಗಳ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ನೋಂದಾಯಿಸಲು ಅರ್ಜಿಗಳನ್ನು ಆಹ್ವಾನಿಸಿದೆ.

ಸೆ.9 ಕೊನೆಯ ದಿನವಾಗಿದೆ. ದಂಡದೊಂದಿಗೆ ಸೆ.15ರವರೆಗೆ ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮಾಹಿತಿಗೆ: 8904018883, 080– 2957 2019

'37ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ'

ಬೆಂಗಳೂರು: ನೇತ್ರದಾನದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಇದೇ 25ರಿಂದ ಸೆ.8ರವರೆಗೆ 'ರಾಷ್ಟ್ರೀಯ ನೇತ್ರದಾನ ಪಾಕ್ಷಿಕ' ಎಂದು ಘೋಷಿಸಿದೆ.

ದೇಶದಲ್ಲೇ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಲಯನ್ಸ್ ಅಂತರರಾಷ್ಟ್ರೀಯ ನೇತ್ರ ಬ್ಯಾಂಕ್ ಜನರಲ್ಲಿ ನೇತ್ರದಾನದ ಅಗತ್ಯತೆ ಕುರಿತು ಅರಿತು ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳುತ್ತಿದೆ.

'ಕಾರ್ನಿಯಲ್' ಅಂಧತ್ವದಿಂದ ಮಕ್ಕಳು ಮತ್ತು ಯುವಕರು ಇಡೀ ಬದುಕನ್ನು ಕತ್ತಲೆಯಲ್ಲಿ ಕಳೆಯುವ ಸಂದರ್ಭಗಳಿವೆ. ಕಸಿ ಮಾಡುವ ಮೂಲಕ ಈ ಅಂಧತ್ವವನ್ನು ನಿವಾರಿಸಬಹುದು. ಹೀಗಾಗಿ, ಶವಸಂಸ್ಕಾರದ ಸಂದರ್ಭದಲ್ಲಿ ಕಣ್ಣುಗಳನ್ನು ಸುಡುವ ಬದಲು ಅಥವಾ ಮಣ್ಣಿನಲ್ಲಿ ಹೂಳುವ ಬದಲು ದಾನ ಮಾಡಬಹುದು ಎಂದು ಲಯನ್ಸ್ ಅಂತರರಾಷ್ಟ್ರೀಯ ನೇತ್ರ ಬ್ಯಾಂಕ್‌ನ ವೈದ್ಯಕೀಯ ನಿರ್ದೇಶಕರಾದ ಡಾ.ರೇಖಾ ಗ್ಯಾನ್‌ಚಂದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶದಲ್ಲಿ 1.5 ಕೋಟಿ ಅಂಧರಿದ್ದಾರೆ. ಇವರಲ್ಲಿ 46 ಲಕ್ಷ ಮಂದಿ ಕಾರ್ನಿಯಲ್ ಅಂಧತ್ವಕ್ಕೆ ಒಳಗಾಗಿದ್ದಾರೆ. ಒಂದು ಸಾವಿರ ಮಕ್ಕಳಲ್ಲಿ ಒಬ್ಬರು ಅಂಧರಾಗುತ್ತಿದ್ದಾರೆ. ಆದರೆ, ನೇತ್ರದಾನ ಮಾಡುವವರಿಗೂ ಮತ್ತು ಬೇಡಿಕೆಗೂ ಅಪಾರ ಅಂತರ ಇದೆ ಎಂದು ಅವರು ವಿವರಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ www.lionsinternationaleyebankbangalore.in ವೆಬ್‌ಸೈಟ್ ವೀಕ್ಷಿಸಬಹುದು. ನೇತ್ರದಾನ ಮಾಡುವವರು ಸಂಪರ್ಕಿಸಿ: 9740556666.

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
(ಕರ್ನಾಟಕ ಸರ್ಕಾರ)

ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಆಡಳಿತ ಕಛೇರಿ, ರಾ.ಹೆ–75 ರಸ್ತೆ, ಕೆಫೆ ಕಾಫಿಡೇ ಹತ್ತಿರ, ನರಸಾಪುರ–563133, ಕೋಲಾರ ತಾಲ್ಲೂಕು ಮತ್ತು ಜಿಲ್ಲೆ. ಇ–ಮೇ: eemidklr@rediffmail.com, eemigwddkolar@gmail.com ದೂರವಾಣಿ ಸಂಖ್ಯೆ:– 08152–200049

ಸಂಖ್ಯೆ:ಕಾ.ಪಾ.ಇಂ/ಸ.ನೀ.ವಿ/ಕೋ/ತಾಂ.ಶಾ/ಸ.ಇಂ/ಟೆಂಡರ್ ಮುಂದೂಡಿಕೆ ಪ್ರಕಟಣೆ/1586/2022-23/ ದಿನಾಂಕ:16-08-2022ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:04/2022-23/ದಿನಾಂಕ:01-08-2022
ಉಲ್ಲೇಖ:- ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ:04/2022-23/1504/ದಿನಾಂಕ:01-08-2022.

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ ರವರಿಂದ ಒಟ್ಟು 02 ಕಾಮಗಾರಿಗಳಿಗೆ ಕೆ.ಡಬ್ಲ್ಯೂ–4 ಟೆಂಡರ್ ಡಾಕ್ಯೂಮೆಂಟ್ ಅಳವಡಿಸಿಕೊಂಡು ಕೆಟಿಪಿಪಿ ನಿಯಮವಳಿ ಅನ್ವಯ 3ನೇ ದರ್ಜೆ ಮತ್ತು ಮೇಲ್ಪಟ್ಟ ನೋಂದಾಯಿತ ಗುತ್ತಿಗೆದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಗರಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 195.00 ಲಕ್ಷ ಹಾಗೂ ಕನಿಷ್ಠ ಟೆಂಡರ್ ಅಂದಾಜು ಮೊತ್ತ ರೂ. 140.00 ಲಕ್ಷ. ನಿಗಧಿತ ಇ.ಎಂ.ಡಿ ಮೊತ್ತವನ್ನು ಇ–ಪೋರ್ಟಲ್‌ನಲ್ಲಿದ್ದಂತೆ ಸಲ್ಲಿಸುವುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪ್ರಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್‌ಸೈಟ್ www.eproc.karnataka.gov.in ದಿನಾಂಕ:29/08/2022ರ ಸಂಜೆ 04:00 ಗಂಟೆಯಿಂದ ಪಡೆಯಬಹುದು (Download). ಪ್ರೀ ಬಿಡ್ ಸಭೆಯನ್ನು ದಿನಾಂಕ:06/09/2022 ರಂದು ಬೆಳಗ್ಗೆ 11.00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕೋಲಾರ ಇಲ್ಲಿ ಆಯೋಜಿಸಲಾಗಿರುತ್ತದೆ. ಡಾಕ್ಯುಮೆಂಟ್‌ಗಳನ್ನು ಸಲ್ಲಿಸಬೇಕಾಗಿರುವ (ಗಂಟಂಚಿಜ) ಕೊನೆಯ ದಿನಾಂಕ:12/09/2022ರ ಸಂಜೆ 04:00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ:13/09/2022ರ ಸಂಜೆ 04:30 ಗಂಟೆಯ ನಂತರ. ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ www.eproc.karnataka.gov.in ಅಂತರ್ಜಲ ತಾಣದಲ್ಲಿ ಅಥವಾ ಈ ಕಛೇರಿಯ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೋಲಾರ.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು ಇಲ್ಲಿ ಕೆಳಗೆ ವಿವರಿಸಲಾಗಿರುವ ಸ್ವತ್ತುಗಳನ್ನು ಖರೀದಿಸಲು ಉದ್ದೇಶಿಸಿದ್ದು, ಅವುಗಳ ಎದುರಿನಲ್ಲಿ ನಮೂದಿಸಿರುವ ಹೆಸರಿನವರು ತಾವೇ ಆ ಸ್ವತ್ತುಗಳ ಸಂಪೂರ್ಣ ಮಾಲಿಕರಾಗಿದ್ದೇವೆ ಎಂದು ಪ್ರತಿನಿಧಿಸುತ್ತಿದ್ದಾರೆ ಹಾಗೂ ಸದರಿ ಸ್ವತ್ತುಗಳು ಯಾವುದೇ ಪರಕೀಯ ಹಕ್ಕುಗಳ ನಿರ್ಬಂಧಗಳಿಲ್ಲದೆ, ಸಮಗ್ರವಾಗಿ ನಮ್ಮ ಸ್ವಾಧೀನತೆಯಲ್ಲಿವೆ ಎಂದು ತಿಳಿಸಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಅಥವಾ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯಾಗಲಿ, ಹಿಂದೂ ಅವಿಭಕ್ತ ಕುಟುಂಬವಾಗಲಿ, ಕಂಪನಿಯಾಗಲಿ, ಸರ್ಕಾರಿ ಪ್ರಾಧಿಕಾರವಾಗಲಿ, ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು, ನಾನ್ ಬ್ಯಾಂಕಿಂಗ್ ಹಣಕಾಸು ಸಂಸ್ಥೆಗಳು, ಸಂಸ್ಥೆ, ಸ್ಥಾಪಿತ ಅಥವಾ ಸ್ಥಾಪಿತವಲ್ಲದ ವ್ಯಕ್ತಿಗಳ ಸಂಘಟಣೆ ಅಥವಾ ವ್ಯಕ್ತಿಗಳ ಸಂಘ, ಲೇವಾದೇವಿಗಾರರು ಅಥವಾ ಸಾಲಗಾರರು, ಮಾರಾಟ, ಮೆಮೊರಾಂಡಮ್ ಆಫ್ ಅಂಡರ್‌ಸ್ಟಾಂಡಿಂಗ್, ವಿನಿಮಯ, ಅಡಮಾನ, ಈಡು, ಚಾರ್ಜ್, ಉಡುಗೊರೆ, ಟ್ರಸ್ಟ್, ಅನುವಂಶಿಕ, ಸಕ್ಸೆಶನ್, ಸ್ವಾಧೀನ, ಭೋಗ್ಯ, ಬಾಡಿಗೆ, ನಿರ್ವಹಣೆ, ಈಸ್‌ಮೆಂಟ್, ಲೈಸನ್ಸ್, ಬಿಕ್ವೆಥ್, ಪಾಲು, ಅಸೈನ್‌ಮೆಂಟ್, ಲೀನ್, ಅಟ್ಯಾಚ್‌ಮೆಂಟ್, ಅಭಿವೃದ್ಧಿ ಹಕ್ಕುಗಳು, ರಸ್ತೆ ಹಕ್ಕು, ಲಿಸ್ಪೆಂಡೆನ್ಸ್, ಮೀಸಲು, ಒಡಂಬಡಿಕೆ, ಎಫ್‌ಎಸ್‌ಐ ಬಳಕೆ, ಅಥವಾ ಹೊಣೆಗಾರಿಕೆ ಅಥವಾ ಬದ್ಧತೆ ಅಥವಾ ಇನ್ಯಾವುದೇ ರೀತಿಯ ಯಾವುದೇ ಸ್ವರೂಪದ ಆಕ್ಷೇಪಣೆ, ಕ್ಲೇಮ್, ಹಕ್ಕು, ಬಾಧ್ಯತೆ ಮತ್ತು/ಅಥವಾ ಹಿತಾಸಕ್ತಿ ಹೊಂದಿದ್ದಲ್ಲಿ, ಅಂತಹವರು ಸದರಿ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ **14 (ಹದಿನಾಲ್ಕು)** ದಿನಗಳ ಅವಧಿಯೊಳಗೆ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಪುರಾವೆ ದಾಖಲಾತಿಗಳ ಸಮೇತ ಇಲ್ಲಿ ಕೆಳಗೆ ಸಹಿ ಹಾಕಿರುವವರ ವಿಳಾಸಕ್ಕೆ ಸಲ್ಲಿಸಬೇಕೆಂದು ಕೋರಲಾಗಿದೆ, ಇಲ್ಲವಾದಲ್ಲಿ ಯಾವುದೇ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಯಾವುದೇ ಕ್ಲೇಮ್ ಅಥವಾ ಕ್ಲೇಮ್‌ಗಳು ಇದ್ದಲ್ಲಿ, ಅಂತಹವುಗಳನ್ನು ಪರಿಗಣಿಸದೆ ಕೈಬಿಡಲಾಗುತ್ತದೆ.

ಷೆಡ್ಯೂಲ್ ಪ್ರಾಪರ್ಟಿ

ಕೆಂಪನಹಳ್ಳಿ ಗ್ರಾಮ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು ಮತ್ತು ರಾಮನಗರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ ಕೆಳಕಂಡ ಜಮೀನುಗಳ ಎಲ್ಲಾ ಭೂಭಾಗಗಳು ಸೇರಿರುತ್ತವೆ:

ಕ್ರ. ಸಂ.	ಸರ್ವೆ ನಂ.	ಹಳೆ ಸರ್ವೆ ನಂ.	ವಿಸ್ತೀರ್ಣ ಎಕರೆ	ವಿಸ್ತೀರ್ಣ ಗುಂಟಾ	ಚಕ್ಕುಬಂದಿ	ಜಮೀನು ಮಾಲೀಕರ ಹೆಸರು
1.	73/1	73/1 ಇನ್ನೂ ಹಿಂದಿನ ಸರ್ವೆ ನಂ. 73		06.12	ಪೂರ್ವ: ಸರ್ವೆ ನಂ.73/2 ಪಶ್ಚಿಮ: ಸರ್ವೆ ನಂ.72/2 ಉತ್ತರ: ಸರ್ವೆ ನಂ.73/4 ದಕ್ಷಿಣ: ಸರ್ವೆ ನಂ.72/3	ಶ್ರೀ. ಪಿ ಹನುಮಂತರಾಜು ಮತ್ತು ಶ್ರೀ. ಡಿ ರಂಗಸ್ವಾಮಿ ಗೌಡ
2.	73/4	73/1		13.04	ಪೂರ್ವ: ಸರ್ವೆ ನಂ.73/2 ಪಶ್ಚಿಮ: ಸರ್ವೆ ನಂ.72/4, 72/2 ಉತ್ತರ: ಸರ್ವೆ ನಂ.74/21 ದಕ್ಷಿಣ: ಸರ್ವೆ ನಂ.73/1	ಶ್ರೀ. ಸಂತೋಷ್ ಕೆ ಸಿ
3.	72/3	72/2		21.04	ಪೂರ್ವ: ಸರ್ವೆ ನಂ.73/2 ಪಶ್ಚಿಮ: ಸರ್ವೆ ನಂ.72/2 ಉತ್ತರ: ಸರ್ವೆ ನಂ.73/1 ದಕ್ಷಿಣ: ರಸ್ತೆ	ಶ್ರೀ. ಪಿ ಹನುಮಂತರಾಜು ಮತ್ತು ಶ್ರೀ. ಡಿ ರಂಗಸ್ವಾಮಿ ಗೌಡ
4.	72/4	72/2		11.12	ಪೂರ್ವ: ಸರ್ವೆ ನಂ.73/4 ಪಶ್ಚಿಮ: ಸರ್ವೆ ನಂ.72/1, 71/2 ಉತ್ತರ: ಸರ್ವೆ ನಂ.74/21 ದಕ್ಷಿಣ: ಸರ್ವೆ ನಂ.72/2	ಶ್ರೀ. ಸಂತೋಷ್ ಕೆ ಸಿ

ದಿನಾಂಕ: 26/08/2022

ಸಹಿ/– **ಶಶಿಕಲಾ ಎ ಎಸ್,** ವಕೀಲರು
ನಂ.97, 11ನೇ ಅಡ್ಡರಸ್ತೆ, ಪವಮಾನ ನಗರ, ಕೆಂಬತ್ತಹಳ್ಳಿ ಮುಖ್ಯರಸ್ತೆ, ಗೊಟ್ಟಿಗೆರೆ, ಬನ್ನೇರಘಟ್ಟ ರಸ್ತೆ, ಬೆಂಗಳೂರು – 560 083
ಇ–ಮೇಲ್: shashi.llb@gmail.com ಮೊಬೈಲ್ ನಂ. 9945899711

ನಗರಸಭಾ ಕಾರ್ಯಾಲಯ, ಮುಳಬಾಗಿಲು,
ಕೋಲಾರ ಜಿಲ್ಲೆ-563131. ದೂ: 08159-242044
E-mail: itstaff_ulb_mulabagal@yahoo.co.in
Website: www.mulbagalcity.mrc.gov.in

ಸಂಖ್ಯೆ: ನಸಮು/ತಾಂತ್ರಿಕ/ಇತರೆ/ಸಿಆರ್/08/2022–23 ದಿನಾಂಕ:20.08.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಿಸಲಾಗಿದೆ.)

ಮುಳಬಾಗಿಲು ನಗರಸಭೆ 2022–23ನೇ ಸಾಲಿನ ಎಸ್‌ಎಫ್‌ಸಿ ಕುಡಿಯುವ ನೀರಿನ ಅನುದಾನ, 2018–19ನೇ ಸಾಲಿನ ಎಸ್‌ಎಫ್‌ಸಿ ವಿಶೇಷ ಅನುದಾನ ಮತ್ತು ನಗರಸಭಾ ನಿಧಿಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕತೆ ಆಧ್ಯಾದ್ಯೇಶ 2000ರಂತೆ ಹಾಗೂ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಸರ್ಕಾರದ ಆದೇಶ ಸಂಖ್ಯೆ: ಎಫ್.ಡಿ/06/ಪಿಸಿಎಲ್/2006, ಬೆಂಗಳೂರು ರಂತೆ ದ್ವಿಲಕೋಟೆ ಪದ್ಧತಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಐಟಂವಾರು ದರದ ಟೆಂಡರುಗಳನ್ನು ಮತ್ತು ವಾಹನವನ್ನು ಪಡೆಯಲು ಅರ್ಹ ಗುತ್ತಿಗೆದಾರರು/ ಏಜೆನ್ಸಿದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ **http//eproc.karnataka.gov.in** ಮೂಲಕ ಈ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರವಾಗಿರುತ್ತದೆ. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಕ್ರ ಸಂ	ಕಾಮಗಾರಿಯ ಇಂಡೆಂಟ್ ನಂಬರ್	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	DMA/2022-23/WS/WORK_INDENT135861	5.00
2	DMA/2021-22/IND14332	5.00
3	DMA/2022-23/WS/WORK_INDENT135871	50.00
4	DMA/2022-23/WS/WORK_INDENT135883	50.00
5	DMA/2022-23/EL/WORK_INDENT135889	50.00
6	CMC/MBL/TECH/CR/21/2022-23	4.80
7	CMC/MBL/TECH/CR/23/2022-23	4.80
8	CMC/MBL/TECH/CR/22/2022-23	4.80
9	CMC/MBL/TECH/CR/16/2022-23	6.57

(1) ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ: 29.08.2022ರ ಸಮಯ: 17.00 ಗಂಟೆಯವರೆಗೆ.** (2) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 01.09.2022ರ ಸಮಯ:10.00 ಗಂಟೆಗೆ.** (3) ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 03.09.2022ರ ಸಮಯ:10.00 ಗಂಟೆಗೆ.**

ಸಹಿ/–ಪೌರಾಯುಕ್ತರು, ನಗರಸಭೆ ಮುಳಬಾಗಿಲು

ವಾ.ಸಾ.ಸಂ.ಇ./ಕೋಲಾರ/ಆರ್.ಓ. ಸಂಖ್ಯೆ 259/ಎಂಸಿಎ/2022–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸ್ಮಾರ್ಟ್ ಯೋಜನೆಯಲ್ಲಿ 'ಬಿಬಿಎಂಪಿ ಶಿಕ್ಷಣ'ಕ್ಕೆ ಶೇ 2ರಷ್ಟು ವೆಚ್ಚ; ಎರಡು ಕಟ್ಟಡ ನಿರ್ಮಾಣದ ಗುರಿ

ವಿದ್ಯಾರ್ಥಿಗಳಿಗೆ 'ಐಸಿಟಿ ಲ್ಯಾಬ್' ಶಕ್ತಿ

ಬಿಬಿಎಂಪಿ ಶಾಲೆಯಲ್ಲಿರುವ 'ಐಸಿಟಿ' ಲ್ಯಾಬ್

● ಆರ್. ಮಂಜುನಾಥ್

ಬೆಂಗಳೂರು: 'ಸ್ಮಾರ್ಟ್ ಸಿಟಿ' ಯೋಜನೆಯಲ್ಲಿ ಬಿಬಿಎಂಪಿಯ ಶಾಲೆಗಳೂ ಹೈಟೆಕ್ ಸೌಲಭ್ಯ ಪಡೆದುಕೊಳ್ಳುವಲ್ಲಿ ಯಶ ಸಾಧಿಸಿವೆ. ಕಂಪ್ಯೂಟರ್ ಪ್ರಯೋಗಾಲಯದ ಸಮಸ್ಯೆ ಏಳು ಶಾಲೆಗಳಲ್ಲಿ ನೀಗಿದೆ. 'ಸ್ಮಾರ್ಟ್ ಸಿಟಿ' ಯೋಜನೆಯಲ್ಲಿ ಹಲವು ಕ್ಷೇತ್ರಗಳಿಗೆ ಹಣ ವಿನಿಯೋಗಿಸಲಾಗುತ್ತಿದ್ದು, ಶಿಕ್ಷಣ ಕ್ಷೇತ್ರದ ಸೌಲಭ್ಯಗಳಿಗಾಗಿ ಸುಮಾರು ₹20 ಕೋಟಿಯನ್ನು ಮಾತ್ರ ವೆಚ್ಚಮಾಡಲಾಗುತ್ತಿದೆ.

ಬಿಬಿಎಂಪಿಯ 65 ಶಾಲೆಗಳಲ್ಲಿ 'ಸ್ಮಾರ್ಟ್ ಡಿಜಿಟಲ್ ಕ್ಲಾಸ್ ರೂಂ' ಸ್ಥಾಪಿಸಲಾಗಿದೆ. ಈ ಮೂಲಕ ಅನಿಮೇಷನ್ ಸಾಫ್ಟ್‌ವೇರ್ ಹಾಗೂ ಕ್ರೋಮ್ ನೋಟ್‌ಬುಕ್‌ಗಳೊಂದಿಗೆ ಇಂಟಿಗ್ರೇಟೆಡ್ ಕಂಪ್ಯೂಟರ್ ಪ್ರೊಜೆಕ್ಟರ್‌ಗಳನ್ನು ಒದಗಿಸಲಾಗಿದೆ. ಅತ್ಯಾಧುನಿಕ ತಂತ್ರಜ್ಞಾನ ಇರುವುದರಿಂದ ಸುಮಾರು 15 ಸಾವಿರ ವಿದ್ಯಾರ್ಥಿಗಳು ಉನ್ನತ ವಿಷಯಗಳನ್ನು ಅರಿಯಲು 'ಇಂಟರ್‍ಯಾಕ್ಟಿವ್ ಲರ್ನಿಂಗ್' ಸೌಲಭ್ಯ ಪಡೆದಿದ್ದಾರೆ.

ಇದರ ಜೊತೆಯಲ್ಲಿ ಏಳು ಶಾಲೆಗಳಲ್ಲಿ ಇನ್‌ಫರ್ಮೇಷನ್ ಆ್ಯಂಡ್ ಕಮ್ಯುನಿಕೇಷನ್ ಟೆಕ್ನಾಲಜಿ (ಐಸಿಟಿ) ಲ್ಯಾಬ್‌ಗಳನ್ನು ಅಳವಡಿಸಲಾಗಿದೆ. ಈ ಐಸಿಟಿ ಲ್ಯಾಬ್‌ನಲ್ಲಿ ಪ್ರೊಜೆಕ್ಟರ್, ಆಪ್ಟಿಕಲ್ ಸಿಸ್ಟಮ್ಸ್‌ನೊಂದಿಗೆ ಬೋರ್ಡ್ ಅನ್ನು ಟಚ್ ಪ್ಯಾನೆಲ್ ಆಗಿ ಮಾರ್ಪಡಿಸಲಾಗಿದೆ. ಈ ಲ್ಯಾಬ್‌ನಲ್ಲಿ 20 ಲ್ಯಾಪ್‌ಟಾಪ್‌ಗಳೂ ಇದ್ದು, ಆ ಮೂಲಕ ಎಲ್ಲ ರೀತಿಯ ಹೈಟೆಕ್ ವ್ಯವಸ್ಥೆಯನ್ನು ಬಿಬಿಎಂಪಿ ಶಾಲೆಗಳ ಮಕ್ಕಳಿಗೆ ಒದಗಿಸಲಾಗಿದೆ.

ಕಟ್ಟಡ ಪೂರ್ಣವಾಗಿಲ್ಲ: ಪಾದರಾಯನಪುರ ಹಾಗೂ ಪುಲಕೇಶಿನಗರದಲ್ಲಿ ಬಿಬಿಎಂಪಿ ಶಾಲೆಗಳಿಗೆ ಹೊಸ ಹೈಟೆಕ್ ಕಟ್ಟಡವನ್ನು ಸುಮಾರು ₹ 6 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಈ ಕಟ್ಟಡಗಳು ಇನ್ನೂ ನಿರ್ಮಾಣ ಹಂತದಲ್ಲೇ ಇದ್ದು, ಮುಂದಿನ ಶೈಕ್ಷಣಿಕ ವರ್ಷಕ್ಕೆ ಬಳಕೆಗೆ ಮುಕ್ತವಾಗುವ ನಿರೀಕ್ಷೆ ಇದೆ.

ಅಂಗನವಾಡಿಯಲ್ಲಿ ಚಿಲಿಪಿಲಿ: ನಗರದಲ್ಲಿರುವ 220 ಅಂಗನವಾಡಿಗಳಲ್ಲೂ ಸ್ಮಾರ್ಟ್ ಡಿಜಿಟಲ್ ರೂಂಗಳನ್ನು ಸ್ಥಾಪಿಸುವ ಯೋಜನೆ ಇದು. ಟಚ್ ಪ್ಯಾನೆಲ್ ಮೂಲಕ ಚಿಲಿಪಿಲಿ ಸಾಫ್ಟ್‌ವೇರ್ ಒದಗಿಸಲಾಗಿದ್ದು, 3ರಿಂದ 6 ವರ್ಷದೊಳಗಿನ ಸುಮಾರು 9 ಸಾವಿರ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ವೃದ್ಧಿಸುವ ಯೋಜನೆ ಇದು. ಈ ಯೋಜನೆ ಇನ್ನೂ ಅನುಷ್ಠಾನ ಹಂತದಲ್ಲಿದೆ.

ಪಾಲಿಕೆ ಶಾಲೆ

15,000 ಮಕ್ಕಳಿಗೆ 'ಡಿಜಿಟಲ್' ಸೌಲಭ್ಯ
65 ಶಾಲೆಗಳಲ್ಲಿ ಸ್ಮಾರ್ಟ್ ಕ್ಲಾಸ್,
ಇಂಟಿಗ್ರೇಟೆಡ್ ಕಂಪ್ಯೂಟರ್ ಪ್ರೊಜೆಕ್ಟರ್

ನಗರದ ಜಂಕ್ಷನ್‌ಗಳಲ್ಲಿ ಅಳವಡಿಸಿರುವ ಕ್ಯಾಮೆರಾ



ಆಟೊ ನಂಬರ್ ಪ್ಲೇಟ್ ರೀಡರ್

ಸಂಚಾರ ಪೊಲೀಸರಿಗೆ 'ಕ್ಯಾಮೆರಾ ಶಕ್ತಿ'

ನಗರದಲ್ಲಿ ಸಂಚಾರ ನಿಯಮಗಳ ಉಲ್ಲಂಘನೆ ನಿಯಂತ್ರಿಸಲು ಸಂಚಾರ ಪೊಲೀಸರಿಗೆ 'ಸ್ಮಾರ್ಟ್ ಸಿಟಿ' ಯೋಜನೆಯಲ್ಲಿ 'ಕ್ಯಾಮೆರಾ ಶಕ್ತಿ' ನೀಡಲಾಗಿದೆ. 'ಸ್ಮಾರ್ಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್'ನಲ್ಲಿ ಹಲವು ಬಗೆಯ ಉಪಕರಣಗಳನ್ನು ಒದಗಿಸಲಾಗಿದೆ.

ಜಂಕ್ಷನ್, ಸಿಗ್ನಲ್ ಹಾಗೂ ರಸ್ತೆಗಳಲ್ಲಿ ಕ್ಯಾಮೆರಾ ಅಳವಡಿಸುವ ಜೊತೆಗೆ ಪೊಲೀಸರು ಧರಿಸಿಕೊಳ್ಳುವ ಕ್ಯಾಮೆರಾಗಳನ್ನು ಒದಗಿಸಲಾಗಿದೆ. ಈ ಮೂಲಕ ನಿಯಮಗಳನ್ನು ಉಲ್ಲಂಘಿಸುವವರಿಗೆ ದಾಖಲೆಯನ್ನೂ ಒದಗಿಸಲಾಗುತ್ತಿದೆ.

ಸ್ವಯಂಚಾಲಿತವಾಗಿ ವಾಹನಗಳ ಸಂಖ್ಯಾಫಲಕದ ಚಿತ್ರಗಳನ್ನು ಸೆರೆಹಿಡಿಯುವ ಕ್ಯಾಮೆರಾಗಳನ್ನು ನಗರದ 20 ಜಂಕ್ಷನ್‌ಗಳಲ್ಲಿ ಅಳವಡಿಸಲಾಗಿದೆ. ಇವುಗಳೆಲ್ಲವೂ 'ಇಂಟಿಗ್ರೇಟೆಡ್ ಕಮ್ಯಾಂಡ್ ಕಂಟ್ರೋಲ್ ಸೆಂಟರ್'ನೊಂದಿಗೆ ಸಂಪರ್ಕ ಸಾಧಿಸಲಿವೆ. ಇದರಿಂದ ಅಪಘಾತದ ಸಂದರ್ಭದಲ್ಲೂ ತುರ್ತು ಚಿಕಿತ್ಸೆಯನ್ನು ವೇಗವಾಗಿ ಒದಗಿಸುವ ಗುರಿ ಹೊಂದಲಾಗಿದೆ.

₹8.73 ಕೋಟಿ
ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್

1,100
ಪೊಲೀಸರ 'ಬಾಡಿ ವೋರ್ನ್ ಕ್ಯಾಮೆರಾ'

20
ಆಟೊ ನಂಬರ್ ಪ್ಲೇಟ್ ರೀಡರ್

ಯಾವುದಕ್ಕೆ ಎಷ್ಟು ವೆಚ್ಚ?

ಶಾಲೆ ಅಭಿವೃದ್ಧಿ

₹2.34 ಕೋಟಿ
ಪಾದರಾಯನಪುರ

₹4.22 ಕೋಟಿ
ಪುಲಕೇಶಿನಗರ

₹6.41 ಕೋಟಿ
65 ಸ್ಮಾರ್ಟ್ ಡಿಜಿಟಲ್ ಕ್ಲಾಸ್ ರೂಂ+ 7 ಐಸಿಟಿ ಲ್ಯಾಬ್

₹5.26 ಕೋಟಿ
ಅಂಗನವಾಡಿ ಸ್ಮಾರ್ಟ್ ಡಿಜಿಟಲ್ ಕ್ಲಾಸ್ ರೂಂ

ಎಲ್ಲೆಲ್ಲಿ ಐಸಿಟಿ ಲ್ಯಾಬ್

ಬಿಬಿಎಂಪಿಯ ಸಂಯುಕ್ತ ಪಿಯು ಕಾಲೇಜ್, ಹೇರೋಹಳ್ಳಿ; ಪಿಯು ಕಾಲೇಜ್, ಕಸ್ತೂರಬಾ ನಗರ; ಪ್ರೌಢಶಾಲೆ, ಗಂಗಾನಗರ; ಪಿಯು ಕಾಲೇಜ್, ಕ್ಲೀವ್‌ಲ್ಯಾಂಡ್ ಟೌನ್, ಬಾಲಕಿಯರ ಪಿಯು ಕಾಲೇಜ್, ಡಿಸ್ಪೆನ್ಸರಿ ರಸ್ತೆ, ಮಹಿಳೆಯರ ಪದವಿ ಕಾಲೇಜ್, ಬೈರವೇಶ್ವರನಗರ, ಬಾಲಕಿಯರ ಪ್ರೌಢಶಾಲೆ, ಜೋಗುಪಾಳ್ಯ

ಡೇ ಕೇರ್

'ಉದ್ಯೋಗಸ್ಥ ಮಹಿಳೆಯರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಮಕ್ಕಳ ಡೇಕೇರ್ ಸೆಂಟರ್ ಅನ್ನೂ 'ಸ್ಮಾರ್ಟ್ ಸಿಟಿ' ಒದಗಿಸಿದೆ. ಮಹಿಳೆಯರು ಮಕ್ಕಳನ್ನು ಇಲ್ಲಿ ಬಿಟ್ಟು ಕೆಲಸಕ್ಕೆ ಹೋಗಬಹುದು. ಮೂಲಸೌಲಭ್ಯ ಸೇರಿ ಮಕ್ಕಳಸ್ನೇಹಿ ಪೀಠೋಪಕರಣ, ಆಟಿಕೆ ಹಾಗೂ ವಿಶ್ರಾಂತಿ ಪ್ರದೇಶವನ್ನು ಒಳಗೊಂಡಿದೆ. ಶುಚಿತ್ವ ಹಾಗೂ ಸುರಕ್ಷತೆಯ ಎಲ್ಲ ಸೌಲಭ್ಯಗಳನ್ನು ಈ ಡೇ ಕೇರ್ ಒಳಗೊಂಡಿದೆ. ವಿಧಾನಸೌಧದ ಬಳಿ ಬಹುಮಹಡಿ ಕಟ್ಟಡದ ಆವರಣದಲ್ಲಿ 'ಡೇ ಕೇರ್' ಸ್ಥಾಪಿಸಲಾಗಿದೆ ಎಂದು ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ತಿಳಿಸಿದರು.

ವರ್ಬ್ಯಾಟಲ್ ಸಂಸ್ಥೆ ಆಯೋಜಿಸಿದ್ದ ಕನ್ನಡ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು

ಶಿರಸಿಯ ಪ್ರತೀಕ್ಷಾ ಟಿ.ಭಟ್, ಶ್ರೇಯಸ್ ಎಸ್.ಹೆಗಡೆ ತಂಡದ ಗೆಲುವಿನ ನಗೆ

ವರ್ಬ್ಯಾಟಲ್ ಚರ್ಚಾ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳಲ್ಲಿ ಚರ್ಚಾ ಮನೋಭಾವವನ್ನು ಹೆಚ್ಚಿಸುವ ನಿಟ್ಟಿನಲ್ಲಿ ವರ್ಬ್ಯಾಟಲ್ ಸಂಸ್ಥೆಯ ವತಿಯಿಂದ ಆಯೋಜಿಸಿದ್ದ ಕನ್ನಡ ಚರ್ಚಾ ಸ್ಪರ್ಧೆ 18ನೇ ಆವೃತ್ತಿಯಲ್ಲಿ ಶಿರಸಿಯ ಚಂದನ ಆಂಗ್ಲ ಮಾಧ್ಯಮ ಶಾಲೆಯ ಪ್ರತೀಕ್ಷಾ ಟಿ.ಭಟ್ ಹಾಗೂ ಶ್ರೇಯಸ್ ಎಸ್.ಹೆಗಡೆ ತಂಡ ಗೆಲುವಿನ ಕಿರೀಟ ಮುಡಿಗೇರಿಸಿಕೊಂಡಿದೆ.

ಬೆಂಗಳೂರಿನ ಅನಂತ ವಿದ್ಯಾನಿಕೇತನ ಶಾಲೆಯ ಅನೂಪ್ ಬಿ.ವಿ, ನೋಶಿತಾ ಸಿ. ತಂಡ ಹಾಗೂ ಶಿರಸಿಯ ಚಂದನ ಆಂಗ್ಲ ಮಾಧ್ಯಮ ಶಾಲೆಯ ಅನಿರುದ್ಧ ಕಿರಣ್ ಭಟ್ ಹಾಗೂ ಶ್ರವಣ ಶ್ರೀನಿಧಿ ಮಂಗಳೂರು ತಂಡವು ಅಂತಿಮ ತಂಡಗಳಾಗಿ ಗೆಲುವಿನ ಖುಷಿಯನ್ನು ಹಂಚಿಕೊಂಡವು.

ಚರ್ಚಾಸ್ಪರ್ಧೆಯಲ್ಲಿ ವಿಜೇತ ತಂಡದವರು ಟ್ರೋಫಿಯೊಂದಿಗೆ ₹20 ಸಾವಿರ ಬಹುಮಾನವನ್ನು ತಮ್ಮದಾಗಿಸಿಕೊಂಡರು. ಅಂತಿಮ ತಂಡಗಳಿಗೆ ಟ್ರೋಫಿಯೊಂದಿಗೆ ₹5 ಸಾವಿರ ಬಹುಮಾನವನ್ನು ನೀಡಿ ಪ್ರೋತ್ಸಾಹಿಸಲಾಯಿತು. ಅಂತಿಮ ಸುತ್ತಿನ ಚರ್ಚಾಸ್ಪರ್ಧೆಯಲ್ಲಿ ಎಂ.ವೆಂಕಟೇಶ, ಆರ್.ಎಚ್. ನಟರಾಜ್, ಸುಷ್ಮಾ ಮೂಡುಬಿದಿರೆ ಹಾಗೂ ಸತ್ಯಶ್ರೀ ತೀರ್ಪುಗಾರರಾಗಿದ್ದರು.

ಬೆಂಗಳೂರು ಹಾಗೂ ಹುಬ್ಬಳ್ಳಿ ವಲಯಗಳಿಂದ 34 ಶಾಲೆಗಳನ್ನು ಪ್ರತಿನಿಧಿಸುವ 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಪಾಲಿಕೆ ಮೀಸಲು ಪ್ರಶ್ನೆ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವಾರ್ಡ್‌ವಾರು ಮೀಸಲಾತಿ ಅಂತಿಮಗೊಳಿಸಿ ನಗರಾಭಿವೃದ್ಧಿ ಇಲಾಖೆ ಹೊರಡಿಸಿರುವ ಅಧಿಸೂಚನೆ ರದ್ದುಪಡಿಸಲು ಕೋರಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಕೆಯಾಗಿದೆ.

ಈಜಿಪುರದ ಕೆ.ಮಹದೇವ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಸರ್ಕಾರದ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬಿಬಿಎಂಪಿ ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ಸೆ.1ಕ್ಕೆ ವಿಚಾರಣೆ ಮುಂದೂಡಿತು.

ಇದೇ ವೇಳೆ ನ್ಯಾಯಪೀಠ, 'ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಗಳ ವಿಚಾರಣೆ ಇದೇ 26ರಂದು ನಡೆಯಲಿದ್ದು, ಅಲ್ಲಿ ಯಾವ ತೀರ್ಮಾನ ಕೈಗೊಳ್ಳಲಾಗುತ್ತದೆ ಎಂಬುದನ್ನು ಕಾದು ನೋಡೋಣ' ಎಂದು ತಿಳಿಸಿತು.

ಬೆಂಗಳೂರು ವಿ.ವಿ: ಕಾನೂನು ಕಾಲೇಜು ಅರ್ಜಿ ಆಹ್ವಾನ

ಬೆಂಗಳೂರು: 2022–23ನೇ ಶೈಕ್ಷಣಿಕ ವರ್ಷಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕಾಲೇಜಿನಲ್ಲಿ ಕಾನೂನು, ಕನ್ನಡ, ಇಂಗ್ಲಿಷ್, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಮತ್ತು ಅರ್ಥಶಾಸ್ತ್ರ ಬೋಧಿಸಲು ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿವರಗಳಿಗೆ ದೂರವಾಣಿ ಸಂಖ್ಯೆ: 080–23392384 ಸಂಪರ್ಕಿಸಬಹುದು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ರಾಜ್ಯದಲ್ಲಿ ಡೆಂಗಿ ಪ್ರಕರಣ ಉಲ್ಬಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾಮಾನದಲ್ಲಿ ವೈಪರೀತ್ಯ ಹಾಗೂ ಮಳೆಯಿಂದಾಗಿ ರಾಜ್ಯದಲ್ಲಿ ಡೆಂಗಿ ಪೀಡಿತರ ಸಂಖ್ಯೆ ಉಲ್ಬಣಗೊಂಡಿದ್ದು, ಕಳೆದ 20 ದಿನಗಳಲ್ಲಿ 914 ಪ್ರಕರಣಗಳು ದೃಢಪಟ್ಟಿವೆ.

ಈ ವರ್ಷ ಒಂದು ಲಕ್ಷಕ್ಕೂ ಅಧಿಕ ಡೆಂಗಿ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 42 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಈವರೆಗೆ ವರದಿಯಾದ ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 5,138ಕ್ಕೆ ಏರಿಕೆಯಾಗಿದೆ. ಕಳೆದ ವರ್ಷ 7,189 ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು. ಜ್ವರ ಪೀಡಿತರಲ್ಲಿ ಐವರು ಮೃತಪಟ್ಟಿದ್ದರು.



ಈ ವರ್ಷ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ವರದಿಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿಯೇ 39,696 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 1,058 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಮೈಸೂರಿನಲ್ಲಿ 459, ಉಡುಪಿಯಲ್ಲಿ 419, ದಕ್ಷಿಣ ಕನ್ನಡದಲ್ಲಿ 228 ಹಾಗೂ ಚಿತ್ರದುರ್ಗದಲ್ಲಿ 219 ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 200ಕ್ಕಿಂತ ಕಡಿಮೆ ಇವೆ.

28 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿವೆ. 33 ಸಾವಿರಕ್ಕೂ ಅಧಿಕ ಮಂದಿ ಚಿಕೂನ್‌ಗುನ್ಯಾ ಶಂಕಿತರನ್ನು ಗುರುತಿಸಿ, ತಪಾಸಣೆಗೆ ಒಳಪಡಿಸಲಾಗಿದೆ. 18 ಸಾವಿರಕ್ಕೂ ಅಧಿಕ ಮಂದಿಯ ರಕ್ತ ಪರೀಕ್ಷೆ ನಡೆಸಲಾಗಿದೆ. ಅವರಲ್ಲಿ 1,217 ಮಂದಿ ಈ ಜ್ವರಕ್ಕೆ ಒಳಗಾಗಿರುವುದು ದೃಢಪಟ್ಟಿದೆ.

'ಹವಾಮಾನ ಬದಲಾವಣೆ ಹಾಗೂ ಮಳೆಯಿಂದಾಗಿ ರಾಜ್ಯದಲ್ಲಿ ಹೆಚ್ಚಿನವರು ವಿವಿಧ ಜ್ವರಗಳಿಗೆ ಒಳಪಡುತ್ತಿದ್ದಾರೆ. ಸೊಳ್ಳೆಗಳ ಕಡಿತದಿಂದ ಕಾಣಿಸಿಕೊಳ್ಳುವ ಡೆಂಗಿ, ಚಿಕೂನ್‌ಗುನ್ಯಾ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಮನೆಯ ಸುತ್ತಮುತ್ತಲಿನ ಹೊರಾಂಗಣ ಪ್ರದೇಶಗಳು, ಕಟ್ಟಡ ಕಾಮಗಾರಿ ನಡೆಯುವ ಸ್ಥಳಗಳು, ಖಾಲಿ ನಿವೇಶನ ಸೇರಿ ವಿವಿಧೆಡೆ ಘನತ್ಯಾಜ್ಯ ವಸ್ತುಗಳನ್ನು ಸಮರ್ಪಕವಾಗಿ ವಿಲೇವಾರಿ ಮಾಡಬೇಕು. ಸ್ವಚ್ಛತೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಬೇಕು' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಸಂಪುಟ ಸಭೆಯಲ್ಲಿ ಸೋಮಣ್ಣ ಭಾವುಕ

ಬೆಂಗಳೂರು: ವಸತಿ ಸಚಿವ ವಿ.ಸೋಮಣ್ಣ ಮತ್ತು ಕಂದಾಯ ಸಚಿವ ಆರ್.ಅಶೋಕ ಅವರ ನಡುವಿನ ಮುಸುಕಿನ ಗುದ್ದಾಟ ಮತ್ತೊಮ್ಮೆ ಬಹಿರಂಗಗೊಂಡಿದೆ. ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಸಚಿವ ಅಶೋಕ ಅವರ ಹೆಸರು ಉಲ್ಲೇಖಿಸದೇ ಸೋಮಣ್ಣ ಆಡಿರುವ ಮಾತು ಚರ್ಚೆಗೆ ಗ್ರಾಸವಾಗಿದೆ.

'ಬೆಂಗಳೂರು ನಗರದ ಅಭಿವೃದ್ಧಿಗೆ ವಿಚಾರದಲ್ಲಿ ನನ್ನ ಮಾತಿಗೆ ಕಿಮ್ಮತ್ತು ಇಲ್ಲ. ಒಬ್ಬರ ಮಾತು ಮಾತ್ರ ನಡೆಯುತ್ತಿದೆ' ಎಂದು ಸೋಮಣ್ಣ ಅವರು ಭಾವುಕರಾಗಿ ಹೇಳಿದ್ದಾಗಿ ಮೂಲಗಳು ತಿಳಿಸಿವೆ.

'ಹೀಗೆ ನಿರ್ಲಕ್ಷಿಸಿದರೆ ನಾವು ಕೆಲಸ ಮಾಡುವುದು ಹೇಗೆ? ಹಿರಿಯನಾಗಿ ನನಗೆ ಬೆಲೆ ಕೊಡದಿದ್ದರೆ ಬೇರೆ ಮಾರ್ಗವಿಲ್ಲ' ಎಂದು ಬೇಸರ ಹೊರಹಾಕಿದರು. ಆ ವೇಳೆಯಲ್ಲಿ ಕೆಲ ಸಚಿವರು ಸೋಮಣ್ಣ ಅವರನ್ನು ಸಮಾಧಾನಪಡಿಸಿದರು ಎಂದು ಮೂಲಗಳು ಹೇಳಿವೆ.

ಅಂಚೆ ಇಲಾಖೆಯಿಂದ 'ಗುರುವಂದನಾ'

ಬೆಂಗಳೂರು: ಶಿಕ್ಷಕರ ದಿನಾಚರಣೆ ಅಂಗವಾಗಿ ಅಂಚೆ ಇಲಾಖೆಯು 'ಗುರುವಂದನಾ' ಹೆಸರಿನಲ್ಲಿ ವಿಶೇಷ ಸೇವೆಯನ್ನು ಆರಂಭಿಸಿದೆ.ಗ್ರಾಹಕರು ಈ ಸೇವೆ ಮೂಲಕ ತಮ್ಮ ಅಚ್ಚುಮೆಚ್ಚಿನ ಶಿಕ್ಷಕರಿಗೆ ವಿಶೇಷ ಕೊಡುಗೆಗಳನ್ನು ಕಳುಹಿಸಬಹುದು ಅಥವಾ ಶುಭಾಶಯ ಕೋರಬಹುದಾಗಿದೆ.

ನಾಗರಿಕರು ತಮ್ಮ ಶಿಕ್ಷಕರಿಗೆ ಆನ್‌ಲೈನ್ ಮೂಲಕ ಸಂದೇಶಗಳನ್ನು ಕಳುಹಿಸಬಹುದು ಅಥವಾ ಪೆನ್, ಪೆನ್ಸಿಲ್ ಮತ್ತು ಬುಕ್‌ಮಾರ್ಕ್‌ಗಳನ್ನು ವಿಶೇಷ ಲಕೋಟೆಗಳ ಮೂಲಕ ಸ್ಪೀಡ್‌ಪೋಸ್ಟ್ ಮೂಲಕ ಕಳುಹಿಸಬಹುದು. ಇದಕ್ಕೆ ₹140 ನಿಗದಿಪಡಿಸಲಾಗಿದ್ದು, ಆನ್‌ಲೈನ್ ಮೂಲಕ ಪಾವತಿಸಬೇಕು.

ಗುರುವಂದನಾ ಸೇವೆಯನ್ನು https://www.karnatakapost.gov.in/Guruvandana ವೆಬ್‌ಸೈಟ್ ಮೂಲಕ ಪಡೆಯಬಹುದು. ಜಗತ್ತಿನಾದ್ಯಂತ ಇರುವ ಗ್ರಾಹಕರು ಭಾರತದ ಯಾವುದೇ ಭಾಗದಲ್ಲಿರುವ ಶಿಕ್ಷಕರಿಗೆ ಕೊಡುಗೆಗಳನ್ನು ಕಳುಹಿಸಲು ಈ ಸೇವೆಯನ್ನು ಪಡೆಯಬಹುದು. ಸೆ.1ರವರೆಗೆ ಅಥವಾ ಉತ್ಪನ್ನಗಳು ಮುಗಿಯುವವರೆಗೆ ಮಾತ್ರ ಬಳಸಿಕೊಳ್ಳಬಹುದು ಎಂದು ಕರ್ನಾಟಕ ಅಂಚೆ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಉದ್ಯೋಗ ಮೇಳ: ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅತಿಥಿಗಳು: ರಿಜ್ವಾನ್ ಅರ್ಷದ್, ಪ್ರದೀಪ್.ಪಿ., ಶೈಲಜ ಎಸ್., ಆಯೋಜನೆ ಮತ್ತು ಸ್ಥಳ: ಸರ್ಕಾರಿ ರಾಮನಾರಾಯಣ ಚೆಲ್ಲಾರಾಮ ಕಾಲೇಜ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್, ರೇಸ್ ಕೋರ್ಸ್ ರಸ್ತೆ, ಬೆಳಿಗ್ಗೆ 9.30

ಭಾರತದ ದೊಡ್ಡ ಕೃಷಿ ಮತ್ತು ಆಹಾರ ಉದ್ಯಮದ ಪ್ರದರ್ಶನ: ಅತಿಥಿಗಳು: ಬಿ.ಸಿ. ಪಾಟೀಲ್, ಆಯೋಜನೆ: ಮೀಡಿಯಾ ಟುಡೆ ಗ್ರೂಪ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ (ಬಿಐಇಸಿ), ತುಮಕೂರು ರಸ್ತೆ, ಬೆಳಿಗ್ಗೆ 10

ರಾಜ್ಯಮಟ್ಟದ ಅಂತರ ಕಾಲೇಜು ಪುರುಷರ ಮತ್ತು ಮಹಿಳಾ ಕಬಡ್ಡಿ, ಖೋಖೋ ಪಂದ್ಯಾವಳಿ ಉದ್ಘಾಟನಾ ಸಮಾರಂಭ: ಉದ್ಘಾಟನೆ: ಎಂ. ಕೃಷ್ಣಪ್ಪ, ಅತಿಥಿಗಳು: ಸುಶ್ಮಿತಾ ಪವಾರ್ ಓ., ಜಿ.ಆರ್. ಶ್ರೀಧರ್ ಕುಮಾರ್, ಅಧ್ಯಕ್ಷತೆ: ವೈ. ವೆಂಕಟೇಶಪ್ಪ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಳಿಗ್ಗೆ 10

ಕಾಲೇಜು ದಿನಾಚರಣೆ: ಅತಿಥಿಗಳು: ಶಶಿಧರ್ ಕೋಟೆ, ಎಸ್.ಲಿಂಗಮೂರ್ತಿ, ಅಧ್ಯಕ್ಷತೆ: ಕೆ.ಪಿ. ನರಸಿಂಹಮೂರ್ತಿ, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು, ನರಸಿಂಹರಾಜ ಕಾಲೊನಿ, ಬೆಳಿಗ್ಗೆ 10.30

ಶಾಸ್ತ್ರೀಯ ಮತ್ತು ಜಾನಪದ ಸಂಗೀತ ಉತ್ಸವ: ಆಯೋಜನೆ: ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ಮ್ಯೂಸಿಯಂ, ಸ್ಥಳ: ಎಂ.ಎಲ್.ಆರ್. ಕನ್ವೆನ್ಷನ್ ಸೆಂಟರ್ ಮತ್ತು ಐಎಂಇ ಮ್ಯೂಸಿಯಂ, ಬೆಳಿಗ್ಗೆ 11

ಜಿ. ನಾರಾಯಣ ಕುಮಾರ್ ಅವರ ಜನ್ಮದಿನಾಚರಣೆ: ಉದ್ಘಾಟನೆ: ಜಾಣಗೆರೆ ವೆಂಕಟರಾಮಯ್ಯ, ಅತಿಥಿಗಳು: ಸೈಮನ್ ಬರ್ತಲೋಮಿಯೋ, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಆಯೋಜನೆ: ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ–ಮಹಿಳಾ ವಿಶ್ರಾಂತಿ ಕೊಠಡಿ, ಬೆಳಿಗ್ಗೆ 11

18ನೇ ವೈಷ್ಣೋಮ ಜಯಂತಿ ಮಹೋತ್ಸವ, ವಿಶೇಷ ಪೂಜಾ ಸಮಾರಂಭ ಮತ್ತು ರಥೋತ್ಸವ: ನೇತೃತ್ವ: ರಾಕೇಶ್, ಸ್ಥಳ: ನಂಬರ್ 109 ಹುಳಿಮಾವು, ಬಿ.ಟಿ.ಎಂ.6ನೇ ಹಂತ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11.30

ರಾಜ್ಯ ಸ್ವಕುಳಸಾಳಿ ಸಾಂಸ್ಕೃತಿಕ ಸಮ್ಮೇಳನ: ಅಧ್ಯಕ್ಷತೆ: ರಾಜಪ್ರಭು ಧೋತ್ರೆ, ಅತಿಥಿಗಳು: ಸದಾಶಿವ ಶೆಣೈ, ದಿನೇಶ್ ಗುಂಡೂರಾವ್, ಎಂ. ಕೃಷ್ಣಪ್ಪ, ಯೋಗೇಶ್ ಮಾಸ್ಟರ್, ಆಯೋಜನೆ: ಸ್ವಕುಳ ಚೇತನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 2.30

ಕನ್ನಡ ಸಂಘದ ಸುವರ್ಣ ವರ್ಷಾಚರಣೆ ಹಾಗೂ 'ಇಂದ್ರಜಿತ್ ಮತ್ತು ಇನ್ನಿತರ ಕಥೆಗಳು' (ಇಂಗ್ಲಿಷ್‌ನಿಂದ ಕನ್ನಡಕ್ಕೆ: ವಿಕ್ರಂ ಚದುರಂಗ) ಪುಸ್ತಕ ಬಿಡುಗಡೆ ಸಮಾರಂಭ: ಬಿಡುಗಡೆ: ಅಗ್ರಹಾರ ಕೃಷ್ಣಮೂರ್ತಿ, ಅತಿಥಿಗಳು: ರವೀಂದ್ರ ಭಟ್ಟ, ಅಧ್ಯಕ್ಷತೆ: ಅನಿಲ್ ಜೋಸೆಫ್ ಪಿಂಟೊ, ಆಯೋಜನೆ: ಕನ್ನಡ ಸಂಘ, ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿ, ಹೊಸೂರು ರಸ್ತೆ, ಸಂಜೆ 4.30

ಕೃಷ್ಣರಾಜ ಪರಿಷತ್ತಿನ ಮಂದಿರ ಹಾಗೂ ಆವರಣದ ನವೀಕೃತ ಕಟ್ಟಡದ ಉದ್ಘಾಟನಾ ಸಮಾರಂಭ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಮಹೇಶ ಜೋಶಿ, ಅತಿಥಿಗಳು: ಆರ್. ಅಶೋಕ, ಸುನಿಲ್ ಕುಮಾರ್, ಬಿ.ಸಿ. ನಾಗೇಶ, ಚಂದ್ರಶೇಖರ ಕಂಬಾರ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಸಂಜೆ 5

ಸುಬ್ಬಯ್ಯ ಹೆಗಡೆ ಶಾಸ್ತ್ರಿ, ಎಂ.ಕೆ. ವಿಜಯಲಕ್ಷ್ಮಿ, ಎನ್. ಅನಂತರಂಗಾಚಾರ್–ಅನಂತರಂಗ ಪ್ರತಿಷ್ಠಾನದ ದತ್ತಿ ಕಾರ್ಯಕ್ರಮ: ವಿಷಯ: ದಲಿತ, ಬಂಡಾಯ ಸಾಹಿತ್ಯ–ಹೊಸನೋಟ, ಉಪನ್ಯಾಸಕರು: ಸುಬ್ರಹ್ಮಣ್ಯಸ್ವಾಮಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ನರಸಿಂಹರಾಜ ಕಾಲೊನಿ, ಸಂಜೆ 5

ರಾಷ್ಟ್ರೀಯ ಅಣಕು ನ್ಯಾಯಾಲಯ ಸ್ಪರ್ಧೆ: ಉದ್ಘಾಟನೆ: ಇಂಗಳಗುಪ್ಪೆ ಸೀತಾರಾಮಯ್ಯ ಇಂದ್ರೀಶ, ಅತಿಥಿಗಳು: ಜಿ. ವಿ. ವಿಶ್ವನಾಥ, ಎನ್. ಬಿ. ಭಟ್, ಆಯೋಜನೆ: ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್, ಸ್ಥಳ: ವಿಜಯ ಕಾಲೇಜಿನ ಆವರಣ, ಬಸವನಗುಡಿ, ಸಂಜೆ 5.30

ವಚನ ಶ್ರಾವಣ: ಗಾಯನ: ಟಿ.ಎಂ. ಜಾನಕಿ, ಉಪನ್ಯಾಸ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಎಸ್. ಆರ್. ಪಾಟೀಲ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಸಾಗರನಹಳ್ಳಿ ಮಹದೇವಯ್ಯ ಸಭಾಂಗಣ, ನೊಳಂಬ ಲಿಂಗಾಯತ ಸಂಘ, ಬಸವೇಶ್ವರನಗರ, ಸಂಜೆ 6

MINERA STEEL & POWER PVT. LTD.
Sple of 33/11 KV Sub Station Equipments
Commercial contact no.: 9480823482

Sl.No.	Description	Qty.
1	Generating transformer, 12MVA , 33/11KV, Make : Esennar	1
2	33KV , 800Amps , 26.24KA Double Break Isolator with earth switch , Make : GR power switchgear	1
3	33KV, 800Amps, 26.24KA Double Break Isolator with out earth switch Make : GR power switchgear	1
4	33KV Potential transformers - metering and protection 33KV Potential transformers Ratio : 33KV/110V-110V-110V , Class : 0.2-3P-3P , Burden : 50VA-500VA-100VA , Make : ITC	4
5	33KV Current transformers ,Ratio : 250/1-1-1A,Class : 0.2-5P20-PS, Burden : 30VA-30VA-OVA , Make : ITC	3
6	33KV,10KA,Class-3 Lightning Arresters, Make : Oblum Electrical Industries Pvt Ltd	3
7	36KV ,800Amps PCVCB , 26.4KA , Make: Crompton greaves	1
8	12MVA Power Transformer C&R panel, Make : Vandan Industries	1
9	33KV Line feeder C&R panel , Make : Vandan Industries	2
10	G.I.structures	lot
11	Bay marshalling KIOSK	1
12	33KV CLOSING COIL	1
13	33 KV TRIPPING COIL	1
14	33 KV VACCUM INTERRUPT	1
15	33 KV BREAKER SPRING CHARGING MOTOR	1

Sd/-
For MINERA STEEL & POWER PVT. LTD.

IRCTC
ಇಂಡಿಯನ್ ರೈಲ್ವೆ ಕೇಟರಿಂಗ್ ಮತ್ತು ಟೂರಿಸಂ ಕಾರ್ಪೊರೇಶನ್
(ಭಾರತ ಸರ್ಕಾರದ ಒಂದು ಉದ್ದಿಮೆ–ಮಿನಿ ರತ್ನ) ದಕ್ಷಿಣ ವಲಯ
6ಎ, ದಿ ರೈನ್ ಟ್ರೀ ಪ್ಲೇಸ್, ನಂ.9, ಮ್ಯಾಕ್ ನಿಕೋಲಸ್ ರೋಡ್, ಚೆನ್ನೈ–600031

ಹೋಟೆಲ್ ಮ್ಯಾನೇಜ್‌ಮೆಂಟ್ ಪದವೀಧರರಿಗೆ ನೇರ ಸಂದರ್ಶನ

I.R.C.T.C. ಸಂಸ್ಥೆಗೆ ದಕ್ಷಿಣ ವಲಯದ ಅಡಿಯಲ್ಲಿನ (ತಮಿಳುನಾಡು, ಕೇರಳ ಮತ್ತು ಕರ್ನಾಟಕ ರಾಜ್ಯಗಳಲ್ಲಿ) ಆನ್‌ಬೋರ್ಡ್ ಕೇಟರಿಂಗ್ ಸೇವೆಗಳ ಪರಿವೀಕ್ಷಣೆಗಾಗಿ ಗುತ್ತಿಗೆ ಆಧಾರದಲ್ಲಿ ಹಾಸ್ಪಿಟಾಲಿಟಿ ಮಾನಿಟರ್ ಆಗಿ ಕಾರ್ಯನಿರ್ವಹಿಸಲು ಹೋಟೆಲ್ ಮ್ಯಾನೇಜ್‌ಮೆಂಟ್ ಪದವೀಧರರು ಬೇಕಾಗಿದ್ದಾರೆ.

ಹೆಚ್ಚಿನ ವಿವರಗಳಿಗಾಗಿ ಕಂಪನಿ ವೆಬ್‌ಸೈಟ್‌ಗೆ ಭೇಟಿ ನೀಡಿ: www.irctc.com

ಕರ್ನಾಟಕ ಸರ್ಕಾರ
ವಿಶೇಷ ನೇಮಕಾತಿ ಸಮಿತಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು–560 023.

ಸಂಖ್ಯೆ: ಎಸ್‌ಆರ್‌ಸಿ/ಕೆಕೆ/14/2022–23 ದಿನಾಂಕ: 24.08.2022

ಪ್ರಕಟಣೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಶೇಷ ನೇಮಕಾತಿ ಸಮಿತಿಯಿಂದ **ಕಲ್ಯಾಣ ಕರ್ನಾಟಕ ವೃಂದದಲ್ಲಿ ಖಾಲಿ ಇರುವ ವಿವಿಧ ಅರೆ ವೈದ್ಯಕೀಯ ಹುದ್ದೆಗಳಿಗೆ** ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಹೆಚ್ಚಿನ ವಿವರಗಳಿಗಾಗಿ ಈ ಕೆಳಕಂಡ ಇಲಾಖಾ ವೆಬ್‌ಸೈಟ್ ಅನ್ನು ವೀಕ್ಷಿಸಬಹುದಾಗಿದೆ.
https://karunadu.karnataka.gov.in/hfw/pages/hfws_sections_drc.aspx

ಸಹಿ/–
ಸದಸ್ಯ ಕಾರ್ಯದರ್ಶಿ
ವಿಶೇಷ ನೇಮಕಾತಿ ಸಮಿತಿ ಹಾಗೂ ಮುಖ್ಯ ಆಡಳಿತಾಧಿಕಾರಿ,
ಆರೋಗ್ಯ ಮತ್ತು ಕು.ಕ. ಸೇವೆಗಳು

DIPR/CP/BCPL/1932/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಾರ್ವಜನಿಕರ ಶಾಂತಿ ಸೌಹಾರ್ದ ಸಭೆ • ಪೆಂಡಾಲ್ ಬಳಿ ಗಸ್ತು ತಿರುಗಲು ಸಲಹೆ

ಗಣೇಶೋತ್ಸವ: ಸಿಸಿಟಿವಿ ಕ್ಯಾಮೆರಾ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗಣೇಶೋತ್ಸವ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕ್ರಮ ಕೈಗೊಂಡಿರುವ ಬಿಬಿಎಂಪಿ ಹಾಗೂ ಪೊಲೀಸ್ ಅಧಿಕಾರಿಗಳು, ಪುರಭವನದಲ್ಲಿ ಗುರುವಾರ ಸಾರ್ವಜನಿಕ ಶಾಂತಿ ಸೌಹಾರ್ದ ಸಭೆ ನಡೆಸಿದರು.

ನಗರದ ಬಹುತೇಕ ಪ್ರದೇಶಗಳ ನಿವಾಸಿಗಳು, ಗಣೇಶೋತ್ಸವ ಸಮಿತಿ ಸದಸ್ಯರು, ಸಂಘಟನೆಗಳ ಪದಾಧಿಕಾರಿಗಳು ಮತ್ತು ಸರ್ವಧರ್ಮಗಳ ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು. ಹಬ್ಬದ ಆಚರಣೆ ಬಗ್ಗೆ ಪೊಲೀಸರು ಹಾಗೂ ಬಿಬಿಎಂಪಿ ಯಾವೆಲ್ಲ ವ್ಯವಸ್ಥೆ ಕಲ್ಪಿಸಬೇಕು ಎಂಬುದರ ಬಗ್ಗೆ ಅಭಿಪ್ರಾಯ ಹಂಚಿಕೊಂಡರು. ಬೆಸ್ಕಾಂ, ಅಗ್ನಿಶಾಮಕ ಇಲಾಖೆ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳೂ ಸಭೆಯಲ್ಲಿದ್ದರು.

ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ, 'ಎಲ್ಲರೂ ಶಾಂತಿಯುತವಾಗಿ ಹಬ್ಬ ಆಚರಿಸಬೇಕು. ಭದ್ರತೆ ದೃಷ್ಟಿಯಿಂದ ಜಾರಿಗೆ ತಂದಿರುವ ನಿಯಮಗಳನ್ನು ಪಾಲಿಸಬೇಕು' ಎಂದು ಕೋರಿದರು.

'ಗಣೇಶೋತ್ಸವ ಆಚರಣೆ ಸಂಬಂಧ 2018- 2019ರಲ್ಲಿ ರೂಪಿಸಿದ್ದ ನಿಯಮಾವಳಿ ಈ ವರ್ಷವೂ ಜಾರಿಯಲ್ಲಿರಲಿದೆ. ಸಾರ್ವಜನಿಕ ಸ್ಥಳದಲ್ಲಿ ಗಣೇಶ ಪ್ರತಿಷ್ಠಾಪನೆ ಹಾಗೂ ಉತ್ಸವದ ಜವಾಬ್ದಾರಿ ವಹಿಸಿಕೊಂಡಿರುವ ಮಂಡಳಿಗಳು, ಸಂಘ-ಸಂಸ್ಥೆಗಳು ಹಾಗೂ ಮುಖಂಡರು, ಜನರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ಯಾವುದೇ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗದಂತೆ ಹಬ್ಬ ಆಚರಿಸಬೇಕು. ನಿಯಮ ಮೀರಿದರೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿದರು.

'ಸುರಕ್ಷತೆ ದೃಷ್ಟಿಯಿಂದ ಪ್ರತಿಯೊಂದು ಪೆಂಡಾಲ್ ಒಳಗೆ ಹಾಗೂ ಹೊರಗೆ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸುವುದು ಕಡ್ಡಾಯವಾಗಿದೆ. ಜೊತೆಗೆ, ಆಯೋಜಕರೇ ತಮ್ಮ ಪೆಂಡಾಲ್ ಬಳಿ ಸರದಿ ಪ್ರಕಾರ 24 ಗಂಟೆಯೂ ಗಸ್ತು ತಿರುಗಿದರೆ ಒಳ್ಳೆಯದು. ಇದರಿಂದ ಅಹಿತಕರ ಘಟನೆಗಳು ನಡೆಯದಂತೆ ತಡೆಯಬಹುದು' ಎಂದೂ ಹೇಳಿದರು.

'ರಸ್ತೆಯ ನಡುವೆ ಪೆಂಡಾಲ್ ನಿರ್ಮಿಸಬಾರದು. ಅಗ್ನಿಶಾಮಕ ವಾಹನ, ಆಂಬುಲೆನ್ಸ್ ಹಾಗೂ ಸಾರ್ವಜನಿಕರ ವಾಹನಗಳ ಓಡಾಟಕ್ಕೆ ಜಾಗವಿರುವಂತೆ ನೋಡಿಕೊಳ್ಳಬೇಕು. ತಮ್ಮ ವ್ಯಾಪ್ತಿಯ ಠಾಣೆ ಪೊಲೀಸರ ಜೊತೆ ನಿರಂತರ ಸಂಪರ್ಕದಲ್ಲಿದ್ದು, ಭದ್ರತೆಗೆ ಅವರ ಸಹಾಯ ಪಡೆಯಬೇಕು. ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗದಂತೆ ನಿಗಾ ವಹಿಸಬೇಕು' ಎಂದು ಪ್ರತಾಪ್ ರೆಡ್ಡಿ ಅವರು ತಿಳಿಸಿದರು.

ಏಕಗವಾಕ್ಷಿ ಮೂಲಕ ಅರ್ಜಿ ಸಲ್ಲಿಕೆ: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, 'ಸಾರ್ವಜನಿಕ ಸ್ಥಳದಲ್ಲಿ ಗಣಪತಿ ಪ್ರತಿಷ್ಠಾಪನೆ ಮಾಡುವವರು ಏಕಗವಾಕ್ಷಿ ವ್ಯವಸ್ಥೆ ಮೂಲಕ ಅರ್ಜಿ ಸಲ್ಲಿಸಬೇಕು. ಅದನ್ನು ಪರಿಶೀಲಿಸಿ ಉತ್ಸವಕ್ಕೆ ಅನುಮತಿ ನೀಡಲಾಗುವುದು' ಎಂದು ಹೇಳಿದರು.

ಹೆಚ್ಚುವರಿ ಪೊಲೀಸ್ ಕಮಿಷನರ್‌ಗಳಾದ ಸುಬ್ರಹ್ಮಣ್ಯೇಶ್ವರ ರಾವ್, ಸಂದೀಪ್ ಪಾಟೀಲ, ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ್ ಬೀಳಗಿ ಸಭೆಯಲ್ಲಿದ್ದರು.

ನಗರದ ಪುರಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಾರ್ವಜನಿಕ ಶಾಂತಿ ಸೌಹಾರ್ದ ಸಭೆಯಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಗೌರಿ–ಗಣೇಶ ಹಬ್ಬಕ್ಕೆ 500 ವಿಶೇಷ ಬಸ್

ಬೆಂಗಳೂರು: ಗೌರಿ ಗಣೇಶ ಹಬ್ಬದ ಪ್ರಯುಕ್ತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ(ಕೆಎಸ್‌ಆರ್‌ಟಿಸಿ) ಹೆಚ್ಚುವರಿಯಾಗಿ 500 ವಿಶೇಷ ಬಸ್‌ಗಳ ಸಂಚಾರಕ್ಕೆ ವ್ಯವಸ್ಥೆ ಮಾಡಿದೆ.

ಇದೇ 29 ಮತ್ತು 30ರಂದು ಬೆಂಗಳೂರಿನಿಂದ ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ಹೊರ ರಾಜ್ಯಗಳಿಗೆ ವಿಶೇಷ ಬಸ್‌ಗಳು ಹೊರಡಲಿವೆ. 31ರಂದು ಬೆಂಗಳೂರಿಗೆ ವಾಪಸ್ ಬರಲಿವೆ.

ಮೆಜೆಸ್ಟಿಕ್ ನಿಲ್ದಾಣದಿಂದ ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರ್ಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ತಿರುಪತಿಗೆ ಬಸ್‌ಗಳು ಸಂಚಾರ ಮಾಡಲಿವೆ.

ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿಗೆ ತೆರಳಲಿವೆ. ತಮಿಳುನಾಡು ಮತ್ತು ಆಂಧ್ರಪ್ರದೇಶಕ್ಕೆ ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದಿಂದ ಬಸ್‌ಗಳು ಸಂಚರಿಸಲಿವೆ.

ಆಸನಗಳನ್ನು ಮುಂಗಡವಾಗಿ ಕಾಯ್ದಿರಿಸುವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ನಾಲ್ಕು ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಟಿಕೆಟ್ ಕಾಯ್ದಿರಿಸಿದಲ್ಲಿ ಶೇ 5 ರಷ್ಟು ರಿಯಾಯಿತಿ ನೀಡಲಾಗುವುದು. ಹೋಗುವ ಮತ್ತು ಬರುವ ಪ್ರಯಾಣದ ಟಿಕೆಟನ್ನು ಒಟ್ಟಿಗೆ ಕಾಯ್ದಿರಿಸಿದಾಗ ಹಿಂದಿರುಗುವ ಪ್ರಯಾಣ ದರದಲ್ಲಿ ಶೇ 10 ರಷ್ಟು ರಿಯಾಯಿತಿ ಕೊಡಲಾಗುವುದು.

ಪ್ರಯಾಣಿಕರ ಒತ್ತಡಕ್ಕೆ ಅನುಗುಣವಾಗಿ ನಿಗಮದ ಕಾರ್ಯಾಚರಣೆ ವ್ಯಾಪ್ತಿಯಲ್ಲಿನ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಿಂದಲೂ ವಿಶೇಷ ಬಸ್‌ಗಳ ಕಾರ್ಯಾಚರಣೆ ಮಾಡಲಿವೆ ಎಂದು ಪ್ರಕಟಣೆ ತಿಳಿಸಿದೆ.

ಸುದ್ದಿ 2 ನಿಮಿಷ

ಪಿಸ್ತೂಲ್ ಮಾರಾಟ: ಮಹಾರಾಷ್ಟ್ರದ ಆರೋಪಿ ಬಂಧನ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ಪಿಸ್ತೂಲ್ ಮಾರಲು ಯತ್ನಿಸುತ್ತಿದ್ದ ಆರೋಪದಡಿ ನಿಲೇಶ್ ನಾವರೆ ಎಂಬುವವರನ್ನು ಡಿ.ಜೆ.ಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಮಹಾರಾಷ್ಟ್ರದ ನಿವಾಸಿ ನಿಲೇಶ್, ನಗರದ ವ್ಯಕ್ತಿಯೊಬ್ಬರಿಗೆ ಪಿಸ್ತೂಲ್ ಮಾರಲೆಂದು ಬಂದಿದ್ದ. ಅಂಬೇಡ್ಕರ್ ಆಸ್ಪತ್ರೆ ಎದುರು ಅನುಮಾನಾಸ್ಪದವಾಗಿ ಸುತ್ತಾಡುತ್ತಿದ್ದ ಈತನನ್ನು ತಪಾಸಣೆಗೆ ಒಳಪಡಿಸಿದಾಗ ಎರಡು ಪಿಸ್ತೂಲ್ ಹಾಗೂ ಐದು ಜೀವಂತ ಗುಂಡುಗಳು ಸಿಕ್ಕಿವೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ನಿಲೇಶ್ ನಾಡ ಪಿಸ್ತೂಲ್ ಮಾರಾಟದ ಮಧ್ಯವರ್ತಿ ಎಂಬುದು ಗೊತ್ತಾಗಿದೆ. ಬೆಂಗಳೂರಿನಲ್ಲಿ ನೆಲೆಸಿದ್ದಾನೆ ಎನ್ನಲಾದ ವಿಜಯ್ ಎಂಬಾತ ಆರೋಪಿ ನಿಲೇಶ್‌ನನ್ನು ಸಂಪರ್ಕಿಸಿ ಪಿಸ್ತೂಲ್‌ಗಳನ್ನು ತಂದುಕೊಡುವಂತೆ ಹೇಳಿದ್ದ.'

'ಎರಡು ಪಿಸ್ತೂಲ್ ಹಾಗೂ ಜೀವಂತ ಗುಂಡುಗಳ ಸಮೇತ ಮುಂಬೈನಿಂದ ರೈಲಿನಲ್ಲಿ ಹೊರಟಿದ್ದ ಆರೋಪಿ, ಬುಧವಾರ ಯಶವಂತಪುರ ರೈಲು ನಿಲ್ದಾಣಕ್ಕೆ ಬಂದಿದ್ದ. ನಂತರ, ಅಂಬೇಡ್ಕರ್ ಆಸ್ಪತ್ರೆ ಬಳಿ ಬಂದು ವಿಜಯ್ ಎಂಬಾತನಿಗಾಗಿ ಕಾಯುತ್ತಿದ್ದ. ಬ್ಯಾಗ್ ಹಿಡಿದು ನಿಂತಿದ್ದ ಈತನ ನಡೆಯಿಂದ ಅನುಮಾನಗೊಂಡ ಸಿಬ್ಬಂದಿ ವಶಕ್ಕೆ ಪಡೆದಾಗ ಕೃತ್ಯ ಬಯಲಾಗಿದೆ. ಪಿಸ್ತೂಲ್ ಖರೀದಿದಾರ ವಿಜಯ್ ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ತಿಳಿಸಿವೆ.

ಜೂಜಾಟ: 20 ಮಂದಿ ಬಂಧನ

ಬೆಂಗಳೂರು: ರಾಮಮೂರ್ತಿನಗರ ಠಾಣೆ ವ್ಯಾಪ್ತಿಯ ಟಿ.ಸಿ. ಪಾಳ್ಯದಲ್ಲಿರುವ ವಾಣಿಜ್ಯ ಕಟ್ಟಡವೊಂದರ ಕೊಠಡಿ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಜೂಜಾಟದಲ್ಲಿ ತೊಡಗಿದ್ದ 20 ಮಂದಿಯನ್ನು ಬಂಧಿಸಿದ್ದಾರೆ.

'ಸ್ಥಳೀಯರು ಹಾಗೂ ಅಕ್ಕ-ಪಕ್ಕದ ಪ್ರದೇಶದ ಆರೋಪಿಗಳು, ಕೊಠಡಿಯಲ್ಲಿ ಸೇರಿ ಹಣ ಕಟ್ಟಿ ಜೂಜು ಆಡುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ, 20 ಮಂದಿಯನ್ನು ಬಂಧಿಸಲಾಗಿದೆ. ಇವರಿಂದ ₹ 1.01 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸ್ ಮೂಲಗಳು ಹೇಳಿವೆ.

ದುಬೈನಿಂದ ಗಡಿಪಾರು: ನಗರದಲ್ಲಿ ಡ್ರಗ್ಸ್ ಮಾರಾಟ

ಪ್ರಜಾವಾಣಿ ವಾರ್ತೆ

ಮುನಾಫಿಸ್

ಬೆಂಗಳೂರು: ನಗರದಲ್ಲಿ ಆನ್‌ಲೈನ್ ಆ್ಯಪ್‌ಗಳ ಮೂಲಕ ಗ್ರಾಹಕರನ್ನು ಸಂಪರ್ಕಿಸಿ ಡ್ರಗ್ಸ್ ಮಾರುತ್ತಿದ್ದ ಆರೋಪಿ ಕೆ.ಪಿ. ಮುನಾಫಿಸ್ ಅಲಿಯಾಸ್ ಟೋನಿ (26) ಎಂಬಾತನನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ಮುನಾಫಿಸ್, ನಗರದ ಎಚ್‌ಬಿಆರ್ ಲೇಔಟ್‌ನ ಅಶ್ವಥ್ ನಗರದಲ್ಲಿ ವಾಸವಿದ್ದ. ಹಲವು ತಿಂಗಳಿನಿಂದ ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ. ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದ್ದು, ₹ 35 ಲಕ್ಷ ಮೌಲ್ಯದ 700 ಗ್ರಾಂ ತೂಕದ ಎಂಡಿಎಂಎ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'2018ರಲ್ಲಿ ಕೇರಳದಿಂದ ದುಬೈಗೆ ಹೋಗಿದ್ದ ಮುನಾಫಿಸ್, ಅಲ್ಲಿಯ ಕಂಪನಿಯೊಂದರಲ್ಲಿ ಮಾರುಕಟ್ಟೆ ಪ್ರತಿನಿಧಿ ಆಗಿ ಕೆಲಸ ಆರಂಭಿಸಿದ್ದ. ಐಷಾರಾಮಿ ಜೀವನ ನಡೆಸುತ್ತಿದ್ದ ಈತನಿಗೆ ಸಂಬಳ ಸಾಲುತ್ತಿರಲಿಲ್ಲ. ಅವಾಗಲೇ ಡ್ರಗ್ಸ್ ಪೆಡ್ಲರ್ ಪರಿಚಯ ಮಾಡಿಕೊಂಡಿದ್ದ ಆರೋಪಿ, ಅವರ ಮೂಲಕ ಡ್ರಗ್ಸ್ ಖರೀದಿಸಿ ಮಾರಾಟ ಮಾಡಲಾರಂಭಿಸಿದ್ದ' ಎಂದೂ ತಿಳಿಸಿವೆ.

'ದುಬೈನ ಹಲವರಿಗೆ ಆರೋಪಿ ಡ್ರಗ್ಸ್ ಮಾರುತ್ತಿದ್ದ. ಈತನ ಕೃತ್ಯ ಪತ್ತೆ ಮಾಡಿದ್ದ ದುಬೈ ಪೊಲೀಸರು, ಬಂಧಿಸಿ ಜೈಲಿಗಟ್ಟಿದ್ದರು. 3 ವರ್ಷ 8 ತಿಂಗಳು ಜೈಲುವಾಸ ಅನುಭವಿಸಿದ್ದ ಆರೋಪಿ, ನಂತರ ಬಿಡುಗಡೆ ಆಗಿದ್ದ. ಬಳಿಕ ಈತನನ್ನು ದುಬೈನಿಂದ ಗಡಿಪಾರು ಮಾಡಲಾಗಿತ್ತು' ಎಂದು ಹೇಳಿವೆ.

ಆ್ಯಪ್ ಮೂಲಕ ಸಂಪರ್ಕ: 'ದುಬೈನಿಂದ ಬೆಂಗಳೂರಿಗೆ ಬಂದಿದ್ದ ಆರೋಪಿ ಇಲ್ಲಿಯೇ ನೆಲೆಸಿ ಡ್ರಗ್ಸ್ ಮಾರಾಟ ಮುಂದುವರಿಸಿದ್ದ. ದುಬೈನ ಪೆಡ್ಲರ್‌ಗಳ ಮೂಲಕ ನಗರಕ್ಕೆ ಡ್ರಗ್ಸ್ ತರಿಸಿಕೊಳ್ಳುತ್ತಿದ್ದ. ಕೆಲ ಆ್ಯಪ್‌ಗಳ ಮೂಲಕ ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಆರೋಪಿ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು. ಎಚ್‌ಬಿಆರ್ ಬಡಾವಣೆಯ ಉದ್ಯಾನ ಬಳಿ ಡ್ರಗ್ಸ್ ಮಾರುತ್ತಿದ್ದಾಗಲೇ ಪುರಾವೆ ಸಮೇತ ಆರೋಪಿಯನ್ನು ಬಂಧಿಸಲಾಯಿತು' ಎಂದೂ ಮೂಲಗಳು ಹೇಳಿವೆ.

ರಾಜ್ಯಪಾಲರ ಹೆಸರಿನಲ್ಲಿ ಪ್ರಶಸ್ತಿ– ಪುರಸ್ಕಾರದ ಆಮಿಷ

₹1 ಲಕ್ಷ ವಂಚನೆ– ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ನಕಲಿ ಪ್ರಮಾಣಪತ್ರ ನೀಡಿ ವಂಚನೆ
- 16ರಂದು ರಾಜಭವನಕ್ಕೆ ಆರೋಪಿ ಜೊತೆ ತೆರಳಿದ್ದ ಉದ್ಯಮಿ

ಅಪರಾಧ ಸುದ್ದಿ

ಬೆಂಗಳೂರು: ರಾಜ್ಯಪಾಲರಿಂದ ಪ್ರಶಸ್ತಿ– ಪುರಸ್ಕಾರ ಕೊಡಿಸುವ ಆಮಿಷವೊಡ್ಡಿ ಉದ್ಯಮಿಗಳು ಹಾಗೂ ಇತರರಿಂದ ಹಣ ಪಡೆದು ನಕಲಿ ಪ್ರಮಾಣಪತ್ರ ನೀಡಿ ವಂಚಿಸಿರುವ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪ್ರಶಸ್ತಿಗಾಗಿ ಹಣ ನೀಡಿ ವಂಚನೆಗೀಡಾಗಿರುವ ಉದ್ಯಮಿ ವೆಂಕಟೇಶ್ ಎಂಬುವವರು ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ಇಂಡಿಯನ್ ಜರ್ನಲಿಸ್ಟ್ ಕಾಂಪೆಂಡಿಯಂ (ಐಜೆಸಿ) ಸಂಸ್ಥೆಯ ಜ್ಞಾನಪ್ರಕಾಶ್ ಹಾಗೂ ಗಿರಿಧರ್ ಝಾ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪೀಣ್ಯ ಕೈಗಾರಿಕಾ ಪ್ರದೇಶದ 50 ವರ್ಷದ ದೂರುದಾರ ವೆಂಕಟೇಶ್, ರಾಜ್ಯಪಾಲರಿಂದ ಪ್ರಶಸ್ತಿ ಪಡೆಯಬೇಕೆಂಬ ಆಸೆ ಇಟ್ಟುಕೊಂಡಿದ್ದರು. ಪರಿಚಿತರೊಬ್ಬರ ಮೂಲಕ ವೆಂಕಟೇಶ್ ಅವರನ್ನು ಸಂಪರ್ಕಿಸಿದ್ದ ಆರೋಪಿಗಳು, 'ಐಜೆಸಿ ಸಂಸ್ಥೆಯ ಪರವಾಗಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಂದ ಆಗಸ್ಟ್ 16ರಂದು ಬೆಳಿಗ್ಗೆ 11 ಗಂಟೆಗೆ ರಾಜಭವನದಲ್ಲಿ ಪ್ರಶಸ್ತಿ ಕೊಡಿಸುತ್ತೇವೆ. ನೀವು ನಮ್ಮ ಸಂಸ್ಥೆಗೆ ದೇಣಿಗೆ ನೀಡಬೇಕು' ಎಂದಿದ್ದರು.

'ಆರೋಪಿಗಳ ಮಾತು ನಂಬಿದ್ದ ದೂರುದಾರ, ಅವರು ಹೇಳಿದ್ದ ಬ್ಯಾಂಕ್ ಖಾತೆಗಳಿಗೆ ₹ 1 ಲಕ್ಷ ವರ್ಗಾಯಿಸಿದ್ದರು. ಪ್ರಶಸ್ತಿ ಪ್ರದಾನ ಸಮಾರಂಭಕ್ಕೆಂದು ದೂರುದಾರ ವೆಂಕಟೇಶ್ ಆಗಸ್ಟ್ 16ರಂದು ರಾಜಭವನಕ್ಕೆ ಹೋಗಿದ್ದರು. ಈ ವೇಳೆ ಆರೋಪಿಗಳೂ ಜೊತೆಗಿದ್ದರು. ಆದರೆ, ಯಾವುದೇ ಸಮಾರಂಭ ನಡೆದಿರಲಿಲ್ಲ. ಸ್ವಾತಂತ್ರ್ಯೋತ್ಸವ ಶುಭಾಶಯ ಕೋರಲು ರಾಜ್ಯಪಾಲರು ನೀಡಿದ್ದ ಸಮಯ ಅದಾಗಿತ್ತಷ್ಟೆ.'

'ಪ್ರಶಸ್ತಿ ಬಗ್ಗೆ ಕೇಳಿದಾಗ ಆರೋಪಿಗಳು, ಪ್ರಮಾಣಪತ್ರ ನೀಡಿ ದೂರುದಾರರನ್ನು ಸಮಾಧಾನಪಡಿಸಿದ್ದರು. ಆ ಪ್ರಮಾಣಪತ್ರವೂ ನಕಲಿ ಆಗಿರುವುದು ಗೊತ್ತಾಗಿದೆ. ಈ ಬಗ್ಗೆ ವಿಚಾರಿಸಿದಾಗ ಆರೋಪಿಗಳು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಹೀಗಾಗಿ, ದೂರುದಾರರು ಠಾಣೆಗೆ ಬಂದು ದೂರು ನೀಡಿದ್ದಾರೆ. ಆರೋಪಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

'ಶುಭಾಶಯ ಕೋರಲು ರಾಜ್ಯಪಾಲರು ನೀಡಿದ್ದ ಸಮಯವನ್ನೇ ದುರುಪಯೋಗಪಡಿಸಿಕೊಂಡ ಆರೋಪಿಗಳು, ಅವರ ಜೊತೆ ಫೋಟೊ ತೆಗೆಸಿಕೊಂಡು ವಂಚಿಸಿರುವ ಮಾಹಿತಿ ಇದ್ದು, ಈ ಬಗ್ಗೆಯೂ ತನಿಖೆ ಮುಂದುವರಿಸಲಾಗಿದೆ' ಎಂದೂ ಹೇಳಿವೆ.

ಬೈಕ್– ಲಾರಿ ಡಿಕ್ಕಿ: ಸಾಫ್ಟ್‌ವೇರ್ ಉದ್ಯೋಗಿ ಸಾವು

ಬೆಂಗಳೂರು: ಬಾಣಸವಾಡಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಲಾರಿ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಮನೀಶ್ ಮಹೇಶ್ ವೀರಪ್ಪ (23) ಎಂಬುವವರು ಮೃತಪಟ್ಟಿದ್ದಾರೆ.

'ನಗರದ ಸಾಫ್ಟ್‌ವೇರ್ ಕಂಪನಿಯೊಂದರ ಉದ್ಯೋಗಿ ಮನೀಶ್, ಗುರುವಾರ ಬೆಳಿಗ್ಗೆ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಲಾರಿ ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದ್ದು, ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಬಾಣಸವಾಡಿ ಸಂಚಾರ ಪೊಲೀಸರು ತಿಳಿಸಿದರು.

'ಮನೀಶ್ ಅವರು ಹೊರ ವರ್ತುಲ ಮುಖ್ಯರಸ್ತೆಯಲ್ಲಿ ಬೈಕ್ ಚಲಾಯಿಸಿಕೊಂಡು ಹೊರಟಿದ್ದರು. ರಾಮಮೂರ್ತಿನಗರ ಕಡೆಯಿಂದ ಹೆಬ್ಬಾಳದತ್ತ ಹೊರಟಿದ್ದ ಲಾರಿಯನ್ನು ಚಾಲಕ ಅತಿ ವೇಗವಾಗಿ ಚಲಾಯಿಸಿದ್ದ. ಹೊರಮಾವು ಕೆಳ ಸೇತುವೆಯಲ್ಲಿ ಎದುರಿಗೆ ಹೊರಟಿದ್ದ ಬೈಕ್‌ಗೆ ಲಾರಿ ಡಿಕ್ಕಿ ಹೊಡೆದಿತ್ತು. ಬೈಕ್ ರಸ್ತೆಯಲ್ಲೇ ಉರುಳಿಬಿದ್ದಿತ್ತು.'

'ಅಪಘಾತದಿಂದಾಗಿ ಮನೀಶ್ ಅವರ ತಲೆ ಹಾಗೂ ಹೊಟ್ಟೆಗೆ ಪೆಟ್ಟು ಬಿದ್ದಿದ್ದರಿಂದ ಅವರು ಮೃತಪಟ್ಟಿದ್ದಾರೆ. ಇವರ ಸಾವಿಗೆ ಕಾರಣವಾದ ಆರೋಪದಡಿ ಲಾರಿ ಚಾಲಕನನ್ನು ಬಂಧಿಸಲಾಗಿದೆ' ಎಂದೂ ಪೊಲೀಸರು ಹೇಳಿದರು.

ಚಿತ್ರಾವಳಿ

ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಸಚಿವಾಲಯ ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ಗ್ರಾಂಡ್ ಫಿನಾಲೆ ಕಾರ್ಯಕ್ರಮದಲ್ಲಿ ಕರ್ನಾಟಕದಿಂದ ಎಸಿಎಸ್ ತಾಂತ್ರಿಕ ಮಹಾವಿದ್ಯಾಲಯವನ್ನು ನೋಡಲ್ ಸೆಂಟರ್ ಆಗಿ ಆಯ್ಕೆ ಮಾಡಲಾಯಿತು. ಇಸ್ರೋನ ಮೈಲಾಸ್ವಾಮಿ ಅಣ್ಣಾದೊರೈ, ರಾಜರಾಜೇಶ್ವರಿ ಸಮೂಹ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ.ವಿಜಯಾನಂದ, ವಿಶೇಷ ಅಧಿಕಾರಿ ಜಯಬಾಲ್, ಪ್ರಾಂಶುಪಾಲ ಮುರಳಿ ಉಪಸ್ಥಿತರಿದ್ದರು.

'ಮೊಬೈಲ್, ಸಿಮ್‌ಕಾರ್ಡ್ ಹಾಗೂ ಬಿಡಿಭಾಗಗಳನ್ನು ರಸ್ತೆಬದಿಯಲ್ಲಿ ಮಾರಾಟ ಮಾಡುವುದನ್ನು ನಿಷೇಧಿಸಬೇಕು. ಸರ್ಕಾರಕ್ಕೆ ಆಗುತ್ತಿರುವ ತೆರಿಗೆ ವಂಚನೆ ತಡೆಯಬೇಕು' ಎಂದು ಒತ್ತಾಯಿಸಿ ನಮ್ಮ ಕರ್ನಾಟಕ ಮೊಬೈಲ್ ರಿಟೇಲರ್ಸ್ ಅಸೋಸಿಯೇಷನ್ ಪದಾಧಿಕಾರಿಗಳು ನಗರದ ಪುರಭವನ ಬಳಿ ಗುರುವಾರ ಪ್ರತಿಭಟನೆ ನಡೆಸಿದರು. – ಪ್ರಜಾವಾಣಿ ಚಿತ್ರ

ಆಸ್ಟರ್ ಸಿ.ಎಂ.ಐ. ಆಸ್ಪತ್ರೆಯ ಆಸ್ಟರ್ ಜನನ ಕೇಂದ್ರವನ್ನು ನಗರದಲ್ಲಿ ಗುರುವಾರ ಚಲನಚಿತ್ರ ನಟಿ ಸುಧಾರಾಣಿ ಉದ್ಘಾಟಿಸಿದರು. ಆಸ್ಪತ್ರೆಯ ಪ್ರಸೂತಿ ತಜ್ಞರು ಇದ್ದಾರೆ.

ಡೇಟಿಂಗ್ ಆ್ಯಪ್: ₹ 7 ಲಕ್ಷ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಉದ್ಯಮಿಯೊಬ್ಬರ ಜೊತೆ ಸಲುಗೆ ಬೆಳೆಸಿದ್ದ ಮಹಿಳೆಯೊಬ್ಬರು ಖಾಸಗಿ ಕ್ಷಣಗಳ ಫೋಟೊ ಹಾಗೂ ವಿಡಿಯೊ ಇಟ್ಟುಕೊಂಡು ₹ 7 ಲಕ್ಷ ಸುಲಿಗೆ ಮಾಡಿದ್ದು, ಈ ಸಂಬಂಧ ದಕ್ಷಿಣ ವಿಭಾಗ ವ್ಯಾಪ್ತಿಯ ಠಾಣೆಯೊಂದರಲ್ಲಿ ಪ್ರಕರಣ ದಾಖಲಾಗಿದೆ.

'ಮಹಿಳೆ ಜಾಲಕ್ಕೆ ಸಿಲುಕಿ ಹಣ ಕಳೆದುಕೊಂಡಿರುವ ಉದ್ಯಮಿಯೊಬ್ಬರು ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಿಲ್ಡರ್ ಆಗಿರುವ ಉದ್ಯಮಿ, ಡೇಟಿಂಗ್ ಆ್ಯಪ್‌ನಲ್ಲಿ ಖಾತೆ ತೆರೆದಿದ್ದರು. ಹೊರ ರಾಜ್ಯದ ನಿವಾಸಿಯಾಗಿರುವ ಮಹಿಳೆ, ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿದ್ದರು. ಅದನ್ನು ಉದ್ಯಮಿ ಸ್ವೀಕರಿಸುತ್ತಿದ್ದಂತೆ, ಮಹಿಳೆ ಸಂದೇಶ ಕಳುಹಿಸಲಾರಂಭಿಸಿದ್ದರು. ನಂತರ, ಇಬ್ಬರೂ ಹೆಚ್ಚು ಹೊತ್ತು ಚಾಟಿಂಗ್ ಮಾಡುತ್ತಿದ್ದರು.'

'ಮೊಬೈಲ್ ನಂಬರ್ ಬದಲಾಯಿಸಿಕೊಂಡಿದ್ದ ಇಬ್ಬರೂ, ಪರಸ್ಪರ ವಾಟ್ಸ್‌ಆ್ಯಪ್ ಚಾಟಿಂಗ್ ಹಾಗೂ ವಿಡಿಯೊ ಕರೆ ಮಾಡಲಾರಂಭಿಸಿದ್ದರು. ಇಬ್ಬರ ನಡುವೆ ಸಲುಗೆಯೂ ಬೆಳೆದಿತ್ತು. ಕೆಲ ತಿಂಗಳ ಹಿಂದೆಯಷ್ಟೇ ಇಬ್ಬರೂ ಮುಖಾಮುಖಿ ಭೇಟಿಯಾಗಿದ್ದರು. ಮೊದಲ ಭೇಟಿಯಲ್ಲಿ ಮತ್ತಷ್ಟು ಹತ್ತಿರವಾಗಿದ್ದ ಇಬ್ಬರೂ ಹಲವೆಡೆ ಪ್ರವಾಸಕ್ಕೆ ಹೋಗಿ ಬಂದಿದ್ದರು. ಇದೇ ವೇಳೆ ಖಾಸಗಿ ಕ್ಷಣಗಳನ್ನು ಕಳೆದಿದ್ದರು' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

₹ 7 ಲಕ್ಷ ಸುಲಿಗೆ, ಫ್ಲ್ಯಾಟ್‌ಗೆ ಒತ್ತಾಯ: 'ಖಾಸಗಿ ಕ್ಷಣಗಳ ಫೋಟೊ ಹಾಗೂ ವಿಡಿಯೊ ಚಿತ್ರೀಕರಿಸಿಕೊಂಡಿದ್ದ ಮಹಿಳೆ, ಅವುಗಳನ್ನು ತೋರಿಸಿ ಉದ್ಯಮಿಯನ್ನು ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದ್ದರು. ಹಣ ನೀಡದಿದ್ದರೆ ಸಾಮಾಜಿಕ ಮಾಧ್ಯಮಗಳಲ್ಲಿ ಫೋಟೊ ಹಾಗೂ ವಿಡಿಯೊ ಅಪ್‌ಲೋಡ್ ಮಾಡುವುದಾಗಿಯೂ ಬೆದರಿಸಿದ್ದರು. ಇದಕ್ಕೆ ಹೆದರಿದ ಉದ್ಯಮಿ, ಹಂತ ಹಂತವಾಗಿ ₹ 7 ಲಕ್ಷ ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಫ್ಲ್ಯಾಟ್ ಹಾಗೂ ಮತ್ತಷ್ಟು ಹಣ ಬೇಕೆಂದು ಮಹಿಳೆ ಪುನಃ ಬೇಡಿಕೆ ಇರಿಸಿದ್ದರು. ಬೇಸತ್ತ ಉದ್ಯಮಿ, ಠಾಣೆಗೆ ದೂರು ನೀಡಿದ್ದಾರೆ. ಆರೋಪಿ ಮಹಿಳೆ ತಲೆಮರೆಸಿಕೊಂಡಿದ್ದಾರೆ' ಎಂದು ತಿಳಿಸಿವೆ.

₹ 84 ಸಾವಿರ ದೋಖಾ

ಚಿಕ್ಕಬಳ್ಳಾಪುರ: ಡೇಟಿಂಗ್ ಆಸೆಗೆ ಬಿದ್ದು ಗೌರಿಬಿದನೂರು ತಾಲ್ಲೂಕಿನ ಕಲ್ಲೂಡಿ ಗ್ರಾಮದ ಕಲ್ಯಾಣ್ ಕುಮಾರ್ ಎಂಬುವವರು ₹ 84,500 ಕಳೆದುಕೊಂಡಿದ್ದರೆ. ಈ ಸಂಬಂಧ ಅವರು ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ನನ್ನ ಮೊಬೈಲ್ ನಂಬರ್‌ಗೆ 'LOVE LOCKUP' ಎಂದು ಸಂದೇಶ ಬಂದಿತು. ಅವರು ಕಳುಹಿಸಿದ ನಂಬರ್‌ಗೆ ಕರೆ ಮಾಡಿದೆ. ಅವರು ನಮ್ಮ ಡೇಟಿಂಗ್ ಬ್ರಾಂಚ್ ದೊಡ್ಡಬಳ್ಳಾಪುರದಲ್ಲಿ ಇದೆ. ಅಲ್ಲಿಂದ ಬರುತ್ತಾರೆ. ₹ 1,500 ನೋಂದಣಿ ಶುಲ್ಕ ಕಳುಹಿಸಿ ಎಂದು ಹೇಳಿದರು.

ನಾನು ಆಸೆಬಿದ್ದು ಅವಳು ಕಳುಹಿಸಿದ್ದ ಫೋನ್ ನಂಬರ್‌ಗೆ ಫೋನ್ ಪೇ ಮೂಲಕ ಹಣ ಕಳುಹಿಸಿದೆ. ಮತ್ತೆ ₹ 7000 ಕಳುಹಿಸಿದೆ. ಆ ಬಳಿಕವೂ ಹಣ ಕೇಳಿದರು. ನನಗೆ ಬೇಡ. ನನ್ನ ಹಣ ವಾಪಸ್ ಕೊಡಿ ಎಂದು ಕೇಳಿದೆ. ಅದಕ್ಕೆ ಅವರು ₹ 7,500 ಕಳುಹಿಸಿದರೆ ನಿಮ್ಮ ಹಣ ವಾಪಸ್ ಕೊಡುತ್ತೇವೆ ಎಂದು ತಿಳಿಸಿದರು.

ವಿವಿಧ ಶುಲ್ಕಗಳು ಎಂದು ನನ್ನಿಂದ ₹84,500 ಪಡೆದು ವಂಚಿಸಿದ್ದಾರೆ ಎಂದು ದೂರಿನಲ್ಲಿ ವಿವರಿಸಿದ್ದಾರೆ.

ಮೃತರೆಲ್ಲ ರಾಯಚೂರು ಜಿಲ್ಲೆ ಸಿರವಾರ ತಾಲ್ಲೂಕಿನವರು

ಭೀಕರ ಅಪಘಾತ: 9 ಮಂದಿ ಸಾವು

ಪ್ರಜಾವಾಣಿ ವಾರ್ತೆ

ತುಮಕೂರು: ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಹತ್ತಿರದ ಬಾಳೇನಹಳ್ಳಿ ಗೇಟ್ ಸಮೀಪ ರಾಷ್ಟ್ರೀಯ ಹೆದ್ದಾರಿ 4ರಲ್ಲಿ ಗುರುವಾರ ಬೆಳಗಿನ ಜಾವ ಸಂಭವಿಸಿದ ಅಪಘಾತದಲ್ಲಿ ಒಂಬತ್ತು ಕೂಲಿ ಕಾರ್ಮಿಕರು ಮೃತಪಟ್ಟಿದ್ದು, 15 ಮಂದಿ ಗಾಯಗೊಂಡಿದ್ದಾರೆ.

ರಾಯಚೂರಿನಿಂದ ಬೆಂಗಳೂರಿಗೆ ಹೊರಟಿದ್ದ ಕ್ರೂಸರ್ ವಾಹನದ ಟೈರ್ ಸಿಡಿದು ಉರುಳಿದ್ದು, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದಿದೆ. ಅದೇ ಸಮಯಕ್ಕೆ ಹಿಂದಿನಿಂದ ವೇಗವಾಗಿ ಬಂದ ಲಾರಿ ಕ್ರೂಸರ್‌ಗೆ ಗುದ್ದಿದ್ದರಿಂದ ಹೆಚ್ಚಿನ ಪ್ರಾಣಹಾನಿ ಸಂಭವಿಸಿದೆ.

ಮೃತಪಟ್ಟವರೆಲ್ಲ ರಾಯಚೂರು ಜಿಲ್ಲೆ ಸಿರವಾರ ತಾಲ್ಲೂಕಿನವರು. ಕೂಲಿ ಕೆಲಸಕ್ಕಾಗಿ ಬೆಂಗಳೂರಿಗೆ ತೆರಳುತ್ತಿದ್ದರು. 12 ಜನಕ್ಕೆ ಅವಕಾಶವಿದ್ದ ವಾಹನದಲ್ಲಿ 24 ಮಂದಿ ಪ್ರಯಾಣಿಸುತ್ತಿದ್ದರು.

'ಚಾಲಕ ಮದ್ಯ ಸೇವಿಸಿ ಚಲಾಯಿಸುತ್ತಿದ್ದು, ಸ್ಟೇರಿಂಗ್ ಮೇಲೆಯೇ ನಿದ್ದೆ ಮಾಡುತ್ತಿದ್ದರು. ನಿಯಂತ್ರಣ ತಪ್ಪಿದ ವಾಹನ ಅಪಘಾತಕ್ಕೀಡಾಯಿತು' ಎಂದು ಗಾಯಗೊಂಡವರು ದೂರಿದರು.

'ಕ್ರೂಸರ್ ಸುಸ್ಥಿತಿಯಲ್ಲಿ ಇರಲಿಲ್ಲ. ಎಲ್ಲ ಟೈರ್‌ಗಳು ಸವೆದಿದ್ದವು. ಸಾಮರ್ಥ್ಯಕ್ಕಿಂತ ಹೆಚ್ಚು ಜನರಿದ್ದ ಕಾರಣ ಭಾರ ತಾಳಲಾರದೆ ಟೈರ್ ಸಿಡಿದಿರುವ ಸಾಧ್ಯತೆ ಇದೆ' ಎಂದು ಪೊಲೀಸರು ತಿಳಿಸಿದರು.

ಸಿರವಾರ ತಾಲ್ಲೂಕಿನ ಕುರಕುಂದಾ ಗ್ರಾಮದ ಒಂದೇ ಕುಟುಂಬದ ಪ್ರಭುಸ್ವಾಮಿ (30), ಅವರ ಪತ್ನಿ ಸುಜಾತಾ (25), ಅವರಿಬ್ಬರ ಪುತ್ರ ವಿನೋದ (3), ಸುಜಾತಾ ಸಹೋದರ ಸಿದ್ದಯ್ಯಸ್ವಾಮಿ (28), ವಡವಟ್ಟಿ ಗ್ರಾಮದ ವಾಹನ ಚಾಲಕ ಕೃಷ್ಣಪ್ಪ (32), ಕೃಷ್ಣಪ್ಪನ ಅಕ್ಕ ಲಿಂಗಮ್ಮ (34), ಲಿಂಗಮ್ಮನ ಪುತ್ರಿ ಐಶ್ವರ್ಯಾ (9), ನವಿಲುಕಲ್ಲು ಗ್ರಾಮದ ಆದಪ್ಪ (23), ಕಸನದೊಡ್ಡಿ ಗ್ರಾಮದ ಬಸಮ್ಮ (50) ಮೃತರು. ಸುಜಾತಾ–ಸಿದ್ದಯ್ಯಸ್ವಾಮಿ ದಂಪತಿ ಮತ್ತೊಬ್ಬ ಪುತ್ರ ಸಂದೀಪ್ (5) ಬದುಕಿ ಉಳಿದಿದ್ದಾನೆ.

ಅಪಘಾತದ ರಭಸಕ್ಕೆ ಶವಗಳು ಗುರುತು ಸಿಗದಂತಾಗಿದ್ದವು. ಆಹಾರ ಸಾಮಗ್ರಿ ಚೆಲ್ಲಾಪಿಲ್ಲಿಯಾಗಿತ್ತು. ನಜ್ಜುಗುಜ್ಜಾದ ಕ್ರೂಸರ್ ವಾಹನ ಅಪಘಾತದ ಭೀಕರತೆಗೆ ಸಾಕ್ಷಿಯಾಗಿತ್ತು. ಪೊಲೀಸರು ಮೃತದೇಹಗಳನ್ನು ಶಿರಾ ತಾಲ್ಲೂಕು ಆಸ್ಪತ್ರೆಗೆ ಸಾಗಿಸಿದರು.

ಗಾಯಾಳುಗಳನ್ನು ತುಮಕೂರು ಜಿಲ್ಲಾ ಆಸ್ಪತ್ರೆ ಮತ್ತು ಬೆಂಗಳೂರಿನ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ತಮಿಳುನಾಡು ನೋಂದಣಿಯ ಲಾರಿಯನ್ನು ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ.

ಶಿರಾ ಸಮೀಪದ ಕಳ್ಳಂಬೆಳ್ಳ ಬಳಿ ಅಪಘಾತಕ್ಕೀಡಾದ ಕ್ರೂಸರ್ ವಾಹನ ನಜ್ಜುಗುಜ್ಜಾಗಿದೆ

ವ್ಯಾಪಾರದ ಸೋಗು: ₹60 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಬೆಂಗಳೂರು: ವ್ಯಾಪಾರದ ಸೋಗಿನಲ್ಲಿ ನಗರಕ್ಕೆ ಬಂದು ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ ನೈಜೀರಿಯಾದ ಮೂವರು ಪ್ರಜೆಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಅವರಿಂದ ₹ 60 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

'ಹೆಣ್ಣೂರು ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ತ್ವರಿತ ಕಾರ್ಯಾಚರಣೆ ನಡೆಸಿ, ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಇವರಿಂದ 561 ಗ್ರಾಂ ಎಂಡಿಎಂಎ ಹಾಗೂ ಮೂರು ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳ ಜೊತೆಯಲ್ಲಿ ಮತ್ತಷ್ಟು ಮಂದಿ ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದಾರೆ. ಅವರೆಲ್ಲರನ್ನೂ ಬಂಧಿಸಬೇಕಿದೆ. ಹೀಗಾಗಿ, ಆರೋಪಿಗಳ ಹೆಸರು ಸದ್ಯಕ್ಕೆ ಬಹಿರಂಗಪಡಿಸಲಾಗದು' ಎಂದೂ ತಿಳಿಸಿವೆ.

'ಮೂವರು ಆರೋಪಿಗಳು, ವ್ಯಾಪಾರ ವೀಸಾದಡಿ ನಗರಕ್ಕೆ ಬಂದಿದ್ದರು. ಬಟ್ಟೆ ಹಾಗೂ ಇತರೆ ವಸ್ತುಗಳ ಮಾರಾಟದ ಸೋಗಿನಲ್ಲಿ ನಗರದಲ್ಲಿ ಸುತ್ತಾಡುತ್ತಿದ್ದರು. ಇದರ ಜೊತೆಯಲ್ಲೇ ಅಕ್ರಮವಾಗಿ ಹಣ ಸಂಪಾದಿಸಲು ಡ್ರಗ್ಸ್ ದಂಧೆಗೆ ಇಳಿದಿದ್ದರು. ಆಫ್ರಿಕಾದ ಪೆಡ್ಲರ್‌ಗಳಿಂದ ಡ್ರಗ್ಸ್ ಖರೀದಿಸಿ ತಂದು ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು.' 'ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳಿಗೆ ನಿರಂತರವಾಗಿ ಡ್ರಗ್ಸ್ ಮಾರುತ್ತಿದ್ದರು. ಇದರಿಂದ ಅಕ್ರಮವಾಗಿ ಹಣ ಸಂಪಾದಿಸಿ ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದೂ ಮೂಲಗಳು ಹೇಳಿವೆ.

ಜೈಲಿಗೆ ಹೋಗಿ ಬಂದರೂ ಡ್ರಗ್ಸ್ ಮಾರಾಟ: 'ಬಂಧಿತರಲ್ಲಿ ಒಬ್ಬಾತ, ಈ ಹಿಂದೆಯೇ ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಅಮೃತಹಳ್ಳಿ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದ. ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದು ಪುನಃ ಡ್ರಗ್ಸ್ ಮಾರಾಟ ಮುಂದುವರಿಸಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬಂಧಿತರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಹೆಣ್ಣೂರು ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎನ್ನಲಾಗಿದೆ.

ಕೆಜಿಎಫ್ ಬಾಬುಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿಕ್ಕಪೇಟೆ ಕ್ಷೇತ್ರದಿಂದ ಪಕ್ಷ ಟಿಕೆಟ್ ನೀಡಲಿ, ಬಿಡಲಿ ಸ್ಪರ್ಧಿಸುವುದು ಖಚಿತ' ಎಂದು ಹೇಳುವ ಮೂಲಕ ಸವಾಲು ಹಾಕಿದ ಕಾಂಗ್ರೆಸ್ ನಾಯಕ, ಬೆಂಗಳೂರು ನಗರ ಕ್ಷೇತ್ರದ ವಿಧಾನಪರಿಷತ್ ಅಭ್ಯರ್ಥಿಯಾಗಿದ್ದ ಯೂಸುಫ್ ಶರೀಫ್ (ಕೆಜಿಎಫ್ ಬಾಬು) ಅವರಿಗೆ ಕೆಪಿಸಿಸಿ ಶಿಸ್ತು ಪಾಲನಾ ಸಮಿತಿ ಕಾರಣ ಕೇಳುವ ನೋಟಿಸ್ ನೀಡಿದೆ.

'ಚಿಕ್ಕಪೇಟೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸುಮಾರು ₹ 350 ಕೋಟಿಯ ವೆಚ್ಚದ ಯೋಜನೆಗಳನ್ನು ಪಟ್ಟಿ ಮಾಡಿ, ಈ ಯೋಜನೆಗಳ ಅನುಷ್ಠಾನಗೊಳಿಸಲು ಅನುಮತಿ ನೀಡುವಂತೆ ಜಾಹೀರಾತು ಮೂಲಕ ಪಕ್ಷದ ಹೈಕಮಾಂಡ್‌ಗೆ ನೀವು ಮನವಿ ಮಾಡಿದ್ದೀರಿ. ಹೀಗೆ ಮಾಡುವ ಮೂಲಕ ಪ್ರಚಾರ ಗಿಟ್ಟಿಸಿಕೊಂಡು, ಬಳಿಕ ಯೋಜನೆಗಳನ್ನು ಅನುಷ್ಠಾನಗೊಳಿಸದೆ ಪಕ್ಷದ ಮೇಲೆ ಗೂಬೆ ಕೂರಿಸುವ ಹುನ್ನಾರದಂತೆ ಕಂಡುಬರುತ್ತಿದೆ' ಎಂದು ನೋಟಿಸ್‌ನಲ್ಲಿ ಸಮಿತಿ ಉಲ್ಲೇಖಿಸಿದೆ.

'ಇದು ಬೇಜವಾಬ್ದಾರಿ ನಡವಳಿಕೆ. ಇದರಿಂದ ಪಕ್ಷಕ್ಕೆ ಮುಜುಗರ ಉಂಟಾಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಈ ಬಗ್ಗೆ ನೋಟಿಸ್ ತಲುಪಿದ ಏಳು ದಿನಗಳ ಒಳಗೆ ವಿವರಣೆ ನೀಡಬೇಕು' ಎಂದೂ ತಿಳಿಸಲಾಗಿದೆ.

ಮಟ್ಕಾ: ಆರೋಪಿ ಬಂಧನ

ಬೆಂಗಳೂರು: ಓಪನ್ ಕ್ಲೋಸ್ (ಒ.ಸಿ) ಕಲ್ಯಾಣಿ ಹೆಸರಿನಲ್ಲಿ ಮಟ್ಕಾ ನಡೆಸುತ್ತಿದ್ದ ಆರೋಪಿ ವೆಂಕಟೇಶ್ (28) ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಹೊಸಕೆರೆಹಳ್ಳಿ ನಿವಾಸಿ ವೆಂಕಟೇಶ್, ಗಿರಿನಗರ ಠಾಣೆ ವ್ಯಾಪ್ತಿಯಲ್ಲಿ ಜನರಿಂದ ಹಣ ಕಟ್ಟಿಸಿಕೊಂಡು ಮಟ್ಕಾ ನಡೆಸುತ್ತಿದ್ದ. ಹೊಸಕೆರೆಹಳ್ಳಿ 14ನೇ ಅಡ್ಡರಸ್ತೆಯಲ್ಲಿ ಪುರಾವೆ ಸಮೇತ ಈತನನ್ನು ಬಂಧಿಸಲಾಗಿದೆ. ₹ 31,500 ನಗದು ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

ಆನ್‌ಲೈನ್ ಬಿಲ್ ವಂಚನೆ: ದೂರು

ಬೆಂಗಳೂರು: ಆನ್‌ಲೈನ್ ಮೂಲಕ ಗ್ರಾಹಕರನ್ನು ವಂಚಿಸಿ ಹಣ ವಸೂಲಿ ಮಾಡುತ್ತಿರುವ ಸೈಬರ್ ವಂಚಕರ ಜಾಲದ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೈಬರ್ ಕ್ರೈಂ ಠಾಣೆಗೆ ಬೆಸ್ಕಾಂ ದೂರು ನೀಡಿದೆ.

ವಿದ್ಯುತ್ ಶುಲ್ಕ ಪಾವತಿಸುವಂತೆ ಎಸ್‌ಎಂಎಸ್‌ಗಳ ಕುರಿತು ಸುಮಾರು 16 ಗ್ರಾಹಕರು ಜೂನ್ ಮತ್ತು ಜುಲೈ ತಿಂಗಳಲ್ಲಿ 1912 ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು.

ಮಾಹಿತಿ ಆಧರಿಸಿ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿರುವ ಸೈಬರ್ ಅಪರಾಧ ವಿಭಾಗದಲ್ಲಿ ದೂರು ದಾಖಲಿಸಲಾಗಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

'ಸೈಬರ್ ವಂಚಕರು ಬೆಸ್ಕಾಂ ಹೆಸರಿನಲ್ಲಿ ಗ್ರಾಹಕರಿಗೆ ಎಸ್‌ಎಂಎಸ್ ಕಳುಹಿಸಿ, ವಿದ್ಯುತ್ ಬಿಲ್ ಪಾವತಿಸದಿದ್ದರೆ ನಿಮ್ಮ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡುತ್ತಿದ್ದಾರೆ. ಗ್ರಾಹಕರು ತಕ್ಷಣವೇ ಆನ್ ಲೈನ್ ಮೂಲಕ ಹಣ ಪಾವತಿಸಿ ಮೋಸ ಹೋಗುತ್ತಿದ್ದಾರೆ' ಎಂದು ಬೆಸ್ಕಾಂ ಪ್ರಧಾನ ವ್ಯವಸ್ಥಾಪಕ (ಗ್ರಾಹಕ ಸಂಬಂಧ) ಎಸ್. ಆರ್. ನಾಗರಾಜ ಅವರು ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಇದೊಂದು ಸಂಘಟಿತ ಅಪರಾಧವಾಗಿದ್ದು, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ಪೊಲೀಸರ ಜೊತೆಗೆ ಮಾಹಿತಿಯನ್ನು ಹಂಚಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಸೈಬರ್ ವಂಚನೆ ವಿವರ: ಬೆಸ್ಕಾಂ ಗ್ರಾಹಕರಿಗೆ ಅನಾಮಧೇಯ ಸಂಖ್ಯೆಗಳಿಂದ ಎಸ್‌ಎಂಎಸ್‌ಗಳು ಬರುತ್ತಿದ್ದು, ಗ್ರಾಹಕರು ಎಸ್‌ಎಂಎಸ್ ಕಳುಹಿಸಿದ ಸಂಖ್ಯೆಗೆ ಕರೆ ಮಾಡಿದ ತಕ್ಷಣ ಸೈಬರ್ ವಂಚಕರು ಹಿಂದಿ ಭಾಷೆಯಲ್ಲಿ ವ್ಯವಹರಿಸಿ ಗ್ರಾಹಕರಿಗೆ ಆನ್‌ಲೈನ್‌ನಲ್ಲಿ ಹಣ ಪಾವತಿಸಲು ಲಿಂಕ್ ಕಳುಹಿಸಿ ಹಣ ಲಪಟಾಯಿಸುತ್ತಾರೆ. ಸೈಬರ್ ವಂಚಕರು ಮಾಹಿತಿ ತಂತ್ರಜ್ಞಾನ(ಐಟಿ) ಉದ್ಯಮದ ಉದ್ಯೋಗಿಗಳಾಗಿರುವುದು ಗೊತ್ತಾಗಿದೆ.

ವಿದ್ಯುತ್ ಬಿಲ್ ಪಾವತಿಸುವಂತೆ ಬೆಸ್ಕಾಂ ತನ್ನ ಗ್ರಾಹಕರಿಗೆ ಎಸ್‌ಎಂಎಸ್ ಕಳುಹಿಸುವುದಿಲ್ಲ, ಕರೆ ಮಾಡುವುದಿಲ್ಲ. ಗ್ರಾಹಕರು ವಿದ್ಯುತ್ ಬಿಲ್‌ಗಳನ್ನು ಬೆಂಗಳೂರು ಒನ್, ಬೆಸ್ಕಾಂ ಮಿತ್ರ ಆ್ಯಪ್, ಬೆಸ್ಕಾಂ ಕಚೇರಿ ಮತ್ತು ಬೆಸ್ಕಾಂ ವೆಬ್‌ಸೈಟ್ ಮೂಲಕವೇ ಹಣ ಪಾವತಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಶಿಥಿಲಾವಸ್ಥೆಯಲ್ಲಿ ಕೆಂಗೇರಿ ಉಪನಗರದ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡ

ದೇವಸ್ಥಾನಕ್ಕೆ ಸರ್ಕಾರಿ ಶಾಲೆ ಸ್ಥಳಾಂತರ

• ಖಲೀಲಅಹ್ಮದ ಶೇಖ

ಬೆಂಗಳೂರು: ಕೆಂಗೇರಿ ಉಪನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡ ಸಂಪೂರ್ಣ ಶಿಥಿಲಗೊಂಡಿದ್ದು, ಕಾಳಿಕಾಂಬಾ ದೇವಸ್ಥಾನಕ್ಕೆ ಶಾಲೆಯನ್ನು ಸ್ಥಳಾಂತರಿಸಲಾಗಿದೆ.

ಗಾಂಧಿನಗರದಲ್ಲಿರುವ ಈ ಕಟ್ಟಡ ಸಣ್ಣ ಬಣ್ಣ ಕಂಡು ದಶಕಗಳೇ ಕಳೆದಿದ್ದವು. ಮಳೆ ಬಂದರೆ ಮೊದಲ ಅಂತಸ್ತಿನ ಕೊಠಡಿಯ ಚಾವಣಿ ಸೋರುತ್ತಿತ್ತು. ಇದರಿಂದ ಪಾಚಿ ಕಟ್ಟಿಕೊಂಡು ಕೆಳಗಿರುವ ಕೊಠಡಿಗಳಿಗೆ ಚಾವಣಿಯ ಸಿಮೆಂಟ್ ಉದುರುತ್ತಿದೆ. ಮಕ್ಕಳ ಆರೋಗ್ಯದ ಮೇಲೆ ದೂಳು ಪ್ರತಿಕೂಲ ಪರಿಣಾಮ ಬೀರುತ್ತಿತ್ತು. ಹಲವು ಮಕ್ಕಳಿಗೆ ಸೋಂಕು ಕಾಣಿಸಿಕೊಂಡಿತ್ತು ಎಂದು ಶಾಲಾ ಶಿಕ್ಷಕಿಯೊಬ್ಬರು ಮಾಹಿತಿ ನೀಡಿದರು.

ಪಾಳು ಬಿದ್ದಂತಿರುವ ಶಾಲಾ ಕಟ್ಟಡದಲ್ಲಿ ಗಾಳಿ-ಬೆಳಕಿನ ವ್ಯವಸ್ಥೆ ಇಲ್ಲ. ಆಟದ ಮೈದಾನವೂ ಇಲ್ಲ. 1-5ನೇ ತರಗತಿವರೆಗೆ 62 ಮಕ್ಕಳು ಅಧ್ಯಯನ ಮಾಡುತ್ತಿದ್ದಾರೆ. ಇಬ್ಬರು ಶಿಕ್ಷಕಿಯರು, ಸಹಾಯಕಿ, ಅಡುಗೆ ಸಹಾಯಕಿ ಕಾರ್ಯನಿರ್ವಹಿಸುತ್ತಿದ್ದಾರೆ.

‘1994ರಲ್ಲಿ ಈ ಕಟ್ಟಡವನ್ನು ನಿರ್ಮಿಸಲಾಗಿತ್ತು. ಶಾಲೆಯ ಕೆಳ ಮಹಡಿ ಕಾಂಕ್ರೀಟ್ ಚಾವಣಿ ಹೊಂದಿದೆ. ಮೊದಲ ಅಂತಸ್ತಿನ ಮಹಡಿಯ ಎರಡು ಕೊಠಡಿಗಳು ಸಿಮೆಂಟ್ ತಗಡಿನ ಶೀಟ್‌ಗಳ ಹೊದಿಕೆ ಹೊಂದಿವೆ. ಅದರಲ್ಲಿ ಬಿರುಕು ಉಂಟಾಗಿದ್ದು, ಮಳೆ ಬಂದರೆ ಕೊಠಡಿಗಳು ಕೆರೆಯಂತಾಗುತ್ತಿವೆ. ಈ ವರ್ಷ ನಿರಂತರ ಸುರಿದ ಮಳೆಗೆ ಕೊಠಡಿಗಳೆಲ್ಲ ಕಮಟು ವಾಸನೆ ಬೀರುತ್ತಿದ್ದವು. ಇದರಿಂದ ಆತಂಕಗೊಂಡ ಕೆಲ ಪೋಷಕರು ಮಕ್ಕಳನ್ನು ಶಾಲೆಗೆ ಕಳಿಸಿಲ್ಲ. ಈಗ ದೇವಸ್ಥಾನದಲ್ಲಿ ಶಾಲೆ ಪ್ರಾರಂಭಿಸಿದ ನಂತರ ಮತ್ತೆ ಮಕ್ಕಳು ಶಾಲೆಗೆ ಬರುತ್ತಿದ್ದಾರೆ’ ಎಂದು ಜಯಪ್ರಕಾಶ ನಾರಾಯಣ ವಿಚಾರ ವೇದಿಕೆ ಅಧ್ಯಕ್ಷ ಶಿವಕುಮಾರ್ ಬಿ.ಎಂ. ವಿವರ ನೀಡಿದರು.

‘ಹತ್ತು ವರ್ಷಗಳಿಂದ ಚಾವಣಿಯಿಂದ ನೀರು ಸೋರಿಕೆಯಾಗುತ್ತಿದೆ. ಈ ವರ್ಷ ಸುರಿದ ಭಾರಿ ಮಳೆಯಿಂದಾಗಿ ನೆಲ ಅಂತಸ್ತಿನ ಕೊಠಡಿಗಳಲ್ಲೂ ನೀರು ಸೋರಿಕೆ ಆರಂಭವಾಗಿದೆ. ಇದರಿಂದ ಕೊಠಡಿಗಳು ದುರ್ವಾಸನೆ ಬೀರುತ್ತಿವೆ. ಮಕ್ಕಳು ಮತ್ತು ಶಿಕ್ಷಕರಿಗೆ ಸೋಂಕು ತಗುಲಿತ್ತು. ಈ ಕಟ್ಟಡವನ್ನು ಕೆಡವಿ ಹೊಸ ಕೊಠಡಿಗಳು, ಪ್ರಾರ್ಥನಾ ಮಂದಿರ ನಿರ್ಮಿಸುವಂತೆ ಮೇಲಧಿಕಾರಿಗಳಿಗೆ ಪತ್ರ ಬರೆಯಲಾಗಿದೆ’ ಎಂದು ಮುಖ್ಯ ಶಿಕ್ಷಕಿ ವಸಂತಕುಮಾರಿ ‘ಪ್ರಜಾವಾಣಿ’ ಜತೆ ಮಾಹಿತಿ ಹಂಚಿಕೊಂಡರು.

ಕೆಂಗೇರಿ ಉಪನಗರದ ಗಾಂಧಿನಗರದಲ್ಲಿರುವ ಕಾಳಿಕಾಂಬಾ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ತರಗತಿಗಳು ನಡೆಯುತ್ತಿರುವುದು

ಪ್ರಜಾವಾಣಿ ವಿಶೇಷ

> ಹಳೆಯ ಶಾಲಾ ಕಟ್ಟಡವನ್ನು ಕೆಡವಿ ನೂತನ ಕಟ್ಟಡ ನಿರ್ಮಿಸಲು ಮೇಲಧಿಕಾರಿಗಳಿಗೆ ವರದಿ ಸಲ್ಲಿಸಲಾಗಿದೆ.
>
> **ರಾಜಶೇಖರ್.ಎಚ್.ಜಿ.,** ಬೆಂಗಳೂರು ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ

ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ

ಸರ್ಕಾರಿ ಶಾಲೆಗಳ ಈ ದುಃಸ್ಥಿತಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ. ಗಾಳಿ ಬೆಳಕಿಲ್ಲದ ಶಿಥಿಲ ಕಟ್ಟಡದಲ್ಲಿ ಮಕ್ಕಳ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದಾರೆ. ರಾಜ್ಯ ಮಾನವ ಹಕ್ಕುಗಳ ಆಯೋಗ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಶಿವಕುಮಾರ್ ಬಿ.ಎಂ. ಒತ್ತಾಯಿಸಿದರು.

ಕವಿ ಎಚ್‌.ಎಸ್‌. ವೆಂಕಟೇಶಮೂರ್ತಿ ಅಭಿಮತ

‘ಸಿನಿಮಾ ಕ್ಷೇತ್ರ: ಮಡಿವಂತಿಕೆ ದೂರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚಲನಚಿತ್ರ ಕ್ಷೇತ್ರದಲ್ಲಿ ಸಾಹಿತ್ಯ ಸೃಷ್ಟಿಗೆ ಈ ಮೊದಲಿದ್ದ ಮಡಿವಂತಿಕೆ ದೂರವಾಗಿದ್ದು, ಸಾಹಿತ್ಯ ಮತ್ತು ಸಂಗೀತ ಕ್ಷೇತ್ರದ ಪ್ರಮುಖರು ಈ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ’ ಎಂದು ಕವಿ ಎಚ್‌.ಎಸ್‌. ವೆಂಕಟೇಶಮೂರ್ತಿ ತಿಳಿಸಿದರು.

ಹಂಸಜ್ಯೋತಿ ಟ್ರಸ್ಟ್ ನಗರದಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಲೇಖಕ ಅ.ನಾ. ಪ್ರಹ್ಲಾದರಾವ್ ಅವರ ‘ಹೆಜ್ಜೆ ಗುರುತು’ ಕೃತಿ ಬಿಡುಗಡೆ ಮಾಡಿ, ಮಾತನಾಡಿದರು.

‘ಒಂದು ಕಾಲದಲ್ಲಿ ಸಿನಿಮಾ ಕ್ಷೇತ್ರವನ್ನು ಅಸ್ಪೃಶ್ಯರ ಕ್ಷೇತ್ರವೆಂದು ಭಾವಿಸಲಾಗಿತ್ತು. ಇದರಿಂದಾಗಿ ಆ ಕ್ಷೇತ್ರದಿಂದ ಲೇಖಕರು ಹಾಗೂ ಸಾಹಿತಿಗಳು ಅಂತರ ಕಾಯ್ದುಕೊಳ್ಳುತ್ತಿದ್ದರು. ಆದರೆ, ಈಗ ಸಿನಿಮಾ ಕ್ಷೇತ್ರದಲ್ಲಿ ಆ ಪರಿಸ್ಥಿತಿಯಿಲ್ಲ. ಸಾಹಿತ್ಯ ಕ್ಷೇತ್ರದ ದಿಗ್ಗಜರಾದ ದ.ರಾ. ಬೇಂದ್ರೆ, ಅ.ನ. ಕೃಷ್ಣರಾಯ, ಶಿವರಾಮ ಕಾರಂತ ಸೇರಿ ಹಲವರು ಚಲನಚಿತ್ರ ಗೀತೆಗಳಿಗೆ ಸಾಹಿತ್ಯ ಬರೆದಿದ್ದಾರೆ. ಸಂಗೀತ ಕ್ಷೇತ್ರದ ಸಾಧಕರಾದ ಪಂಡಿತ ಬಸವರಾಜ ರಾಜಗುರು, ಪಿಟೀಲು ಚೌಡಯ್ಯ ಸೇರಿ ಕೆಲವರು ಸಿನಿಮಾ ಕ್ಷೇತ್ರದಲ್ಲಿಯೂ ಗುರುತಿಸಿಕೊಂಡಿದ್ದಾರೆ’ ಎಂದರು.

‘ಸಿನಿಮಾ ಕ್ಷೇತ್ರವು ಕಲಾತ್ಮಕತೆ, ರೋಚಕತೆ ಕಳೆದುಕೊಂಡು, ಮನೋರಂಜನೆಗೆ ಒತ್ತು ನೀಡಿದ ಬಳಿಕ ಕೆಲವರು ಈ ಕ್ಷೇತ್ರದಿಂದ ಅಂತರ ಕಾಯ್ದುಕೊಂಡಿದ್ದರು. ವ್ಯಾಸರಾವ್ ಅಂತಹವರ ಆಗಮನದಿಂದ ನಾನು ಕೂಡ ಸಿನಿಮಾ ಗೀತೆಗಳಿಗೆ ಸಾಹಿತ್ಯ ಮತ್ತು ಸಂಭಾಷಣೆ ಬರೆಯಲಾರಂಭಿಸಿದೆ’ ಎಂದು ಅವರು ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, ‘ತಂತ್ರಜ್ಞಾನ ಕ್ಷೇತ್ರವು ವೇಗವಾಗಿ ಬೆಳೆಯುತ್ತಿದೆ. ಆದರೆ, ತಂತ್ರಜ್ಞಾನಗಳ ಬಳಕೆಯಲ್ಲಿ ಎಚ್ಚರಿಕೆ ವಹಿಸಬೇಕು. ಸಿನಿಮಾ ಕ್ಷೇತ್ರದಲ್ಲಿ ಶೈಕ್ಷಣಿಕ ಶಿಸ್ತನ್ನು ಅಳವಡಿಸಿಕೊಳ್ಳಬೇಕು. ಆಗ ಹೊಸ ಪ್ರಯೋಗಗಳು ಸಾಧ್ಯವಾಗಲಿವೆ’ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಟಿ.ಎಸ್ ನಾಗಾಭರಣ, ಎಚ್‌.ಎಸ್‌ ವೆಂಕಟೇಶಮೂರ್ತಿ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಚರ್ಚಿಸಿದರು. ಚಿತ್ರ ನಟ ಸುಂದರರಾಜ್ ಇದ್ದಾರೆ. –ಪ್ರಜಾವಾಣಿ ಚಿತ್ರ

ಖಾಸಗಿ ಅನುಭವಿ ಬೋಧಕರ ಸೇವೆ ಬಳಕೆ: ಸಚಿವ ನಾಗೇಶ್

ಶಿಕ್ಷಕರ ಕೊರತೆ; ಗುಣಮಟ್ಟಕ್ಕೆ ಹಿನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಶಾಲೆಗಳಲ್ಲಿ ಗಣಿತ, ವಿಜ್ಞಾನ ಹಾಗೂ ಆಂಗ್ಲ ಭಾಷೆಯ ಶಿಕ್ಷಕರ ಕೊರತೆ ಇದೆ. ಇದರಿಂದ ಗುಣಮಟ್ಟದ ಶಿಕ್ಷಣಕ್ಕೆ ಹಿನ್ನಡೆಯಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಹೇಳಿದರು.

ಇಂಡಿಯನ್ ಅಕಾಡೆಮಿ ಸಮೂಹ ವಿದ್ಯಾಸಂಸ್ಥೆ ನವೀಕರಿಸಿದ ಬಿಬಿಎಂಪಿ ಹಾಗೂ ಐದು ಸರ್ಕಾರಿ ಶಾಲೆಗಳ ಹಸ್ತಾಂತರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಖಾಲಿ ಇರುವ 15 ಸಾವಿರ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಪರೀಕ್ಷೆ ನಡೆಸಲಾಗಿತ್ತು. 12 ಸಾವಿರ ಶಿಕ್ಷಕರು ಲಭ್ಯರಾಗಲಿದ್ದಾರೆ. ಉಳಿದ ಮೂರು ಸಾವಿರ ಹುದ್ದೆ ಭರ್ತಿಗೆ 2023ರ ಫೆಬ್ರುವರಿಯಲ್ಲಿ ಸಿಇಟಿ ನಡೆಸಲು ಕ್ರಮ ಕೈಗೊಳ್ಳಲಾಗುವುದು. ಜತೆಗೆ, ವಿಷಯವಾರು ತಜ್ಞ ಶಿಕ್ಷಕರ ಕೊರತೆ ನೀಗಿಸಲು ರಾಜ್ಯದ ಪ್ರತಿಷ್ಠಿತ ಕಾಲೇಜುಗಳ ವ್ಯವಸ್ಥಾಪಕರು ತಮ್ಮಲ್ಲಿರುವ ಅನುಭವಿ ಬೋಧಕರ ಸೇವೆಯನ್ನು ಸರ್ಕಾರಿ ಶಾಲಾ ಮಕ್ಕಳಿಗೆ ನೀಡಬೇಕು ಎಂದು ಮನವಿ ಮಾಡಿದರು.

ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆ ಸಲಹೆಗಾರರಾದ ಡಾ.ಎಂ.ಆರ್. ದೊರೆಸ್ವಾಮಿ, ’ರಾಜ್ಯದ 30 ಸಾವಿರ ಶಾಲೆಗಳಲ್ಲಿ ಸಮಸ್ಯೆಗಳಿದ್ದವು. ದತ್ತು ಅಭಿಯಾನಕ್ಕೆ ಚಾಲನೆ ನೀಡಿದ ನಂತರ ಒಂದಷ್ಟು ಸಮಸ್ಯೆಗಳು ಬಗೆಹರಿದಿವೆ. ಈಗ ಸರ್ಕಾರ 8 ಸಾವಿರ ಕೊಠಡಿಗಳು, ಶೌಚಾಲಯಗಳ ನಿರ್ಮಾಣಕ್ಕೆ ಅನುದಾನ ನೀಡಿದೆ‘ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಂಡಿಯನ್ ಅಕಾಡೆಮಿ ಸಮೂಹ ವಿದ್ಯಾಸಂಸ್ಥೆಗಳ ಮುಖ್ಯಸ್ಥ ಡಾ.ಟಿ. ಸೋಮಶೇಖರ್, ಶಿಕ್ಷಣ ಇಲಾಖೆ ಆಯುಕ್ತ ರಾಮಪ್ರಸಾದ್ ಇದ್ದರು.

ಇಂಡಿಯನ್ ಅಕಾಡೆಮಿ ಸಮೂಹ ವಿದ್ಯಾಸಂಸ್ಥೆ ನವೀಕರಿಸಿದ ಬಿಬಿಎಂಪಿ ಹಾಗೂ ಐದು ಸರ್ಕಾರಿ ಶಾಲಾ ಕಟ್ಟಡವನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಬುಧವಾರ ಉದ್ಘಾಟಿಸಿದರು. ರಾಜ್ಯ ಶಿಕ್ಷಣ ಸುಧಾರಣೆ ಸಲಹೆಗಾರ ಡಾ.ಎಂ.ಆರ್.ದೊರೆಸ್ವಾಮಿ, ಇಂಡಿಯನ್ ಅಕಾಡೆಮಿ ಸಮೂಹ ವಿದ್ಯಾಸಂಸ್ಥೆಗಳ ಮುಖ್ಯಸ್ಥ ಡಾ.ಟಿ. ಸೋಮಶೇಖರ್ ಇದ್ದರು.

29 ಸಾವಿರ ಶಾಲೆಗಳ ಆಸ್ತಿ ದಾಖಲೆ ಸಮರ್ಪಕ: ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿರುವ 48 ಸಾವಿರ ಸರ್ಕಾರಿ ಶಾಲೆಗಳ ಪೈಕಿ ಸುಮಾರು 29 ಸಾವಿರ ಶಾಲೆಗಳ ಆಸ್ತಿ ದಾಖಲೆಗಳು ಸಮರ್ಪಕವಾಗಿವೆ. ಉಳಿದ ಶಾಲೆಗಳ ಆಸ್ತಿ ನೋಂದಣಿಗೆ ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಸಮಗ್ರ ಶಿಕ್ಷಣ ಕರ್ನಾಟಕ ಕಚೇರಿಯಲ್ಲಿ ಅಧಿಕಾರಿಗಳ ಜೊತೆ ಬುಧವಾರ ಸಭೆ ನಡೆಸಿದ ಬಳಿಕ ಮಾತನಾಡಿದರು.

‘ಆಗಸ್ಟ್‌ನಿಂದ ಅಕ್ಟೋಬರ್‌ವರೆಗೆ ಸರ್ಕಾರಿ ಶಾಲಾ, ಕಾಲೇಜುಗಳ ಆಸ್ತಿ ಸಂರಕ್ಷಣಾ ಅಭಿಯಾನ ನಡೆಸಲಾಗುತ್ತಿದೆ. ಶಾಲೆಯ ಆಸ್ತಿ ದಾಖಲೆಗಳನ್ನು ಕ್ರಮಬದ್ಧಗೊಳಿಸಿ ನೋಂದಣಿ ಮಾಡಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಕಂದಾಯ ಇಲಾಖೆ ಮತ್ತು ಸಂಬಂಧಪಟ್ಟ ಇತರ ಇಲಾಖೆಗಳ ಸಂಯೋಜನೆಯಲ್ಲಿ ಈ ಕಾರ್ಯ ನಡೆಯಲಿದೆ’ ಎಂದರು.

‘ಕಾನೂನಾತ್ಮಕ ಸಮಸ್ಯೆಗಳು, ಶಿಕ್ಷಣ ಇಲಾಖೆಯ ಆಸ್ತಿಯಾಗಿದ್ದರೂ ನೋಂದಣಿಯಾಗದೇ ಇರುವುದು, ಇತರ ಇಲಾಖೆಗಳಿಂದ ಶಿಕ್ಷಣ ಇಲಾಖೆಗೆ ನೀಡಿರುವುದು, ಖಾಸಗಿ ಸಂಸ್ಥೆ, ವ್ಯಕ್ತಿಗಳಿಂದ ದಾನ ಪಡೆದಿರುವುದು ಸೇರಿದಂತೆ ಎಲ್ಲ ರೀತಿಯ ಶಾಲೆಗಳ ಆಸ್ತಿಯನ್ನು ನೋಂದಣಿ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ’ ಎಂದು ಅವರು ತಿಳಿಸಿದರು.

‘ಚಿಕ್ಕಪೇಟೆಯಲ್ಲಿ 1945 ರಿಂದ ನಡೆಯುತ್ತಿರುವ ಸರ್ಕಾರಿ ಶಾಲೆಯ ಆಸ್ತಿ ದಾಖಲೆಗಳನ್ನು ಶಿಕ್ಷಣ ಇಲಾಖೆಗೆ ವರ್ಗಾಯಿಸುವಂತೆ ಕಂದಾಯ ಇಲಾಖೆಗೆ ಕೋರಲಾಗಿದೆ. ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಕಂದಾಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ’ ಎಂದೂ ನಾಗೇಶ್ ತಿಳಿಸಿದರು.

‘ಸರ್ಕಾರಿ ಶಾಲೆಗಳ ಆಸ್ತಿ ಸಂರಕ್ಷಣೆಗೆ ವಿಶೇಷ ಕ್ರಮ ವಹಿಸಿದ ಪರಿಣಾಮ ಕೆಲವೇ ತಿಂಗಳುಗಳಲ್ಲಿ ಸುಮಾರು 2,500ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳ ಆಸ್ತಿಗಳು ನೋಂದಣಿ ಆಗಿವೆ’ ಎಂದು ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.

‘ವೈದ್ಯರ ಮೇಲಿನ ಹಲ್ಲೆ ತಡೆಗೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈದ್ಯರಿಗೆ ಭದ್ರತೆ ನೀಡಲು ಹಾಗೂ ಅವರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರ ಬದ್ಧವಾಗಿದೆ. ಅವರ ಮೇಲಿನ ಹಲ್ಲೆ ಪ್ರಕರಣಗಳಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ನಗರದಲ್ಲಿ ಗುರುವಾರ ಹಮ್ಮಿಕೊಂಡ ‘ಯುವ ಸಂವಾದ’ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಕೆಲ ಪ್ರಕರಣಗಳಲ್ಲಿ ರೋಗಿಗಳು ಮೃತಪಟ್ಟಾಗ ವೈದ್ಯರಿಂದ ತಪ್ಪಾ ಗಿದೆ ಎಂದು ಕುಟುಂಬದವರು ಆಲೋಚಿಸುತ್ತಾರೆ. ವಾಸ್ತವದಲ್ಲಿ ಪ್ರತಿ ವೈದ್ಯರೂ ರೋಗಿಯನ್ನು ಬದುಕಿಸಲು ತಮ್ಮ ಶಕ್ತಿಮೀರಿ ಪ್ರಯತ್ನಿಸುತ್ತಾರೆ. ವೈದ್ಯರ ಮೇಲೆ ಹಲ್ಲೆ ನಡೆಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಅವಕಾಶವಿದೆ’ ಎಂದು ಹೇಳಿದರು.

‘2020ನೇ ಸಾಲಿನಲ್ಲಿ ವ್ಯಾಸಂಗ ಮಾಡಿದ ವೈದ್ಯಕೀಯ ವಿದ್ಯಾರ್ಥಿಗಳು ಕೋವಿಡ್ ಸಾಂಕ್ರಾಮಿಕದ ಪರಿಸ್ಥಿತಿಯ ಹೊಸ ಅನುಭವವನ್ನು ಪಡೆದಿದ್ದಾರೆ. ರಾಜ್ಯದಲ್ಲಿ ಹಿಂದೆ 2,300 ಜನರಿಗೆ ಒಬ್ಬ ವೈದ್ಯರಿದ್ದರು. ಈಗ 900 ಜನರಿಗೆ ಒಬ್ಬ ವೈದ್ಯರಿದ್ದಾರೆ. ಆಯುಷ್ ವೈದ್ಯರನ್ನೂ ಸೇರಿಸಿದರೆ ಈ ಸಂಖ್ಯೆ 700ಕ್ಕೆ ಇಳಿಯುತ್ತದೆ. ಒಂದು ವೈದ್ಯಕೀಯ ಕಾಲೇಜು ನಿರ್ಮಾಣಕ್ಕೆ ₹ 750 ಕೋಟಿ ಖರ್ಚಾಗುತ್ತದೆ. ಆದ್ದರಿಂದ ಈ ಹೊರೆ ಕಡಿತ ಮಾಡಲು ಸಾರ್ವಜನಿಕ ಖಾಸಗಿ ಸಹ ಭಾಗಿತ್ವದಲ್ಲಿ (ಪಿಪಿಪಿ) ವೈದ್ಯಕೀಯ ಕಾಲೇಜು ನಿರ್ಮಿಸುವ ಪ್ರಸ್ತಾಪವಿದೆ’ ಎಂದರು.

‘ರಾಜ್ಯದ 9 ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಲ್ಲ. ದಾವಣಗೆರೆ, ಉಡುಪಿ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ ವೈದ್ಯಕೀಯ ಕಾಲೇಜು ಆರಂಭಿಸುವ ಪ್ರಯತ್ನ ನಡೆಯುತ್ತಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಹೇರಳವಾಗಿ ಉದ್ಯೋಗಾವಕಾಶಗಳಿವೆ’ ಎಂದು ಹೇಳಿದರು.

ಬಿಎಂಸಿಆರ್‌ಐ ಡೀನ್ ಡಾ.ಕೆ. ರವಿ ಅವರು ಡಾ.ಕೆ. ಸುಧಾಕರ್ ಅವರನ್ನು ಗೌರವಿಸಿದರು.

ಪ್ರಗತಿ ಸಾಧಿಸಿದ ಏಳು ನವೋದ್ಯಮ

ಬೆಂಗಳೂರು: ಜೀವ ವಿಜ್ಞಾನ ಕ್ಷೇತ್ರದ ‘ಸೆಂಟರ್ ಫಾರ್ ಸೆಲ್ಯುಲಾರ್ ಅಂಡ್ ಮಾಲೆಕ್ಯುಲಾರ್ ಪ್ಲಾಟ್‌ಫಾರ್ಮ್’ (ಸಿ–ಸಿಎಎಂಪಿ) ನೆರವು ನೀಡುತ್ತಿರುವ ಏಳು ನವೋದ್ಯಮಗಳು ಉತ್ತಮ ಪ್ರಗತಿ ಸಾಧಿಸಿವೆ.

ನವೋದ್ಯಮಗಳಾದ ಬಗ್‌ವರ್ಕ್ಸ್, ಸೀ6ಎನರ್ಜಿ, ಸ್ಟ್ರಿಂಗ್ ಬಯೊ, ಐಸ್ಟೆಮ್, ಪಂಡೋರಮ್, ಅಚಿರಾ ಮತ್ತು ಝ್ಯುಮುಟೋರ್‌ಗೆ ಸಿ–ಸಿಎಎಂಪಿ ದಶಕಗಳಿಂದ ಬೆಂಬಲ ನೀಡುತ್ತಿದೆ. 2022ನೇ ಹಣಕಾಸು ವರ್ಷದ ತ್ರೈಮಾಸಿಕದಲ್ಲಿ ಈ ನವೋದ್ಯಮಗಳು ₹550 ಕೋಟಿಗೂ ಹೆಚ್ಚು ಬಂಡವಾಳ ಸಂಗ್ರಹಿಸಿವೆ.

‘ಈ ನವೋದ್ಯಮಗಳ ಯಶಸ್ಸಿನಿಂದ ಜೀವ ವಿಜ್ಞಾನ ಕ್ಷೇತ್ರದಲ್ಲಿ ಉದ್ಯಮಗಳ ಬೆಳವಣಿಗೆಗೆ ಪೂರಕವಾಗಲಿದೆ’ ಎಂದು ಸಿ–ಸಿಎಎಂಪಿ ನಿರ್ದೇಶಕ ಡಾ.ತಸ್ಲಿಮಾರಿಫ್ ಸೈಯದ್ ತಿಳಿಸಿದ್ದಾರೆ.

‘ಈ ನವೋದ್ಯಮಗಳು ಹೊಸ ಬದಲಾವಣೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಸ್ಥಳೀಯ ಮಾತ್ರವಲ್ಲದೇ, ಜಾಗತಿಕ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಶ್ರಮಿಸುತ್ತಿವೆ’ ಎಂದು ವಿವರಿಸಿದ್ದಾರೆ.

ಸಿ–ಸಿಎಎಂಪಿಗೆ ಕೇಂದ್ರ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆ ನೆರವು ನೀಡುತ್ತಿದ್ದು, ಜೀವ ವಿಜ್ಞಾನ ವಲಯದಲ್ಲಿ ಉದ್ಯಮಗಳ ಸ್ಥಾಪನೆಗೆ ಉತ್ತೇಜನ ನೀಡುವ ಕಾರ್ಯಗಳನ್ನು ಕೈಗೊಳ್ಳುತ್ತಿದೆ. ಆರೋಗ್ಯ ಕ್ಷೇತ್ರ, ಕೃಷಿ, ಪರಿಸರಕ್ಕೆ ಸಂಬಂಧಿಸಿದ ಸುಮಾರು 320 ನವೋದ್ಯಮಗಳಿಗೆ ಸಿ–ಸಿಎಎಂಪಿ ನೆರವು ಮತ್ತು ಮಾರ್ಗದರ್ಶನ ನೀಡಿದೆ.

‘ಬಿಜೆಪಿಯಲ್ಲಿ ಕಟ್ಟರ್ ಹಿಂದುತ್ವವಾದಿಗಳ ಸಂಖ್ಯೆ ಕಡಿಮೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರ ವಿಧಾನಸಭೆ ಚುನಾವಣೆಯಲ್ಲಿ ಹಿಂದೂ ಸಂಘಟನೆಗಳ ಹೋರಾಟಗಾರರಿಗೆ 25 ಸ್ಥಾನಗಳನ್ನು ಬಿಜೆಪಿ ಮೀಸಲಿಡಬೇಕು ಎಂದು ಮಠಾಧಿಪತಿಗಳು ಮತ್ತು ಹಿಂದೂ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

‘ಬಿಜೆಪಿಯಲ್ಲಿ ಕಟ್ಟರ್ ಹಿಂದುತ್ವವಾದಿಗಳ ಸಂಖ್ಯೆ ಕಡಿಮೆಯಾಗಿದೆ. ಆದ್ದರಿಂದ ಹಿಂದುತ್ವ ತತ್ವ ಸಿದ್ಧಾಂತ ಪ್ರತಿಪಾದಿಸುವ ಹೊಸ ಮುಖಗಳಿಗೆ ಅವಕಾಶ ನೀಡಬೇಕು’ ಎಂದು ಧಾರವಾಡದ ಸರ್ವತತ್ವ ಸಮನ್ವಯ ಪರಮಾತ್ಮ ಪೀಠದ ಪರಮಾತ್ಮನಂದ ಸ್ವಾಮೀಜಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

‘ಹಿಂದೂ ಸಮುದಾಯದ ಮೇಲೆ ಸತತವಾಗಿ ನಡೆಯುತ್ತಿರುವ ಹಲ್ಲೆ, ಸರಣಿ ಕೊಲೆಗಳಿಂದ ಸಮಾಜ ರೋಸಿಹೋಗಿದೆ. ಹಿಂದೂಗಳಿಗೆ ಅನಾಥ ಪ್ರಜ್ಞೆ ಕಾಡುತ್ತಿದೆ. ಬಿಜೆಪಿಯ ರಾಜ್ಯ ನಾಯಕರಲ್ಲಿ ಒಂದಿಬ್ಬರನ್ನು ಬಿಟ್ಟರೆ ಹಿಂದುತ್ವದ ಪರವಾಗಿ ಯಾರೂ ಧ್ವನಿ ಎತ್ತುತ್ತಿಲ್ಲ’ ಎಂದರು.

‘ಹಿಂದೂ ಕಾರ್ಯಕರ್ತರು ಬೆವರು ಸುರಿಸಿ ಬಿಜೆಪಿ ಕಟ್ಟಿದ್ದಾರೆ. ನಾಲ್ಕು ಹೆಗ್ಗಣಗಳು ಸೇರಿ ಅದಕ್ಕೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ಅದನ್ನು ಸಹಿಸಲಾಗದು’ ಎಂದರು.

‘ಹಿಂದೂಗಳಿಗೆ ನ್ಯಾಯ ಒದಗಿಸಲೆಂದೇ 50ಕ್ಕೂ ಹೆಚ್ಚು ಮಠಾಧೀಶರು ಮತ್ತು ಹಿಂದೂ ಪರ ಸಂಘಟನೆಗಳು ಚರ್ಚಿಸಿ ಈ ಒಕ್ಕೂಟವನ್ನು ರಚಿಸಲಾಗಿದೆ. ಮೀಸಲಾತಿ ನೀಡುವಂತೆ ರಾಜ್ಯ ಮತ್ತು ಕೇಂದ್ರ ಬಿಜೆಪಿ ಮುಖಂಡರಿಗೆ ಮನವಿ ಸಲ್ಲಿಸಿ, ವಿಜಯ ದಶಮಿಯವರೆಗೂ ಕಾದು ನೋಡುತ್ತೇವೆ’ ಎಂದು ಮಠಾಧೀಶರ ಧರ್ಮ ಪರಿಷತ್ ರಾಜ್ಯ ಕಾರ್ಯದರ್ಶಿ ಅಭಿನವ ಹಾಲಸ್ವಾಮೀಜಿ ಮಾಹಿತಿ ನೀಡಿದರು.

ಕಮಿಷನ್: ದಾಖಲೆ ನೀಡಿದರೆ ಕಠಿಣ ಕ್ರಮ–ತುಷಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿಯಲ್ಲಿ ನಿರ್ವಹಿಸಿರುವ ಕಾಮಗಾರಿಗೆ ಬಿಲ್ ಹಣ ಬಿಡುಗಡೆ ಮಾಡುವಾಗ ಯಾರಿಗೆ ಕಮಿಷನ್ ನೀಡಲಾಗಿದೆ ಎಂಬುದರ ದಾಖಲೆ ನೀಡಿದರೆ, ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

‘ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದವರು ಮನವಿ ನೀಡಿದ್ದಾರೆ. ಆದರೆ ಕಮಿಷನ್ ಶೇ 40ರಿಂದ 50ಕ್ಕೆ ಹೆಚ್ಚಾಗುತ್ತಿದೆ ಎಂದಿದ್ದಾರೆ. ಯಾವ ಟೇಬಲ್‌ಗೆ ಎಷ್ಟು ಕಮಿಷನ್ ನೀಡಿದ್ದಾರೆ ಎಂಬುದನ್ನು ಲಿಖಿತವಾಗಿ ನೀಡಿದರೆ ನಾವು ಅವರ ಮೇಲೆ ಕ್ರಮ ಕೈಗೊಳ್ಳಬಹುದು. ಸುಮ್ಮನೆ ಕಮಿಷನ್ ನೀಡಬೇಕು, ಹೆಚ್ಚಾಗುತ್ತದೆ ಎಂದು ಹೇಳಿದರೆ ಆಗುವುದಿಲ್ಲ’ ಎಂದು ಹೇಳಿದರು.

‘ಗುತ್ತಿಗೆದಾರರ ಸಂಘ ನೀಡಿರುವ ಮನವಿಗೂ ಹೊಸ ಆದೇಶಗಳಿಗೂ ಸಂಬಂಧ ಇಲ್ಲ. ಅವರ ಬಿಲ್‌ಗಳು 22 ತಿಂಗಳಷ್ಟು ಹಳೆಯವು. ನಾನು ಈಗ ಮಾಡಿರುವ ಆದೇಶ ಆ.4ರಿಂದ ಜಾರಿಯಲ್ಲಿದೆ. ಅಧಿಕಾರ ವಿಕೇಂದ್ರೀಕರಣ ಮಾಡಲಾಗಿದೆ. ಮೊದಲಿನಂತೆ ಕೇಂದ್ರ ಕಚೇರಿಯಲ್ಲಿ ಬಿಲ್ ಹಣ ಪಾವತಿಯಾಗುವುದಿಲ್ಲ. ವಲಯ ಆಯುಕ್ತರು ಆಯಾ ವ್ಯಾಪ್ತಿಯ ಕಾಮಗಾರಿಗಳ ಬಿಲ್‌ಗಳನ್ನು ಪಾವತಿ ಮಾಡುತ್ತಾರೆ. ಇದಲ್ಲದೆ, ಟಿವಿಸಿಸಿ ಹಾಗೂ ಗುಣಮಟ್ಟ ನಿಯಂತ್ರಣ ಕೋಶಕ್ಕೆ ಸಿಬ್ಬಂದಿ ನೀಡಿ, ಅವರು ಕಾರ್ಯನಿರ್ವಹಿಸುವಂತೆ ಮಾಡಲಾಗಿದೆ ಅಷ್ಟೆ. ಇದರಿಂದ ಟೇಬಲ್‌ಗಳೇನೂ ಹೆಚ್ಚಾಗುವುದಿಲ್ಲ’ ಎಂದರು.

‘ಗುತ್ತಿಗೆದಾರರ ಸಂಘದವರನ್ನು ಸೆಪ್ಟೆಂಬರ್ ಮೊದಲ ವಾರದಲ್ಲಿ ಕರೆದು ಚರ್ಚೆ ಮಾಡಲಾಗುತ್ತದೆ. ಅವರು ಎಷ್ಟು ಕಮಿಷನ್ ನೀಡಿದ್ದಾರೆ, ಯಾವ ಟೇಬಲ್‌ಗೆ ನೀಡಿದ್ದಾರೆ ಎಂಬುದರ ಮಾಹಿತಿ ನೀಡಲಿ. ಆಗ ಯಾರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ನಾವು ನಿರ್ಧರಿಸುತ್ತೇವೆ. ಕಠಿಣ ಕ್ರಮವನ್ನೇ ಕೈಗೊಳ್ಳುತ್ತೇವೆ’ ಎಂದು ತುಷಾರ್ ಗಿರಿನಾಥ್ ಸ್ಪಷ್ಟಪಡಿಸಿದರು.

ಚಿತ್ರಾವಳಿ

ನೆಲಮಂಗಲ ತಾಲ್ಲೂಕಿನ ಯಂಟಗಾನಹಳ್ಳಿ ಸರ್ಕಾರಿ ಶಾಲೆಯ ಕೊಳವೆಬಾವಿಗೆ ಬಿಡಿಸಿಸಿ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಗಂಗಹನುಮಯ್ಯ ಅವರು ಪಂಪ್ ಹಾಗೂ ಮೋಟಾರ್ ಅನ್ನು ಕೊಡುಗೆ ನೀಡಿದರು. ಟಿಎಪಿಸಿಎಂಎಸ್ ನಿರ್ದೇಶಕ ಜಿ.ಸಂಪತ್, ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಎಚ್.ತಿಮ್ಮಯ್ಯ, ಗ್ರಾ.ಪಂ. ಅಧ್ಯಕ್ಷೆ ಲಕ್ಷ್ಮಮ್ಮ ಮುನಿರಾಜು, ಉಪಾಧ್ಯಕ್ಷೆ ಧನಲಕ್ಷ್ಮಿ, ಸದಸ್ಯ ಮಹಾಂತೇಶ್, ಉಮೇಶ್, ಗೀತಾ ಚಿಕ್ಕಣ್ಣಸ್ವಾಮಿ, ಹನುಮೇಗೌಡ ಇದ್ದರು.

ಕೆ.ಆರ್.ಪುರ ಸಮೀಪದ ಬಸವನಪುರ ವಾರ್ಡಿನ ಗಾಯಿತ್ರಿ ಬಡಾವಣೆಯಲ್ಲಿ ಕಾವೇರಿ ನೀರಿನ ಸಮಸ್ಯೆ ಉಂಟಾಗಿದ್ದು, ಜಲಮಂಡಳಿ ಅಧ್ಯಕ್ಷ ಜಯರಾಂ ಸ್ಥಳಕ್ಕೆ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆ ಆಲಿಸಿದರು. ಪಾಲಿಕೆಯ ಮಾಜಿ ಸದಸ್ಯ ಜಯಪ್ರಕಾಶ್ ಇದ್ದರು.

ಸಣ್ಣ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸುವಂತೆ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ನೂತನ ಪದಾಧಿಕಾರಿಗಳು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಮುರುಗೇಶ್ ನಿರಾಣಿ ಅವರಿಗೆ ಮನವಿ ಸಲ್ಲಿಸಿದರು. ಸಂಘದ ಅಧ್ಯಕ್ಷ ಕೆ.ಎನ್. ನರಸಿಂಹ ಮೂರ್ತಿ, ಗೌರವ ಪ್ರಧಾನ ಕಾರ್ಯದರ್ಶಿ ಬಿ. ಪ್ರವೀಣ್, ಗೌರವ ಜಂಟಿ ಕಾರ್ಯದರ್ಶಿಗಳಾದ ಎಸ್. ವೆಂಕಟೇಶನ್, ಭೀಮಾಶಂಕರ್ ಬಿ. ಪಾಟೀಲ, ಗೌರವ ಖಜಾಂಚಿ ಪ್ರಕಾಶ ಇದ್ದಾರೆ.

ರಾಷ್ಟ್ರೀಯ ವಿಚಾರ ಸಂಕಿರಣ ಇಂದಿನಿಂದ

ಬೆಂಗಳೂರು: ದಯಾನಂದ ಸಾಗರ ವಿಶ್ವವಿದ್ಯಾಲಯವು(ಡಿಎಸ್‌ಯು) ಇದೇ 26 ಮತ್ತು 27ರಂದು ‘ಶಾಲಾ ಶಿಕ್ಷಣ ಮರುಕಲ್ಪನೆ’ ವಿಷಯದ ಕುರಿತು ವಿಚಾರ ಸಂಕಿರಣವನ್ನು ಆಯೋಜಿಸಿದೆ.

ಬನಶಂಕರಿಯ ಕುಮಾರಸ್ವಾಮಿ ಬಡಾವಣೆಯ ದಯಾನಂದ ಸಾಗರ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ವಿಚಾರ ಸಂಕಿರಣ ನಡೆಯಲಿದೆ. ಡಿಎಸ್‌ಯು ಕುಲಪತಿ ಡಾ. ಕೆ.ಎನ್.ಬಿ. ಮೂರ್ತಿ ವಿಚಾರ ಸಂಕಿರಣ ಉದ್ಘಾಟಿಸಲಿದ್ದಾರೆ.

ರಾಜ್ಯ ಮಟ್ಟಕ್ಕೆ ಆಯ್ಕೆ

ಬೆಂಗಳೂರು: ಪದವಿ ಪೂರ್ವ ಶಿಕ್ಷಣ ಇಲಾಖೆ ನಡೆಸಿದ ಚೆಸ್ ಪಂದ್ಯಾವಳಿಯಲ್ಲಿ ಅರಬಿಂದೊ ಪಿಯು ಕಾಲೇಜಿನ ಪ್ರಥಮ ಪಿಯು ವಿದ್ಯಾರ್ಥಿ ಆಕಾಶ್ ಎಸ್. ತಗಡೂರು ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟದ ಪಂದ್ಯಾವಳಿಗೆ ಆಯ್ಕೆಯಾಗಿದ್ದಾನೆ.

ಆಕಾಶ್

ದಾಬಸ್‌ಪೇಟೆಯಲ್ಲಿ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಕೃಷ್ಣ–ರುಕ್ಮಿಣಿ ಉತ್ಸವಮೂರ್ತಿ ಮೆರವಣಿಗೆ ನಡೆಯಿತು

ಕೃಷ್ಣ ಜನ್ಮಾಷ್ಟಮಿ ಆಚರಣೆ

ದಾಬಸ್‌ಪೇಟೆ: ಸೋಂಪುರ ಹೋಬಳಿ ಯಾದವ ಸಮುದಾಯದವರಿಂದ ದಾಬಸ್‌ಪೇಟೆ ಪಟ್ಟಣದಲ್ಲಿ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು.

ಉದ್ದಾನೇಶ್ವರ ವೃತ್ತದಲ್ಲಿ ಬೆಳ್ಳಿ-ರಥದಲ್ಲಿ ಕೂರಿಸಿದ್ದ ಕೃಷ್ಣ ರುಕ್ಮಿಣಿ ಉತ್ಸವ ಮೂರ್ತಿಗೆ ಪೂಜೆ ನೆರವೇರಿಸುವ ಮೂಲಕ ಕುಂಭ ಹೊತ್ತ ಮಹಿಳೆಯರು, ಕೃಷ್ಣ–ರಾಧೆಯ ಡ್ರೆಸ್‌ನಲ್ಲಿ ಪುಟಾಣಿ ಮಕ್ಕಳ ನಡುವೆ ಮಂಗಳವಾದ್ಯ, ವೀರಗಾಸೆ ಸಮೇತ ಸಮುದಾಯದ ಮುಖಂಡರೊಂದಿಗೆ ಪಟ್ಟಣದ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಸೋಂಪುರ ಹೋಬಳಿಯ ಕೆಂಗಲ್ ಗೊಲ್ಲರಹಟ್ಟಿಯಲ್ಲಿರುವ ಕೃಷ್ಣ–ರುಕ್ಮಿಣಿ ದೇವಾಲಯವನ್ನು ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಹೂ ಗಳಿಂದ ಅಲಂಕರಿಸಲಾಗಿತ್ತು.

ಮುಖಂಡರಾದ ಗಂಗಣ್ಣ, ಗೋಪಾಲಯ್ಯ, ವೀರಣ್ಣ, ಸಿದ್ದರಾಜು, ಕೃಷ್ಣೇಗೌಡ ಹಾಜರಿದ್ದರು.

ಉಕ್ರೇನ್ ಬಿಕ್ಕಟ್ಟು: ರಷ್ಯಾ ವಿರುದ್ಧ ಭಾರತ ಮತ

ವಾಷಿಂಗ್ಟನ್ (ಪಿಟಿಐ): ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಬುಧವಾರ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರಿಗೆ ವಿಡಿಯೊ ಟೆಲಿ ಕಾನ್ಫರೆನ್ಸ್ ಮೂಲಕ ಭಾಷಣಕ್ಕೆ ಅವಕಾಶ ನೀಡಲು ನಡೆಸಿದ ‘ಔಪಚಾರಿಕ ಮತದಾನ’ದಲ್ಲಿ ಭಾರತ ಇದೇ ಮೊದಲ ಬಾರಿಗೆ ರಷ್ಯಾ ವಿರುದ್ಧ ಮತ ಚಲಾಯಿಸಿತು.

ಝೆಲೆನ್‌ಸ್ಕಿ ಅವರ ವರ್ಚುವಲ್ ಪಾಲ್ಗೊಳ್ಳುವಿಕೆ ಪರ 13 ರಾಷ್ಟ್ರಗಳು ಮತ ಚಲಾಯಿಸಿದವು. ರಷ್ಯಾ ವಿರುದ್ಧ ಮತ ಹಾಕಿತು. ಚೀನಾ ತಟಸ್ಥವಾಗಿ ಉಳಿಯಿತು. 15 ಸದಸ್ಯ ರಾಷ್ಟ್ರಗಳಿರುವ ಭದ್ರತಾ ಮಂಡಳಿಯ ಆಹ್ವಾನದ ಮೇರೆಗೆ ಝೆಲೆನ್‌ಸ್ಕಿ ವಿಡಿಯೊ ಮೂಲಕ ಸಭೆ ಉದ್ದೇಶಿ ಮಾತನಾಡಿದರು.

‘ಜಾಣರಾಗಿರಿ–ದೂರವಿರಿ’ ವಿದ್ಯಾರ್ಥಿಗಳ ಅಭಿಯಾನ

ಬೆಂಗಳೂರು: ತಂಬಾಕು ಬಳಕೆ ಮತ್ತು ಧೂಮಪಾನದಿಂದಾಗುವ ಹಾನಿ ಹಾಗೂ ಕಾನೂನು ಬಗ್ಗೆ ಪ್ರೌಢಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ‘ಜಾಣರಾಗಿರಿ-ದೂರವಿರಿ’ ವಿದ್ಯಾರ್ಥಿ ಸ್ವಯಂಸೇವಾ ಅಭಿಯಾನವನ್ನು ಬಿಬಿಎಂಪಿ ಆರಂಭಿಸಿದೆ.

ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ.ತ್ರಿಲೋಕ್ ಚಂದ್ರ ಮಾತನಾಡಿ, ‘ಶಿಕ್ಷಣ ಸಂಸ್ಥೆಗಳ ಸುತ್ತಮುತ್ತ ಪುನರಾವರ್ತಿತ ಅಪರಾಧಿಗಳನ್ನು ನಿಭಾಯಿಸುವುದು ಅವಶ್ಯವಾಗಿದೆ. ಈ ಅಭಿಯಾನಕ್ಕೆ ಶಾಲಾ ಕಾಲೇಜು ವಿದ್ಯಾರ್ಥಿಗಳು ಸ್ವಯಂಪ್ರೇರಣೆಯಿಂದ https://www.facebook.com/smokefreeblr ಇಲ್ಲಿ ನೋಂದಾಯಿಸಿಕೊಳ್ಳಬಹುದು’ ಎಂದು ಹೇಳಿದರು.

ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್, ತಂಬಾಕು ನಿಯಂತ್ರಣದ ಕಾರ್ಯಕ್ರಮ ಅಧಿಕಾರಿ ಡಾ. ಕುಮಾರ್.ಎಂ.ವಿ, ಯೋಜನಾ ನಿರ್ದೇಶಕಿ ಡಾ. ತ್ರಿವೇಣಿ ಬಿ.ಎಸ್ ಇದ್ದರು.

₹100.50 ಕೋಟಿ ವೆಚ್ಚದಲ್ಲಿ ತರಕಾರಿ ಮಾರುಕಟ್ಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಿಂಗೇನ ಅಗ್ರಹಾರದ ಸಮೀಪ ಗೂಳಿಮಂಗಳ ಗ್ರಾಮದಲ್ಲಿ ₹100.50 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡ ತರಕಾರಿ ಮಾರುಕಟ್ಟೆ ನಿರ್ಮಾಣಕ್ಕೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

‘ಕಲಾಸಿಪಾಳ್ಯ ಮಾರುಕಟ್ಟೆಯನ್ನು ಸ್ಥಳಾಂತರಿಸುವ ಉದ್ದೇಶದಿಂದ ಗೂಳಿ ಮಂಗಳ ಗ್ರಾಮದ ಮಾರುಕಟ್ಟೆ ಸೇರಿ ನಗರದ ನಾಲ್ಕು ಕಡೆಗಳಲ್ಲಿ ಮಾರುಕಟ್ಟೆ ನಿರ್ಮಿಸಲಾಗುವುದು’ ಎಂದು ಹೇಳಿದರು.

ಸಿಂಗೇನ ಅಗ್ರಹಾರ ಹಣ್ಣು ಮಾರುಕಟ್ಟೆಗೆ ಹೊಂದಿಕೊಂಡಂತೆ ಹೊಸ ಮಾರುಕಟ್ಟೆ ನಿರ್ಮಾಣವಾಗಲಿದೆ. ಇದಕ್ಕಾಗಿ 42 ಎಕರೆ 31 ಗುಂಟೆ ವಿಸ್ತೀರ್ಣದಲ್ಲಿ ನಿರ್ಮಿಸಲಾಗುವುದು ಎಂದರು.

ಪಂತರ ಪಾಳ್ಯದಲ್ಲಿ ಆಸ್ಪತ್ರೆ

- ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆ’ಯಡಿ ಬಿಬಿಎಂಪಿ ವ್ಯಾಪ್ತಿಯ ಪಂತರಪಾಳ್ಯದಲ್ಲಿ 150 ಹಾಸಿಗೆ ಸಾಮರ್ಥ್ಯವುಳ್ಳ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆಯ ಎರಡನೇ ಹಂತದ ಕಾಮಗಾರಿಗಳಿಗೆ ₹32 ಕೋಟಿ ಅನುದಾನ ಮಂಜೂರು.
- ಜೆ.ಪಿ.ನಗರದ 2ನೇ ಹಂತದಲ್ಲಿರುವ ತಿರುಮಲ ಶ್ರೀವೆಂಕಟೇಶ್ವರ ದೇವಾಲಯದ ಸಂಸ್ಥೆಗೆ ನೀಡಿರುವ ಬಿಬಿಎಂಪಿಯ 31,215 ಚದರ ಅಡಿ ಜಾಗದ ಗುತ್ತಿಗೆಯನ್ನು 2001 ರ ಏಪ್ರಿಲ್ 1 ರಿಂದ ಅನ್ವಯವಾಗುವಂತೆ 30 ವರ್ಷಗಳ ಅವಧಿಗೆ ನವೀಕರಿಸಲು ಒಪ್ಪಿಗೆ.
- ದೇವನಗೊಂದಿ– ವೈಟ್‌ಫೀಲ್ಡ್ ರೈಲ್ವೆ ನಿಲ್ದಾಣಗಳ ನಡುವಿನ ಕಿ.ಮೀ. 325/400-500 ರಲ್ಲಿ ಬರುವ ರೈಲ್ವೆ ಕ್ರಾಸಿಂಗ್ ಗೇಟ್ ಸಂಖ್ಯೆ 129 ರ ಬದಲಿಗೆ ನಿರ್ಮಿಸಲಾಗುತ್ತಿರುವ ರಸ್ತೆ ಮೇಲ್ಸೇತುವೆ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತ ₹24.27 ಕೋಟಿಗೆ ಆಡಳಿತಾತ್ಮಕ ಅನುಮೋದನೆ.
- ಯಶವಂತಪುರದಲ್ಲಿ ಮೂರು ಎಕರೆ ಜಾಗವನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ಶ್ರೀನಿವಾಸ ಎಜುಕೇಷನ್ ಟ್ರಸ್ಟ್‌ಗೆ ನೀಡಲು ಒಪ್ಪಿಗೆ.

‘ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹ’

ಬೆಂಗಳೂರು: ‘ರಾಜ್ಯ ಬಿಜೆಪಿ ಸರ್ಕಾರ ಎ. ಜೆ. ಸದಾಶಿವ ಆಯೋಗದ ವರದಿ ಅನುಷ್ಠಾನಗೊಳಿಸಲು ವಿಳಂಬ ನೀತಿ ಅನುಸರಿಸುತ್ತಿರುವುದು ಖಂಡನೀಯ’ ಎಂದು ಕರ್ನಾಟಕ ಮಾದಿಗ ದಂಡೋರ ಹೋರಾಟ ಸಮಿತಿ ಆಗ್ರಹಿಸಿದೆ.

‘ಜಲ ಸಂಪನ್ಮೂಲ ಸಚಿವರಾದ ಗೋವಿಂದ ಕಾರಜೋಳ ಕ್ಷೇತ್ರದ ಅಭಿವೃದ್ಧಿಗೆ ಸೀಮಿತವಾಗಿದ್ದಾರೆ. ಸಮುದಾಯದ ಅಭಿವೃದ್ಧಿಗೆ ಗಮನ ನೀಡುತ್ತಿಲ್ಲ. ಕೇಂದ್ರ ಸಚಿವರಾಗಿರುವ ಎ. ನಾರಾಯಣಸ್ವಾಮಿ ಅವರು ಸದಾಶಿವ ಆಯೋಗದ ವರದಿಗೆ ಧ್ವನಿ ಎತ್ತುತ್ತಿಲ್ಲ. ಆದ್ದರಿಂದ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ಸಮುದಾಯದ ಅಭಿವೃದ್ಧಿಗೆ ಕೈ ಜೋಡಿಸಬೇಕು’ ಎಂದು ಪ್ರಚಾರ ಸಮಿತಿ ಅಧ್ಯಕ್ಷ ಬುಳ್ಳಹಳ್ಳಿ ರಾಜಪ್ಪ ಒತ್ತಾಯಿಸಿದರು.

‘ಅ. 2ರೊಳಗೆ ರಾಜ್ಯ ಸರ್ಕಾರ ನ್ಯಾ. ಸದಾಶಿವ ಆಯೋಗದ ವರದಿಯನ್ನು ಅನುಷ್ಠಾನಗೊಳಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು. ಇಲ್ಲದಿದ್ದರೆ ಮುಂಬರುವ ಚುನಾವಣೆಗಳಲ್ಲಿ ಬಿಜೆಪಿಗೆ ಮತ ನೀಡದಿರಲು ಕರೆ ನೀಡಬೇಕಾಗುತ್ತದೆ’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

ಮೈಸೂರು ರೇಸ್

ಸ್ಟಿಲ್ ಐ ರೈಸ್ ಗೆಲ್ಲುವ ನಿರೀಕ್ಷೆ

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೆಮೋರಿಯಲ್ ಮಿಲಿಯನ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಟಿಲ್ ಐ ರೈಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮಿಸ್ ಚೈನಾ 2, ನ್ಯೂಸ್ ಮೇಕರ್ 13, ಭೃಗು 8
2ನೇ ರೇಸ್: ಓರಿಯೆಂಟಲ್ ಲಿಲ್ಲಿ 5, ಕಂಟ್ರೆಸ್ ಮೇಜರ್ 5, ಎವಾಂಡರ್ 7
3ನೇ ರೇಸ್: ಗಿಂಟೋಕಿ 6, ಡಿ ಬ್ರದರ್ 5, ಟ್ರೆಮಂಡಸ್ 1
4ನೇ ರೇಸ್: ಸ್ಟಿಲ್ ಐ ರೈಸ್ 3, ಅಶ್ವ ಮಗಧೀರ 1
5ನೇ ರೇಸ್: ಮೇಬರಿ 1, ಸ್ಮಾರ್ಟ್ ಕ್ಯಾಡಿಲಾಕ್ 2, ಫ್ಲೈಯಿಂಗ್ ಫಾಲ್ಕನ್ 3
6ನೇ ರೇಸ್: ಕ್ಯಾಲಿಫೋರ್ನಿಯಾ ಗೋಲ್ಡ್ 9, ಡಿ ಫೈರ್ 7, ಚೆರೋಕಿ ಮೂನ್ 1

ಉತ್ತಮ ಬೆಟ್: ಮೇಬರಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

'ಸಿದ್ದರಾಮಯ್ಯ ಡ್ರಾಮಾ' ಸಂಪುಟ ಸಭೆಯಲ್ಲಿ ಚರ್ಚೆ?

ಬೆಂಗಳೂರು: 'ಹಿಂದುತ್ವ, ಕೊಡಗು ಚಲೋ ವಿಚಾರದಲ್ಲಿ ಹಿನ್ನಡೆ ಆದ ಬೆನ್ನಲ್ಲೇ ಸಿದ್ದರಾಮಯ್ಯ ಅಂಡ್ ಕಂಪನಿ ಶೇ 40 ಕಮಿಷನ್ ವಿಚಾರವನ್ನು ಮುನ್ನೆಲೆಗೆ ತಂದು ಡ್ರಾಮಾ ಮಾಡ್ತಾ ಇದ್ದಾರೆ. ಇದು ಚುನಾವಣಾ ತಂತ್ರದ ಭಾಗವಾಗಿದ್ದು, ಇದಕ್ಕೆ ಪಕ್ಷ ಮತ್ತು ಸರ್ಕಾರ ತಿರುಗೇಟು ನೀಡಬೇಕು' ಎಂದು ಸಚಿವ ಸಂಪುಟ ಸಭೆಯಲ್ಲಿ ಬಹುತೇಕ ಸಚಿವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಗೊತ್ತಾಗಿದೆ.

'ವರ್ಷದ ಹಿಂದೆಯೇ ಶೇ 40 ಕಮಿಷನ್ ವಿಷಯವನ್ನು ತೇಲಿ ಬಿಡಲಾಯಿತು. ಕೆಂಪಣ್ಣ ಅವರನ್ನು ಇದಕ್ಕೆ ಸಾಧನವನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಸಿದ್ದರಾಮಯ್ಯ ಅವರ ಈ ಪ್ರಯತ್ನಕ್ಕೆ ಅವರ ಪಕ್ಷದಲ್ಲೇ ಒಂದು ವರ್ಗ ಸಾಥ್ ನೀಡುತ್ತಿಲ್ಲ. ಇದು ನಮಗೆ ಅನುಕೂಲಕರ ವಿಚಾರ' ಎಂದು ಕೆಲವರು ಹೇಳಿದರು' ಎಂದು ಮೂಲಗಳು ತಿಳಿಸಿವೆ.

'ಕೆಂಪಣ್ಣ ಅವರ ಹೆಗಲ ಮೇಲೆ ಕೋವಿ ಇಟ್ಟು ಆರೋಪದ ಗುಂಡು ಹಾರಿಸುವ ಕಾಂಗ್ರೆಸ್‌ಗೆ ತಕ್ಕ ಉತ್ತರ ನೀಡಬೇಕು. ಲೋಕಾಯುಕ್ತ ಅಥವಾ ನ್ಯಾಯಾಲಯಕ್ಕೆ ದೂರು ಸಲ್ಲಿಸುವಂತೆ ಒತ್ತಡ ಹೇರಬೇಕು' ಎಂದು ಸಲಹೆಯನ್ನೂ ನೀಡಲಾಗಿದೆ ಎಂದು ಮೂಲಗಳು ಹೇಳಿವೆ.

ಯಾರೀ ಕೆಂಪಣ್ಣ?: ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವ ಜೆ.ಸಿ. ಮಾಧುಸ್ವಾಮಿ, ಸಚಿವ ಸಂಪುಟ ಸಭೆಯಲ್ಲಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಸರ್ಕಾರದ ವಿರುದ್ಧ ಮಾಡಿರುವ ಆರೋಪಗಳ ಬಗ್ಗೆ ವಿಸ್ತೃತವಾಗಿ ಚರ್ಚೆ ನಡೆಯಿತು ಎಂದು ತಿಳಿಸಿದರು.

'ಈ ಕೆಂಪಣ್ಣ ಯಾರ್‍ರೀ? ಅವರು ಎಲ್ಲಿ ಗುತ್ತಿಗೆ ಮಾಡಿದ್ದಾರೆ? ಗುತ್ತಿಗೆ ಮಾಡಿದ್ದಕ್ಕೆ ದಾಖಲೆ ಇದೆಯೇ? 224 ಶಾಸಕರ ವಿರುದ್ಧವೂ ಕಮಿಷನ್ ಪಡೆಯುವ ಆರೋಪ ಮಾಡಿದ್ದಾರೆ. ಇದು ಜನಪ್ರತಿನಿಧಿಗಳಿಗೆ ಮಾಡುವ ಅವಮಾನ ಮಾತ್ರವಲ್ಲ, ಜನರಲ್ಲಿ ಅನಗತ್ಯವಾಗಿ ಅನುಮಾನ ಹುಟ್ಟುವ ಕೆಲಸ ಮಾಡಿದ್ದಾರೆ. ಇವರ ಬಳಿ ದಾಖಲೆಗಳು ಇದ್ದರೆ ನ್ಯಾಯಾಲಯಕ್ಕಾದರೂ ಹೋಗಲಿ, ಲೋಕಾಯುಕ್ತಕ್ಕಾದರೂ ಸಲ್ಲಿಸಲಿ. ಕಡೆ ಪಕ್ಷ ಮಾಧ್ಯಮಗಳಿಗೆ ದಾಖಲೆ ಏಕೆ ಬಿಡುಗಡೆ ಮಾಡಿಲ್ಲ' ಎಂದು ಅವರು ಪ್ರಶ್ನಿಸಿದರು.

'ಸಿದ್ದರಾಮಯ್ಯ ಅವರ ಕಾಲದಲ್ಲೂ ಕಮಿಷನ್ ವ್ಯವಹಾರ ನಡೆದಿತ್ತು ಎಂದೂ ಅವರು ಹೇಳಿದ್ದಾರೆ. ಯಾವುದೇ ನಿಖರ ಮಾಹಿತಿ ಇದ್ದರೆ ಅದನ್ನು ಬಹಿರಂಗಪಡಿಸಲು ಸಮಸ್ಯೆ ಏನು? ಸರಾಸಗಟು ಭ್ರಷ್ಟರು ಎಂದು ತೇಜೋವಧೆ ಮಾಡುವುದು ಸರಿಯಲ್ಲ' ಎಂದು ಮಾಧುಸ್ವಾಮಿ ಕಿಡಿಕಾರಿದರು.

ಸಾಕ್ಷಿ ನೀಡಿ ಮಾತನಾಡಿ: ನಳಿನ್

ಮಂಗಳೂರು: ಬಿಜೆಪಿ ಸಚಿವರ ಮೇಲೆ ಶೇ 40ರಷ್ಟು ಕಮಿಷನ್ ಬಗ್ಗೆ ಆರೋಪ ಮಾಡುವವರು ಸಾಕ್ಷಿ ಒದಗಿಸಿ ಮಾತನಾಡಲಿ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಗುರುವಾರ ಸವಾಲು ಹಾಕಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಕ್ಕಳಿಗೆ ನೀಡುವ ಮೊಟ್ಟೆ ಯೋಜನೆಯಲ್ಲಿ ಕಾಂಗ್ರೆಸ್ಸಿಗರು ಹಣ ಮಾಡಿದ್ದಾರೆ. ಇದನ್ನು ಕಾಂಗ್ರೆಸ್ ಸರ್ಕಾರದಲ್ಲಿ ಸಚಿವೆಯಾಗಿದ್ದ ಜಯಮಾಲಾ ಅವರೇ ಹೇಳಿದ್ದಾರೆ. ಆಡಳಿತಾವಧಿಯಲ್ಲಿ ಶೇ 80ರಷ್ಟು ಕಮಿಷನ್ ಹೊಡೆದ, ನೆರೆ ಪರಿಹಾರ ನಿಧಿಯನ್ನೇ ಲೂಟಿ ಮಾಡಿದ ಕಾಂಗ್ರೆಸ್‌ಗೆ ಬಿಜೆಪಿ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ' ಎಂದರು.

'ಈದ್ಗಾ ಮೈದಾನ ಸರ್ಕಾರದ ಸ್ವತ್ತು. ಸರ್ಕಾರಿ ಜಾಗಗಳಲ್ಲಿ ಎಲ್ಲಿ ಬೇಕಾದರೂ ಗಣೇಶೋತ್ಸವ ಆಚರಿಸಲು ಸಾರ್ವಜನಿಕರಿಗೆ ಅವಕಾಶವಿದೆ. ಗಣೇಶೋತ್ಸವ ಆಚರಣೆಗೆ ಅರ್ಜಿ ಸಲ್ಲಿಸಿದರೆ, ಸರ್ಕಾರ ಅವಕಾಶ ನೀಡುತ್ತದೆ' ಎಂದರು.

ಶೇ 40 ಕಮಿಷನ್: ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ವಿರುದ್ಧ ತಿರುಗಿಬಿದ್ದ ಸಚಿವರ ದಂಡು

ಸಿದ್ದರಾಮಯ್ಯ ಸತ್ಯಹರಿಶ್ಚಂದ್ರರೇ?: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುತ್ತಿಗೆದಾರರ ಸಂಘ ಮಾಡಿರುವ ಶೇ 40 ರಷ್ಟು ಕಮಿಷನ್ ಆರೋಪದ ವಿರುದ್ಧ ಒಗ್ಗಟ್ಟಿನಿಂದ ತಿರುಗಿಬಿದ್ದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಅವರ ಸಂಪುಟ ಸದಸ್ಯರು, 'ತನಿಖಾ ಸಂಸ್ಥೆಗೆ ದೂರು ನೀಡಲಿ' ಎಂದು ಸವಾಲು ಹಾಕಿದ್ದಾರೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಬುಧವಾರ ಭೇಟಿ ಮಾಡಿದ ಬಳಿಕ ಮಾತನಾಡಿದ್ದ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ, 'ಮುಖ್ಯಮಂತ್ರಿ ಸೇರಿದಂತೆ ಎಲ್ಲರೂ ಭ್ರಷ್ಟರು' ಎಂದು ಆರೋಪಿಸಿದ್ದರು.

ಆ ಆರೋಪಕ್ಕೆ ಧ್ವನಿಗೂಡಿಸಿದ್ದ ಸಿದ್ದರಾಮಯ್ಯ, 'ಯಾವುದೇ ಭ್ರಷ್ಟಾಚಾರ ಮಾಡಿಲ್ಲವೆಂದಿರುವ ಸರ್ಕಾರಕ್ಕೆ ನ್ಯಾಯಾಂಗ ತನಿಖೆ ನಡೆಸಲು ಸಮಸ್ಯೆಯೇನು' ಎಂದು ಪ್ರಶ್ನಿಸಿದ್ದರು.

ಗುರುವಾರ ಮಾತನಾಡಿದ ಮುಖ್ಯಮಂತ್ರಿ ಬೊಮ್ಮಾಯಿ, 'ಸಿದ್ದರಾಮಯ್ಯ ಸತ್ಯಹರಿಶ್ಚಂದ್ರರೇ? ಈ ಹಿಂದೆ ಭ್ರಷ್ಟಾಚಾರ ಆಗಿತ್ತು ಎಂದೂ ಅವರು ಹೇಳುತ್ತಾರೆ. ಹಾಗಾದರೆ ಇಷ್ಟು ದಿನ ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು ಇದ್ರಾ' ಎಂದು ಕಿಚಾಯಿಸಿದರು.

'ಕೆಂಪಣ್ಣ ಒಂದು ವರ್ಷದಿಂದ ಆರೋಪ ಮಾಡುತ್ತಲೇ ಬಂದಿದ್ದಾರೆ. ನಿಖರವಾಗಿ ಯಾವುದೇ ಸಚಿವರ ಮೇಲೂ ಆರೋಪ ಮಾಡಿರಲಿಲ್ಲ. ಈಗ ಮುನಿರತ್ನ ವಿರುದ್ಧ ಆರೋಪ ಮಾಡಿದ್ದಾರೆ. ಈ ಆರೋಪ ನಿರ್ದಿಷ್ಟವಾದ ಸಾಕ್ಷ್ಯಾಧಾರಗಳಿಲ್ಲದ ರಾಜಕೀಯ ಪ್ರೇರಿತ ಬೇಜವಾಬ್ದಾರಿ ಹೇಳಿಕೆ' ಎಂದರು.



> 'ಕಾಂಗ್ರೆಸ್ ತಾಳಕ್ಕೆ ತಕ್ಕಂತೆ ಕುಣಿಯುವುದನ್ನು ಕೆಂಪಣ್ಣ ಬಿಡಬೇಕು. ಗುತ್ತಿಗೆದಾರರಿಗೆ ಸಮಸ್ಯೆಗಳಿದ್ದರೆ ಅವರೊಂದಿಗೆ ಚರ್ಚಿಸಲು ಸರ್ಕಾರ ಮುಕ್ತ ಮನಸ್ಸು ಹೊಂದಿದೆ
> **ಬಿ.ಸಿ. ಪಾಟೀಲ,** ಸಚಿವ

ಹುಚ್ಚಾಸ್ಪತ್ರೆಗೆ ಸೇರಿಸಬೇಕು: 'ಕೆಂಪಣ್ಣ ಅವರನ್ನು ಹುಚ್ಚಾಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸುವುದು ಒಳ್ಳೆಯದು' ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಗರಂ ಆದರು.

'ಅವರ ಆರೋಪ ಕಾಂಗ್ರೆಸ್ ಪ್ರಾಯೋಜಿತ ಎನ್ನುವುದು ಸ್ಪಷ್ಟ. ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಎಂದು ಹೇಳುವ ಅವರು ದೂರು ಕೊಡಬೇಕಲ್ಲವೇ. ದಾಖಲೆ ಕೊಟ್ಟರೆ ಕ್ರಮ ಕೈಗೊಳ್ಳುತ್ತೇವೆ' ಎಂದರು.

ಎಲ್ಲವೂ ಸದ್ಯದಲ್ಲೇ ಹೊರಬರಲಿದೆ: 'ಸರ್ಕಾರದ ಮೇಲೆ ಶೇ 40 ರಷ್ಟು ಕಮಿಷನ್ ಆರೋಪದ ಹಿಂದೆ ನಿರ್ದೇಶಕರು, ನಿರ್ಮಾಪಕರು, ಸೂತ್ರಧಾರಿಗಳು ಯಾರ್‍ಯಾರು ಇದ್ದಾರೋ ಎಲ್ಲವೂ ಸದ್ಯದಲ್ಲೇ ಹೊರಬರಲಿದೆ.

ಬಿಬಿಎಂಪಿ, ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವುದರಿಂದ ಸರ್ಕಾರಕ್ಕೆ ಕಪ್ಪುಚುಕ್ಕೆ ತರಬೇಕೆಂಬ ದುರದ್ದೇಶದಿಂದ ಕೆಂಪಣ್ಣ ಆಧಾರರಹಿತ ಆರೋಪಗಳನ್ನು ಮಾಡುತ್ತಿದ್ದಾರೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದರು.

'ಗುತ್ತಿಗೆಯಲ್ಲಿ ಶೇ 40ರಷ್ಟು ಕಮಿಷನ್ ಪಡೆದಿದ್ದರೆ ಅಥವಾ ಸಚಿವರು, ಶಾಸಕರು ಇಂತಿಷ್ಟೇ ಕಮಿಷನ್ ಕೊಡಬೇಕೆಂದು ಬೇಡಿಕೆ ಇಟ್ಟಿದ್ದರೆ ಮುಖ್ಯಮಂತ್ರಿ ಇಲ್ಲವೇ ತನಿಖಾ ಸಂಸ್ಥೆಗೆ ದೂರು ಕೊಡಲಿ. ಅದನ್ನು ಬಿಟ್ಟು ವಿರೋಧ ಪಕ್ಷದ ನಾಯಕರ ಮನೆಯಲ್ಲಿ ಸಭೆ ನಡೆಸಿ, ಸರ್ಕಾರದ ಮೇಲೆ ಭ್ರಷ್ಟಾಚಾರ ಆರೋಪ ಮಾಡುವುದು ಎಷ್ಟು ಸರಿ'ಎಂದರು.

'ಸಿದ್ದರಾಮಯ್ಯ, ಡಿಕೆಶಿಯೂ ಸೇರಿದ್ದಾರೆ'

'ಎಲ್ಲ ಶಾಸಕರು ಭ್ರಷ್ಟರು ಎಂದು ಕೆಂಪಣ್ಣ ಆರೋಪಿಸಿದ್ದಾರೆ. ಅದರಲ್ಲಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಕೂಡ ಇದ್ದಾರೆ ಎಂಬುದು ಸಾಬೀತಾದಂತಾಗಿದೆ' ಎಂದು ಸಚಿವ ಆರ್. ಅಶೋಕ ವ್ಯಂಗ್ಯವಾಡಿದರು.

'ಯಾವ ಸಚಿವರು ಅವರನ್ನು ಬೆದರಿಸುತ್ತಾರೋ ಅವರ ಬಗ್ಗೆಯೂ ಅವರು ಮಾಹಿತಿ ನೀಡಲಿ. ಅದರ ಬದಲು ಗಾಳಿಯಲ್ಲಿ ಗುಂಡು ಹೊಡೆದರೆ ಏನು ಮಾಡಲು ಸಾಧ್ಯ' ಎಂದು ಪ್ರಶ್ನಿಸಿದರು.

'ಬೊಮ್ಮಾಯಿ ಭ್ರಷ್ಟರು, ಆರೆಸ್ಸೆಸ್ ಕೈಗೊಂಬೆ'

'ಬೊಮ್ಮಾಯಿ ಅವರೇ, ನೀವು ಕೇವಲ ಭ್ರಷ್ಟರ ಹಾಗೂ ಸಂಘ ಪರಿವಾರದ ಕೈಗೊಂಬೆ ಮುಖ್ಯಮಂತ್ರಿ ಮಾತ್ರವೇ' ಎಂದು ಕಾಂಗ್ರೆಸ್ ಟೀಕಿಸಿದೆ.

ಸರಣಿ ಟ್ವೀಟ್ ಮಾಡಿರುವ ಕಾಂಗ್ರೆಸ್, 'ನಿಮ್ಮನ್ನೂ ಮೀರಿ ಆಳುತ್ತಿರುವ ಅಜ್ಞಾತ ಸಿಎಂ ಯಾರು' ಎಂದು ಪ್ರಶ್ನಿಸಿದೆ.

'ಅಧಿಕಾರಿಗಳು ನಿಮ್ಮ ಮಾತಿಗೆ ಕವಡೆ ಕಾಸಿನ ಕಿಮ್ಮತ್ತು ಕೊಡುತ್ತಿಲ್ಲ ಎಂದಾದರೆ ಸರ್ಕಾರ ಯಾರ ಹಿಡಿತದಲ್ಲಿದೆ. ಸಚಿವ 'ಮನಿ'ರತ್ನ ವಿರುದ್ಧ ಹಣ ವಸೂಲಿ ಆರೋಪ ಇದೇ ಮೊದಲೇನಲ್ಲ. ತೋಟಗಾರಿಕಾ ಇಲಾಖೆಯಲ್ಲೂ ಹಣ ವಸೂಲಿ ಮಾಡಿದ ಆರೋಪದ ಬಗ್ಗೆ ಪ್ರಧಾನಿಗೆ ಪತ್ರ ಹೋಗಿತ್ತು. ಹಿಂದೆ ಇದೇ ಮುನಿರತ್ನ ವಿರುದ್ಧ ಅಬ್ಬರಿಸಿ ಬೊಬ್ಬಿರಿದಿದ್ದ ಪ್ರಧಾನಿ, ಈಗ ಮೌನವ್ರತ ಪಾಲಿಸುತ್ತಿರುವುದೇಕೆ' ಎಂದೂ ಕುಟುಕಿದೆ.

₹50 ಕೋಟಿ ಮಾನನಷ್ಟ ಮೊಕದ್ದಮೆ ಹೂಡುವೆ: ಮುನಿರತ್ನ

'ಕೆಂಪಣ್ಣ ನನ್ನ ವಿರುದ್ಧ ಮಾಡಿರುವ ಆರೋಪ ಸತ್ಯಕ್ಕೆ ದೂರವಾದದ್ದು. ಗುತ್ತಿಗೆದಾರರ ಸಂಘದ ಎಲ್ಲರ ಮೇಲೆ ನಾನು ಒಟ್ಟು ₹50 ಕೋಟಿಯ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ. ಮಾನಹಾನಿಗೆ ಇರುವ ಶಿಕ್ಷೆ ಆಗಲೇಬೇಕು' ಎಂದು ಸಚಿವ ಮುನಿರತ್ನ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪ್ರಚಾರ ಪಡೆಯಲು ಪ್ರಧಾನಿಗೆ ಪತ್ರ ಬರೆಯುವುದಲ್ಲ. ಕಾನೂನು ಹೋರಾಟ ನಡೆಸಲಿ. ಕೋರ್ಟ್‌ಗೆ ಬಂದು ನನ್ನ ಮೇಲಿನ ಆರೋಪಗಳನ್ನು ದಾಖಲೆಗಳ ಸಮೇತ ಸಾಬೀತುಪಡಿಸಲಿ. ದಾಖಲೆಗಳನ್ನು ಕೊಟ್ಟು ಕಮಿಷನ್ ದಂಧೆಯಲ್ಲಿರುವ ರಾಜಕಾರಣಿಗಳು ಮತ್ತು ಅಧಿಕಾರಿಗಳನ್ನು ಬಯಲಿಗೆಳೆಯಲಿ. ಒಂದು ವಾರದ ಒಳಗೆ ಕೆಂಪಣ್ಣ ದಾಖಲೆಗಳನ್ನು ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಕ್ಷಮಾಪಣೆ ಕೇಳಬೇಕು. ಇಲ್ಲದೇ ಇದ್ದರೆ ಮಾನನಷ್ಟ ಮೊಕದ್ದಮೆ ಮತ್ತು ಕ್ರಿಮಿನಲ್ ಮೊಕದ್ದಮೆ ದಾಖಲಿಸುತ್ತೇನೆ' ಎಂದು ಎಚ್ಚರಿಕೆ ನೀಡಿದರು.

ನಿಧನ ವಾರ್ತೆ

ಸದಾನಂದ ಶೆಟ್ಟಿ

ಮಂಗಳೂರು: ವಿಜಯ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಸದಾನಂದ ಶೆಟ್ಟಿ (85) ಬುಧವಾರ ಫ್ರಾನ್ಸ್‌ನಲ್ಲಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಮಂಗಳೂರಿನ ಕೊಡಿಯಾಲ್‌ಬೈಲ್ ಮೂಲದ ಅವರು, ವಿಜಯ ಬ್ಯಾಂಕ್‌ಗೆ (ಈಗ ಬ್ಯಾಂಕ್ ಆಫ್ ಬರೋಡಾ ಜತೆ ವಿಲೀನವಾಗಿರುವ) 1983ರಿಂದ 1990ರವರೆಗೆ ಅಧ್ಯಕ್ಷರಾಗಿದ್ದರು.

'ಕಮಿಷನ್ ವಿರೋಧಿಸಿ ಒಂದು ವರ್ಷ ಕಾಮಗಾರಿ ನಿಲ್ಲಿಸಿ'

ಬೆಂಗಳೂರು: 'ಪರ್ಸೆಂಟೇಜ್ ಯಾಕೆ ಕೊಡುತ್ತೀರಿ? ಕಮಿಷನ್ ಕೇಳಿದರೆ ಕಾಮಗಾರಿ ಮಾಡುವುದಿಲ್ಲವೆಂದು ಒಂದು ವರ್ಷ ಕೆಲಸ ನಿಲ್ಲಿಸಿ. ಆಗ ತಂತಾನೆ ಎಲ್ಲವೂ ಸರಿಯಾಗುತ್ತದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಗುತ್ತಿಗೆದಾರರಿಗೆ ಕಿವಿಮಾತು ಹೇಳಿದರು.

'ಟೆಂಡರ್‌ನಲ್ಲಿ ಭಾಗವಹಿಸುವುದನ್ನು ಕೈಬಿಟ್ಟು ಸರ್ಕಾರಕ್ಕೆ ಬಿಸಿ ಮುಟ್ಟಿಸಬೇಕು. ಬೀದಿಗಿಳಿದು ದಾಖಲೆಗಳನ್ನು ಜನರಮುಂದಿಡಿ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ದಾಖಲೆ ನೀಡಿದರೆ ತನಿಖೆ ನಡೆಸುವುದಾಗಿ ಸರ್ಕಾರ ಹೇಳುತ್ತಿದೆ. ತನಿಖೆಗೆ ವಹಿಸಿದರೆ ದಾಖಲೆ ಕೊಡುತ್ತೇವೆಂದು ಗುತ್ತಿಗೆದಾರರು ಹೇಳುತ್ತಾರೆ. ಇದರಿಂದ ಪ್ರಯೋಜನವಾಗುವುದಿಲ್ಲ' ಎಂದರು.

4,244 ಅಂಗನವಾಡಿ ಆರಂಭಕ್ಕೆ ಒಪ್ಪಿಗೆ

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 4,244 ಅಂಗನವಾಡಿಗಳನ್ನು ಆರಂಭಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

ಅಂಗನವಾಡಿ, ಪೋಷಣ್ ಅಭಿಯಾನ–2.0 ಅಡಿ ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದ ಅನುದಾನದಲ್ಲಿ ಇವುಗಳನ್ನು ತೆರೆಯಲಾಗುತ್ತಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಪ್ರಮುಖ ತೀರ್ಮಾನಗಳು:

- ಕೊಂಕಣ ರೈಲ್ವೆ ನಿಗಮದ ಅಭಿವೃದ್ಧಿ ಕಾಮಗಾರಿಗಳಿಗಾಗಿ ರಾಜ್ಯ ಸರ್ಕಾರದ ಪಾಲಿನ ಮೊತ್ತವಾದ ₹73.53 ಕೋಟಿ (ಶೇ 15) ಭರಿಸಲು ಅನುಮೋದನೆ.
- ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗವನ್ನು ಕೇಂದ್ರ ನೀತಿ ಆಯೋಗದ ಮಾದರಿಯಲ್ಲಿ ರಚಿಸಿ ಆದೇಶ ಹೊರಡಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ.
- ವಿಜಯಪುರದಲ್ಲಿ ನ್ಯಾಯಾಲಯ ಡೂಪ್ಲೆಕ್ಸ್ ಸಂಕೀರ್ಣ ಕಟ್ಟಡದ ಮೊದಲ ಮಹಡಿಯ ಕಾಮಗಾರಿ ₹12.36 ಕೋಟಿ ಪರಿಷ್ಕೃತ ಅಂದಾಜಿಗೆ ಒಪ್ಪಿಗೆ
- ಉಡುಪಿಯ ಮಲ್ಪೆ ಮೀನುಗಾರಿಕೆ ಬಂದರಿನ 3 ನೇ ಹಂತದ ಅಭಿವೃದ್ಧಿ ಕಾಮಗಾರಿಗಳ ₹49.90 ಕೋಟಿ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ.
- ಸೇಡಂನಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭ್ಯರ್ಥಿಗಳಿಗೆ ಚಾಲನೆ ಮತ್ತು ಮೆಕ್ಯಾನಿಕಲ್ ತರಬೇತಿ ನೀಡುವ ಸಂಸ್ಥೆ ಸ್ಥಾಪನೆಗೆ ಒಪ್ಪಿಗೆ.

4 ವನ್ಯಜೀವಿ ಧಾಮ ಬಫರ್ ಜೋನ್ ವ್ಯಾಪ್ತಿ ಇಳಿಕೆ

ರಾಜ್ಯದ ನಾಲ್ಕು ವನ್ಯಜೀವಿ ಧಾಮಗಳ ಬಫರ್ ಜೋನ್ ವ್ಯಾಪ್ತಿಯನ್ನು ₹ 10 ಕಿ.ಮೀ.ನಿಂದ 1 ಕಿ.ಮೀ ಇಳಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ.

ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಗುಡೇಕೋಟೆ ಕರಡಿಧಾಮ, ಶಿವಮೊಗ್ಗ, ಉತ್ತರ ಕನ್ನಡ ವ್ಯಾಪ್ತಿ ಒಳಗೊಂಡ ಶರಾವತಿ ಕಣಿವೆ ಸಿಂಗಳೀಕ ಅರಣ್ಯ ಪ್ರದೇಶ, ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ಪಶ್ಚಿಮ ಘಟ್ಟದ ಭೀಮಗಡ ವನ್ಯಜೀವಿ ಅಭಯಾರಣ್ಯ ಹಾಗೂ ಗದಗ ಜಿಲ್ಲೆಯ ಪ್ರಮುಖ ಪ್ರವಾಸಿ ತಾಣ, ಖನಿಜ, ನೈಸರ್ಗಿಕ ಸಂಪತ್ತು ಹೊಂದಿರುವ ಕಪ್ಪತಗುಡ್ಡ ಪ್ರದೇಶದ ಬಫರ್ ಜೋನ್ ವ್ಯಾಪ್ತಿಯನ್ನು ಕಡಿಮೆ ಮಾಡಲಾಗಿದೆ.

ಲೋಕಾಯುಕ್ತಕ್ಕೆ ಸಿಬ್ಬಂದಿ ಬಲ

ಲೋಕಾಯುಕ್ತವನ್ನು ಬಲಪಡಿಸಲು ಅಗತ್ಯ ಸಂಖ್ಯೆಯ ಸಿಬ್ಬಂದಿಯನ್ನು ನೀಡಲಾಗುವುದು. ಇದರ ಭಾಗವಾಗಿ ಲೋಕಾಯುಕ್ತ ಲೆಕ್ಕ ಪರಿಶೋಧನೆಗೆ ಏಳು ಸಿಬ್ಬಂದಿಯನ್ನು ಗುತ್ತಿಗೆ ಆಧಾರದಲ್ಲಿ ತೆಗೆದುಕೊಳ್ಳಲು ಸಭೆಯಲ್ಲಿ ಒಪ್ಪಿಗೆ ನೀಡಲಾಯಿತು ಎಂದು ಮಾಧುಸ್ವಾಮಿ ಹೇಳಿದರು.

'ಲೋಕಾಯುಕ್ತ ರದ್ದುಪಡಿಸಿರುವ ಹಿನ್ನೆಲೆಯಲ್ಲಿ ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಹೋಗುವ ಪ್ರಶ್ನೆಯೇ ಇಲ್ಲ. ಹಂತ ಹಂತವಾಗಿ ಲೋಕಾಯುಕ್ತವನ್ನು ಬಲಪಡಿಸಲು ತೀರ್ಮಾನಿಸಿದ್ದೇವೆ. ಲೆಕ್ಕಪತ್ರ ಮತ್ತು ಅಭಿಯೋಜಕರ ನೇಮಿಸಿಕೊಳ್ಳಲು ಕೋರಿಕೆ ಸಲ್ಲಿಸಿದ್ದರು. ಅದಕ್ಕೆ ಒಪ್ಪಿಗೆ ನೀಡಿದ್ದೇವೆ. ಲೋಕಾಯುಕ್ತಕ್ಕೆ ಏನೆಲ್ಲ ಅಗತ್ಯವಿದೆಯೋ ಅದನ್ನು ಕೇಳಿ ಒದಗಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿದ್ದೇವೆ' ಎಂದು ಹೇಳಿದರು.

'ಎಸಿಬಿ ಕುರಿತು ನ್ಯಾಯಾಲಯ ತೀರ್ಪು ನೀಡಿದ ತಕ್ಷಣದಲ್ಲೇ ಎಸಿಬಿ ರದ್ದು ಆಗಿದೆ. ಆ ಬಳಿಕ ಎಸಿಬಿ ವಿರುದ್ಧ ಯಾವುದೇ ದೂರುಗಳು ದಾಖಲಾಗಿಲ್ಲ. ಲೋಕಾಯುಕ್ತ ಸಂಬಂಧ ನಮ್ಮ ಪಕ್ಷದ ಪ್ರಣಾಳಿಕೆಯಂತೆ ನಡೆದುಕೊಳ್ಳುತ್ತೇವೆ. ಈಗಾಗಲೇ ಎಸಿಬಿಯಲ್ಲಿ ಇತ್ಯರ್ಥವಾಗದೇ ಇರುವ ಪ್ರಕರಣಗಳನ್ನು ನ್ಯಾಯಾಲಯದ ಗಮನಕ್ಕೆ ತಂದು ಲೋಕಾಯುಕ್ತಕ್ಕೆ ಹಸ್ತಾಂತರಿಸಲಾಗುವುದು' ಎಂದು ಮಾಧುಸ್ವಾಮಿ ಹೇಳಿದರು.

ಶಿರಾ ಬಳಿ ಸಂಭವಿಸಿದ ಅಪಘಾತ: ದುರಂತದ ಅರಿವಿಲ್ಲದ ಬಾಲಕ

ಕೂಲಿ, ನೆಮ್ಮದಿ ಬದುಕು ಅರಸಿ ಹೊರಟಿದ್ದರು...

ಪ್ರಜಾವಾಣಿ ವಾರ್ತೆ

ಸಿರವಾರ (ರಾಯಚೂರು ಜಿಲ್ಲೆ): ಕೂಲಿ ಅರಸಿ, ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಆ ಎರಡು ಕುಟುಂಬಗಳು ಬೆಂಗಳೂರಿಗೆ ಹೊರಟ್ಟಿದ್ದವು. ಶಿರಾ ತಾಲ್ಲೂಕಿನ ಕಳ್ಳಂಬೆಳ್ಳ ಬಳಿ ನಡೆದ ಅಪಘಾತದಲ್ಲಿ ಕುಟುಂಬದ ಕನಸು ನುಚ್ಚುನೂರಾಯಿತು

ತಾಲ್ಲೂಕಿನ ಕುರುಕುಂದಾ ಗ್ರಾಮದ ಒಂದೇ ಕುಟುಂಬದ ನಾಲ್ವರು ಮತ್ತು ವಡವಟ್ಟಿ ಗ್ರಾಮದ ಒಂದೇ ಕುಟುಂಬದ ಮೂವರು ಮೃತರಲ್ಲಿ ಸೇರಿದ್ದಾರೆ. ಇಬ್ಬರು ವಾಹನ ಚಾಲಕರು ಇದ್ದಾರೆ.

ಕುರುಕುಂದಾ ಗ್ರಾಮದ ಕ್ರೂಸರ್ ವಾಹನ ಚಾಲಕ ಸಿದ್ದಯ್ಯಸ್ವಾಮಿ ವಾರಕ್ಕೆರಡು ಸಲ ಕೂಲಿಕಾರರನ್ನು ಬೆಂಗಳೂರಿಗೆ ಕರೆದೊಯ್ಯುತ್ತಿದ್ದ. ಯಾದಗಿರಿ ಜಿಲ್ಲೆ ಹತ್ತಿಗುಡೂರಿನಿಂದ ಬಂದಿದ್ದ ಅಕ್ಕ ಸುಜಾತಾ, ಭಾವ ಪ್ರಭುಸ್ವಾಮಿ ಮತ್ತು ದಂಪತಿ ಪುತ್ರ ವಿನೋದ್ ಕೂಡಾ ಹೊರಟಿದ್ದರು. ದಂಪತಿ, ಮಗು ಜೊತೆಗೆ ಸಿದ್ದಯ್ಯಸ್ವಾಮಿ ಕೂಡಾ ಮೃತಪಟ್ಟಿದ್ದಾರೆ.

ಒಬ್ಬ ಬಾಲಕ ಸುರಕ್ಷಿತವಾಗಿದ್ದಾನೆ. ಕೂಲಿ ಮಾಡಿ, ಸಾಲ ತೀರಿಸಲು ಕುಟುಂಬ ಸದಸ್ಯರ ಜೊತೆ ಸುಜಾತಾ ಕೂಡಾ ಹೊರಟಿದ್ದರು.

ವಡವಟ್ಟಿ ಗ್ರಾಮದ ಕ್ರೂಸರ್ ವಾಹನ ಚಾಲಕ ಕೃಷ್ಣ, ಅವರ ಅಕ್ಕ ಲಿಂಗಮ್ಮ ಮತ್ತು ಆಕೆಯ ಪುತ್ರಿ ಐಶ್ವರ್ಯಾ ಮೃತಪಟ್ಟಿದ್ದಾರೆ. ನಾಗರಪಂಚಮಿಗೆ ತವರಿಗೆ ಮನೆಗೆ ಬಂದಿದ್ದ ಲಿಂಗಮ್ಮ ಸಹೋದರ ಮತ್ತು ಪುತ್ರಿಯ ಜೊತೆ ಬೆಂಗಳೂರಿಗೆ ಹೊರಟಿದ್ದರು. ನವಲುಕಲ್ಲ ಗ್ರಾಮದ ಆದೆಪ್ಪ ಸಹ ಮೃತಪಟ್ಟಿದ್ದಾರೆ. ಆಪ್ತರನ್ನು ಕಳೆದುಕೊಂಡ ನೋವು ಕುಟುಂಬ ಸದಸ್ಯರಲ್ಲಿ ಮಡುಗಟ್ಟಿದೆ.

ಅಪಘಾತದಲ್ಲಿ ಮೃತಪಟ್ಟ ರಾಯಚೂರು ಜಿಲ್ಲೆಯ ಕುರಕುಂದಾ ಗ್ರಾಮದ ಸಿದ್ದಣ್ಣ ಅವರ ಮನೆ ಮುಂದೆ ಕುಟುಂಬಸ್ಥರ ಆಕ್ರಂದನ

6 ಮಂದಿಯ ನೇತ್ರದಾನ

ಮೃತಪಟ್ಟವರಲ್ಲಿ 6 ಮಂದಿಯ ನೇತ್ರಗಳನ್ನು ದಾನ ಮಾಡಲಾಯಿತು.

ಮೃತರ ಕುಟುಂಬಸ್ಥರು ನೇತ್ರದಾನಕ್ಕೆ ಒಪ್ಪಿಕೊಂಡರು. ಶಿರಾ ಸರ್ಕಾರಿ ಆಸ್ಪತ್ರೆ ವೈದ್ಯರು ಮೃತಪಟ್ಟಿದ್ದ ನಿಂಗಮ್ಮ, ಮೀನಾಕ್ಷಿ, ಕೃಷ್ಣಪ್ಪ, ಸಿದ್ಧಯ್ಯಸ್ವಾಮಿ, ಸುಜಾತಾ, ಪ್ರಭುಸ್ವಾಮಿ ಅವರ ಕಣ್ಣುಗಳನ್ನು ಸಂಗ್ರ ಹಿಸಿದರು.

ಮಲಗಿದ್ದವರು ಚಿರನಿದ್ರೆಗೆ..

ತುಮಕೂರು: ಬೆಳಗಿನ ಜಾವದ ಮಂಪರು ನಿದ್ದೆಯಲ್ಲಿದ್ದವರನ್ನು ಸಾವು ಬರಸೆಳೆದಿದೆ. ತುತ್ತಿನ ಚೀಲ ತುಂಬಿಸಿಕೊಳ್ಳಲು ಮಹಾನಗರದತ್ತ ವಲಸೆ ಹೊರಟವರು ಮಸಣ ಸೇರಿದ್ದಾರೆ.

ಅಪಘಾತದಲ್ಲಿ ಮೃತಪಟ್ಟವರೆಲ್ಲಾ ಕೂಲಿ ಕಾರ್ಮಿಕರು. ಗಾರೆ ಕೆಲಸ, ತೋಟ, ಜಮೀನು, ಪಾರ್ಕ್‌ನಲ್ಲಿ ಕಾವಲು ಕಾಯುವುದು ಸೇರಿದಂತೆ ಚಿಕ್ಕಪುಟ್ಟ ಕೆಲಸ ಮಾಡಿ ಬದುಕು ಕಟ್ಟಿಕೊಳ್ಳಲು ನಗರಗಳತ್ತ ಬರುತ್ತಿದ್ದವರಲ್ಲಿ ಹಲವರ ಉಸಿರು ನಿಂತು ಹೋಗಿದೆ.

ರಾಯಚೂರು ಜಿಲ್ಲೆಯ ಮಾನ್ವಿ, ಸಿರವಾರ, ದೇವದುರ್ಗ ತಾಲ್ಲೂಕಿನ ಪುಟ್ಟ ಹಳ್ಳಿಗಳಿಂದ ಬದುಕಿನ ನೆಲೆ ಅರಸುತ್ತಾ ಬೆಂಗಳೂರು ಮತ್ತು ತುಮಕೂರಿಗೆ ತೆರಳುತ್ತಿದ್ದವರ ಬದುಕು ಮೂರಾಬಟ್ಟೆಯಾಗಿದೆ. ಜೀವನ ಮಾರ್ಗಮಧ್ಯೆಯೇ ಕೊನೆಗೊಂಡಿದೆ.

ಮೃತರಲ್ಲಿ ಇಬ್ಬರು ಮಕ್ಕಳಿದ್ದು, ನಾಲ್ವರು ಮಕ್ಕಳು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಕ್ಷರ ಕಲಿಯಬೇಕಿದ್ದ ಮಕ್ಕಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ, ಇನ್ನಿಬ್ಬರ ಜೀವ ಇಲ್ಲದಂತಾಗಿದೆ. ಒಂದು ಮಗು ತಂದೆ–ತಾಯಿ ಕಳೆದುಕೊಂಡಿದೆ. ಮತ್ತೊಂದು ಮಗುವಿನ ತಂದೆಮೃತಪಟ್ಟಿದ್ದಾರೆ.

ಆಸ್ಪತ್ರೆಯ ಮುಂದೆ ಸೇರಿದ್ದ ಮೃತರ ಸಂಬಂಧಿಗಳ ಆಕ್ರಂದನ ಮುಗಿಲು ಮುಟ್ಟಿತ್ತು. ತನ್ನವರ ಕಳೆದುಕೊಂಡ ದುಃಖದಲ್ಲಿ ದೇವರಿಗೆ ಶಾಪ ಹಾಕಿದರು.

ಸಂದೀಪ್

ಅಪಘಾತದಲ್ಲಿ ತಂದೆ, ತಾಯಿ, ತಮ್ಮನನ್ನು ಕಳೆದುಕೊಂಡ 5 ವರ್ಷದ ಸಂದೀಪ್ ತಬ್ಬಲಿಯಾಗಿದ್ದಾನೆ.

ತಂದೆ–ತಾಯಿ, ಸಹೋದರ ಸ್ಥಳದಲ್ಲೇ ಮೃತಪಟ್ಟಿದ್ದು, ಈತ ಪಾರಾಗಿದ್ದಾನೆ. ಅಪ್ಪ, ಅಮ್ಮನ ಸಾವಿನ ಅರಿವಿಲ್ಲದೆ ಈತ ಕುಳಿತಿದ್ದ ದೃಶ್ಯ ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಕಂಡು ಬಂತು.

ಪರಿಹಾರ ಘೋಷಣೆ

ನವದೆಹಲಿ: ಅಪಘಾತದಲ್ಲಿ ಮೃತಪಟ್ಟವರ ಕುಟುಂಬದವರಿಗೆ ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ ₹ 2 ಲಕ್ಷ ಹಾಗೂ ಗಾಯಗೊಂಡವರಿಗೆ ತಲಾ ₹ 50 ಸಾವಿರ ಪರಿಹಾರ ನೀಡಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ.

ರಾಜ್ಯದಿಂದ ₹5 ಲಕ್ಷ: ತುಮಕೂರು ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಲಾ ₹5 ಲಕ್ಷ ಪರಿಹಾರ ಮತ್ತು ಗಾಯಾಳುಗಳಿಗೆ ಸಂಪೂರ್ಣ ಚಿಕಿತ್ಸಾ ವೆಚ್ಚವನ್ನು ಸರ್ಕಾರದ ವತಿಯಿಂದ ಭರಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eepwdmys21@gmail.com ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಅಲ್ಪಾವದಿ ಟೆಂಡರು ಅಧಿಸೂಚನೆ ಸಂ.09 /2022–23/ ದಿನಾಂಕ: 20.08.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ 10 ಕಾಮಗಾರಿಗಳಿಗೆ KW-4, KW-3, KW-2, ಮತ್ತು KW-1, ನಿಬಂಧನೆ ಮತ್ತು ಷರತ್ತುಗಳನ್ವಯ ಟೆಂಡರ್‌ನ್ನು ಏಕ-ಲಕೋಟೆ ಮತ್ತು ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಅಲ್ಪಾವದಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಗರಿಷ್ಟ ಟೆಂಡರಿಗಿಟ್ಟ ಮೊತ್ತ ರೂ.410.00 ಮತ್ತು ಕನಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ 10.54 ಲಕ್ಷಗಳು ಮತ್ತು ಗರಿಷ್ಟ ಇ.ಎಂ.ಡಿ ಮೊತ್ತ ರೂ.6.15 ಲಕ್ಷಗಳು ಮತ್ತು ಕನಿಷ್ಠ ಇ.ಎಂ.ಡಿ. ಮೊತ್ತ ರೂ.0.26 ಲಕ್ಷಗಳು. ಮೇಲ್ಕಂಡ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (ನೋಂದಾಯಿತ ಎರಡನೆ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಕ್ರಸಂ. 1,2,4,7, ಮತ್ತು 8ರ ಕಾಮಗಾರಿಗಳಿಗೆ , ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಕ್ರಸಂ. 3, 6, ಮತ್ತು 9ರ ಕಾಮಗಾರಿಗಳಿಗೆ ಮತ್ತು ನಾಲ್ಕನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಕ್ರಸಂ. 10 ರ ಕಾಮಗಾರಿಗೆ 25.08.2022 ರಿಂದ 14.09..2022ರ ಸಂಜೆ 4.00 ಘಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ ಪೂರ್ವಭಾವಿ ಸಭೆಯನ್ನು ದಿನಾಂಕ 06.09.2022ರಂದುಬೆಳಿಗ್ಗೆ 11.30 ಘಂಟೆಗೆ ಕ್ರ.ಸಂ.3,5,6, ಮತ್ತು 10 ರ ಕಾಮಗಾರಿಗಳನ್ನು ಹೊರತುಪಡಿಸಿ ಉಳಿಕೆ ಕಾಮಗಾರಿಗಳಿಗೆ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕರೆಯಲಾಗಿದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
ಮೈಸೂರು ವಿಭಾಗ, ಮೈಸೂರು.

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ,
2ನೇ ಮಹಡಿ, ಲೋ.ಇ. ಪೂರಕ ಕಟ್ಟಡ ಕೆ.ಆರ್. ವೃತ್ತ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: 080–22133370 www.kpwd.gov.in,
e-portal: https://eproc.karnataka.gov.in Email: eepwdbngdn@yahoo.com

ತಿದ್ದುಪಡಿ ಪ್ರಕಟಣೆ ಸಂಖ್ಯೆ: 09–01/2022–23 ದಿನಾಂಕ: 23–08–2022

ಉಲ್ಲೇಖ : ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: 09/2022–23 ದಿನಾಂಕ: 23–06–2022

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000 ರನ್ವಯ ಉಲ್ಲೇಖ(1)ರ ಪತ್ರದಲ್ಲಿ ಕರೆಯಲಾಗಿದ್ದ ಟೆಂಡರ್ ಪ್ರಕಟಣೆಗೆ ಈ ಕೆಳಕಂಡಂತೆ ದಿನಾಂಕಗಳ ತಿದ್ದುಪಡಿ ಪ್ರಕಟಣೆ ಹೊರಡಿಸಲಾಗಿದೆ.

ಕ್ರಮ ಸಂಖ್ಯೆ 2 ರಿಂದ 8 ರ ಕಾಮಗಾರಿಗಳಿಗೆ: (1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ **ದಿನಾಂಕ: 23–08–2022** ರಿಂದ. (2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 21–09–2022 ಸಂಜೆ 4:00 ಗಂಟೆಯವರೆಗೆ.** (3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ **ದಿನಾಂಕ: 22–09–2022 ಸಂಜೆ : 4:30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. **ವಿಶೇಷ ಸೂಚನೆ:** ಉಳಿದಂತೆ ಮೂಲ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.
DIPR/CP/RO1927/AAPL/2022-23

ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

"ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ"
(ಕರ್ನಾಟಕ ಸರಕಾರದ ಒಂದು ಉದ್ದಿಮೆ)
ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ ಕೃಭಾಜನಿನಿ,
ಆಬದಂಕಾ ವಿಭಾಗ, ಹುನಗುಂದ ದೂರವಾಣಿ: 08351 261110.
ಸಂ:ಕೃ.ಭಾಜನಿನಿ/ಎಆರ್‌ಬಿಸಿ–ವಿ/ಟಿಎನ್‌ಡಿ/2022–23/1011 ದಿನಾಂಕ:24/08/2022

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣ ಭಾಗ್ಯ ಜಲ ನಿಗಮ ನಿ., ಬೆಂಗಳೂರು/ಆಲಮಟ್ಟಿ ಇವರ ಪರವಾಗಿ, ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಬದಂಕಾ ವಿಭಾಗ, ಹುನಗುಂದ, ಈ ವಿಭಾದಡಿಯ ಅನುಮೋದಿತ ಕಾರ್ಯಕ್ರಮದಡಿಯಲ್ಲಿ ಬರುವ POW ನ ಕಾಮಗಾರಿಯಾದ I.No-22324 ದ ಟೆಂಡರ್ಗಿಟ್ಟ ಮೊತ್ತ –779.39 Lakhs ಕಾಮಗಾರಿಗೆ ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ನೊಂದಾಯಿತ ಕೆಟಗರಿ-II & ಮೇಲ್ಪಟ್ಟು/KPWD-Class-I ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು EMD ಯನ್ನು ಇ–cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದಿನಾಂಕ:30.08.2022 ರಿಂದ 21.09.2022 ರ ಸಂಜೆ 5.00 ಗಂಟೆ ವರೆಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಸದರಿ ಕಾಮಗಾರಿಯ ಪ್ರೀ ಬಿಡ್ ಮೀಟಿಂಗ್ ಮುಖ್ಯ ಇಂಜಿನೀಯರರು, ಕೃಭಾಜನಿನಿ, ಆಣೆಕಟ್ಟು ವಲಯ, ಆಲಮಟ್ಟಿ ಕಚೇರಿಯಲ್ಲಿ ದಿನಾಂಕ:06.09.2022 ಬೆಳಿಗ್ಗೆ 11.45 ಘಂಟೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:23.09.2022 ಬೆಳಿಗ್ಗೆ 11.45 ಘಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ:26.09.2022 ಬೆಳಿಗ್ಗೆ 11.45 ಘಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ www.eprocurement.kar.nic.in website ಮೂಲಕ ಅಥವಾ ಈ ಕೆಳಗಿನ ವಿಭಾಗ ಕಚೇರಿಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–ಕಾರ್ಯಪಾಲಕ ಅಭಿಯಂತರರು
ಕೃಭಾಜನಿನಿ. ಆಬದಂಕಾ ವಿಭಾಗ, ಹುನಗುಂದ.
DIPR/BGK/RO-NO-374/MCA/2022-23

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ದೂರವಾಣಿ ಸಂ:08338/ 273859 ಇ–ಮೇಲ್ : eepwdckd@gmail.com
ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–3/ಟೆಂಡರ್/2022–23/2935 ದಿನಾಂಕ:24/08/2022

ಅವಧಿ ವಿಸ್ತರಣೆ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ–1

ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–3/ಟೆಂಡರ್/2022–23/2744 ದಿನಾಂಕ:10/08/2022 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿನ ಕಾಮಗಾರಿಗಳಿಗೆ ಈ ಕೆಳಗಿನಂತೆ ಅವಧಿ ವಿಸ್ತರಣೆ ಮಾಡಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ಮಾರ್ಪಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:30–08–2022 (ಸಾಯಂಕಾಲ 5.30 ಗಂಟೆಯವರೆಗೆ),2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ :02–09–2022 (ಸಾಯಂಕಾಲ 5.00 ಗಂಟೆಯವರೆಗೆ), 3)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 05–09–2022 (ಸಾಯಂಕಾಲ 4.30 ಗಂಟೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-770/MCA/2022-23

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)
ನಂ–6/13/1, ಕೆ.ಆರ್.ಇ.ಡಿ.ಎಲ್. ಕಚೇರಿ ಕಟ್ಟಡ, 10ನೇ ಬ್ಲಾಕ್,
2ನೇ ಹಂತ, ನಾಗರಭಾವಿ, ಬೆಂಗಳೂರು–560072.
ಸಂ: ಕೆಆರ್‌ಇಡಿಎಲ್/ಇಸಿ&ಇಇ/ಸ್ಮಾರ್ಟ್ ಪೋಲ್ಸ್/ಐಎನ್‌ಡಿ63/ಇಟಿ–01/2022–23 ದಿ: 25.08.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (ಕೆಆರ್‌ಇಡಿಎಲ್), ಕಾರ್ಪೋರೇಟ್ ಕಚೇರಿ, ಬೆಂಗಳೂರು–560072 ಇವರು ಈ ಕೆಳಗೆ ತಿಳಿಸಿರುವ ಕಾಮಗಾರಿಗೆ ಅರ್ಹ ಬಿಡ್‌ದಾರರುಗಳಿಂದ ಸ್ಪರ್ಧಾತ್ಮಕ ಬಿಡ್ಡಿಂಗ್ ಅನ್ವಯ ಟೆಂಡರುಗಳನ್ನು ಆಹ್ವಾನಿಸಿದ್ದಾರೆ. **ಮೂರು ಸ್ಮಾರ್ಟ್ ಪೋಲ್ಸ್** ಜೊತೆಗೆ ಪ್ರೊಟೆಕ್ಷನ್ ಸಿಸ್ಟಮ್ ಮತ್ತು ಅಕ್ಸೆಸರೀಸ್, ಲ್ಯಾನ್ ಸ್ವಿಚ್, ಎಲ್‌ಇಡಿ ಬೀದಿ ದೀಪ, ಸ್ಮಾರ್ಟ್ ಬೀದಿ ದೀಪ ನಿಯಂತ್ರಣ, ಸರ್‌ವಿಲೆನ್ಸ್ ಕ್ಯಾಮರ, ವೈ–ಫೈ ಅಕ್ಸೆಸ್ ಪಾಯಿಂಟ್, ಜಾಹೀರಾತು ಪ್ರದರ್ಶನ ಯೂನಿಟ್, ಪರಿಸರ ಉಸ್ತುವಾರಿ ಸಿಸ್ಟಮ್, ವಿದ್ಯುತ್ ವಾಹನ ಚಾರ್ಜರ್, ಎಮರ್ಜೆನ್ಸಿ ಕಮ್ಯೂನಿಕೇಶನ್, ಬ್ಯಾಟರಿ ಬ್ಯಾಂಕ್ ಹಾಗೂ ಎಲ್ಲಾ ಸಿವಿಲ್ ಕಾಮಗಾರಿಗಳು ಮತ್ತು ಕೇಬ್ಲಿಂಗ್ ಸೇರಿದಂತೆ ಸ್ಥಾಪನೆ, ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಗಾಗಿ ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವ ತಾಂತ್ರಿಕ ವಿವರಣೆಗಳು ಮತ್ತು ನಿಯಮ ಮತ್ತು ನಿಬಂಧನೆಗಳ ಅನುಸಾರ ಒಟ್ಟಾರೆ ಟರ್ನ್‌ಕೀ ಆಧಾರದ ಮೇಲೆ ವಿದ್ಯುನ್ಮಾನ ಬಿಡ್‌ಗಳನ್ನು ಅಂಗೀಕರಿಸಲಾಗುವುದು.

ಟೆಂಡರಿಗೆ ಇಟ್ಟಿರುವ ಮೊತ್ತ ಸುಮಾರು **ರೂ.50.00 ಲಕ್ಷ.**

ಇ–ಪೋರ್ಟಲ್‌ನಲ್ಲಿ ಬಿಡ್ ದಸ್ತಾವೇಜುಗಳು ದೊರೆಯುವ ದಿನಾಂಕ: **25.08.2022 ರಿಂದ 09.09.2022.** ಬಿಡ್ ಸಲ್ಲಿಸುವ ಕಡೆಯ ದಿನಾಂಕ: **09.09.2022 ರಂದು ಸಂಜೆ 5.00 ಗಂಟೆಗೆ.** ತಾಂತ್ರಿಕ–ವಾಣಿಜ್ಯ ಬಿಡ್ ತೆರೆಯುವ ದಿನಾಂಕ: **14.09.2022 ರಂದು ಬೆಳಿಗ್ಗೆ 11.00 ಗಂಟೆಗೆ.** ಟೆಂಡರ್‌ನ ಪೂರ್ಣ ವಿವರಗಳನ್ನು **https://eproc.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಯಾವುದೇ ಇತರೆ ಮಾಹಿತಿಗಾಗಿ ಬಿಡ್‌ದಾರರು ಸಹಾಯವಾಣಿ ಸಂ. 080–46010000/080–68948777 ಸಂಪರ್ಕಿಸಬಹುದು.

ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು (ಇಇ ಮತ್ತು ಇಸಿ), ಕೆಆರ್‌ಇಡಿಎಲ್

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ದೂರವಾಣಿ ಸಂ:08338/ 273859 ಇ–ಮೇಲ್ : eepwdckd@gmail.com
ಕ್ರ.ಸಂ. ಲೋ.ಇ./ಚಿ.ವಿ/ಸ.ಇಂ–3/ಟೆಂಡರ್/2022–23/2915 ದಿನಾಂಕ:22/08/2022

ಅವಧಿ ವಿಸ್ತರಣೆ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ–1

ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–3/ಟೆಂಡರ್/2022–23/2531 ದಿನಾಂಕ:01/08/2022 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿನ ಕಾಮಗಾರಿಗಳಿಗೆ ಈ ಕೆಳಗಿನಂತೆ ಅವಧಿ ವಿಸ್ತರಣೆ ಮಾಡಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ಮಾರ್ಪಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:05–09–2022 ರಂದು (11.00 ಗಂಟೆಗೆ), 2)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:07–09–2022 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:09–09–2022 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):12–09–2022 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-771/MCA/2022-23

ಭೂಕಬಳಿಕೆ: ರೈತ ನಿರಾಳ

ಒಂದನೇ ಪುಟದಿಂದ...

ಉದ್ದೇಶಿತ ತಿದ್ದುಪಡಿಯಿಂದ ರೈತರಿಗೆ ಈ ತೊಂದರೆಯಿಂದ ಮುಕ್ತಿ ದೊರೆಯಲಿದೆ ಎಂದರು.

ರೈತರು ಕೃಷಿ ಮಾಡುವ ಸಂದರ್ಭದಲ್ಲಿ ಗೊತ್ತಿಲ್ಲದೆಯೇ ಒತ್ತುವರಿ ಮಾಡಿದರೆ ಅದನ್ನು ಭೂಕಬಳಿಕೆ ಎಂದು ಈವರೆಗೆ ಪರಿಗಣಿಸಲಾಗುತ್ತಿತ್ತು. ಹೊಸ ತಿದ್ದುಪಡಿಯಿಂದ ಅದನ್ನು ಕಬಳಿಕೆ ಎಂದು ಪರಿಗಣಿಸಲಾಗುವುದಿಲ್ಲ. ಭೂಕಬಳಿಕೆ ಕಾಯ್ದೆಯು ನಗರ ಪ್ರದೇಶಗಳಿಗೆ ಮಾತ್ರ ಅನ್ವಯವಾಗುತ್ತದೆ ಎಂದು ಮಾಧುಸ್ವಾಮಿ ತಿಳಿಸಿದರು.

ಸಾಂದರ್ಭಿಕ ಚಿತ್ರ

‘ಪ್ರಸ್ತಾವಿತ ತಿದ್ದುಪಡಿಯು ಯಾವುದೇ ರೀತಿಯಲ್ಲಿಯೂ ಮೂಲ ಕಾಯ್ದೆಗೆ ವಿರುದ್ಧವಾಗಿಲ್ಲ. ಗ್ರಾಮೀಣ ಪ್ರದೇಶದ ರೈತರ ಹಾಗೂ ಇತರರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸುವುದರಿಂದ ರಕ್ಷಣೆ ದೊರೆಯುತ್ತದೆ. ಸಣ್ಣ ಮತ್ತು ಅತಿಸಣ್ಣ ರೈತರು ಹಾಗೂ ಜನಸಾಮಾನ್ಯರು, ಬಗರ್ ಹುಕುಂ ಸಾಗುವಳಿ ಸಂಬಂಧ, ಬೆಂಗಳೂರಿನಲ್ಲಿ ಸ್ಥಾಪಿತವಾದ ವಿಶೇಷ ನ್ಯಾಯಾಲಯಕ್ಕೆ ಅಲೆಯುವುದು ತಪ್ಪಿಸಿದಂತಾಗಿದೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಪ್ರತಿಕ್ರಿಯಿಸಿದ್ದಾರೆ.

ಮಡಿದ ಯೋಧರ ಕುಟುಂಬಕ್ಕೆ ನೌಕರಿ

ಸೇನಾ ಕರ್ತವ್ಯದಲ್ಲಿದ್ದಾಗ ಪ್ರಾಣತ್ಯಾಗ ಮಾಡಿದ ಯೋಧರ ಕುಟುಂಬದ ಒಬ್ಬ ಸದಸ್ಯರಿಗೆ ಅನುಕಂಪದ ಆಧಾರದಲ್ಲಿ ಸರ್ಕಾರಿ ನೌಕರಿಯನ್ನು ನೀಡಲು ಸರ್ಕಾರ ತೀರ್ಮಾನಿಸಿದೆ. ಆದರೆ ಅಂತಹ ಕುಟುಂಬಗಳಿಗೆ ₹25 ಲಕ್ಷ ಎಕ್ಸ್‌ಗ್ರೇಷಿಯಾ ಕೊಡುವುದಿಲ್ಲ. ನಿವೇಶನ ಅಥವಾ ಭೂಮಿ ನೀಡಬೇಕು ಎಂಬ ಬೇಡಿಕೆ ಇತ್ತು. ಇವೆಲ್ಲವುದರ ಬದಲಿಗೆ ಸರ್ಕಾರಿ ಉದ್ಯೋಗ ನೀಡುವುದೇ ಸೂಕ್ತ ಎಂಬ ತೀರ್ಮಾನಕ್ಕೆ ಬರಲಾಗಿದೆ. ರಾಜ್ಯದಲ್ಲಿ ಇಂತಹ 400 ಕುಟುಂಬಗಳಿದ್ದು, 200 ಮಂದಿ ಅರ್ಹತೆ ಹೊಂದಿದ್ದಾರೆ.

14 ಅಧಿಕಾರಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಕಾಯುತ್ತಿರುವ ಲೋಕಾಯುಕ್ತ ಪೊಲೀಸರು

ಭ್ರಷ್ಟಾಚಾರ: ಆರೋಪಪಟ್ಟಿಗೆ ಸಿಗದ ಅನುಮತಿ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ವಿಶ್ವೇಶ್ವರಯ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕ ಲಕ್ಷ್ಮಣರಾವ್ ಪೇಶ್ವೆ, ನಿವೃತ್ತ ಐಎಎಸ್ ಅಧಿಕಾರಿ ಎಸ್.ಎಂ. ರಾಜು ಸೇರಿದಂತೆ 14 ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ ಪ್ರಸ್ತಾವಗಳು ಹಲವು ವರ್ಷಗಳಿಂದಲೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಬಳಿಯೇ ಉಳಿದಿವೆ.

ಲಂಚ, ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವುದು, ಅಧಿಕಾರ ದುರ್ಬಳಕೆ ಆರೋಪದಡಿ 2004ರಿಂದ 2015ರ ಅವಧಿಯಲ್ಲಿ ಈ ಪ್ರಕರಣಗಳನ್ನು ದಾಖಲಿಸಲಾಗಿತ್ತು. ಆರೋಪಿಗಳ ವಿರುದ್ಧದ ಆರೋಪವನ್ನು ದೃಢಪಡಿಸುವ ಸಾಕ್ಷ್ಯಾಧಾರಗಳು ತನಿಖೆಯಲ್ಲಿ ಲಭಿಸಿರುವುದರಿಂದ ನ್ಯಾಯಾಲಯದಲ್ಲಿ ವಿಚಾರಣೆ ಆರಂಭಿಸಲು ಅನುಮತಿ ನೀಡುವಂತೆ ಕೋರಿ ತನಿಖಾಧಿಕಾರಿಗಳು ಪ್ರಸ್ತಾವ ಸಲ್ಲಿಸಿದ್ದರು.

ಲೋಕಾಯುಕ್ತ ಕಚೇರಿ

ಲಂಚ ಪಡೆಯುವಾಗ ಬಂಧಿತರಾಗಿದ್ದ ಬೆಸ್ಕಾಂ ಅಧಿಕಾರಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಕೆಗೆ ಅನುಮತಿ ಕೋರಿರುವ ಮೂರು ಪ್ರಕರಣಗಳು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ಆಡಳಿತ ಮಂಡಳಿ ಮುಂದೆಯೇ ಉಳಿದಿವೆ. ಕೃಷ್ಣಾ ಭಾಗ್ಯ ಜಲ ನಿಗಮದ ಭೀಮರಾಯನಗುಡಿ ವಲಯದ ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿದ್ದ ಭೀಮಪ್ಪ ಜುಮ್ನಾಳ್ ಮತ್ತು ಇತರರ ವಿರುದ್ಧ 2014ರಲ್ಲಿ ದಾಖಲಿಸಿದ್ದ ಪ್ರಕರಣದಲ್ಲಿ ವಿಚಾರಣೆ ಆರಂಭಿಸಲು ಅನುಮತಿ ಕೋರಿರುವ ಪ್ರಸ್ತಾವ ಜಲ ಸಂಪನ್ಮೂಲ ಇಲಾಖೆ ಕಾರ್ಯದರ್ಶಿ ಮುಂದಿದೆ.

ಲಕ್ಷ್ಮಣರಾವ್ ಪೇಶ್ವೆ 2012ರಲ್ಲಿ ಕರ್ನಾಟಕ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. ಆಗ, ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದ ಮೇಲೆ ಅವರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ನಡೆಸಲಾಗಿತ್ತು. ಅವರ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿರುವ ಪ್ರಸ್ತಾವ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಕಚೇರಿ ತಲುಪಿ ಹಲವು ವರ್ಷಗಳಾದರೂ ಉತ್ತರವೇ ಬಂದಿಲ್ಲ.

ಬಿಹಾರ ಕೇಡರ್‌ನ ಐಎಎಸ್ ಅಧಿಕಾರಿಯಾಗಿದ್ದ ಎಸ್.ಎಂ. ರಾಜು ನಿಯೋಜನೆ ಮೇರೆಗೆ ರಾಜ್ಯದ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ 2004ರಲ್ಲಿ ಲಂಚ ಪ್ರಕರಣದಲ್ಲಿ ಬಂಧಿತರಾಗಿದ್ದರು. ಅವರ ವಿರುದ್ಧ ನ್ಯಾಯಾಲಯದಲ್ಲಿ ವಿಚಾರಣೆ ಆರಂಭಿಸಲು ಅನುಮತಿ ಕೋರಿ ಲೋಕಾಯುಕ್ತ ಪೊಲೀಸರು ಸಲ್ಲಿಸಿದ್ದ ಪ್ರಸ್ತಾವವನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದರು. ಈವರೆಗೂ ಕೇಂದ್ರದ ತೀರ್ಮಾನ ಹೊರಬಿದ್ದಿಲ್ಲ.

ಲೋಕೋಪಯೋಗಿ, ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕೃಷಿ ಇಲಾಖೆಗಳ ಅಧಿಕಾರಿಗಳ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿರುವ ಪ್ರಸ್ತಾವಗಳು ಸಕ್ಷಮ ಪ್ರಾಧಿಕಾರಗಳ ಬಳಿಯೇ ಉಳಿದಿವೆ.

ನೆನಪೋಲೆಗಳಿಗೂ ಪ್ರತಿಕ್ರಿಯೆ ಇಲ್ಲ

ಬಾಕಿ ಇರುವ ಪ್ರಕರಣಗಳಲ್ಲಿ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿರುವ ಪ್ರಸ್ತಾವಗಳನ್ನು ಪರಿಶೀಲಿಸಿ, ತೀರ್ಮಾನ ನೀಡುವಂತೆ ಲೋಕಾಯುಕ್ತರು ಮತ್ತು ಲೋಕಾಯುಕ್ತದ ಪೊಲೀಸ್ ವಿಭಾಗದ ಮುಖ್ಯಸ್ಥರು ಹಲವು ಬಾರಿ ನೆನಪೋಲೆಗಳನ್ನು ಬರೆದಿದ್ದಾರೆ. ಆದರೆ, ಸಕ್ಷಮ ಪ್ರಾಧಿಕಾರಗಳಿಂದ ಈ ಪತ್ರಗಳಿಗೂ ಪ್ರತಿಕ್ರಿಯೆ ದೊರಕಿಲ್ಲ.

‘ಒಟ್ಟು ಒಂಬತ್ತು ಪ್ರಕರಣಗಳಲ್ಲಿ 14 ಅಧಿಕಾರಿಗಳ ವಿರುದ್ಧ ತನಿಖೆ ಮುಕ್ತಾಯವಾಗಿ ವರ್ಷಗಳಾಗಿವೆ. ಸಕ್ಷಮ ಪ್ರಾಧಿಕಾರಗಳಿಂದ ಅನುಮತಿ ಬಾರದೇ ಆರೋಪಪಟ್ಟಿ ಸಲ್ಲಿಸಲು ಸಾಧ್ಯವಿಲ್ಲ. ಆರು ತಿಂಗಳಿನಿಂದ ಈಚೆಗೆ ಯಾವ ಪ್ರಕರಣವನ್ನೂ ಇತ್ಯರ್ಥ ಮಾಡಿಲ್ಲ’ ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ಮಾರ್ಗಸೂಚಿ ಉಲ್ಲಂಘನೆ

ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಅನುಮತಿ ಕೋರಿ ತನಿಖಾಧಿಕಾರಿಗಳು ಸಲ್ಲಿಸುವ ಪ್ರಸ್ತಾವಗಳನ್ನು ಮೂರು ತಿಂಗಳೊಳಗೆ ವಿಲೇವಾರಿ ಮಾಡಬೇಕೆಂಬ ಮಾರ್ಗಸೂಚಿ ಇದೆ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಈ ಕುರಿತು ಸುತ್ತೋಲೆಯನ್ನೂ ಹೊರಡಿಸಿದ್ದರು.

ಈ ಕುರಿತು ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಅವರ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಿದಾಗ ಅವರು ದೂರವಾಣಿ ಕರೆ ಸ್ವೀಕರಿಸಲಿಲ್ಲ.

ಟ್ರಸ್ಟ್‌ಗಳಿಗೆ ಮೃತರ ನೇಮಕ: ಸಚಿವ ವಿಷಾದ

ಪ್ರಜಾವಾಣಿ ವಾರ್ತೆ

ಉಡುಪಿ: ‘ಕನ್ನಡ ಸಂಸ್ಕೃತಿ ಇಲಾಖೆ ವ್ಯಾಪ್ತಿಯ ಟ್ರಸ್ಟ್‌ಗಳ ಪುನಾರಚನೆಯಲ್ಲಿ ಮೃತರ ಹೆಸರೂ ಸೇರಿರುವುದಕ್ಕೆ ವಿಷಾದಿಸುತ್ತೇನೆ’ ಎಂದು ಕನ್ನಡ ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಅವರು ಗುರುವಾರ ಹೇಳಿದರು.

ವಿ.ಸುನಿಲ್ ಕುಮಾರ್

ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿ ದವರು, ‘ಪುನಾರಚನೆಗೆ ಡಿಸೆಂಬರ್‌ನಲ್ಲಿ ಪಟ್ಟಿ ಸಿದ್ಧಪಡಿಸಲಾಗಿತ್ತು. ಈ ವೇಳೆ ಮರಣ ಹೊಂದಿದ ಇಬ್ಬರ ಹೆಸರು ಸೇರಿದೆ. ತಪ್ಪು ಸರಿಪಡಿಸಲು ಆದೇಶ ಹಿಂಪಡೆಯಲಾಗಿದೆ’ ಎಂದರು.

‘ಆ.29ರೊಳಗೆ ಟ್ರಸ್ಟ್‌ಗಳ ಪುನಾರಚನೆಯಾಗಲಿದೆ. ಹೊಸತನ ನೀಡಲು ಹೊಸ ಪ್ರತಿಭೆಗಳಿಗೆ ಅವಕಾಶ ನೀಡಲಾಗಿತ್ತು. ಯಾರಿಗೆ ಟ್ರಸ್ಟ್‌ನಲ್ಲಿ ಇರಲು ಆಸಕ್ತಿ ಇಲ್ಲವೋ ಅವರನ್ನು ಕೈ ಬಿಡಲಾಗುವುದು’ ಎಂದು ಅವರು ಹೇಳಿದರು.

ಕೇಂದ್ರ ಸರ್ಕಾರಕ್ಕೆ ತುರ್ತು ನೋಟಿಸ್ ಜಾರಿ

ರಾಜ್ಯ ಸರ್ಕಾರ 2022ರ ಜುಲೈ 18ರಂದು ಹೊರಡಿಸಿರುವ ಅಧಿಸೂಚನೆ ರದ್ದುಪಡಿಸಲು ಕೋರಿದ್ದ ಮನವಿಯನ್ನು ಮಾನ್ಯ ಮಾಡಿದ ನ್ಯಾಯಾಲಯ

ಜನನ-ಮರಣ ನೋಂದಣಿ ಇತ್ಯರ್ಥ ಅಧಿಸೂಚನೆ: ಹೈಕೋರ್ಟ್ ತಡೆ

ಬೆಂಗಳೂರು: ಜನನ ಮತ್ತು ಮರಣ ನೋಂದಣಿ ಪ್ರಕರಣಗಳ ಇತ್ಯರ್ಥಪಡಿಸುವ ಅಧಿಕಾರವನ್ನು ಕೋರ್ಟ್ ವ್ಯಾಪ್ತಿಯಿಂದ ಸ್ಥಳೀಯ ಉಪವಿಭಾಗಾಧಿಕಾರಿಗೆ ವರ್ಗಾಯಿಸಲು ಸರ್ಕಾರ ತಂದಿರುವ ಕಾನೂನು ತಿದ್ದುಪಡಿಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಅಧಿಸೂಚನೆ ಪ್ರಶ್ನಿಸಿ ಕಲಬುರಗಿ ಜಿಲ್ಲೆಯ ಚಿಂಚೋಳಿ ವಕೀಲರ ಸಂಘದ ಸದಸ್ಯ ಹಾಗೂ ಬೀದರ್ ವಕೀಲರ ಸಂಘದ ಅಧ್ಯಕ್ಷ ಸುದರ್ಶನ ವಿ.ಬಿರಾದಾರ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಪಿ.ಪಿ.ಹೆಗ್ಡೆ, ‘ಅಧಿಸೂಚನೆ ಸಂವಿಧಾನದ ಮೂಲಭೂತ ನ್ಯಾಯದಾನದ ತತ್ವಗಳಿಗೆ ವಿರುದ್ಧವಾಗಿದೆ. ಇದು ಕಾನೂನಾತ್ಮಕವಾಗಿ ನ್ಯಾಯ ಪಡೆಯುವ ಸಾರ್ವಜನಿಕರ ಹಕ್ಕನ್ನು ಕಸಿದುಕೊಂಡಿದೆ. ಅಂತೆಯೇ, ಈ ರೀತಿಯ ತಿದ್ದುಪಡಿ ಅಧಿಕಾರ ಸರ್ಕಾರಕ್ಕೆ ಇಲ್ಲ. ಅರೆನ್ಯಾಯಿಕ ಪ್ರಕ್ರಿಯೆ ನಡೆಸುವ ಉಪವಿಭಾಗಾಧಿಕಾರಿ ಕಚೇರಿಗಳಲ್ಲಿ ಇದು ಗೊಂದಲಕ್ಕೆ ಕಾರಣವಾಗಬಲ್ಲದು. ಹಾಗಾಗಿ, ರಾಜ್ಯ ಸರ್ಕಾರ 2022ರ ಜುಲೈ 18ರಂದು ಹೊರಡಿಸಿರುವ ಅಧಿಸೂಚನೆ ರದ್ದುಪಡಿಸಬೇಕು’ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ಮಧ್ಯಂತರ ಆದೇಶ ನೀಡಿ ಪ್ರತಿವಾದಿಗಳಾದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಮೇಲ್ವಿಚಾರಣೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ಕೇಂದ್ರ ಸರ್ಕಾರಕ್ಕೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಪಂಚಾಯತ್‌ರಾಜ್ ಕಾಯ್ದೆ ತಿದ್ದುಪಡಿಗೆ ಪರಿಷತ್ ಸದಸ್ಯರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರನ್ನು ತೆಗೆದುಹಾಕುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ ತಿದ್ದುಪಡಿಯ ಕರಡಿನಲ್ಲಿರುವ ಅಂಶಗಳಿಗೆ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ಆಯ್ಕೆಯಾದ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಮೂಲ ಕಾಯ್ದೆಯಲ್ಲಿರುವ ಈ ಅಂಶಗಳನ್ನೇ ಉಳಿಸಿಕೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಮನವಿ ಸಲ್ಲಿಸಿದ್ದಾರೆ.

‘ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯ ತನ್ನ ಕರ್ತವ್ಯಗಳನ್ನು ನಿರ್ವಹಿಸುವಾಗ ದುರ್ನಡತೆ ಅಥವಾ ತಲೆತಗ್ಗಿಸುವಂಥ ನಡತೆಯ ತಪ್ಪಿತಸ್ಥನೆಂದು ಸಾಬೀತಾದರೆ ಕ್ರಮ ತೆಗೆದುಕೊಳ್ಳಲು ಕರಡಿನಲ್ಲಿ ಅವಕಾಶ ಕಲ್ಪಿಸಲಾಗಿದೆ. ಆದರೆ, ದುರ್ನಡತೆ ಅಥವಾ ತಲೆತಗ್ಗಿಸುವಂಥ ನಡತೆಗಳು ಯಾವುವು ಎಂಬುದನ್ನು ಸ್ಪಷ್ಟಪಡಿಸದಿರುವುದರಿಂದ ದೂರುದಾರರು, ತನಿಖಾಧಿಕಾರಿಗಳು, ವಿಚಾರಣಾಧಿಕಾರಿಗಳು ತಮಗೆ ತೋಚಿದಂತೆ ಈ ಅಂಶಗಳನ್ನು ವ್ಯಾಖ್ಯಾನಿಸುವ ಸಾಧ್ಯತೆಯಿದೆ. ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರಿಗೆ ತೊಂದರೆ ಕೊಡಲು ಈ ನಿಯಮವನ್ನು ಬಳಸಿಕೊಳ್ಳುವ ಸಾಧ್ಯತೆ ಇದೆ’ ಎಂದು ಮನವಿಯಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ಆಯ್ಕೆಯಾದ ದಿನೇಶ್‌ಗೂಳಿಗೌಡ, ಮಧು ಜಿ. ಮಾದೇಗೌಡ, ಎಸ್ ರವಿ, ಮಂಜುನಾಥ ಭಂಡಾರಿ, ಅನಿಲ್ ಕುಮಾರ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದರು

‘ಕರಡಿನಲ್ಲಿ ವಿಚಾರಣಾಧಿಕಾರಿ ಎಂದರೆ ಸರ್ಕಾರ ನಿರ್ದಿಷ್ಟಪಡಿಸಿದ ಅಧಿಕಾರಿ ಎಂದು ಹೇಳಲಾಗಿದೆ. ಆದರೆ, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುವ ಅಧಿಕಾರ ರಾಜ್ಯ ಚುನಾವಣಾ ಆಯೋಗದ್ದೇ ಹೊರತು ರಾಜ್ಯ ಸರ್ಕಾರಕ್ಕೆ ಇಲ್ಲ ಎಂದು ಈಗಾಗಲೇ ರಾಜ್ಯ ಹೈಕೋರ್ಟ್ ಸ್ಪಷ್ಟಪಡಿಸಿದೆ. ಅಲ್ಲದೆ, ದೂರು ಸ್ವೀಕರಿಸುವ ಅಧಿಕಾರ ಕಾಯ್ದೆಯಲ್ಲಿರುವಂತೆ ರಾಜ್ಯ ಸರ್ಕಾರಕ್ಕೆ ಮಾತ್ರ ಇರಬೇಕು’ ಎಂದೂ ಆಗ್ರಹಿಸಿದ್ದಾರೆ.

‘ಸಂಘಟಿತ ಯತ್ನ ಮುಂದುವರಿಸಿ’

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆ ನಿರ್ಮೂಲನೆ ಮಾಡಲು ನಿಖರ ಮತ್ತು ಯೋಜಿತ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಗಳ ಮೂಲಕ ಸಂಘಟಿತ ಪ್ರಯತ್ನಗಳನ್ನು ಮುಂದುವರಿಸುವಂತೆ ಗೃಹ ಸಚಿವ ಅಮಿತ್ ಶಾ ಗುರುವಾರ ಭದ್ರತಾ ಪಡೆಗಳಿಗೆ ನಿರ್ದೇಶಿಸಿದರು.

ಜಮ್ಮು ಮತ್ತು ಕಾಶ್ಮೀರದ ಭದ್ರತಾ ಪರಿಸ್ಥಿತಿಯ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಉಗ್ರರು, ಪ್ರತ್ಯೇಕತಾವಾದಿಗಳಿಗೆ ನೆರವು ನೀಡುವವರನ್ನು ಮತ್ತು ಬೆಂಬಲಿಸುವವರನ್ನು ಒಳಗೊಂಡಿರುವ ಭಯೋತ್ಪಾದಕ ಪರಿಸರ ವ್ಯವಸ್ಥೆಯನ್ನು ಬುಡಸಹಿತ ಕಿತ್ತುಹಾಕುವ ಅಗತ್ಯವಿದೆ ಎಂದು ಹೇಳಿದರು.

ಭದ್ರತಾ ಪಡೆಗಳು ಮತ್ತು ಪೊಲೀಸರ ಸಹಾಯದಿಂದ ಜಮ್ಮು ಮತ್ತು ಕಾಶ್ಮೀರದ ಜನರು ‘ಪ್ರಾಕ್ಸಿ ಯುದ್ಧ’ವನ್ನು ನಿರ್ಣಾಯಕವಾಗಿ ಸೋಲಿಸುವರು ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಕೆಟ್ಟ ಚಾಳಿ ಬಿಡಿ– ಪ್ರಧಾನಿಗೆ ಸಿದ್ದರಾಮಯ್ಯ ಸಲಹೆ

ಬೆಂಗಳೂರು: ‘ಯಾರದೋ ಶ್ರಮವನ್ನು ತಮ್ಮ ಶ್ರಮ ಎಂದು ಹೇಳಿಕೊಳ್ಳುವ ಕೆಟ್ಟ ಚಾಳಿಯನ್ನು ಬಿಟ್ಟು, ಸ್ವಂತ ಶ್ರಮ ಎಷ್ಟು ಎಂದು ಜನರಿಗೆ ತಿಳಿಸಬೇಕು’ ಎಂದು ಪ್ರಧಾನಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಸೆ. 2ರಂದು ಮಂಗಳೂರಿಗೆ ಬರುವುದು ಖಚಿತವಾಗುತ್ತಿದ್ದಂತೆ ಈ ಹೇಳಿಕೆ ನೀಡಿರುವ ಅವರು, ‘ಮಂಗಳೂರಿಗೆ ಬಂದು ದಯಮಾಡಿ ಸುಳ್ಳು ಹೇಳಬೇಡಿ. ನಿಜ ಏನೆಂದು ಹೇಳಿ ಹೋಗಿ. ನಿಮಗೆ ಹಲವು ಮನವಿ, ಒತ್ತಾಯಗಳನ್ನು ಮಾಡುವುದಿದೆ. ಅದರ ಮೊದಲ ಒತ್ತಾಯ ಇದು’ ಎಂದಿದ್ದಾರೆ.

‘ರಾಜ್ಯದ ನಿರುಪಯೋಗಿ ಸಂಸದರಿಗೆ ಒಂದಿಷ್ಟು ಮಾತನಾಡಲಾದರೂ ಧೈರ್ಯ ನೀಡಿ, ಸಮಸ್ಯೆ ಕೇಳಿ ರಾಜ್ಯದ ಕಷ್ಟ ಏನೆಂದು ತಿಳಿಯುತ್ತದೆ. ಇಲ್ಲದಿದ್ದರೆ ನಗೆಪಾಟಲಿಗೆ ಈಡಾಗುತ್ತೀರಿ. ಸುಳ್ಳುಗಳನ್ನು ಕೇಳಿ ಕೇಳಿ ನಿಮ್ಮ ಜೊತೆಗಿದ್ದ ಶೀಲ ಲಕ್ಷ್ಮಿ ನಿಮ್ಮಿಂದ ದೂರವಾಗಿದ್ದಾಳೆ. ಶೀಲ ಲಕ್ಷ್ಮಿಯನ್ನು ಕಳೆದುಕೊಂಡ ಮನುಷ್ಯರು ಚರಿತ್ರೆಯಲ್ಲಿ ಬುರ್ನಾಸುಗಳಾಗುತ್ತಾರೆ’ ಎಂದಿದ್ದಾರೆ.

‘ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ಜಾರಿಗೆ ತಂದ ನೀರು ಸರಬರಾಜು ಯೋಜನೆಗಳ ಹೆಸರುಗಳನ್ನು ಬದಲಾಯಿಸಿ ‘ಜಲಜೀವನ್ ಮಿಷನ್ ಯೋಜನೆ’ ಎಂದು ಹೆಸರು ಬದಲಾಯಿಸಿದ್ದೀರಿ. ಆದರೆ, ಕೆಲವು ಗ್ರಾಮಗಳಿಗೆ ತೆರಳಿ ನೋಡಿದರೆ, ರಾಜ್ಯ ಸರ್ಕಾರ ಜನರಿಂದ ಬೇಕಾಬಿಟ್ಟಿ ಶುಲ್ಕ ವಸೂಲಿ ಮಾಡಿದ್ದಲ್ಲದೆ ಹೊಸದಾಗಿ ಸಂಪರ್ಕ ಕಲ್ಪಿಸಿದ್ದೇವೆಂದು ಹೇಳಿ ಕೇಂದ್ರ ಸರ್ಕಾರಕ್ಕೆ ಸುಳ್ಳು ಲೆಕ್ಕ ಕೊಟ್ಟಿರುವುದನ್ನು ನೋಡಬಹುದು’ ಎಂದಿದ್ದಾರೆ.

‘ಯಕ್ಷ’ ಕಿರೀಟ ಉಡುಪಿಯ ಅಜ್ಜರಕಾಡು ಜಿಲ್ಲಾ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಉಡುಪಿ ಜಿಲ್ಲೆಯ ರಜತೋತ್ಸವ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರಿಗೆ ಯಕ್ಷಗಾನ ಕಿರೀಟ ತೊಡಿಸಿ ಸನ್ಮಾನಿಸಲಾಯಿತು –ಪ್ರಜಾವಾಣಿ ಚಿತ್ರ

ಅಂಗಾಂಗ ದಾನ: ಇಬ್ಬರ ಜೀವ ಉಳಿಸಿದ 16 ತಿಂಗಳ ಮಗು

ನವದೆಹಲಿ (ಪಿಟಿಐ): ರಿಶಾಂತ್ ಎಂಬ 16 ತಿಂಗಳ ಮಗುವೊಂದು ಅಂಗಾಂಗ ದಾನದ ಮೂಲಕ ಇಬ್ಬರ ಜೀವ ಉಳಿಸಿದೆ!

ಬಿದ್ದು ಗಂಭೀರ ಗಾಯಗೊಂಡಿದ್ದ ಮಗುವನ್ನು ದೆಹಲಿಯ ಏಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಮಗುವಿನ ಮಿದುಳು ನಿಷ್ಕ್ರಿಯಗೊಂಡಿದೆ (ಬ್ರೈನ್ ಡೆಡ್) ಎಂದು ವೈದ್ಯರು ಘೋಷಿಸಿದರು. ಹೀಗಾಗಿ ಆ ಮಗುವಿನ ಅಂಗಾಂಗ ದಾನ ಮಾಡಲಾಗಿದೆ.

ವೈದ್ಯರ ಪ್ರಕಾರ, ಏಮ್ಸ್‌ನಲ್ಲಿ ಈವರೆಗೆ ಅಂಗಾಂಗ ದಾನ ಮಾಡಿದ ಅತಿ ಕಿರಿಯ ದಾನಿಯಾಗಿದ್ದಾನೆ ರಿಶಾಂತ್.

ಮಗುವಿನ ಮೂತ್ರಪಿಂಡ ಮತ್ತು ಯಕೃತ್ ಅನ್ನು ಇಬ್ಬರು ಮಕ್ಕಳಿಗೆ ಕಸಿ ಮಾಡಲಾಗಿದೆ. ಹೃದಯ ಕವಾಟಗಳು ಮತ್ತು ಕಾರ್ನಿಯಾಗಳನ್ನು ಸಂರಕ್ಷಿಸಿ ಇಡಲಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಘಟನೆ ಹಿನ್ನೆಲೆ: ದೆಹಲಿಯ ಖಾಸಗಿ ಗುತ್ತಿಗೆದಾರ ಉಪಿಂದರ್ ಎಂಬುವರ ಮಗು ರಿಶಾಂತ್ ಆಗಸ್ಟ್ 17ರಂದು ಬಿದ್ದು, ತಲೆಗೆ ತೀವ್ರ ಪೆಟ್ಟಾಗಿತ್ತು. ಮಗುವನ್ನು ಜಮುನಾ ಪಾರ್ಕ್ ಪ್ರದೇಶದ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಂದ ಅದೇ ದಿನ ಏಮ್ಸ್‌ನ ಜಯಪ್ರಕಾಶ ನಾರಾಯಣ ಟ್ರಾಮಾ ಸೆಂಟರ್‌ಗೆ ಕಳುಹಿಸಲಾಗಿತ್ತು.

‘ಆ ಮಗು ದಾನ ಮಾಡುವುದಕ್ಕಾಗಿಯೇ ಹುಟ್ಟಿತ್ತೇನೋ. ಎಂಟು ದಿನಗಳ ಕಾಲ ಜೀವನ್ಮರಣ ಸ್ಥಿತಿಯಲ್ಲಿ ಹೋರಾಡಿದ. ಇಡೀ ಮಿದುಳಿಗೆ ಸರಿಪಡಿಸಲಾರದಷ್ಟು ಹಾನಿಯಾಗಿರುವುದು ಸಿಟಿ ಸ್ಕ್ಯಾನ್‌ನಿಂದ ತಿಳಿದುಬಂದಿತ್ತು’ ಎಂದು ಏಮ್ಸ್‌ನ ನ್ಯೂರೋ ಸರ್ಜರಿ ವಿಭಾಗದ ಪ್ರಾಧ್ಯಾಪಕ ದೀಪಕ್ ಗುಪ್ತ ತಿಳಿಸಿದ್ದಾರೆ.

ಮಗುವಿನ ಅಗಲುವಿಕೆಯ ದುಃಖದಲ್ಲಿದ್ದ ಕುಟುಂಬದವರಿಗೆ ವೈದ್ಯರು ಮತ್ತು ಅಂಗಾಂಗ ಸಂರಕ್ಷಣಾ ಬ್ಯಾಂಕಿಂಗ್ ಸಂಘಟನೆ (ಆರ್ಗನ್ ರಿಟ್ರೀವಲ್ ಬ್ಯಾಂಕಿಂಗ್ ಆರ್ಗನೈಸೇಷನ್) ಅಂಗಾಂಗ ದಾನದ ಸಲಹೆ ನೀಡಿತು. ಬಳಿಕ ಕುಟುಂಬದವರು ಒಪ್ಪಿಗೆ ಸೂಚಿಸಿದರು ಎಂದು ವೈದ್ಯರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಹರಿಪ್ರಸಾದ್ ಇತಿಹಾಸ ಓದಲಿ: ಬೊಮ್ಮಾಯಿ ತಿರುಗೇಟು

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ‘ಹರಿಪ್ರಸಾದ್ ಅವರಿಗೆ ಯಾವಾಗಲೂ ಜಿನ್ನಾನೇ ಕನಸಿನಲ್ಲಿ ಕಾಣೋದು. ಹೀಗಾಗಿ ಇನ್ನೊಮ್ಮೆ ಇತಿಹಾಸ ಓದಿ ಅಂತ ಅವರಿಗೆ ಹೇಳಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮಹಮ್ಮದ್ ಅಲಿ ಜಿನ್ನಾ ಮತ್ತು ಸಾವರ್ಕರ್ ಒಂದೇ’ ಎಂಬ ವಿಧಾನಪರಿಷತ್ ವಿರೋಧಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಹೇಳಿಕೆಗೆ ಸಂಬಂಧಿಸಿ ಅವರು ಪ್ರತಿಕ್ರಿಯಿಸಿದರು.

‘ಕಾಂಗ್ರೆಸ್‌ಗೆ ಜಿನ್ನಾ ಮೇಲೆ ಬಹಳ ಪ್ರೀತಿ. ದೇಶವನ್ನೇ ಒಡೆದು ಆಡಳಿತಕ್ಕೆ ಬಂದವರು. ಈ ಬಗ್ಗೆ ವಿಶ್ಲೇಷಿಸುವ ಅವಶ್ಯಕತೆ ಇಲ್ಲ’ ಎಂದು ಹೇಳಿದರು.

ರಾಣಿ ಚನ್ನಮ್ಮ ಯಾತ್ರೆ ಮಾಡಿ: ಎಂ.ಬಿ.ಪಾಟೀಲ

ವಿಜಯಪುರ: ‘ಬಿಜೆಪಿಯವರು ಸಾವರ್ಕರ್ ರಥಯಾತ್ರೆ ಬದಲಿಗೆ ನಾಡಿನ ಸ್ವಾತಂತ್ರ್ಯ ಹೋರಾಟಗಾರರಾದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ, ಕಿತ್ತೂರು ರಾಣಿ ಚನ್ನಮ್ಮ, ಸುರಪುರದ ನಾಯಕರು, ಹಲಗಲಿ ಬೇಡರ ಫೋಟೊದೊಂದಿಗೆ ರಥಯಾತ್ರೆ ಮಾಡಲಿ’ ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಸವಾಲು ಹಾಕಿದರು.

‘ಸಾವರ್ಕರ್ ರಥಯಾತ್ರೆಗೆ ಪರ್ಯಾಯವಾಗಿ ಕಾಂಗ್ರೆಸ್‌ನಿಂದ ಕನ್ನಡ ನಾಡಿನ ಸ್ವಾತಂತ್ರ್ಯ ಹೋರಾಟಗಾರರಿಗೆ ಸೂಕ್ತ ಗೌರವ ನೀಡುವ ಕಾರ್ಯಕ್ರಮ ಶೀಘ್ರ ಆಯೋಜಿಸಲಾಗುವುದು’ ಎಂದು ಸುದ್ದಿಗಾರರಿಗೆ ತಿಳಿಸಿದರು.

ಉತ್ತರ ಪ್ರದೇಶ: ಬಿಜೆಪಿ ಘಟಕದ ಅಧ್ಯಕ್ಷರಾಗಿ ಭೂಪೇಂದ್ರ ಚೌಧರಿ ನೇಮಕ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಸಚಿವ ಭೂಪೇಂದ್ರ ಚೌಧರಿ ಅವರು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಈ ಮೂಲಕ ಪ್ರಭಾವಿ ಜಾಟ್ ಸಮುದಾಯವನ್ನು ಸೆಳೆಯುವ ಉದ್ದೇಶವನ್ನು ಬಿಜೆಪಿ ಹೊಂದಿದೆ ಎನ್ನಲಾಗಿದೆ.

ಮೂರು ಕೃಷಿ ಕಾಯ್ದೆಗಳ ರದ್ಧತಿಗೆ ಆಗ್ರಹಪಡಿಸಿ ನಡೆದ ರೈತರ ಸುದೀರ್ಘ ಪ್ರತಿಭಟನೆಯ ಮುಂಚೂಣಿಯಲ್ಲಿ ಜಾಟ್ ಸಮುದಾಯ ಇತ್ತು. ಈಚೆಗೆ ಯೋಗಿ ಆದಿತ್ಯನಾಥ್ ಸಂಪುಟ ಸೇರಿದ್ದ ಸ್ವತಂತ್ರ ದೇವ್‌ಸಿಂಗ್ ಅವರ ಸ್ಥಾನದಲ್ಲಿ ಚೌಧರಿ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

ಸದ್ಯ, ಹರಿಯಾಣ ಮತ್ತು ರಾಜಸ್ಥಾನದಲ್ಲೂ ಜಾಟ್ ಸಮುದಾಯದವರೇ ಬಿಜೆಪಿ ಘಟಕದ ಅಧ್ಯಕ್ಷರಾಗಿದ್ದಾರೆ. ರಾಜೀವ್ ಭಟ್ಟಾಚಾರ್ಯ ಅವರನ್ನು ತ್ರಿಪುರಾದ ಬಿಜೆಪಿ ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

‘ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣ’

ಬೆಂಗಳೂರು: ‘ನಾಡಿನ ಪ್ರಸಿದ್ಧ ಕಲಾವಿದರ ಸಾಕ್ಷ್ಯಚಿತ್ರ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದೆ’ ಎಂದು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಲಾವಿದರಾದ ಗರ್ತಿಕೆರೆ ರಾಘಣ್ಣ (ರಾಘವೇಂದ್ರ), ಸೋಮನಾಥ ಮರಡೂರು, ಆರ್.ಎನ್. ತ್ಯಾಗರಾಜನ್ ಹಾಗೂ ಆರ್.ಎನ್. ತಾರಾನಾಥನ್ ಅವರ ಜೀವನ ಸಾಧನೆಗಳನ್ನು ಅನಾವರಣ ಮಾಡುವ ಸಾಕ್ಷ್ಯಚಿತ್ರಗಳನ್ನು ನಿರ್ಮಿಸಲಾಗುತ್ತದೆ. ಕಲಾವಿದರ ಸಾಧನೆ ಹಾಗೂ ಸಂಗೀತ ಕ್ಷೇತ್ರಕ್ಕೆ ಅವರ ಕೊಡುಗೆಯನ್ನು ಮುಂದಿನ ಪೀಳಿಗೆಗೆ ಸಾಗಿಸಲು ಈ ಸಾಕ್ಷ್ಯಚಿತ್ರಗಳು ಸಹಕಾರಿಯಾಗಲಿವೆ’ ಎಂದು ಹೇಳಿದರು.

‘ರಾಜ್ಯದ ಪ್ರತಿಭಾನ್ವಿತ ನೃತ್ಯ ಕಲಾವಿದರಿಂದ ಸೆ.16 ಮತ್ತು 17ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ ‘ನಾಟ್ಯ ನವೋದಯ ನೃತ್ಯ ಸಂಯೋಜನಾ ಉತ್ಸವ’ ಹಮ್ಮಿಕೊಳ್ಳಲಾಗಿದೆ. ಸಂಗೀತ, ನೃತ್ಯ ಕ್ಷೇತ್ರದಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸಂದರ್ಶನ ನಡೆಸಿ, 100 ಮಂದಿಗೆ ತಲಾ ₹ 10 ಸಾವಿರ ಶಿಷ್ಯವೇತನವನ್ನು ನೀಡಲಾಗುವುದು’ ಎಂದರು.

‘ಸೆ.21ರಿಂದ 23ರವರೆಗೆ ಮಂಗಳೂರಿನಲ್ಲಿ ನೃತ್ಯ ಕಲಾವಿದರಾದ ರಾಜೇಂದ್ರ ಹಾಗೂ ನಿರುಪಮಾ ರಾಜೇಂದ್ರ ನೇತೃತ್ವದಲ್ಲಿ ಕಥಕ್ ನೃತ್ಯ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ’ ಎಂದು ಮಾಹಿತಿ ನೀಡಿದರು.

ಭಯೋತ್ಪಾದನೆ ಪ್ರಕರಣ: ಇಮ್ರಾನ್ ಖಾನ್‌ಗೆ ಮಧ್ಯಂತರ ಜಾಮೀನು

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್‌ಗೆ ಇಲ್ಲಿನ ಭಯೋತ್ಪಾದನೆ ನಿಗ್ರಹ ನ್ಯಾಯಾಲಯವು ಸೆಪ್ಟೆಂಬರ್ 1ರವರೆಗೂ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಪಾಕಿಸ್ತಾನ ತೆಹ್ರೀಕ್–ಎ–ಇನ್ಸಾಫ್ (ಪಿಟಿಐ) ಪಕ್ಷದ ಮುಖ್ಯಸ್ಥರೂ ಆಗಿರುವ ಇಮ್ರಾನ್ ಅವರು ಹೋದ ವಾರ ನಡೆದಿದ್ದ ರ್‍ಯಾಲಿ ವೇಳೆ ಪೊಲೀಸ್, ನ್ಯಾಯಾಂಗ ಮತ್ತು ಸರ್ಕಾರದ ಇತರ ಸಂಸ್ಥೆಗಳಿಗೆ ಬೆದರಿಕೆಯೊಡ್ಡಿದ್ದ ಆರೋಪ ಎದುರಿಸುತ್ತಿದ್ದಾರೆ. ಹೀಗಾಗಿ ಅವರ ವಿರುದ್ಧ ಭಯೋತ್ಪಾದನೆ ಪ್ರಕರಣ ದಾಖಲಿಸಲಾಗಿತ್ತು.

ಪೊಲೀಸರು ಪ್ರತೀಕಾರ ತೀರಿಸಿಕೊಳ್ಳುವ ಉದ್ದೇಶದಿಂದ ತಮ್ಮ ವಿರುದ್ಧ ಭಯೋತ್ಪಾದನೆ ಪ್ರಕರಣ ದಾಖಲಿಸಿದ್ದಾರೆ. ಈ ಪ್ರಕರಣದಲ್ಲಿ ತಮಗೆ ಜಾಮೀನು ನೀಡಬೇಕು ಎಂದು ಇಮ್ರಾನ್ ಅವರು ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ನ್ಯಾಯಮೂರ್ತಿ ರಾಜಾ ಜವಾದ್ ಅಬ್ಬಾಸ್ ಹಸನ್ ಅವರು 1 ಲಕ್ಷ ರೂಪಾಯಿ ಭದ್ರತೆ ಮೇಲೆ ಜಾಮೀನು ಮಂಜೂರು ಮಾಡಿದ್ದಾರೆ.

ಅಬೆ ಹತ್ಯೆ: ಜಪಾನ್ ಪೊಲೀಸ್ ಮುಖ್ಯಸ್ಥ ರಾಜೀನಾಮೆ

ಟೋಕಿಯೊ (ಎಪಿ): ಜಪಾನ್‌ನ ಮಾಜಿ ಪ್ರಧಾನಿ ಶಿಂಜೊ ಅಬೆ ಅವರು ಪ್ರಚಾರ ಭಾಷಣದ ವೇಳೆ ಗುಂಡೇಟಿಗೆ ಬಲಿಯಾಗಲು ಕಾರಣವಾಗಿರುವ ಭದ್ರತಾ ಲೋಪದ ಹೊಣೆ ಹೊತ್ತು ರಾಜೀನಾಮೆ ನೀಡುವುದಾಗಿ ಪೊಲೀಸ್ ಮುಖ್ಯಸ್ಥ ಇತಾರು ನಕಮುರಾ ಗುರುವಾರ ಹೇಳಿದ್ದಾರೆ.

ಶಿಂಜೊ ಅವರಿಗೆ ನೀಡಿದ್ದ ಭದ್ರತೆಯಲ್ಲಿನ ನ್ಯೂನತೆಗಳನ್ನು ಉಲ್ಲೇಖಿಸಿ ಪೊಲೀಸ್ ಇಲಾಖೆಯು ವರದಿ ಬಿಡುಗಡೆ ಮಾಡಿದ ಬಳಿಕ ಇತಾರು ಅವರು ಈ ತೀರ್ಮಾನ ಪ್ರಕಟಿಸಿದ್ದಾರೆ.

‘ಮಾಜಿ ಪ್ರಧಾನಿ ಅವರ ಹತ್ಯೆಯನ್ನು ಗಂಭೀರವಾಗಿ ಪರಿಗಣಿಸಿ ರಾಜೀನಾಮೆ ಸಲ್ಲಿಸಿದ್ದೇನೆ. ಗಣ್ಯರಿಗೆ ನೀಡುವ ಭದ್ರತಾ ವ್ಯವಸ್ಥೆಯನ್ನು ಮರುಪರಿಶೀಲಿಸಬೇಕು ಮತ್ತು ಇಂತಹ ಘಟನೆಗಳು ಮರುಕಳಿಸಬಾರದು’ ಎಂದು ಅವರು ತಿಳಿಸಿದ್ದಾರೆ.

ನಿರ್ದೇಶಕ ಸಾವನ್ ಕುಮಾರ್ ಟಾಕ್ ನಿಧನ

ಮುಂಬೈ (ಪಿಟಿಐ): ಹಿಂದಿ ಚಲನಚಿತ್ರ ರಂಗದ ನಿರ್ದೇಶಕ ಸಾವನ್ ಕುಮಾರ್ ಟಾಕ್ ಅವರು, ಗುರುವಾರ ಇಲ್ಲಿನ ಕೋಕಿಲಾಬೆನ್ ಧೀರೂಭಾಯ್ ಅಂಬಾನಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ಸಾವನ್ ಅವರ ಸೋದರಳಿಯ ನವೀನ್ ತಿಳಿಸಿದ್ದಾರೆ.

ಬುಧವಾರ ಆರೋಗ್ಯ ಹದಗೆಟ್ಟಿದ್ದರಿಂದ ಸಾವನ್ ಅವರನ್ನು ಆಸ್ಪತ್ರೆಗೆ ಕರೆತರಲಾಗಿತ್ತು. ಶ್ವಾಸಕೋಶ ಸೋಂಕು ಹಾಗೂ ಉಸಿರಾಟ ಸಂಬಂಧಿತ ಸಮಸ್ಯೆಗಳಿಗೆ ಚಿಕಿತ್ಸೆಯನ್ನೂ ನೀಡಲಾಗಿತ್ತು.

‘ಸಾವನ್ ಅವರು ಗುರುವಾರ ಮುಂಜಾನೆ 4:15ಕ್ಕೆ ಹೃದಯಾಘಾತದಿಂದ ಮೃತಪಟ್ಟಿದ್ದಾರೆ’ ಎಂದು ನವೀನ್ ಮಾಹಿತಿ ನೀಡಿದ್ದಾರೆ.

1972ರಲ್ಲಿ ‘ಗೋಮ್ತಿ ಕೆ ಕಿನಾರೆ’ ಚಿತ್ರದ ಮೂಲಕ ನಿರ್ದೇಶನಕ್ಕೆ ಕಾಲಿಟ್ಟ ಸಾವನ್ ಅವರು, ‘ಸೌತೇನ್ (1983)’, ‘ಸನಮ್ ಬೇವಫಾ (1991)’, ‘ಚಾಂದ್ ಕಾ ತುಕಡಾ (1994)’, ‘ಸಾವನ್... ದಿ ಲವ್ ಸೀಸನ್ (2003)’ ಸೇರಿ ಹಲವು ಚಿತ್ರಗಳನ್ನು ನಿರ್ದೇಶಿಸಿದ್ದಾರೆ.

ಸಾವನ್ ಅವರು ಚಿತ್ರ ಸಾಹಿತಿಯೂ ಆಗಿದ್ದರು. ‘ಪ್ಯಾರ್ ಕಿ ಕಶ್ತಿ ಮೆ’, ‘ಜಾನೇಮನ್ ಜಾನೇಮನ್’ ಹಾಗೂ ‘ಚಾಂದ್ ಸಿತಾರೆ’ (ಕಹೊ ನಾ ಪ್ಯಾರ್ ಹೈ ಚಿತ್ರದ) ಹಾಡುಗಳನ್ನೂ ಬರೆದಿದ್ದಾರೆ.

ಟ್ರಸ್ಟ್‌ಗಳಿಗೆ ನೇಮಕ ಆದೇಶ ವಾಪಸ್!

ಒಂದನೇ ಪುಟದಿಂದ...

ನೇಮಕಾತಿ ಪಟ್ಟಿ ಹೊರಬೀಳುತ್ತಿದ್ದಂತೆ, ಹಾವೇರಿಯ ‘ಗಳಗನಾಥ ಹಾಗೂ ನಾ.ಶ್ರೀ. ರಾಜಪುರೋಹಿತ ಟ್ರಸ್ಟ್’ಗೆ ಅಧ್ಯಕ್ಷರಾಗಿ ನೇಮಕಗೊಂಡಿದ್ದ ಚಕ್ರವರ್ತಿ ಸೂಲಿಬೆಲೆ ಹುದ್ದೆ ಒಪ್ಪಿಕೊಳ್ಳಲು ಹಿಂದೇಟು ಹಾಕಿದ್ದರು.

ಚಿಕ್ಕಮಗಳೂರಿನ ‘ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ’ಕ್ಕೆ ಅಧ್ಯಕ್ಷರಾಗಿ ನೇಮಕಗೊಂಡಿರುವ ನರೇಂದ್ರ ರೈ ದೇರ್ಲ ಕೂಡಾ ವೈಯಕ್ತಿಕ ಕಾರಣ ನೀಡಿ ಆ ಸ್ಥಾನವನ್ನು ನಿರಾಕರಿಸಿದ್ದಾರೆ.

ಆ ಬೆನ್ನಲ್ಲೇ, ತಕ್ಷಣದಿಂದ ಜಾರಿಗೆ ಬರುವಂತೆ ನೇಮಕಾತಿ ಆದೇಶವನ್ನು ಕನ್ನಡ ಸಂಸ್ಕೃತಿ ಇಲಾಖೆಯು ವಾಪಸ್ ಪಡೆದಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.59	15,874	22,399
ಹಾರಂಗಿ	2,859	2,857.28	2,730	3,670
ಕಬಿನಿ	2284	2,284	8,316	8,361
ಹೇಮಾವತಿ	2,922	2,921.90	7,692	5,950
ಲಿಂಗನಮಕ್ಕಿ	1,819	1,814	12,621	5,516
ಸೂಪಾ (ಮೀ)	564	549.74	10,567	1,369
ಮಾಣಿ	594	588	1,082	-
ತುಂಗಭದ್ರಾ	1,633	1,632.77	33,462	42,418
ಮಲಪ್ರಭಾ	2079.5	2,078.20	2,280	694
ಘಟಪ್ರಭಾ	2175	2,175	5,003	5,003
ಭದ್ರಾ	186	185	11,964	10,749
ಆಲಮಟ್ಟಿ (ಮೀ)	519.6	519.59	55,613	57,500
ನಾರಾಯಣಪುರ (ಮೀ)	492.25	491.95	60,000	53,614

* ನೆಲಮಟ್ಟದಿಂದ

ಅಕ್ಟೋಬರ್‌ನಿಂದ ಜಾರಿ: ಸಚಿವ ನಾಗೇಶ್

‘ಅಂಗನವಾಡಿಗಳಲ್ಲೂ ಶಾಲಾ ಶಿಕ್ಷಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ಟೋಬರ್‌ನಿಂದ ರಾಜ್ಯದ ಎಲ್ಲ ಅಂಗನವಾಡಿಗಳಲ್ಲೂ ಬಾಲ್ಯ ಪೂರ್ವ ಆರೈಕೆ ಮತ್ತು ಶಿಕ್ಷಣ ಅನುಷ್ಠಾನಗೊಳಿಸಲು ಸರ್ಕಾರ ಮುಂದಾಗಿದೆ.

ಜಂಟಿ ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ಈ ಬಗ್ಗೆ ವಿವರ ನೀಡಿದರು.

ಸೆಪ್ಟೆಂಬರ್ ಒಳಗೆ ಬುನಾದಿ ಶಿಕ್ಷಣ ಕುರಿತು ರಾಷ್ಟ್ರೀಯ ಪಠ್ಯಕ್ರಮ ಅಂತಿಮಗೊಳ್ಳಲಿದೆ. ಅಂಗನವಾಡಿಗಳಲ್ಲಿ ನೂತನ ಪಠ್ಯಕ್ರಮ ಜಾರಿ ಕುರಿತು ರೂಪುರೇಷೆ ಸಿದ್ಧಪಡಿಸಲು ಈಗಾಗಲೇ 6 ಉಪ ಸಮಿತಿಗಳನ್ನು ರಚಿಸಲಾಗಿದೆ. ರಾಷ್ಟ್ರೀಯ ಶಿಕ್ಷಣ ಪಠ್ಯ ಸಲ್ಲಿಕೆಯಾದ ತಕ್ಷಣ ರಾಜ್ಯದಲ್ಲೂ ಅನುಷ್ಠಾನ ಮಾಡಲಾಗುವುದು ಎಂದು ನಾಗೇಶ್ ಹೇಳಿದರು.

ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಈಗಾಗಲೇ ಪೂರ್ವ ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಶಾಲಾ ಆವರಣಗಳಲ್ಲಿರುವ ಅಂಗನವಾಡಿಗಳು ಸೇರಿದಂತೆ ಮೊದಲ ಹಂತದಲ್ಲಿ 20 ಸಾವಿರ ಅಂಗನವಾಡಿಗಳಲ್ಲಿ ನೂತನ ಶಿಕ್ಷಣ ಪದ್ಧತಿ ಅನುಷ್ಠಾನಕ್ಕೆ ತರಲಾಗುವುದು. ಅಂಗನವಾಡಿ ಕಾರ್ಯಕರ್ತೆಯರಿಗೆ ಈಗಾಗಲೇ ತರಬೇತಿ ಆರಂಭಿಸಲಾಗಿದೆ. ಹಂತಹಂತವಾಗಿ ಅವರನ್ನು ಹೊಸ ಜವಾಬ್ದಾರಿಗೆ ಸಿದ್ಧಗೊಳಿಸಲಾಗುವುದು ಎಂದರು.

ರಾಜ್ಯದ 66,361 ಅಂಗನವಾಡಿಗಳಲ್ಲಿ 6 ವರ್ಷದ ಒಳಗಿನ 40.73 ಲಕ್ಷ ಮಕ್ಕಳು ಇದ್ದಾರೆ. ಸ್ನಾತಕೋತ್ತರ ಪದವಿ ಪಡೆದ 732, ಪದವೀಧರ 6017, ಪಿಯು ತೇರ್ಗಡೆಯಾದ 14,303, ಎಸ್ಸೆಸ್ಸೆಲ್ಸಿ ಪೂರೈಸಿದ 40,786 ಅಂಗನವಾಡಿ ಕಾರ್ಯಕರ್ತೆಯರು ಇದ್ದಾರೆ. ಅವರ ವಿದ್ಯಾರ್ಹತೆಗೆ ಅನುಗುಣವಾಗಿ ತರಬೇತಿ ನೀಡಲಾಗುತ್ತಿದೆ. 40 ವರ್ಷ ದಾಟಿದ ಕಾರ್ಯಕರ್ತೆಯರ ಬದಲಿಗೆ ಬೇರೆ ಶಿಕ್ಷಕರನ್ನು ಬಳಸಿಕೊಳ್ಳುವ ಕುರಿತು ಚಿಂತನೆ ನಡೆದಿದೆ ಎಂದು ಸಚಿವ ಹಾಲಪ್ಪ ಆಚಾರ್ ವಿವರ ನೀಡಿದರು.

ಶಾಲಾ ಶಿಕ್ಷಣ ನೀಡಲು ಅಂಗನವಾಡಿ ಕಾರ್ಯಕರ್ತೆಯರನ್ನು ಸಜ್ಜುಗೊಳಿಸುವುದು ಶಿಕ್ಷಣ ಇಲಾಖೆಯ ಕೆಲಸ. ಅವರ ವೇತನ, ಭತ್ಯೆ, ಇತರೆ ಕಾರ್ಯಗಳ ಮೇಲ್ವಿಚಾರಣೆಯನ್ನು ಇಲಾಖೆಯೇ ಮಾಡಲಿದೆ ಎಂದು ಹೇಳಿದರು.

‘ಮದರಸಾ ಮಕ್ಕಳಲ್ಲಿ ಕೀಳರಿಮೆ; ಶಿಕ್ಷಣಕ್ಕೆ ಅಡ್ಡಿ’

‘ಮದರಸಾ ಮಕ್ಕಳಲ್ಲಿನ ಕೀಳರಿಮೆ ಕಾರಣ ಕಾಲೇಜು ಶಿಕ್ಷಣ ಹಾಗೂ ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ’ ಎಂದು ಸಚಿವ ನಾಗೇಶ್ ಹೇಳಿದರು.

‘ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಮದರಸಾಗಳಲ್ಲೂ ಅಳವಡಿಸುವ ಮೂಲಕ ಅವರನ್ನು ಮುಖ್ಯವಾಹಿನಿಗೆ ತರಲು ಸರ್ಕಾರ ಶ್ರಮಿಸಲಿದೆ. ಅಲ್ಲಿನ ಸ್ಥಿತಿಗತಿ ಕುರಿತು ಎರಡು ವಾರಗಳ ಒಳಗೆ ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಅವರು ಮಾಹಿತಿ ನೀಡಿದರು.

ಬೇಗ್ ಭೂ ಅಕ್ರಮ: ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಮಾಹಿತಿ ನೀಡದ ಬಿಬಿಎಂಪಿ ಆಯುಕ್ತರು

ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಹಿಂದೇಟು

• ಮಂಜುನಾಥ ಹೆಬ್ಬಾರ್

ಪ್ರಜಾವಾಣಿ ವಿಶೇಷ

ಮುಖ್ಯಾಂಶಗಳು

- ರೋಷನ್ ಭೂ ಅಕ್ರಮದ ಮಾಹಿತಿ ನೀಡಿದ್ದ ಇ.ಡಿ
- ಬೇಗ್ ಹಾಗೂ ಅಧಿಕಾರಿಗಳ ವಿರುದ್ಧ ತನಿಖೆಗೆ ಪೂರ್ವಾನುಮತಿ ಕೋರಿದ್ದ ಎಸಿಬಿ
- ಆರು ತಿಂಗಳ ಬಳಿಕವೂ ಮಾಹಿತಿ ನೀಡದ ಬಿಬಿಎಂಪಿ

ನವದೆಹಲಿ: ಕರ್ನಾಟಕದ ಮಾಜಿ ಸಚಿವ ಆರ್.ರೋಷನ್ ಬೇಗ್ ಭೂ ಕಬಳಿಕೆ ಪ್ರಕರಣದಲ್ಲಿ ಕೈಜೋಡಿಸಿದ ಅಧಿಕಾರಿಗಳ ವಿರುದ್ಧ ತನಿಖೆಗೆ ಪೂರ್ವಾನುಮತಿ ನೀಡಲು ಕರ್ನಾಟಕ ಸರ್ಕಾರ ಹಿಂದೇಟು ಹಾಕುತ್ತಿದೆ.

ಐಎಂಎ ಪ್ರಕರಣದಲ್ಲಿ ರೋಷನ್ ಬೇಗ್ ಅವರನ್ನು ಬಂಧಿಸಲಾಗಿತ್ತು. ಆ ಬಳಿಕ ಬೇಗ್ ಮನೆ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ಕಳೆದ ವರ್ಷ ದಾಳಿ ನಡೆಸಿದ್ದರು. ಹಣ ಅಕ್ರಮ ವರ್ಗಾವಣೆ ತಡೆ (ಪಿಎಂಎಲ್) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಇ.ಡಿ. ಅಧಿಕಾರಿಗಳು, ಭೂ ಅಕ್ರಮದ ಮಾಹಿತಿಯನ್ನು ಕರ್ನಾಟಕ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಜೊತೆ ಹಂಚಿಕೊಂಡಿದ್ದರು.

‘ಕೋನಪ್ಪನ ಅಗ್ರಹಾರ ಗ್ರಾಮದಲ್ಲಿ ನಿಯಮಬಾಹಿರವಾಗಿ ಸುಬಿ ಎಲೆಕ್ಟ್ರಾನಿಕ್ಸ್‌ಗೆ, ಬೆಂಗಳೂರಿನ ತಿಮ್ಮಯ್ಯ ರಸ್ತೆಯಲ್ಲಿ ಡ್ಯಾನಿಷ್ ಪಬ್ಲಿಕೇಷನ್‌ಗೆ ಜಾಗ ಮಂಜೂರು ಮಾಡಲಾಗಿತ್ತು. ಅರೆ ಬಿನ್ನಮಂಗಳ ಗ್ರಾಮ ಹಾಗೂ ದಾಬಸ್‌ಪೇಟೆ ಕೈಗಾರಿಕಾ ಪ್ರದೇಶದಲ್ಲಿ ಜಾಗ ಮಂಜೂರಾತಿ ವೇಳೆ ಕೆಐಎಡಿಬಿಯಿಂದ ಲೋಪ ಆಗಿದೆ. ಸಚಿವ ಹಾಗೂ ಶಾಸಕರಾಗಿದ್ದ ವೇಳೆ ರಾಜಕೀಯ ಪ್ರಭಾವ ಬಳಸಿ ಬೇಗ್ ಭೂಕಬಳಿಕೆ ಮಾಡಿದ್ದಾರೆ’ ಎಂದು ಇ.ಡಿ. ಹೆಚ್ಚುವರಿ ನಿರ್ದೇಶಕರು ವರದಿಯಲ್ಲಿ ಉಲ್ಲೇಖಿಸಿದ್ದರು.

ಈ ಬಗ್ಗೆ ಸಮಗ್ರ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಎಸಿಬಿಯ ಪೊಲೀಸ್ ವರಿಷ್ಠಾಧಿಕಾರಿಗೆ (ಎಸ್ಪಿ) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು (ಎಡಿಜಿಪಿ) ಸೂಚಿಸಿದ್ದರು.

‘2006ರಿಂದ 2010ರ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಕಿಯೋನಿಕ್ಸ್ ಅಧಿಕಾರಿಗಳು, 2021ರ ಮಾರ್ಚ್ 6ರಿಂದ 28ರ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಕೆಐಎಡಿಬಿ ಅಧಿಕಾರಿಗಳು, 2007ರ ಫೆಬ್ರುವರಿ 22ರಂದು ಕ್ರಯಪತ್ರ ಮಾಡಿಕೊಟ್ಟ ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಹಾಗೂ ರಾಜಕೀಯ ಪ್ರಭಾವ ಬಳಸಿ ನಿಯಮ ಉಲ್ಲಂಘಿಸಿ ಭೂಕಬಳಿಕೆ ಮಾಡಿರುವ ಬೇಗ್ ವಿರುದ್ಧ ಹೆಚ್ಚಿನ ವಿಚಾರಣೆ ಅಥವಾ ತನಿಖೆ ನಡೆಸಬೇಕಿದೆ. ಅದಕ್ಕಾಗಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆಯಂತೆ ಪೂರ್ವಾನುಮತಿ ದೊರಕಿಸಿ ಕೊಡಬೇಕು’ ಎಂದು ಎಸ್ಪಿ ಅವರು 2021ರ ಡಿಸೆಂಬರ್ 13ರಂದು ಎಡಿಜಿಪಿ ಅವರಿಗೆ ಪತ್ರ ಬರೆದಿದ್ದರು.

ಬಿಬಿಎಂಪಿ ಅಧಿಕಾರಿಗಳ ವಿರುದ್ಧ ವಿಚಾರಣೆ ನಡೆಸಲು ಪೂರ್ವಾನುಮತಿ ನೀಡುವಂತೆ ಎಡಿಜಿಪಿ ಅವರು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಎಸಿಎಸ್) ರಾಕೇಶ್ ಸಿಂಗ್ ಅವರಿಗೆ 2022ರ ಜನವರಿ 12ರಂದು ಪ್ರಸ್ತಾವನೆ ಸಲ್ಲಿಸಿದ್ದರು.

ಡ್ಯಾನಿಷ್ ಪಬ್ಲಿಕೇಷನ್‌ಗೆ ಕ್ರಯಪತ್ರ ಮಾಡಿಕೊಟ್ಟ ಬಿಬಿಎಂಪಿ ಅಧಿಕಾರಿಗಳ ಆಗಿನ ಕಚೇರಿ ವಿಳಾಸ, ಈಗ ಕಾರ್ಯನಿರ್ವಹಿಸುತ್ತಿದ್ದ ಹುದ್ದೆ ಹಾಗೂ ವಿಳಾಸ, ನಿವೃತ್ತರಾಗಿದ್ದರೆ ಅವರ ಮನೆಯ ವಿಳಾಸವನ್ನು ಕೂಡಲೇ ಕಳುಹಿಸಿಕೊಡುವಂತೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರು ಫೆಬ್ರುವರಿ 21ರಂದು ಸೂಚಿಸಿದ್ದರು. ಆದರೆ, ಮುಖ್ಯ ಆಯುಕ್ತರು ಯಾವುದೇ ಮಾಹಿತಿ ನೀಡಿಲ್ಲ.

ನಗರಾಭಿವೃದ್ಧಿಯಿಂದ ಮತ್ತೆ ಪತ್ರ

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಆಗಸ್ಟ್ 18ರಂದು ಪತ್ರ ಬರೆದಿರುವ ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳು, ‘ಆರು ತಿಂಗಳ ಬಳಿಕವೂ ಯಾವುದೇ ಮಾಹಿತಿ ನೀಡಿಲ್ಲ. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ಮಾಹಿತಿ ನೀಡಬೇಕು’ ಎಂದು ಸೂಚಿಸಿದ್ದಾರೆ.

‘ಬಿಬಿಎಂಪಿ, ಕಿಯೋನಿಕ್ಸ್ ಹಾಗೂ ಕೆಐಎಡಿಬಿ ಅಧಿಕಾರಿಗಳ ವಿರುದ್ಧ ತನಿಖೆಗೆ ಪೂರ್ವಾನುಮತಿ ನೀಡಲು ಸರ್ಕಾರ ಮೀನಮೇಷ ಎಣಿಸುತ್ತಿದೆ. ಇದಕ್ಕೆ ರಾಜಕೀಯ ಒತ್ತಡವೇ ಕಾರಣ’ ಎಂದು ಮೂಲಗಳು ತಿಳಿಸಿವೆ.

ಇಬ್ಬರು ಶಿಕ್ಷಕರಿಗೆ ರಾಷ್ಟ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಶಿಕ್ಷಣ ಸಚಿವಾಲಯವು ನೀಡುವ ರಾಷ್ಟ್ರೀಯ ಮಟ್ಟದ ಶಿಕ್ಷಕ ಪ್ರಶಸ್ತಿಗೆ ಚಿತ್ರದುರ್ಗ ಜಿಲ್ಲೆಯ ಅಮೃತಾಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಟಿ.ಪಿ. ಉಮೇಶ್ ಹಾಗೂ ತುಮಕೂರು ನಗರದ ಹೊರವಲಯದ ಅಮಲಾಪುರದಲ್ಲಿರುವ ಕೇಂದ್ರೀಯ ವಿದ್ಯಾಲಯದ ಜೀವಶಾಸ್ತ್ರ ಶಿಕ್ಷಕಿ ವಿ.ಪೊನಶಂಕರಿ ಭಾಜನರಾಗಿದ್ದಾರೆ.

ಪ್ರಶಸ್ತಿ ಬಂದಿರುವುದು ಖುಷಿ ನೀಡಿದೆ. ಎಲ್ಲೆಡೆ ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸಿಕೊಂಡು ಬಂದಿದ್ದೇನೆ.
ವಿ. ಪೊಣಶಂಕರಿ, ಅಮಲಾಪುರ ಕೇಂದ್ರೀಯ ವಿದ್ಯಾಲಯದ ಜೀವಶಾಸ್ತ್ರ ಶಿಕ್ಷಕಿ

ಪ್ರಶಸ್ತಿಯನ್ನು ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು, ಶಾಲಾಭಿವೃದ್ಧಿ ಸಮಿತಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಅರ್ಪಿಸುತ್ತೇನೆ.
ಟಿ.ಪಿ.ಉಮೇಶ್, ಅಮೃತಾಪುರ ಜಿಎಚ್‌ಪಿಎಸ್ ಶಾಲೆಯ ಶಿಕ್ಷಕ

ಶಿಕ್ಷಕರ ದಿನಾಚರಣೆ ಅಂಗವಾಗಿ ಸೆ. 5ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 46 ಶಿಕ್ಷಕರಿಗೆ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

27 ವರ್ಷ ಶಿಕ್ಷಕರಾಗಿ ಕಾರ್ಯನಿರ್ವಹಿಸಿರುವ ಪೊನಶಂಕರಿ ಅವರು, 2019ರಿಂದ ತುಮಕೂರಿನಲ್ಲಿರುವ ಕೇಂದ್ರೀಯ ವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಮೂಲತಃ ತಮಿಳುನಾಡಿನವರಾಗಿದ್ದು ಆರಂಭದ ದಿನಗಳಲ್ಲಿ ಗುಜರಾತ್‌ನಲ್ಲಿ ಸೇವೆ ಸಲ್ಲಿಸಿದ್ದಾರೆ. ನಂತರ ಬೆಂಗಳೂರಿನ ಯಶವಂತಪುರದ ಐಐಎಸ್‌ಸಿಯಲ್ಲಿರುವ ಕೇಂದ್ರೀಯ ವಿದ್ಯಾಲಯದಲ್ಲಿ 12 ವರ್ಷ ಕೆಲಸ ಮಾಡಿದ್ದಾರೆ. ನಿವೃತ್ತಿಗೆ ಇನ್ನು ಒಂದು ವರ್ಷವಷ್ಟೇ ಬಾಕಿ ಇದೆ.

2004ರಲ್ಲಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಚಿಕ್ಕಬಳ್ಳಾರಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕ ವೃತ್ತಿ ಆರಂಭಿಸಿದ ಉಮೇಶ್, 2006ರಲ್ಲಿ ತಾಲ್ಲೂಕಿನ ಕಾವಾಡಿಗರ ಶಾಲೆಗೆ ವರ್ಗಾವಣೆಯಾಗಿ ಬಂದರು. 2009ರಿಂದ ಅಮೃತಾಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಶಾಲೆಯಲ್ಲಿ ವಿನೂತನ ಶೈಕ್ಷಣಿಕ ಕಾರ್ಯಕ್ರಮ ಅನುಷ್ಠಾನಗೊಳಿಸುವ ಮೂಲಕ ಮಕ್ಕಳ ದಾಖಲಾತಿ ಪ್ರಮಾಣ ಹೆಚ್ಚಳಕ್ಕೆ ಶ್ರಮಿಸಿದರು. ಆರಂಭದಲ್ಲಿದ್ದ 39 ವಿದ್ಯಾರ್ಥಿಗಳ ಸಂಖ್ಯೆಯನ್ನು 80ಕ್ಕೆ ಹೆಚ್ಚಿಸಿದರು. ದಾನಿಗಳ ನೆರವು ಪಡೆದು ಶಾಲೆಗೆ ಮೂಲಸೌಕರ್ಯ ಒದಗಿಸಿದರು.

ಶಿಕ್ಷಕ ಉಮೇಶ್ ಸಾಹಿತ್ಯ ಕ್ಷೇತ್ರದಲ್ಲಿಯೂ ತೊಡಗಿದ್ದಾರೆ. ‘ನನ್ನಯ ಸ್ಕೂಲ್ ಟ್ರಿಪ್ ಟ್ರಿಕ್’, ‘ವಚನವಾಣಿ’, ‘ವಚನವಾಣಿ’, ‘ಫೋಟೋಕ್ಕೊಂದು ಪ್ರೇಮ’, ‘ಅಪ್ಪನು ಕೊಡಿಸಿದ ಮೊದಲ ಪುಸ್ತಕ’, ‘ದೇವರ ಬೀಗ’ ಎಂಬ ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ.

ಹಲ್ಲುನೋವಿನ ಚಿಕಿತ್ಸೆಗಾಗಿ ಶಾಸಕ ಪುಟ್ಟರಾಜು ಇಂಗ್ಲೆಂಡ್‌ಗೆ

ಪ್ರಜಾವಾಣಿ ವಾರ್ತೆ



ಪುಟ್ಟರಾಜು

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿನ ಪ್ರಕರಣದ ಆರೋಪ ಎದುರಿಸುತ್ತಿರುವ ಮೇಲುಕೋಟೆ ಶಾಸಕ ಸಿ.ಎಸ್.ಪುಟ್ಟರಾಜು ಹಲ್ಲು ನೋವಿನ ಚಿಕಿತ್ಸೆ ಪಡೆಯಲು ನಿಗದಿತ ಅವಧಿಗೆ ವಿದೇಶ ಪ್ರವಾಸಕ್ಕೆ ತೆರಳಲು ಅನುಮತಿ ನೀಡುವಂತೆ ಕೋರಿ ಸಲ್ಲಿಸಿದ್ದ ಮನವಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಮಾನ್ಯ ಮಾಡಿದೆ.

ಶಾಸಕರು- ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಬಿ. ಜಯಂತ್ ಕುಮಾರ್ ಅವರು ಈ ಮನವಿ ಪುರಸ್ಕರಿಸಿದ್ದಾರೆ.

‘ಅರ್ಜಿದಾರರು ಕೋರ್ಟ್ ವಿಧಿಸುವ ಷರತ್ತುಗಳಿಗೆ ಅನ್ವಯವಾಗಿ ಇದೇ 20ರಿಂದ ಸೆಪ್ಟೆಂಬರ್ 20ರವರೆಗಿನ ಅವಧಿಗೆ ವಿದೇಶ ಪ್ರವಾಸಕ್ಕೆ ತೆರಳಬಹುದು’ ಎಂದು ನ್ಯಾಯಾಧೀಶರು ಆದೇಶಿಸಿದ್ದಾರೆ.

‘ನಾನು ಗಂಭೀರವಾದ ಹಲ್ಲು ನೋವಿನಿಂದ ನರಳುತ್ತಿದ್ದು, ಅದಕ್ಕಾಗಿ ಇಂಗ್ಲೆಂಡಿನ ಹ್ಯಾಮ್ ಸ್ಟೀಡ್ ಡೆಂಟಲ್ ಕ್ಲಿನಿಕ್‌ನಲ್ಲಿ ಚಿಕಿತ್ಸೆ ಪಡೆಯಬೇಕಿದೆ. ಅಲ್ಲದೆ, ಅಮೆರಿಕದ ವಾಷಿಂಗ್ಟನ್ ಡಿ.ಸಿಯಲ್ಲಿ ಕನ್ನಡ ಕೂಟ ಸಂಘದ ಕಾರ್ಯಕ್ರಮದಲ್ಲಿ ಸರ್ಕಾರದ ಪ್ರತಿನಿಧಿಯಾಗಿ ಭಾಗವಹಿಸಬೇಕಿದೆ. ಕೋವಿಡ್ ಕಾರಣದಿಂದ ನಿಗದಿತ ಚಿಕಿತ್ಸೆ ಪಡೆಯಲು ಸಾಧ್ಯವಾಗಿಲ್ಲ. ಆದ್ದರಿಂದ, ಅನುಮತಿ ನೀಡಬೇಕು’ ಎಂದು ಪುಟ್ಟರಾಜು ಕೋರಿದ್ದರು.

ಕೆಪಿಟಿಸಿಎಲ್ ಸ್ಪರ್ಧಾತ್ಮಕ ಪರೀಕ್ಷೆಯ ಸರಿ ಉತ್ತರ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಟಿಸಿಎಲ್ ಸಹಾಯಕ ಎಂಜಿನಿಯರ್ ಹಾಗೂ ಕಿರಿಯ ಸಹಾಯಕರ ಹುದ್ದೆಗಳಿಗೆ ಜುಲೈನಲ್ಲಿ ನಡೆದಿದ್ದ ಸ್ಪರ್ಧಾತ್ಮಕ ಪರೀಕ್ಷೆಯ ಸರಿ ಉತ್ತರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಗುರುವಾರ ಪ್ರಕಟಿಸಲಾಗಿದೆ.

ಪ್ರಾಧಿಕಾರ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ ಉತ್ತರಗಳಲ್ಲೇ ನೂರಾರು ತಪ್ಪುಗಳಿವೆ ಎಂದು ಅಭ್ಯರ್ಥಿಗಳು ದೂರಿದ್ದಾರೆ. ತಾತ್ಕಾಲಿಕ ಉತ್ತರಗಳಿಗೆ ಯಾವುದೇ ಆಕ್ಷೇಪಣೆಗಳು ಇದ್ದರೆ recruitment2021kea@gmail.comಗೆ ಸೆ.2ರ ಸಂಜೆ 5.30ರ ಒಳಗೆ ಸಲ್ಲಿಸಬಹುದು ಎಂದು ಪ್ರಾಧಿಕಾರ ಸೂಚಿಸಿದೆ.

ಏಳು ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಐಪಿಎಸ್‌ಗೆ ಇತ್ತೀಚೆಗೆ ಬಡ್ತಿ ಹೊಂದಿದ ಏಳು ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.

ಸಚಿನ್ ಘೋರ್ಪಡೆ- ಹೆಚ್ಚುವರಿ ಎಸ್‌ಪಿ, ಕೋಲಾರ, ಅಮಟೆ ವಿಕ್ರಂ- ಹೆಚ್ಚುವರಿ ಎಸ್‌ಪಿ, ಶಿವಮೊಗ್ಗ, ಸಜೀತ್ ವಿ.ಜೆ. – ಎಸ್‌ಪಿ, ಭ್ರಷ್ಟಾಚಾರ ನಿಗ್ರಹ ದಳ, ಮೈಸೂರು, ರಾಮ ಲಕ್ಷ್ಮಣಸಾ ಅರಸಿದ್ದಿ- ಹೆಚ್ಚುವರಿ ಎಸ್‌ಪಿ, ವಿಜಯಪುರ, ಬಾಬಾಸಾಬ್ ನೇಮಗೌಡ –ಎಸ್‌ಪಿ ಭ್ರಷ್ಟಾಚಾರ ನಿಗ್ರಹ ದಳ, ಬೆಳಗಾವಿ, ಗೋಪಾಲ ಎಂ. ಬ್ಯಾಕೋಡ- ಡಿಸಿಪಿ, ಅಪರಾಧ ಮತ್ತು ಸಂಚಾರ, ಹುಬ್ಬಳ್ಳಿ-ಧಾರವಾಡ ನಗರ, ಮಹಾನಿಂಗ ನಂದಗಾಂವಿ- ಹೆಚ್ಚುವರಿ ಎಸ್‌ಪಿ, ಬೆಳಗಾವಿ.

ಕರ್ನಾಟಕ ಸರಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ. www.midnglb@rediffmail.com. ದೂರವಾಣಿ : 08472 –220196

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ–4/ಕೆ.ಡಬ್ಲ್ಯೂ–4/2022–23/2289 ದಿನಾಂಕ: 24–08–2022

–:ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–4):–

1) ಕಾಮಗಾರಿ ವಿವರ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2021–22ನೇ ಸಾಲಿನ 4702 ಪ್ರಧಾನ ಕಾಮಗಾರಿಗಳು – ಕೆರೆಗಳ ಆಧುನೀಕರಣ ಯೋಜನೆ ಅಡಿಯಲ್ಲಿ ಕಾಮಗಾರಿಗಾಗಿ ಇ–ಟೆಂಡರ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: ರೂ. 132,54,835.47, 3) ಗುತ್ತಿಗೆದಾರರ ಅರ್ಹತೆ ವಿವರ: 1ನೇ ದರ್ಜೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ: ಅರ್ಜಿಯ ಬೆಲೆ ಇ–ಪ್ರೊಕ್ಯೂರಮೆಂಟನಂತೆ, ಇ.ಎಂ.ಡಿ. ರೂ. 2,00,000.00, 5) ಟೆಂಡರ್ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: 05–09–2022 ಬೆಳಿಗ್ಗೆ 11.00 ಗಂಟೆಯ ವರೆಗೆ, 6) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: 06–09–2022 ಸಾಯಂಕಾಲ 17.30 ಗಂಟೆಯ ವರೆಗೆ, 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 07–09–2022 ಸಾಯಂಕಾಲ 17.30 ಗಂಟೆಯ ವರೆಗೆ, 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: 08–09–2022 ಬೆಳಿಗ್ಗೆ 11.00 ಗಂಟೆಯ ವರೆಗೆ, 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ. 10) ಅಂತರಜಾಲ ತಾಣದ ವಿಳಾಸ: www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/539/ಎಂ.ಸಿ.&ಎ/2022–23

ಬಮೂಲ್ — ನಂದಿನಿ

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,

ಡಾ:ಎಂಹೆಚ್. ಮರೀಗೌಡ ರಸ್ತೆ :: ಬೆಂಗಳೂರು–29

ಐ.ಎಫ್.ಟಿ ಸಂಖ್ಯೆ : ಬಮೂಲ್/ಮಾರುಕಟ್ಟೆ(ಸಾರಿಗೆ)/ಇ–ಟೆಂಡರ್/554/2022 ದಿನಾಂಕ:26.08.2022

ಸಾರಿಗೆ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಮಾತ್ರ)

ಬೆಂಗಳೂರು ಸಹಕಾರಿ ಹಾಲು ಒಕ್ಕೂಟ ನಿ., ಬೆಂಗಳೂರುರವರಿಂದ ಈ ಕೆಳಕಂಡ ಮಾರ್ಗಗಳಿಗೆ ವಾಹನ ಹೊಂದಿರುವ ಮಾಲೀಕರಿಂದ ದ್ವೈವಾರ್ಷಿಕ ಗುತ್ತಿಗೆ ಆಧಾರದ ಮೇಲೆ ತಾಂತ್ರಿಕ ಹಾಗೂ ವಾಣಿಜ್ಯ ಟೆಂಡರ್‌ಗಳನ್ನು ಇ–ಟೆಂಡರ್ ಮೂಲಕ ಮರು ಟೆಂಡರ್ ಆಹ್ವಾನಿಸಲಾಗಿದೆ.

1. ಮುಖ್ಯಡೇರಿ, ಹೊಸಕೋಟೆ ಡೇರಿ ಮತ್ತು ಬೆಂಗಳೂರು ನಗರ ಹಾಗೂ ವಿವಿಧ ಗ್ರಾಮಾಂತರ ಪ್ರದೇಶಗಳಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸಾಗಾಣಿಕೆ ಮಾಡಿ ವಿತರಿಸುವ ಸಲುವಾಗಿ 2011ನೇ ಇಸವಿಗಿಂತ ಹಾಗೂ ಮೇಲ್ಪಟ್ಟು ನೋಂದಾವಣಿಯಾಗಿರುವ (Manufactured Year) ಇನ್ಸುಲೇಟೆಡ್ ಕಂಟೈನರ್‌ವುಳ್ಳ 3.0 ಟನ್ ಮತ್ತು 6.0 ಟನ್ ಸಾಗಾಣಿಕಾ ವಾಹನಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.
2. ಕ್ಷೀರಭಾಗ್ಯ ಯೋಜನೆಯಡಿ ಶಿಬಿರ ಕಚೇರಿಗಳಿಂದ ಸರ್ಕಾರಿ ಅನುಧಾನಿತ ಶಾಲೆಗಳಿಗೆ ಕೆನೆಭರಿತ ಹಾಲಿನ ಪುಡಿಯನ್ನು ಸರಬರಾಜು ಮಾಡಲು 1.0 ಟನ್ ಸಾಮರ್ಥ್ಯದ 2011ನೇ ಇಸವಿಗಿಂತ ಹಾಗೂ ಮೇಲ್ಪಟ್ಟು ನೋಂದಾವಣಿಯಾಗಿರುವ ವಾಹನಗಳು.
3. ಪ್ರಧಾನ ವ್ಯವಸ್ಥಾಪಕರು (ಮಾರುಕಟ್ಟೆ) ವಿಭಾಗದ ಕಚೇರಿ ಕೆಲಸಕಾರ್ಯಗಳಿಗಾಗಿ 2016ನೇ ಮಾದರಿ ಮತ್ತು ಮೇಲ್ಪಟ್ಟ Swift Dzire/ XCENT/ TOYOTA ETIOS/HONDA AMAZE ಹಳದಿ ಬೋರ್ಡ್‌ನ ಕಾರುಗಳನ್ನು ಹೊಂದಿರುವ ವಾಹನ ಮಾಲಿಕರುಗಳಿಂದ ಟೆಂಡರ್ ಆಹ್ವಾನಿಸಲಾಗಿದೆ.

ವಿವರಗಳು ಈ ಕೆಳಕಂಡಂತಿವೆ:

1	ಇ–ಟೆಂಡರ್ ಲಭಿಸುವ ದಿನಾಂಕ ಮತ್ತು ಸಮಯ	ದಿನಾಂಕ:26.08.2022 ರಿಂದ 26.09.2022ರ ಸಂಜೆ 5–00 ಘಂಟೆಯವರೆಗೆ.
2	ಟೆಂಡರ್ ಬಗ್ಗೆ ಸ್ಪಷ್ಟನೆ ಪಡೆಯುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ:23.09.2022 ರಂದು ಸಂಜೆ 5–00 ಘಂಟೆ
3	ಟೆಂಡರ್ ಸಲ್ಲಿಸುವ/ ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ:26.09.2022 ರಂದು ಸಂಜೆ 5–00 ಘಂಟೆ
4	ತಾಂತ್ರಿಕ ಟೆಂಡರ್ ಭಾಗ–1 ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ:28.09.2022ರಂದು ಮಧ್ಯಾಹ್ನ 2.30 ಘಂಟೆ
5	ವಾಣಿಜ್ಯ ಟೆಂಡರ್ ಭಾಗ–2 ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ:21.10.2022ರಂದು ಮಧ್ಯಾಹ್ನ 2.30ಘಂಟೆ
6	ತಾಂತ್ರಿಕ / ವಾಣಿಜ್ಯ ಟೆಂಡರ್‌ಗಳನ್ನು ತೆರೆಯುವ ಸ್ಥಳ	ಬೆಂಗಳೂರು ಸಹಕಾರ ಹಾಲು ಒಕ್ಕೂಟದ ಮಂಡಳಿ ಸಭಾಂಗಣ ಬೆಂಗಳೂರು ಡೇರಿ

ವಿ.ಸೂ:–

- ಪ್ರತಿ ಮಾರ್ಗಕ್ಕೆ ವಾಹನ ದಾಖಲಾತಿಗಳನ್ನು ಹಾಗೂ ಆಧಾರ ಮೊತ್ತ (ಇ.ಎಂ.ಡಿ) ಪ್ರತ್ಯೇಕವಾಗಿ ಸಲ್ಲಿಸುವುದು.
- ಒಂದೇ ವಾಹನದ ದಾಖಲಾತಿಗಳನ್ನು ಒಂದಕ್ಕಿಂತ ಹೆಚ್ಚು ಮಾರ್ಗಗಳಿಗೆ ಸಲ್ಲಿಸಿದ್ದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.
- ಬೆಳಗ್ಗಿನ ಸರತಿಯ ಮಾರ್ಗಗಳಲ್ಲಿ ಭಾಗವಹಿಸುವ ವಾಹನಗಳು ಮಧ್ಯಾಹ್ನದ ಸರತಿಗೆ ಅದೇ ಸಾಮರ್ಥ್ಯದ ವಾಹನವಾಗಿದ್ದಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.
- ಎಲ್ಲಾ ವಾಹನಗಳು ಕಡ್ಡಾಯವಾಗಿ ಇನ್ಸುಲೇಟೆಡ್ ಕಂಟೈನರ್‌ವುಳ್ಳ ವಾಹನವಾಗಿರತಕ್ಕದ್ದು. ಟೆಂಡರ್‌ನಲ್ಲಿ ನಮೂದಿಸಿರುವಂತೆ ಇನ್ಸುಲೇಟೆಡ್ ವಿನ್ಯಾಸ/ಮಾದರಿ ಹೊಂದಿರಬೇಕು.
- ಟೆಂಡರ್‌ನಲ್ಲಿ ಸಂಬಂಧ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗತಕ್ಕದ್ದು.

ಟೆಂಡರ್ ಸಂಬಂಧ ನೀಡಬೇಕಾದ ಅರ್ಜಿ ಶುಲ್ಕ, ಇ.ಎಂ.ಡಿ. ಮೊತ್ತ, ಭದ್ರತಾಠೇವಣಿ ಹಾಗೂ ಟೆಂಡರ್ ಷರತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ **https://www.eproc.karnataka.gov.in** ನಲ್ಲಿ ಲಭ್ಯವಿರುತ್ತದೆ. ಬಮೂಲ್ ಕಚೇರಿ ದೂರವಾಣಿ ಸಂಖ್ಯೆ: 080–26096273.

ಬೆಂಗಳೂರು ಸಹಕಾರಿ ಹಾಲು ಒಕ್ಕೂಟದ ಪರವಾಗಿ
ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಟೆಂಡರ್ ಆಹ್ವಾನ ಪ್ರಾಧಿಕಾರ

ಕರ್ನಾಟಕ ಸರ್ಕಾರ

ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘ (ರಿ.)

ಕಲಬುರಗಿ ವಿಭಾಗ ಕಲಬುರಗಿ.

ಇಮೇಲ್: kksecklb@gmail.com ದೂರವಾಣಿ : 08472–227712

ಸಂಖ್ಯೆಃ ಕಕಮಾಕೃಸಾಸಂ/ ಅಭಿವೃದ್ಧಿ/ ಸಿ.ಆರ್–40/ 2022–23 ದಿನಾಂಕ : 23.08.2022

ಸಂಕ್ಷಿಪ್ತ ಟೆಂಡರ ಪ್ರಕಟಣೆ

ಕಾರ್ಯದರ್ಶಿಗಳು, ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿ ಸಂಘ, ಕಲಬುರಗಿ ವಿಭಾಗ, ಕಲಬುರಗಿ ಇವರ ಕಚೇರಿಯಿಂದ ಸಂಘದ ಕೃಷಿ ಅಭಿವೃದ್ಧಿ ವಿಭಾಗದಲ್ಲಿನ ಸಮಗ್ರ ಕೃಷಿ ಪದ್ಧತಿ ಯೋಜನೆಯಡಿಯಲ್ಲಿನ ಹಣ್ಣುಗಳ ಸಸಿಗಳನ್ನು ಹಾಗೂ ಅವುಗಳ ಪೋಷಣೆಗೆ ಅವಶ್ಯಕ ಸಾಮಗ್ರಿಗಳನ್ನು ಕಲ್ಯಾಣ ಕರ್ನಾಟಕ ವಿಭಾಗದ (07) ಜಿಲ್ಲೆಗಳಲ್ಲಿನ ಆಯ್ಕೆಗೊಂಡ ಫಲಾನುಭವಿಗಳಿಗೆ ಒದಗಿಸುವ ಸಂಬಂಧ ಅರ್ಹ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ.

ಮೇಲ್ಕಮೂದಿಸಿದಂತೆ, ಆಸಕ್ತ ಸಂಸ್ಥೆಗಳು ತಮ್ಮ ದರಪಟ್ಟಿಯನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮೂಲಕ ದಿನಾಂಕ **02.09.2022 ರ ಸಂಜೆ : 4.30ಕ್ಕೆ ಒಳಗಾಗಿ ಸಲ್ಲಿಸುವುದು, ತಾಂತ್ರೀಕ ಬಿಡ್ ತೆರೆಯುವ ದಿನಾಂಕ : 03–09–2022 ರ ಸಂಜೆ : 4.30ಕ್ಕೆ ಹಾಗೂ ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ : 05–09–2022 ರ ಬೆಳಿಗ್ಗೆ : 11.30ಕ್ಕೆ ಇರುತ್ತದೆ. ಟೆಂಡರ ಪ್ರಕಟಣೆಯ ಸಂಕ್ಷೀಪ್ತ ವಿವರಗಳು ಈ ಕೆಳಗಿನಂತಿರುತ್ತದೆ.**

ಕ್ರ.ಸಂ.	ವಿವರಗಳು	ಪ್ರಮಾಣ	ಸಂಖ್ಯೆ	ದರ	ದರ (ಅಕ್ಷರಗಳಲ್ಲಿ)
1	2	3	4	5	6
01)	ಸೀತಾಫಲ	ಸಂಖ್ಯೆ	1647		
02)	ಪೇರು	ಸಂಖ್ಯೆ	1698		
03)	ಮಾವು	ಸಂಖ್ಯೆ	2180		
04)	ತೆಂಗು	ಸಂಖ್ಯೆ	1755		
05)	ಲಿಂಬು	ಸಂಖ್ಯೆ	2470		
06)	ಡ್ರ್ಯಾಗನ ಹಣ್ಣು	ಸಂಖ್ಯೆ	300		
07)	ಮೋಸಂಬಿ	ಸಂಖ್ಯೆ	720		
08)	ಸಪೋಟ	ಸಂಖ್ಯೆ	50		
09)	ಎರೆಹುಳು ಮತ್ತು ಟ್ರೈಕೋಡೆನ್	ಕೆ.ಜಿ.	5140		

ಷರತ್ತುಗಳು : ಬಿಡ್ ದಾಖಲೆಯಲ್ಲಿ ನಮೂದಿಸಿದಂತೆ.
ಅರ್ಹತೆ ಮಾನದಂಡಗಳು : 1) ಜಿ.ಎಸ್.ಟಿ. ಪ್ರಮಾಣ ಪತ್ರ, 2) ನರ್ಸರಿ ಲೈಸೆನ್ಸ್ / ಸ್ವಂತ ಹೊಂದಿರುವ ನರ್ಸರಿಯ ದಾಖಲೆಗಳು, 3) ಸರ್ಕಾರಿ ಇಲಾಖೆಗೆ ಸಸಿಗಳನ್ನು ವಿತರಿಸಿದ ಅನುಭವನ ಪ್ರಮಾಣ ಪತ್ರ, 4) ಐ.ಟಿ. ಸಲ್ಲಿಕೆ (ಗತ (03) ವರ್ಷದ), 5) ಕಲ್ಯಾಣ ಕರ್ನಾಟಕ ವಿಭಾಗದಲ್ಲಿ, ಸ್ವಂತ ನರ್ಸರಿ ಹೊಂದಿರುವವರಿಗೆ ಪ್ರಾಧಾನ್ಯತೆ ನೀಡಲಾಗುವುದು
ಸೂಚನೆ : ಹೆಚ್ಚಿನ ಮಾಹಿತಿಗಾಗಿ ಈ ಕಚೇರಿಗೆ ಸಂಪರ್ಕಿಸಬಹುದು.

ಸಹಿ/– ಕಾರ್ಯದರ್ಶಿಗಳು,
ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘ [ರಿ] ಕಲಬುರಗಿ ವಿಭಾಗ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/525/ಎಂ.ಸಿ.&ಎ/2022–23

THE FEDERAL BANK LIMITED
Regd. Office: Aluva, Kerala.

ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2022-23 **NOTICE FOR PRIVATE SALE OF GOLD** 23/08/2022

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 09-09-2022 as shown below:

Br. Arsikere: Near LIC Office, B H Road, Arsikere, Hassan- 573 103, Ph No. 08174230125 :- 20306400013154,20306400018104,20306400018062, 20306400018096,20306400018195,20306400017775,20306400017783,20306400013782,20306400015738,20306400017569,20306400017577,20306400017841, 20306400015944,20306400017478,20306400017494,20306400018005,20306400017700.

Br. Bangalore/St Marks Road: No. 9, Halcyon Complex, St. Marks Road, Bangalore- 560 001, Ph No. 080-32994454 :- 11046400006870,11046400006888,11046100109206,11046100109214.

Br. Bangalore/Gandhi Nagar: P B No. 9981, No. 24, 2nd Cross, Gandhi Nagar, Bangalore- 560 009, Ph No. 080-22385208 :- 11896400018873,11896100132156,11896400021760,11896400018808,11896400022362,11896400018261,11896400018907.

Br. Bangalore/Rajaji Nagar: No. 60/60, Raj Chambers, Dr. Rajkumar Road, 2nd Block, Rajaji Nagar, Bangalore- 560 010, Ph No.-0 80-23522007:- 13346400169290,13346400162261,13346100654625,13346400194843,13346400189322,13346100660739,13346100663022,13346400194850,13346400186658, 13346400195527,13346400174043,13346400195899,13346400172781,13346400195519,13346400179828,13346800016950,13346400196889,13346400179539, 13346400179836,13346100659830,13346400196871,13346100652561,13346400162089,13346400179570,13346400196897,13346100660036,13346400196038, 13346400179588,13346100660275,13346400181436,13346100652009,13346400179554,13346400195154,13346400181469,13346400204394,13346400195345, 13346400198729,13346400181360,13346400181329,13346400178218,13346400195188,13346400166478,13346400168847,13346400178564,13346400195196, 13346400166486,13346400168854,13346400187193,13346400169258,13346400176493,13346400204337,13346400187185,13346400203420,13346400195436, 13346400168862,13346100658840,13346400203214,13346400162345,13346400168391,13346400181014,13346400196848,13346400204469,13346400168367, 13346400181642,13346300000579,13346400162477,13346400195428,13346400181006,13346400196442,13346400194546,13346400145555,13346400181485, 13346400184265,13346400190445,13346400186831,13346400181311,13346400162741,13346800022081,13346100656521,13346400181493,13346400195261, 13346400182533,13346100667825,13346400181501,13346400195253,13346400188696,13346100653296,13346400181410,13346400195279,13346400166700, 13346400195907,13346400163160,13346400195246,13346400168706,13346400202331,13346100631029,13346100658147,13346400196145,13346400196426, 13346400188076,13346100659996,13346400137628,13346400205508,13346400200848,13346400190700,13346400168409,13346400143519,13346400194371, 13346400192276,13346400186724,13346400189306,13346400169027,13346400194892,13346400181717,13346400181444,13346400195055,13346400194884, 13346400181618,13346400171163,13346400167112,13346400158475,13346400181709,13346400187425,13346400197952,13346400182400,13346400194694, 13346400156065,13346400149391,13346400205789,13346400192540,13346400177343,13346400189546,13346400182392,13346400165702,13346400189967, 13346400189959,13346400191740,13346400165694,13346400155067,13346400182145,13346100655507,13346400143667,13346400196400.

Br.Bangalore/R T Nagar : No.20, 1st Main Road, 108 'B' Bus Station, Ganga Nagar, R T Nagar P O, Bangalore- 560 032 Ph no.0 80-23434258:- 14726100184195,14726100187941,14726100189095,14726100199060,14726100199920,14726100200132,14726100200173,14726100201999,14726100202138, 14726100202286,14726100203540,14726100203664,14726100203771,14726100204472,14726100208812,14726100209539,14726100209695,14726400040105, 14726400040113,14726400042135,14726400046573,14726400048785,14726400050682,14726400050757,14726400050765,14726400050955,14726400050997, 14726400051466,14726400051474,14726400051532,14726400051540,14726400051557,14726400051565,14726400051573,14726400051581,14726400051862, 14726400051953,14726400054809,14726500005248.

Br.Bangalore/Indiranagar: 315/1, 100 Feet Road, Opp Post Office, Indiranagar, Bangalore- 560 038, Ph No.0 80-25212341:- 15356100067999,15356100086601,15356400018973,15356400033444,15356400026323,15356100087732,15356100084341,15356400034798,15356400019385, 15356400030564,15356100088110,15356100087997,15356400026620,15356400026604,15356400026612,15356400026596,15356100086627,15356100086619, 15356400024047,15356100020946,15356400026802,15356400036926,15356400029574,15356400031216,15356400032339,15356400034780,15356400036108, 15356400030416,15356400031000,15356400026216,15356100085173,15356400032669,15356400032024,15356400034582,15356400034269,15356100084168, 15356100085769,15356400031331,15356400028212.

Br.Bangalore/Banaswadi: No 13, Banaswadi Main Road, Bangalore- 560 043, Ph No. 080-25420700 :- 14716100213722,14716100229793,14716100232730,14716100232748,14716100233001,14716100233654,14716100233886,14716100234082,14716100234827, 14716100236194,14716100236202,14716100236210,14716100236335,14716100236343,14716100238125,14716100238596,14716100239024,14716100239420, 14716100239446,14716100240287,14716100240634,14716100244412,14716100246672,14716100246680,14716100247035,14716100248025,14716100248579, 14716100249585,14716100251540,14716100252761,14716100254049,14716100255426,14716100255921,14716100257091,14716100258065,14716100261887, 14716100262497,14716100263156,14716100263164,14716100263172,14716100264469,14716100266811,14716100267074,14716100270128,14716100270532, 14716100271316,14716100271712,14716100271837,14716100272264,14716100272397,14716100273221,14716100273239,14716100273312,14716100273437, 14716100274260,14716100274435,14716100274633,14716100275887,14716100275978,14716100275986,14716100279285,14716100281570,14716400013970, 14716400013988,14716400015256,14716400015272,14716400015389,14716400015603,14716400015967,14716400015975,14716400016247,14716400016320, 14716800002052,14716800004561,14716800005329,14716800008000,14716800008018,14716800011442,14716800012903.

Br. Bangalore/Krishnarajapuram: Vsr Complex, Old Madras Road, Krishnarajapura, Bangalore, Karnataka- 560 036, Ph No. 080-25619070:- 15616400008112,15616400006603,15616400006090,15616400008120,15616400005639,15616100161807,15616400006157,15616400006256,15616100130117, 15616100156203,15616400006579,15616400007312,15616400006009,15616400007619,15616100162730,15616400007288,15616400006124,15616100150099, 15616400005621,15616400006132,15616100162706,15616400005647,15616400006082,15616100151907,15616100163092,15616100156393.

Br. Bangalore/Jalahalli: 17/1, Savithri, S M Road, Jalahalli West, Bangalore, Bangalore Urban- 560 015, Ph no. 080-28372201:- 15826100543314,15826100557736,15826400068202,15826100545277,15826100551408,15826100557942,15826400116043,15826100575290,15826100557306, 15826400112976,15826400113552,15826100571422,15826100572529,15826100558825,15826100561043,15826100567255,15826100543306,15826100460220, 15826100532424,15826100580860,15826100572388,15826400068871,15826100483396,15826100580878,15826100554477,15826400113701,15826100561571, 15826100572115,15826100571158,15826100565994,15826100532721,15826100572123,15826100573758,15826400114311,15826100569871,15826100561381, 15826100553966,15826400114428,15826400116068,15826400115896,15826100555292,15826400115318,15826100533018,15826400115136,15826100569681, 15826400114253,15826100562132,15826400115128,15826400083177,15826100560086,15826100576603,15826400115144,15826100571976,15826400114956, 15826100566711,15826100534263,15826100578898,15826400114634,15826400113495,15826100476077,15826100575548,15826100531525,15826100572206, 15826100534149,15826100546853,15826100560250,15826100560623,15826100563056,15826100543223,15826400115516,15826100562678,15826400115912, 15826100569434,15826400070067,15826100560227,15826100535021,15826100575563,15826100545608,15826100554378,15826400083169,15826400114584.

Br. Bangalore/Vignana Nagar: No 124, S R Plaza, Vignana Nagara, Main Road, Bangalore Urban- 560 037 , Ph No. 080-25348901 :- 16296100185038,16296100185863,16296100185848,16296400037301,16296400025926,16296400026270,16296400026965,16296400035222,16296400026973, 16296400035040,16296400035057,16296400027120, 16296400035826,16296400026148,16296400037442,16296400031171,16296400031189,16296400031197, 16296100188669,16296400028458,16296400025504,16296400031528,16296400025157.

Bangalore 23-08-2022 — Vice President & Zonal Head

ಸಾಗರದಾಚೆಗಿನ 'ಸುರಭಿ'ಯ ಅಂತರಾಳ

'ಸೋಜುಗದ ಸೂಜು ಮಲ್ಲಿಗೆ' ಚೈತ್ರಾ ಜೆ. ಆಚಾರ್ ಇದೀಗ 'ಸಪ್ತ ಸಾಗರದಾಚೆ ಎಲ್ಲೋ' ಹೊರಟ 'ಮನು'ವಿನ ಜೊತೆಗೆ 'ಸುರಭಿ'ಯಾಗಿ ಹೆಜ್ಜೆ ಹಾಕಿದ್ದಾರೆ. ಈ ಹೊಸ ಪ್ರೊಜೆಕ್ಟ್ ಬಗ್ಗೆ ಸಿನಿಮಾ ಪುರವಣಿ ಜೊತೆ ಚೈತ್ರಾ ಮಾತಿಗಿಳಿದಿದ್ದು ಹೀಗೆ...

ಚೈತ್ರಾ ಜೆ. ಆಚಾರ್

ಅಭಿಲಾಷ್ ಪಿ.ಎಸ್.

• ಎಂಜಿನಿಯರಿಂಗ್ ಓದಿದ ಚೈತ್ರಾ ಬಣ್ಣದ ಲೋಕ ಪ್ರವೇಶಿಸಿದ್ದು ಹೇಗೆ?

ನನ್ನ ತಂದೆಯ ಊರು ತುಮಕೂರು. ನಾನು ಹುಟ್ಟಿದ್ದು, ಬೆಳೆದಿದ್ದೆಲ್ಲಾ ಬೆಂಗಳೂರಿನಲ್ಲಿ. ಹಾಗಾಗಿ ನಾನು ಬೆಂಗ್ಳೂರು ಹುಡುಗಿ. ಸಿನಿಮಾ ಕ್ಷೇತ್ರಕ್ಕೆ ಕಾಲಿಡುತ್ತೇನೆ ಎನ್ನುವ ಸಣ್ಣ ಸುಳಿವೂ ನನಗೆ ಇರಲಿಲ್ಲ. ಸಿನಿಮಾ ಹಿನ್ನೆಲೆಯೂ ನನಗೆ ಇಲ್ಲ. ಶಾಲಾ ದಿನಗಳಲ್ಲಿ ಹಾಗೂ ಪದವಿಯ ಸಂದರ್ಭದಲ್ಲಿ ಹವ್ಯಾಸಿ ರಂಗಭೂಮಿ ಕಲಾವಿದೆಯಾಗಿದ್ದೆ. ಪದವಿಯ ಬಳಿಕ ರಾಷ್ಟ್ರೀಯ ನಾಟಕ ಶಾಲೆಗೆ (ಎನ್‌ಎಸ್‌ಡಿ) ಸೇರುವ ಬಯಕೆ ನನ್ನದಾಗಿತ್ತು. ಆದರೆ ಪೋಷಕರ ಒತ್ತಡದ ಕಾರಣ ಎಂಜಿನಿಯರಿಂಗ್ ಸೇರಿಕೊಂಡೆ. ಎಂಜಿನಿಯರಿಂಗ್‌ನ ಅಂತಿಮ ವರ್ಷದಲ್ಲಿದ್ದಾಗ ಅನೀಶ್ ಅವರ ವಿಂಕ್‌ವಿಸಿಲ್ ಪ್ರೊಡಕ್ಷನ್ಸ್ 'ಬೆಂಗಳೂರು ಕ್ವೀನ್ಸ್' ಎಂಬ ವೆಬ್‌ಸರಣಿಗೆ ಕಾಸ್ಟಿಂಗ್ ಕಾಲ್ ಮಾಡಿತ್ತು. ಈ ಸಂದರ್ಭದಲ್ಲಿ 'ಸೈಲೆಂಟ್ ಸ್ವಾತಿ' ಎಂಬ ಪಾತ್ರಕ್ಕೆ ನನ್ನ ಫೋಟೊವನ್ನು ನನ್ನ ಸ್ನೇಹಿತೆಯರು ನನಗೇ ತಿಳಿಯದ ಹಾಗೆ ಕಳುಹಿಸಿದ್ದರು. ಈ ಪಾತ್ರಕ್ಕೆ ನನ್ನ ಆಯ್ಕೆಯಾಗಿತ್ತು. ಮೊದಲ ಬಾರಿಗೆ ಕ್ಯಾಮೆರಾ ಮುಂದೆ ನಿಂತಿದ್ದೆ. ಹೀಗೆ ಇಲ್ಲಿಂದ ನನ್ನ ಸಿನಿಪಯಣ ಆರಂಭವಾಯಿತು.

• ಬೆಳ್ಳಿತೆರೆಯ ಪಯಣ...

ವೆಬ್‌ಸರಣಿ ಬಳಿಕ ಗುರುಪ್ರಸಾದ್ ಅವರ ನಿರ್ದೇಶನದ 'ಅದೇಮಾ' ಚಿತ್ರಕ್ಕೆ ಆಡಿಷನ್ ನೀಡಿದ್ದೆ. ಇದು ನಾನು ಒಪ್ಪಿಕೊಂಡಿದ್ದ ಮೊದಲ ಸಿನಿಮಾ. ಆದರೆ ಕಾರಣಾಂತರಗಳಿಂದ ಇದರ ಚಿತ್ರೀಕರಣ ಅರ್ಧದಲ್ಲೇ ಸ್ಥಗಿತವಾಯಿತು. ಇದಾದ ಬಳಿಕ ರಾಜ್ ಬಿ.ಶೆಟ್ಟಿ ಅವರಿದ್ದ 'ಮಹಿರ' ಸಿನಿಮಾಗೆ ಆಡಿಷನ್ ನೀಡಿದ್ದೆ. ಇದು ನನ್ನ ಮೊದಲ ಸಿನಿಮಾ. ಇದಾದ ಬಳಿಕ ನೇರವಾಗಿ ನನಗೆ ಆಫರ್‌ಗಳು ಬರಲು ಆರಂಭವಾದವು. ಹೀಗಾಗಿ ನನಗೆ ಕಿಕ್‌ಸ್ಟಾರ್ಟ್ ನೀಡಿದ ಸಿನಿಮಾ 'ಮಹಿರ'. ಬಳಿಕ 'ತಲೆದಂಡ', 'ಆದೃಶ್ಯ', 'ಗಿಲ್ಕಿ' ಹೀಗೆ ಸಾಲು ಸಾಲು ಸಿನಿಮಾಗಳು ಕೈಹಿಡಿದವು. ಪರಂವಃ ಸ್ಟಾಟ್ಲೈಟ್ ಬ್ಯಾನರ್‌ನಡಿ ನಿರ್ಮಾಣವಾಗುತ್ತಿರುವ 'ಸ್ಟ್ರಾಬೆರಿ' ಸಿನಿಮಾದಲ್ಲೂ ನಾನು ನಟಿಸಿದ್ದು, ನಾಗರಾಜ್ ಸೋಮಯಾಜಿ ನಿರ್ದೇಶನದ 'ಅಕಟಕಟ' ಸಿನಿಮಾ ಪ್ರಿಪ್ರೊಡಕ್ಷನ್ ಹಂತದಲ್ಲಿದೆ. ನವೆಂಬರ್–ಡಿಸೆಂಬರ್‌ನಲ್ಲಿ ಇದರ ಚಿತ್ರೀಕರಣ ಆರಂಭವಾಗಬಹುದು.

> **ಯಾರು ಈ 'ಸುರಭಿ'?**
>
> 'ಸುರಭಿ' ಎಲ್ಲ ಹುಡುಗಿಯರಂತೆ ಸಾಮಾನ್ಯ ಹುಡುಗಿ. ಎಲ್ಲರ ರೀತಿ ದುಡಿಯುವ ಹುಡುಗಿ. ವೃತ್ತಿ ವಿಚಾರದಲ್ಲಿ ಯಾವುದೇ ವಿಶೇಷ ಇಲ್ಲ. ಆದರೆ ಒಳಗೆಷ್ಟು ಪ್ರೀತಿ ಇದ್ದರೂ, ಅಳುಕು ಇದ್ದರೂ ಹೊರಗಡೆ ತೋರಿಸಿಕೊಳ್ಳದ ವ್ಯಕ್ತಿತ್ವ ಅವಳದ್ದು. ಜೀವನದಲ್ಲಿ ಬಹಳಷ್ಟು ಸಂಕಷ್ಟ, ಕಷ್ಟ ಅನುಭವಿಸಿದ್ದಾಳೆ. ಇದನ್ನೆಲ್ಲಾ ಪಕ್ಕಕ್ಕೆ ಇಟ್ಟು ಜೀವನ ನಡೆಸುತ್ತಿರುವವಳೇ 'ಸುರಭಿ'. ಈ ಪಾತ್ರವನ್ನು ಡಿಕೋಡ್ ಮಾಡುವುದು ಇತರರಿಗೆ ಅಷ್ಟು ಸುಲಭವಲ್ಲ. ತನ್ನ ಸುತ್ತ ಒಂದು ರೇಖೆ ಬರೆದುಕೊಂಡು ಬೇರೆ ಯಾರನ್ನೂ ಹತ್ತಿರ ಸೇರಿಸದೆ ಬದುಕುವವಳು ಆಕೆ. ಸುರಭಿ ಹಾಡುತ್ತಾಳೆ, ಗುನುಗುತ್ತಾಳೆ, ಆದರೆ ಗಾಯಕಿ ಅಲ್ಲ. 'ಸುರಭಿ'ಗೆ 'ಮನು'(ರಕ್ಷಿತ್ ಶೆಟ್ಟಿ) ಎಂಬ ಪಾತ್ರದ ಜೊತೆ ಹೇಗೆ ಸಂಬಂಧ ಬೆಳೆಯುತ್ತದೆ ಎನ್ನುವುದೇ ಕಥೆ. ಇದನ್ನು ಅದ್ಭುತವಾಗಿ ಹೇಮಂತ್ ಹೆಣೆದಿದ್ದಾರೆ. ನಾನು ಈ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕು ಎಂದು ಎಷ್ಟು ಉತ್ಸುಕಳಾಗಿದ್ದೇನೋ ಅಷ್ಟೇ ಭಯ ಒಳಗಿದೆ. ರಕ್ಷಿತ್ ಅವರ ಜೊತೆ ನಟನೆಯ ಕಾರ್ಯಾಗಾರ ಶೀಘ್ರದಲ್ಲೇ ಆರಂಭವಾಗಲಿದೆ.

• 'ತಲೆದಂಡ' ಸಿನಿಮಾದ ಅನುಭವ...

ನಟನೆಯ ಬಗ್ಗೆ ನನಗೆ ಒಲವಿತ್ತು. ಅದು ಗಂಭೀರವಾದ ಪಾತ್ರವಾಗಿರಲಿ ಅಥವಾ ಹಾಸ್ಯ ಪ್ರಧಾನ ಚಿತ್ರವಾಗಿರಲಿ ನನಗೆ ನಟನೆಯಷ್ಟೇ ಕಾಣುತ್ತಿತ್ತು. ನನಗೆ ಕಥೆ, ಪಾತ್ರ ಸೆಳೆಯುತ್ತದೇ ವಿನಾ ಅದು ಕಮರ್ಷಿಯಲ್ ಸಿನಿಮಾವೇ ಅಥವಾ ಕಲಾತ್ಮಕ ಚಿತ್ರವೇ ಎನ್ನುವುದನ್ನು ನಾನು ನೋಡುವುದಿಲ್ಲ. ಈ ಕಥೆಯಲ್ಲಿ ನನ್ನ ಪಾತ್ರವನ್ನು ತೆಗೆದುಹಾಕಿದರೆ ಸಿನಿಮಾ ಅಪೂರ್ಣ ಎನ್ನುವಂತಿದ್ದರೆ ಕಣ್ಣುಮುಚ್ಚಿ ಆ ಪಾತ್ರವನ್ನು ನಾನು ಒಪ್ಪಿಕೊಳ್ಳುತ್ತೇನೆ. ತೆರೆಯ ಮೇಲೆ ಐದು ನಿಮಿಷವೇ ಆ ಪಾತ್ರ ಬರಲಿ, ಆ ಪಾತ್ರ ಪ್ರೇಕ್ಷಕನ ಮನಸ್ಸಿನಲ್ಲಿ ಉಳಿಯುವಂತಿರಬೇಕು. ಇಂಥ ಪಾತ್ರ ನನಗೆ 'ತಲೆದಂಡ' ಸಿನಿಮಾದಲ್ಲಿ ದೊರಕಿತ್ತು. ಸೋಲಿಗರ ಹುಡುಗಿ ಪಾತ್ರ ಸವಾಲಿನಿಂದ ಕೂಡಿತ್ತು. ಬೆಂಗ್ಳೂರು ಹುಡುಗಿಯಾಗಿ ಆ ಭಾಷೆ ಕಲಿತೆ. ಸಂಚಾರಿ ವಿಜಯ್ ಅವರ ಜೊತೆಗಿನ ನಟನೆ ಕ್ಷಣಕ್ಷಣವೂ ನೆನಪುಗಳ ಬುತ್ತಿ ತೆರೆಯುತ್ತದೆ. ರಾಷ್ಟ್ರಪ್ರಶಸ್ತಿ ವಿಜೇತ ನಟನಾದರೂ, ಯಾವ ಹಮ್ಮು ಇಲ್ಲದೆ ಜೊತೆಗೆ ಬೆರೆಯುತ್ತಿದ್ದರು, ನಮ್ಮ ಸಲಹೆಗಳಿಗೆ ಕಿವಿಯಾಗುತ್ತಿದ್ದರು. ನಮಗೂ ನಟನೆಯ ಹಲವು ಸಲಹೆ ನೀಡುತ್ತಿದ್ದರು. ಪರಕಾಯ ಪ್ರವೇಶದ ನಟನೆ ಅವರದ್ದು. ವಿಜಯ್ ಅವರನ್ನು ನೆನಪಿಸಿಕೊಂಡಾಗಲೆಲ್ಲ, ಮಾತನಾಡುವಾಗೆಲ್ಲ ನಾನು ಭಾವುಕಳಾಗುತ್ತೇನೆ.

• 'ಸಪ್ತ ಸಾಗರದಾಚೆ..' ಚೈತ್ರಾ ಹೆಜ್ಜೆ ಇಟ್ಟ ಕ್ಷಣ...

'ಬ್ಲಿಂಕ್' ಸಿನಿಮಾದ ಚಿತ್ರೀಕರಣದಲ್ಲಿದ್ದ ವೇಳೆ ನನಗೆ 'ಸಪ್ತ ಸಾಗರದಾಚೆ ಎಲ್ಲೋ'(ಎಸ್‌ಎಸ್‌ಇ) ಸಿನಿಮಾ ತಂಡದಿಂದ ಕರೆಬಂದಿತ್ತು. ಈ ತಂಡ ಇನ್ನೊಂದು ಸಿನಿಮಾ ಮಾಡುತ್ತಿರಬೇಕು ಅದಕ್ಕಾಗಿ ಆಡಿಷನ್‌ಗೆ ಕರೆಯುತ್ತಿದ್ದಾರೆ ಎಂದು ನನಗನಿಸಿತು. ವಾರದ ನಂತರ ನಾನು 'ಎಸ್‌ಎಸ್‌ಇ' ಕಚೇರಿಗೆ ಹೋದೆ. ನಿರ್ದೇಶಕ ಹೇಮಂತ್ ಎಂ. ರಾವ್ ಅವರು ಎದುರಿಗೆ ಕುಳಿತು ಎಸ್‌ಎಸ್‌ಇ ದ್ವಿತೀಯಾರ್ಧದ ಕಥೆ ಹೇಳುತ್ತಾ, 'ಸುರಭಿ' ಎಂಬ ಪಾತ್ರವನ್ನು ನೀವು ಮಾಡಬೇಕು ಎಂದರು. ನನಗಿನ್ನೂ ನೆನಪಿದೆ. ಎಂಜಿನಿಯರಿಂಗ್ ಓದುತ್ತಿರುವಾಗ ಹೇಮಂತ್ ಅವರ 'ಗೋಧಿ ಬಣ್ಣ ಸಾಧಾರಣ ಮೈಕಟ್ಟು' ಸಿನಿಮಾವನ್ನು ಆರೇಳು ಸಲ ಚಿತ್ರಮಂದಿರಕ್ಕೆ ಹೋಗಿ ವೀಕ್ಷಿಸಿದ್ದೆ. ನನ್ನ ಫೇವರೆಟ್ ನಿರ್ದೇಶಕರು ಅವರು. ಈಗ ಅವರೇ ನನ್ನನ್ನು ಅವರ ಸಿನಿಮಾಗೆ ಆಯ್ಕೆ ಮಾಡಿದ್ದಾರೆ ಎಂದು ಆ ಕ್ಷಣದಲ್ಲಿ ನಂಬದಾದೆ. ಅಂದು ನನ್ನ ಕನಸು ನನಸಾಗಿತ್ತು.

• ಪರಂವಃ ಎನ್ನುವ ದೊಡ್ಡ ಬ್ಯಾನರ್‌ನಡಿ ಕೆಲಸ ಮಾಡಿದ ಅನುಭವ ಹೇಗಿತ್ತು?

ನಾನು ರಕ್ಷಿತ್ ಶೆಟ್ಟಿ ಅವರ ಫ್ಯಾನ್. ಪರಂವಃದಡಿ ಇನ್ನೊಂದೆರಡು ಸಿನಿಮಾ ಮಾಡಿದರೆ ನಾನು ರಕ್ಷಿತ್ ಅವರಿಂದ ಪಿಂಚಣಿ ಕೇಳಬೇಕಾಗುತ್ತದೆ. 'ಗರುಡ ಗಮನ ವೃಷಭ ವಾಹನ' ಸಿನಿಮಾದಲ್ಲಿ 'ಸೋಜುಗದಾ ಸೂಜು ಮಲ್ಲಿಗೆ' ಹಾಡು ಹಾಡಿದ್ದೆ, ನಂತರ 'ಸ್ಟ್ರಾಬೆರಿ', ಇದೀಗ 'ಎಸ್‌ಎಸ್‌ಇ' ಹೀಗೆ ಪರಂವಃ ಜೊತೆ ಬ್ಯಾಕ್ ಟು ಬ್ಯಾಕ್ ಅಸೋಸಿಯೇಷನ್ ಇದ್ದೇ ಇದೆ. ನನ್ನ ಕೆಲಸದ ಮುಖಾಂತರ ಇಂತಹ ತಂಡದ ಜೊತೆ ಸೇರುತ್ತಿರುವುದು ನನಗೆ ಹೆಚ್ಚಿನ ಸ್ಫೂರ್ತಿ ನೀಡುತ್ತದೆ. ಸಿನಿಮಾ ಮೇಲೆ ರಕ್ಷಿತ್ ಅವರಿಗೆ ಇರುವ ಹುಚ್ಚು, ಅತಿಯಾದ ಅಭಿಮಾನ ನನ್ನನ್ನೂ ಆಕರ್ಷಿಸಿದೆ. ಕಥೆಯನ್ನು ನೋಡಿ ಎಕ್ಸೈಟ್ ಆಗುವ ವ್ಯಕ್ತಿ ಅವರು. ರಕ್ಷಿತ್ ಅವರು ನಿರ್ಮಾಪಕನಾಗಿ ತುಂಬಾ ದುಡ್ಡು ಮಾಡಬೇಕು. ಏಕೆಂದರೆ ಅವರು ಅದನ್ನು ಮತ್ತೆ ಸಿನಿಮಾಗೆ ಹೂಡುತ್ತಾರೆ, ಇದರಿಂದ ಕಲಾವಿದರಿಗೆ ಅವಕಾಶ ಸಿಗುತ್ತದೆ. ಈ ಮಾತು ಹೇಳುವಾಗ ಕೊಂಚ ಸ್ವಾರ್ಥವೂ ಇದೆ. ಸದ್ಯಕ್ಕೆ ಹೊಸ ಕಥೆಗಳನ್ನು ಕೇಳುತ್ತಿದ್ದೇನೆ. ಒಂದೆರಡು ಕಥೆಗಳು ಇಷ್ಟವಾಗಿದೆ. ಒಂದು ಪಾತ್ರವನ್ನು ಪೂರ್ಣಗೊಳಿಸಿ ಮತ್ತೊಂದು ಪಾತ್ರಕ್ಕೆ ಧುಮುಕುವ ನಿಯಮ ನನ್ನದು.

ಸಮೃದ್ಧಿ

ಡ್ರಾಮಾ ಜೂನಿಯರ್ಸ್ ಪ್ರಶಸ್ತಿ ಬಾಚಿದ ಸಮೃದ್ಧಿ

ಕಿರುತೆರೆ

ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಮಕ್ಕಳ ರಿಯಾಲಿಟಿ ಶೋ 'ಡ್ರಾಮಾ ಜೂನಿಯರ್ಸ್ ಸೀಸನ್ 4' ಅಂತಿಮ ಸ್ಪರ್ಧೆಯಲ್ಲಿ ಕುಂದಾಪುರದ ಸಮೃದ್ಧಿ ಎಸ್. ಮೊಗವೀರ್ ಪ್ರಶಸ್ತಿ ಬಾಚಿಕೊಂಡಿದ್ದಾಳೆ. ಚಾಮರಾಜನಗರದ ಗೌತಮ್ ರಾಜ್ ಮತ್ತು ಉಡುಪಿಯ ಸಾನಿಧ್ಯ ಆಚಾರ್ ಸಮಬಲ ಸಾಧಿಸಿಕೊಂಡು ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

23 ವಾರ ಪ್ರಸಾರವಾಗಿದ್ದ ಈ ಸ್ಪರ್ಧೆಯಲ್ಲಿ ಅಂತಿಮ ಸುತ್ತಿಗೆ 15 ಮಕ್ಕಳು ಆಯ್ಕೆಯಾಗಿದ್ದರು. ನಾಲ್ಕು ಮಕ್ಕಳು ಪ್ರಶಸ್ತಿ ಹಂತದವರೆಗೆ ತಲುಪಿದರು.

ಇನ್ನು ಮಂಗಳೂರಿನ ವೇದಿಕ್ ಮೂರನೇ ಸ್ಥಾನ ಪಡೆದಿದ್ದಾನೆ. ಈ ಸೀಸನ್‌ಗೆ ವಿಶಿಷ್ಟ ಪ್ರತಿಭೆಯಾಗಿ ಬಂದಿದ್ದ ರಾಯಚೂರಿನ ಕುಳ್ಳ ಸಿಂಗಂ ಖ್ಯಾತಿಯ ಅರುಣ್‌ಗೆ ವಿಶೇಷ ಬಹುಮಾನವಾಗಿ ₹ 1 ಲಕ್ಷ ನಗದು ನೀಡಲಾಯಿತು.

ಈ ಸೀಸನ್ ಬಳಿಕ ಕಾಮಿಡಿ ಕಿಲಾಡಿಗಳು ಸೀಸನ್ 4 ಆರಂಭವಾಗಲಿದೆ. ಮಾಸ್ಟರ್ ಆನಂದ್ ನಿರೂಪಣೆಯಿದೆ. ನಿರ್ದೇಶಕ ಯೋಗರಾಜ್ ಭಟ್, ನವರಸನಾಯಕ ಜಗ್ಗೇಶ್ ಮತ್ತು ಕ್ರೇಜಿ ಕ್ವೀನ್ ರಕ್ಷಿತಾ ಅವರು ತೀರ್ಪುಗಾರರಾಗಿರಲಿದ್ದಾರೆ ಎಂದು ವಾಹಿನಿಯ ಮುಖ್ಯಸ್ಥ ರಾಘವೇಂದ್ರ ಹುಣಸೂರು ಮಾಹಿತಿ ನೀಡಿದರು.

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸೈಮಾ ಅವಾರ್ಡ್ಸ್ ಬೆಂಗಳೂರಿನಲ್ಲೇ ಏಕೆ?

ದಕ್ಷಿಣ ಭಾರತದ ಚಿತ್ರರಂಗದ ಪ್ರತಿಷ್ಠಿತ 'ಸೈಮಾ' ಪ್ರಶಸ್ತಿ ಪ್ರದಾನ ಸಮಾರಂಭ ಈ ಬಾರಿ ಬೆಂಗಳೂರಿನಲ್ಲಿ ನಡೆಯಲಿದೆ. ಈ ಪ್ರಶಸ್ತಿ ಸ್ಥಾಪನೆಯ ದಶಮಾನೋತ್ಸವ ಆಚರಣೆಯ ಗರಿಯೂ ಬೆಂಗಳೂರಿಗೆ ಸಲ್ಲುತ್ತದೆ. ಇನ್ನೂ ವಿಶೇಷ ಏನು ಗೊತ್ತಾ? ಇತ್ತೀಚೆಗೆ ಕನ್ನಡ ಚಿತ್ರಗಳು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸೂಪರ್ ಹಿಟ್ ಆಗಿ ಗಮನ ಸೆಳೆಯುತ್ತಿರುವುದೂ ಈ ಸಮಾರಂಭ ಇಲ್ಲಿ ಆಯೋಜಿಸಲು ಮುಖ್ಯ ಕಾರಣ ಎಂದಿದ್ದಾರೆ ಆಯೋಜಕರು.

ಈ ಸಮಾರಂಭವನ್ನು ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಗೌರವಾರ್ಥ ಇಲ್ಲಿ ಏರ್ಪಡಿಸಲಾಗುತ್ತಿದೆ ಎಂದಿದ್ದಾರೆ 'ಸೈಮಾ' ಮುಖ್ಯಸ್ಥೆ ಬೃಂದಾ ಪ್ರಸಾದ್.

ನಟರಾದ ರಾಣಾ ದಗ್ಗುಬಾಟಿ, ಡಾಲಿ ಧನಂಜಯ್, ನಟಿಯರಾದ ಶಾನ್ವಿ ಶ್ರೀವಾಸ್ತವ್, ಫರಿಯಾ ಅಬ್ದುಲ್ಲಾ, ಶ್ರೀಲೀಲಾ ಅವರು ಕಾರ್ಯಕ್ರಮದ ಅಧಿಕೃತ ಘೋಷಣಾ ಕಾರ್ಯಕ್ರಮದಲ್ಲಿ ಇದ್ದರು.

ಸಾಮಾಜಿಕ ಜಾಲತಾಣಗಳು ಹಾಗೂ 'ಸೈಮಾ' ಜಾಲತಾಣಗಳಲ್ಲಿ 2021ನೇ ಸಾಲಿನಲ್ಲಿ ಬಿಡುಗಡೆಯಾದ ಚಿತ್ರಗಳ, ಕಲಾವಿದರ ಪರ ಮತದಾನ ಆರಂಭವಾಗಿದೆ. ಸೆಪ್ಟೆಂಬರ್ 10ರಂದು ಚಿತ್ರಪ್ರೇಮಿಗಳ ಕುತೂಹಲಕ್ಕೆ ಉತ್ತರ ದೊರೆಯಲಿದೆ.

ಅರ್ಜುನ್ ರಮೇಶ್, ಪ್ರಿಯಾಂಕಾ ಚಿಂಚೋಳಿ

ತೆರೆಯಲ್ಲಿ 'ಕೌಟಿಲ್ಯ'ನ ಎಂಜಿನಿಯರಿಂಗ್

ಇಂದು ತೆರೆಗೆ

ಅರ್ಜುನ್ ರಮೇಶ್ ನಟನೆಯ 'ಕೌಟಿಲ್ಯ' ಆಗಸ್ಟ್ 26ರಂದು ತೆರೆ ಕಾಣಲಿದೆ. ಸದ್ಯ ವೂಟ್ ಸೆಲೆಕ್ಟ್ ಒಟಿಟಿಯಲ್ಲಿ ಪ್ರಸಾರವಾಗುತ್ತಿರುವ 'ಬಿಗ್ ಬಾಸ್'ನಲ್ಲಿ ಪಾಲ್ಗೊಂಡಿದ್ದಾರೆ ಅರ್ಜುನ್ ರಮೇಶ್.

'ನಮ್ಮ ಚಿತ್ರದ ಟ್ರೇಲರ್ ಪ್ರೇಕ್ಷಕರ ಮನ ತಲುಪಿದೆ. ರಕ್ಷಿತ್ ಶೆಟ್ಟಿ, ನಿರ್ದೇಶಕ ಸೂರಿ ಸೇರಿದಂತೆ ಸಾಕಷ್ಟು ಗಣ್ಯರು ಟ್ರೇಲರ್ ಬಗ್ಗೆ ಉತ್ತಮ ಮಾತುಗಳಾಡಿದ್ದಾರೆ. ಇದೇ ಶುಕ್ರವಾರ ಚಿತ್ರ ಬಿಡುಗಡೆಯಾಗುತ್ತಿದೆ' ಎಂದರು ನಿರ್ದೇಶಕ ಪ್ರಭಾಕರ್ ಶೇರಖಾನೆ.

'ನಾನು ಈ ಹಿಂದೆ 'ಶನಿ' ಸೇರಿದಂತೆ ಹಲವು ಧಾರಾವಾಹಿಗಳಲ್ಲಿ ನಟಿಸುತ್ತಿದ್ದೆ. ನನ್ನದು ಈ ಚಿತ್ರದಲ್ಲಿ ಆರ್ಕಿಟೆಕ್ಟ್ ಎಂಜಿನಿಯರ್ ಪಾತ್ರ. ಒಬ್ಬ ಎಂಜಿನಿಯರ್ ಚಾಣಕ್ಯನ ತಂತ್ರಗಳನ್ನು ಯಾವ ರೀತಿ ಬಳಸಿಕೊಳ್ಳುತ್ತಾನೆ ಎನ್ನುವುದನ್ನು ಈ ಚಿತ್ರದಲ್ಲಿ ನೋಡಬಹುದು' ಎಂದು ನಾಯಕ ಅರ್ಜುನ್ ರಮೇಶ್ ಹೇಳಿದರು.

'ನಾನು ಈ ಚಿತ್ರದಲ್ಲಿ ಪತ್ರಕರ್ತೆಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ. ನನ್ನನ್ನು ಧಾರಾವಾಹಿಗಳಲ್ಲಿ ಮುಗ್ಧ ಹುಡುಗಿಯ ಪಾತ್ರದಲ್ಲಿ ನೋಡಿದ್ದೀರಿ. ಇದರಲ್ಲಿ ಒಬ್ಬರು ಬಯ್ದರೆ ವಾಪಸ್ ಬೈಯುವ ಹುಡುಗಿ ನಾನು' ಎಂಬುದು ಚಿತ್ರದ ನಾಯಕಿ ಪ್ರಿಯಾಂಕ ಚಿಂಚೋಳಿ ಮಾತು. ವಿಜೇಂದ್ರ ಬಿ.ಎ. ಈ ಚಿತ್ರದ ನಿರ್ಮಾಪಕರು.

ಧೀರನ್ ಅಭಿನಯದ ಶಿವ 143

ನಟ ಡಾ.ರಾಜಕುಮಾರ್ ಮೊಮ್ಮಗ ಧೀರನ್ ರಾಮಕುಮಾರ್, ನಾಯಕಿಯಾಗಿ ಮಾನ್ವಿತಾ ಕಾಮತ್ ನಟಿಸಿರುವ 'ಶಿವ 143' ಚಿತ್ರ ಆಗಸ್ಟ್ 26ರಂದು ತೆರೆ ಕಾಣುತ್ತಿದೆ. ಚರಣ್ ರಾಜ್, ಸಾಧುಕೋಕಿಲ ಹಾಗೂ ಚಿಕ್ಕಣ್ಣ ತಾರಾಗಣದಲ್ಲಿದ್ದಾರೆ. ಅನಿಲ್ ಕುಮಾರ್ ಈ ಚಿತ್ರದ ನಿರ್ದೇಶಕ.

ಜಯಣ್ಣ, ಭೋಗೇಂದ್ರ ಹಾಗೂ ಡಾ.ಸೂರಿ ನಿರ್ಮಿಸಿರುವ ಈ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ನೀಡಿದ್ದಾರೆ.

'ಪೆಟ್ರೋಮ್ಯಾಕ್ಸ್' ಬೆಳಕು, 'ವಿಕ್ರಾಂತ್ ರೋಣ'ನ ಓಟ

ಒಟಿಟಿ

ಚಂದನವನದ ಪ್ರಮುಖ ಎರಡು ಚಿತ್ರಗಳು ಒಟಿಟಿ ವೇದಿಕೆಗಳಲ್ಲಿ ಪ್ರಸಾರವಾಗಲಿವೆ. ಹಾಸ್ಯ ಪ್ರಧಾನ 'ಪೆಟ್ರೋಮ್ಯಾಕ್ಸ್' ವೂಟ್ ಸೆಲೆಕ್ಟ್‌ನಲ್ಲಿ ಆ. 26ರಂದು ಪ್ರಸಾರವಾಗಲಿದೆ. ವಿಜಯಪ್ರಸಾದ್ ನಿರ್ದೇಶನದ ಸಿನಿಮಾ ಇದು. ಸತೀಶ್ ನೀನಾಸಂ, ಹರಿಪ್ರಿಯಾ, ನಾಗಭೂಷಣ್, ಕಾರುಣ್ಯ ರಾಂ, ಅಚ್ಯುತ್ ಕುಮಾರ್, ಸುಮನ್ ರಂಗನಾಥನ್ ಮತ್ತು ಅರುಣ್ ಕುಮಾರ್ ತಾರಾಗಣದಲ್ಲಿದ್ದಾರೆ.

'ಪೆಟ್ರೋಮ್ಯಾಕ್ಸ್' ಚಿತ್ರವು ನಾಲ್ವರು ಅನಾಥರ ಜೀವನದ ಮೇಲೆ ಕೇಂದ್ರೀಕೃತವಾಗಿದೆ. ಊದುಬತ್ತಿ ಶಿವಪ್ಪ, ಅಗರಬತ್ತಿ ಮಾದಪ್ಪ, ಕೃಷ್ಣಮೂರ್ತಿ ಮತ್ತು ಕವಿತಾ ಕೃಷ್ಣಮೂರ್ತಿ ಪಾತ್ರಧಾರಿಗಳಾಗಿದ್ದಾರೆ. ಏಕಾಂಗಿ ಜೀವನದ ಪ್ರಯೋಗಗಳು ಮತ್ತು ಕ್ಲೇಶಗಳನ್ನು ಬಿಂಬಿಸುವ ಈ ಚಿತ್ರವು ಒಡನಾಟ, ಮಾನವ ಸಂಬಂಧಗಳು ಮತ್ತು ಒಗ್ಗಟ್ಟಿನ ಸಾರವನ್ನು ವಿವರಿಸುತ್ತದೆ ಎಂದಿದೆ ಚಿತ್ರತಂಡ.

ವಿಕ್ರಾಂತ್ ರೋಣ: ಜುಲೈ 28ರಂದು ಬಿಡುಗಡೆಯಾಗಿದ್ದ 'ವಿಕ್ರಾಂತ್ ರೋಣ' ಈಗ ಝೀ 5 ಒಟಿಟಿಯಲ್ಲಿ ಸೆ. 2ರಂದು ಪ್ರಸಾರವಾಗಲಿದೆ. ಕಿಚ್ಚ ಸುದೀಪ್ ಹಾಗೂ ಅನೂಪ್ ಭಂಡಾರಿ ಕಾಂಬಿನೇಷನ್‌ನ ಚಿತ್ರವಿದು. ಜಾಕ್ ಮಂಜು ನಿರ್ಮಾಣದಲ್ಲಿ ಅದ್ದೂರಿಯಾಗಿ ತಯಾರಾಗಿದ್ದ ವಿಕ್ರಾಂತ್ ರೋಣ ಸಿನಿಮಾದಲ್ಲಿ ಬಾಲಿವುಡ್ ನಟಿ ಜಾಕ್ವೆಲಿನ್ ಫರ್ನಾಂಡಿಸ್ ಸುದೀಪ್ ಜೊತೆಗೆ ಹೆಜ್ಜೆ ಹಾಕಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಎಷ್ಟು ಗಟ್ಟಿ ಮನುಷ್ಯನೇ ಇರಲಿ, ಹೊಗಳಿಕೆಗೆ ಕಿವಿಗೊಟ್ಟನೆಂದರೆ ಬಲೆಗೆ ಬೀಳುತ್ತಾನೆ.

-ಶಿವರಾಮ ಕಾರಂತ

ಕೇಂದ್ರೀಯ ವಿ.ವಿ. ಪ್ರವೇಶ ಪರೀಕ್ಷೆ ನಿರ್ವಹಣಾ ವೈಫಲ್ಯದಿಂದ ಗೊಂದಲ

ಕೇಂದ್ರೀಯ ವಿಶ್ವವಿದ್ಯಾಲಯಗಳ ಪ್ರವೇಶಕ್ಕಾಗಿ ರಾಷ್ಟ್ರದಾದ್ಯಂತ ಏಕೀಕೃತ ಪರೀಕ್ಷೆ ನಡೆಸುವ ಪ್ರಸ್ತಾವವನ್ನು ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಈ ವರ್ಷದ ಆರಂಭದಲ್ಲಿ ಮುಂದಿಟ್ಟಾಗ ಎಲ್ಲ ಕಡೆಗಳಿಂದಲೂ ಸ್ವಾಗತ ವ್ಯಕ್ತವಾಗಿತ್ತು. ಈ ಕ್ರಮದಿಂದ ಪ್ರವೇಶ ಪ್ರಕ್ರಿಯೆ ಸರಳಗೊಳ್ಳುವುದರ ಜತೆಗೆ ವಿದ್ಯಾರ್ಥಿಗಳ ಮೇಲಿನ ಒತ್ತಡವೂ ಕಡಿಮೆಯಾಗಲಿದೆ ಎಂಬ ಆಶಾಭಾವ ಇತ್ತು. ಆದರೆ, ಆ ಪ್ರಸ್ತಾವದ ಅನುಸಾರ ರೂಪುಗೊಂಡ ಕೇಂದ್ರೀಯ ವಿಶ್ವವಿದ್ಯಾಲಯಗಳ ಪ್ರವೇಶ ಪರೀಕ್ಷೆಯನ್ನು (ಸಿಯುಇಟಿ) ಸದ್ಯ ಬಹು ಹಂತಗಳಲ್ಲಿ ನಡೆಸಲಾಗುತ್ತಿದ್ದು, ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಅಲ್ಲದೆ, ವಿದ್ಯಾರ್ಥಿಗಳ ಮೇಲೆ ಇನ್ನಷ್ಟು ಒತ್ತಡ ಬೀಳುವಂತೆಯೂ ಮಾಡಿದೆ. ಮೊದಲಿಗೆ ಇದೇ ಜುಲೈ 15ರಂದು ಈ ಪರೀಕ್ಷೆ ನಡೆಯಿತು. ಸರ್ವರ್ ವೈಫಲ್ಯ, ಪ್ರವೇಶಪತ್ರ ನೀಡುವಲ್ಲಿ ವಿಳಂಬ, ಪ್ರಶ್ನೆಗಳಿಗೆ ಸಂಬಂಧಿಸಿದ ಗೊಂದಲ ಮತ್ತು ಪರೀಕ್ಷಾ ಕೇಂದ್ರಗಳ ಕುರಿತು ಸಮರ್ಪಕ ಮಾಹಿತಿಯ ಕೊರತೆ ಸೇರಿದಂತೆ ನಿರ್ವಹಣೆಯಲ್ಲಿ ಉಂಟಾದ ಹಲವು ದೋಷಗಳಿಂದ ವಿದ್ಯಾರ್ಥಿಗಳು ತೀವ್ರ ತೊಂದರೆಯನ್ನು ಅನುಭವಿಸಿದರು. ಕೆಲವು ಪ್ರಕರಣಗಳಲ್ಲಿ, ಪ್ರಶ್ನೆಪತ್ರಿಕೆಗಳನ್ನು ಸರಿಯಾದ ಸಮಯಕ್ಕೆ ಅಪ್‌ಲೋಡ್ ಮಾಡಲಾಗಿರಲಿಲ್ಲ. ಇಂತಹ ವಿವಿಧ ಕಾರಣಗಳಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಪರೀಕ್ಷೆಯನ್ನೇ ಬರೆಯಲು ಆಗಲಿಲ್ಲ. ನಿರ್ವಹಣೆಯಲ್ಲಿ ಉಂಟಾದ ಸಮಸ್ಯೆಗಳನ್ನು ಹೋಗಲಾಡಿಸಲು ಸಾಧ್ಯವಾಗದೆ ಹಲವು ವಿದ್ಯಾರ್ಥಿಗಳ ಪರೀಕ್ಷೆಯನ್ನೇ ಮುಂದೂಡಲಾಯಿತು. ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸಲು ವಿಫಲವಾದ ಕಾರಣಕ್ಕಾಗಿ ಈಗ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ತೀವ್ರ ಟೀಕೆಯನ್ನು ಎದುರಿಸಬೇಕಾಗಿದೆ.



ಪರೀಕ್ಷೆಯನ್ನು ಸುಸೂತ್ರವಾಗಿ ಆಯೋಜಿಸುವಲ್ಲಿ ಎನ್‌ಟಿಎ ವಿಫಲವಾದರೆ ಅದರ ವಿಶ್ವಾಸಾರ್ಹತೆಗೆ ಧಕ್ಕೆ ಉಂಟಾಗಲಿದೆ ಮತ್ತು ವಿದ್ಯಾರ್ಥಿಗಳು ಅನಗತ್ಯ ಒತ್ತಡ ಅನುಭವಿಸಬೇಕಾಗುತ್ತದೆ

ತೊಂದರೆಗೆ ಒಳಗಾದ ಸಾವಿರಾರು ವಿದ್ಯಾರ್ಥಿಗಳಿಗಾಗಿ ಈಗ ಪರೀಕ್ಷೆಯ ಹೊಸ ದಿನಾಂಕಗಳನ್ನೇನೋ ಪ್ರಕಟಿಸಲಾಗಿದೆ. ಮೊದಲಿನ ವೇಳಾಪಟ್ಟಿ ಪ್ರಕಾರ, ಆಗಸ್ಟ್ 20ರೊಳಗೆ ಪರೀಕ್ಷೆಯ ಎಲ್ಲ ಹಂತಗಳನ್ನೂ ಮುಗಿಸಬೇಕಿತ್ತು. ಪರೀಕ್ಷೆಗೆ ಈಗ ದಿನಾಂಕಗಳನ್ನು ಮರುನಿಗದಿ ಮಾಡಿದ್ದರಿಂದ ಫಲಿತಾಂಶ ಘೋಷಣೆ ಕೂಡ ವಿಳಂಬವಾಗಲಿದೆ. ಇದರಿಂದ ಮುಂದೆ ಪ್ರವೇಶ ಪ್ರಕ್ರಿಯೆ ಅಸ್ತವ್ಯಸ್ತಗೊಳ್ಳಲಿದೆ. ಇನ್ನುಮುಂದೆ ಯಾವುದೇ ವಿಳಂಬ ಆಗದಿದ್ದರೆ ಸೆಪ್ಟೆಂಬರ್ ಕೊನೆಯ ವೇಳೆಗೆ ಪ್ರವೇಶ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂಬ ಅಂದಾಜಿದೆ. ಕೋವಿಡ್ ಸಾಂಕ್ರಾಮಿಕದ ಕಾರಣದಿಂದ ಕಳೆದ ಎರಡು ವರ್ಷಗಳಲ್ಲಿ ಶೈಕ್ಷಣಿಕ ವೇಳಾಪಟ್ಟಿಗಳು ಯರ್ರಾಬಿರ್ರಿ ಬದಲಾಗಿವೆ. ಇನ್ನಾದರೂ ಶೈಕ್ಷಣಿಕ ಚಟುವಟಿಕೆಗಳು ಹಳಿಗೆ ಮರಳಲಿವೆ ಅಂದುಕೊಳ್ಳುವಷ್ಟರಲ್ಲಿ ಈಗ ಪರೀಕ್ಷೆ ನಿರ್ವಹಣೆಯಲ್ಲಿ ಈ ಪ್ರಮಾದ ಆಗಿದೆ. ಮರುನಿಗದಿಯಾದ ಪರೀಕ್ಷೆಗಳು ವಾರದಲ್ಲಿಯೇ ನಡೆಯಲಿವೆ. ಕುಂದುಕೊರತೆ ಪರಿಹಾರ ವೇದಿಕೆಯನ್ನು ಆರಂಭಿಸುವುದಾಗಿಯೂ ಎನ್‌ಟಿಎ ಘೋಷಿಸಿದೆ. ಹಾಗೆಯೇ ಯುಜಿಸಿ ಕೂಡ ಪ್ರತಿಯೊಬ್ಬ ಅಭ್ಯರ್ಥಿಯ ಅಹವಾಲಿಗೂ ಸ್ಪಂದಿಸುವುದಾಗಿ ತಿಳಿಸಿದೆ.

ಎನ್‌ಟಿಎಯು ಪರೀಕ್ಷೆಯ ನಿರ್ವಹಣೆಯಲ್ಲಿ ಉಂಟಾದ ವೈಫಲ್ಯಕ್ಕಾಗಿ ಮೊದಲು ಪರೀಕ್ಷಾ ಕೇಂದ್ರಗಳ ಮೇಲೆ ಗೂಬೆ ಕೂರಿಸಲು ಹೊರಟಿತ್ತು. ಪರೀಕ್ಷಾ ಕೇಂದ್ರಗಳು ನಿಯಮಾವಳಿಯನ್ನು ಸರಿಯಾಗಿ ಪಾಲನೆ ಮಾಡಿಲ್ಲ ಎಂದೂ ಅದು ದೂರಿತ್ತು. ಆದರೆ, ನಂತರ ಹೊರಬಿದ್ದ ಸತ್ಯ ಸಂಗತಿಗಳು ಪ್ರಮಾದ ಆಗಿರುವುದು ಎನ್‌ಟಿಎದಿಂದಲೇ ಎನ್ನುವುದರತ್ತ ಬೊಟ್ಟು ಮಾಡಿದವು. ಯುಜಿಸಿ ಅಧ್ಯಕ್ಷ ಜಗದೀಶ್ ಕುಮಾರ್ ಅವರಂತೂ ಪರೀಕ್ಷಾ ನಿರ್ವಹಣೆಯಲ್ಲಿ ಉಂಟಾದ ಸಮಸ್ಯೆಗಳಿಗೆ ವಿಧ್ವಂಸಕ ಕೃತ್ಯಗಳಲ್ಲಿ ತೊಡಗಿದವರ ಕೈವಾಡವೇ ಕಾರಣ ಎಂದು ದೂರಿದ್ದರು. ಜಂಟಿ ಪ್ರವೇಶ ಪರೀಕ್ಷೆ (ಜೆಇಇ-ಮೇನ್) ಹಾಗೂ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯನ್ನು ನಡೆಸಿದ ಅನುಭವವೂ ಎನ್‌ಟಿಎಗೆ ಇದೆ. ಸಿಯುಇಟಿಯಿಂದ ಅದರ ಹೊಣೆ ಮತ್ತಷ್ಟು ಹಿಗ್ಗಿದೆ. ಯಾವುದೇ ಗೊಂದಲವಿಲ್ಲದೆ ಪರೀಕ್ಷೆ ನಡೆಸಲು ಒಂದುವೇಳೆ ಎನ್‌ಟಿಎ ವಿಫಲವಾದರೆ ಅದರ ವಿಶ್ವಾಸಾರ್ಹತೆಗೆ ಧಕ್ಕೆ ಉಂಟಾಗಲಿದೆ ಮತ್ತು ವಿದ್ಯಾರ್ಥಿಗಳು ಸಹ ಅನಗತ್ಯ ಒತ್ತಡ ಅನುಭವಿಸಬೇಕಾಗುತ್ತದೆ. 15 ಲಕ್ಷ ವಿದ್ಯಾರ್ಥಿಗಳು ಸಿಯುಇಟಿಗೆ ನೋಂದಾಯಿಸಿಕೊಂಡಿದ್ದರು ಮತ್ತು 550 ಕೇಂದ್ರಗಳಲ್ಲಿ ಈ ಪರೀಕ್ಷೆ ನಡೆದಿತ್ತು. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪರೀಕ್ಷಾ ಹೊಣೆಯನ್ನು ನಿಭಾಯಿಸುವಾಗ ಎನ್‌ಟಿಎ ಇನ್ನೂ ದಕ್ಷತೆಯಿಂದ ಸನ್ನದ್ಧಗೊಳ್ಳಬೇಕಿತ್ತು. ಹಾಗಾಗಿದ್ದರೆ ಈಗ ಮುಜುಗರ ಅನುಭವಿಸುವ ಸ್ಥಿತಿ ಅದಕ್ಕೆ ಬರುತ್ತಿರಲಿಲ್ಲ. ಈಗ ಆಗಿರುವ ಗೊಂದಲಗಳಿಗೆ, ಪ್ರಮಾದಗಳಿಗೆ ಯಾರು ಕಾರಣ ಎನ್ನುವುದನ್ನು ಪತ್ತೆ ಮಾಡಬೇಕು. ಅಲ್ಲದೆ, ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮವನ್ನೂ ಜರುಗಿಸಬೇಕು. ಉಳಿದವರಿಗೂ ಅದು ಪಾಠವಾಗಬೇಕು.

ದಿನದ ಟ್ವೀಟ್

ಇದೆಂಥಾ ನಿರ್ಧಾರ?

ಇದೊಂದು ಭೀಕರ ನಿರ್ಧಾರ. ವಿದ್ಯಾರ್ಥಿಗಳು ಉತ್ತೀರ್ಣರಾಗದೇ ಇರುವುದೇಕೆ ಎಂದು ಕೇಳುವ ಬದಲು, ಅವರು ಶಾಲೆಗಳನ್ನು ಮುಚ್ಚಲು ಮುಂದಾಗಿದ್ದಾರೆ. ಫಲಿತಾಂಶ ಚೆನ್ನಾಗಿರದ ಶಾಲೆಗಳಿಗಾಗಿ 'ತೆರಿಗೆದಾರರ ಹಣ' ವ್ಯರ್ಥವಾಗುತ್ತಿದೆ ಎಂಬುದು ಅವರ ವಾದ. ಎಂತಹ ಶಿಕ್ಷಣ ವಿರೋಧಿ ನಿಲುವು ಇದು. ಮಕ್ಕಳು ಏನು ಮಾಡುತ್ತಾರೆ?

(10ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಎಲ್ಲ ವಿದ್ಯಾರ್ಥಿಗಳೂ ಫೇಲ್ ಆಗಿರುವ 34 ಶಾಲೆಗಳನ್ನು ಮುಚ್ಚಲು ಮುಂದಾಗಿರುವ ಅಸ್ಸಾಂ ಸರ್ಕಾರದ ನಿರ್ಧಾರಕ್ಕೆ ಪ್ರತಿಕ್ರಿಯೆ)

ಜಿ.ಅರುಣಿಮಾ, ಪ್ರಾಧ್ಯಾಪಕಿ

ಕಿಡಿನುಡಿ

ಪ್ರಧಾನಿ ನರೇಂದ್ರ ಮೋದಿ ಅವರ ಸಂಪುಟದಲ್ಲಿ ನಿರ್ಮಲಾ ಸೀತಾರಾಮನ್, ಸ್ಮೃತಿ ಇರಾನಿ ಸೇರಿದಂತೆ ಸಂಪುಟ ದರ್ಜೆಯ 11 ಮಂದಿ ಸಚಿವೆಯರಿದ್ದಾರೆ. ಅವರಲ್ಲಿ ಯಾರೊಬ್ಬರೂ ಬಿಲ್ಕಿಸ್ ಬಾನು ಪರವಾಗಿ ಮಾತನಾಡಿಲ್ಲ. ಬಿಲ್ಕಿಸ್ ಪ್ರಕರಣದ ಅಪರಾಧಿಗಳೆಲ್ಲ ಸಂಸ್ಕಾರವಂತರು ಎಂದು ಅವರು ಭಾವಿಸಿದ್ದಾರೆಯೇ? ಸಚಿವೆಯರಲ್ಲಿ ಒಬ್ಬರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ. ಮಹಿಳೆಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿ, ಆಕೆಯ ಮಗು ಮತ್ತು ಕುಟುಂಬದ ಸದಸ್ಯರನ್ನು ಹತ್ಯೆ ಮಾಡಿದ 11 ಅಪರಾಧಿಗಳ ಬಿಡುಗಡೆಯಿಂದ ಅವರಿಗೆ ಆಘಾತವಾಗದಿದ್ದರೆ ಇನ್ನ್ಯಾವುದರಿಂದ ಆಗುತ್ತದೆ? ಇದು ಯಾವ ಬಗೆಯ ಸಂಸ್ಕಾರ?

ಅನುರಾಧಾ ರಾಮನ್, ಪತ್ರಕರ್ತೆ

25 ವರ್ಷಗಳ ಹಿಂದೆ

ಮಂಗಳವಾರ, 26-8-1997

- **44 ದಿನಗಳ ನರಕ: ಸನಿಹ ಸುಳಿದು ಸರಿದ ಸಾವು**

ಚೆನ್ನೈ, ಆ. 25 (ಪಿಟಿಐ)– ಕುಖ್ಯಾತ ದಂತಚೋರ, ನರಹಂತಕ ವೀರಪ್ಪನ್‌ನ ಬಂಧನದಲ್ಲಿ 44 ದಿನಗಳ ಕಾಲ ನರಕಯಾತನೆ ಅನುಭವಿಸಿದ ಎಂಟು ಮಂದಿ ಅರಣ್ಯ ಸಿಬ್ಬಂದಿ ನಿನ್ನೆ ಬಿಡುಗಡೆ ಯಾಗುವುದರೊಂದಿಗೆ ಅವರಿಗೆ ಮರುಹುಟ್ಟು ದೊರೆತಂತಾಗಿದೆ.

ಸಾವಿನ ಅಂಚು ತಲುಪಿದ್ದ ಮಾಧವ ಹಾಗೂ ದಾಸಯ್ಯ ಅವರಿಗಂತೂ ಪುನರ್ಜನ್ಮವೇ ಸರಿ. ಕರ್ನಾಟಕ ಹಾಗೂ ತಮಿಳುನಾಡು ಸರ್ಕಾರಗಳು ಜುಲೈ 26ರಂದು ವೀರಪ್ಪನ್‌ಗೆ ಕ್ಷಮಾದಾನ ನೀಡಲು ನಿರಾಕರಿಸಿದ್ದರಿಂದ ಕೋಪಗೊಂಡ ವೀರಪ್ಪನ್ ಈ ಇಬ್ಬರನ್ನು ಶಿರಚ್ಛೇದ ಮಾಡುವ ಸಲುವಾಗಿ ಬೇರೆಡೆಗೆ ಕರೆದೊಯ್ದಿದ್ದ. ಆದರೆ ವೀರಪ್ಪನ್‌ನ ಆಪ್ತ ಸಹಚರ ಸೇತುಕುಳಿ ಗೋವಿಂದನ್ ತಕ್ಕ ಸಮಯಕ್ಕೆ ಮಧ್ಯಪ್ರವೇಶಿಸಿ ಈ ಇಬ್ಬರ ಜೀವದಾನಕ್ಕೆ ಕಾರಣನಾಗಿದ್ದ.

ಒತ್ತೆಯಾಳುಗಳನ್ನು ಬಿಡುಗಡೆ ಮಾಡಿರುವ ವೀರಪ್ಪನ್, ಶರಣಾಗತಿಗೆ ಇನ್ನಷ್ಟು ಕಾಲಾವಕಾಶ ಬೇಡುವ ಸಾಧ್ಯತೆ ಇದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರು ಹೇಳಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 26-8-1972

- **ಕೆಂಗಲ್ ಚಟುವಟಿಕೆ ಬಗೆಗೆ ಹೈಕಮಾಂಡ್ ಖಾರ; ಶಿಸ್ತುಕ್ರಮ**

ನವದೆಹಲಿ, ಆ. 25– ಮಾಜಿ ರೈಲ್ವೆ ಸಚಿವ ಕೆಂಗಲ್ ಹನುಮಂತಯ್ಯನವರ ಇತ್ತೀಚಿನ ಚಟುವಟಿಕೆಗಳ ಸಂಬಂಧದಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯು ಸಲ್ಲಿಸಿರುವ ವರದಿಯ ಆಧಾರದ ಮೇಲೆ, ಕೆಂಗಲ್‌ರ ವಿರುದ್ಧ ಹೈಕಮಾಂಡ್ ಶೀಘ್ರವೇ ಶಿಸ್ತುಕ್ರಮ ಕೈಗೊಳ್ಳುವುದೆಂದು ನಂಬಲಾಗಿದೆಯೆಂದು ಯುನೈಟೆಡ್ ನ್ಯೂಸ್ ಆಫ್ ಇಂಡಿಯಾ ವಾರ್ತಾ ಸಂಸ್ಥೆ ವರದಿ ಮಾಡಿದೆ.

ಅರಸು ಸಂಪುಟದ ವಿರುದ್ಧ ಹನುಮಂತಯ್ಯನವರ ಕ್ರಮವನ್ನು ಕಾಂಗ್ರೆಸ್ ಹೈಕಮಾಂಡ್ ತೀವ್ರವಾಗಿ ಪರಿಗಣಿಸಿದೆ ಎಂದು ವರದಿಯಾಗಿದೆ.

ಇಂದು ಮಧ್ಯಾಹ್ನ ಪ್ರದೇಶ ಕಾಂಗ್ರೆಸ್ ಸಮಿತಿಯ ವರದಿಯ ಕುರಿತು ಪತ್ರಿಕಾಗೋಷ್ಠಿಯೊಂದರಲ್ಲಿ ಪ್ರಶ್ನಿಸಿದಾಗ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು, ಯಾವುದೇ ಶೀಘ್ರ ಕ್ರಮವನ್ನು ಶಿಫಾರಸು ಮಾಡುವುದು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧಿಕಾರಕ್ಕೆ ಸೇರಿದ್ದೇ ಹೊರತು ತಮ್ಮದಲ್ಲವೆಂದು ಹೇಳಿದರು.

ಆಹಾರ ಪದ್ಧತಿಯಲ್ಲಿ ಇಂದು ರಾಜಕೀಯದ ಹಸ್ತಕ್ಷೇಪ ಅತಿಯಾಗತೊಡಗಿದೆ

ಆಹಾರ ನೀತಿಯ ಕೋಮು ರಾಜಕಾರಣ

ವಿಶ್ಲೇಷಣೆ

ಎಸ್.ಜಿ. ಸಿದ್ಧರಾಮಯ್ಯ

'ಊಟ ತನ್ನಿಷ್ಟ ನೋಟ ಪರರಿಷ್ಟ' ಎನ್ನುತ್ತದೆ ಲೋಕೋಕ್ತಿ. ಪ್ರತಿಯೊಂದು ಲೋಕೋಕ್ತಿಯ ಹಿಂದೆ ಅನುಭವವೇ ಪ್ರಮಾಣವಾಗಿರುತ್ತದೆ. ಅನುಭವವೆಂಬುದು ಕೇವಲ ಒಬ್ಬ ವ್ಯಕ್ತಿಯ ಮಿತಿಯದ್ದಾಗಿರದೇ ಸಮುದಾಯ ವ್ಯಾಪ್ತಿಯಲ್ಲಿ ಹರಿದ ವಿವೇಕವಾಗಿರುತ್ತದೆ. ಪ್ರಸ್ತುತ ಮೇಲಿನ ಲೋಕೋಕ್ತಿಯು ವ್ಯಕ್ತಿಯ ಆಹಾರ ಸೇವನೆ ಮತ್ತು ಉಡುಗೆ ತೊಡುಗೆಗೆ ಸಂಬಂಧಿಸಿದ ವಿಚಾರವನ್ನು ಒಳಗೊಂಡಿದೆ.

ಪ್ರದೇಶ, ಪರಿಸರ, ಲಭ್ಯತೆ, ಅಭ್ಯಾಸ ಮತ್ತು ದೇಹಾನುಕೂಲ ಇವುಗಳು ಕಾರಣವಾದಂತೆ ನಾವು ತಿನ್ನುವ ಆಹಾರದಲ್ಲಿ ಇಷ್ಟಾನಿಷ್ಟಗಳು ರೂಪಿತವಾಗುತ್ತವೆ. ಆದರೆ ಅದೇ ಉಡುಪು ವ್ಯಕ್ತಿಯ ಇಷ್ಟಕ್ಕೆ ಸಂಬಂಧಿಸಿದ ಅಭಿರುಚಿಯ ಪ್ರಶ್ನೆಯಾದರೂ ಬೇರೆಯವರ ಕಣ್ಣಿಗೆ ಚೆನ್ನಾಗಿ ಕಾಣಬೇಕು ಎಂಬುದೇ ಅಲ್ಲಿ ಪ್ರಧಾನ ಅಂಶವಾಗಿರುತ್ತದೆ; ಇದು ಅನ್ಯರ ಮೆಚ್ಚುಗೆಗೆ ಸಂಬಂಧಿಸಿದ ನೋಟದ ವಿಚಾರ. ನಮ್ಮದು ಬಹುತ್ವದ ಸಮಾಜ. ಲೋಕೋ ಭಿನ್ನರುಚಿ ಅನ್ನುವಂತೆ ಭಿನ್ನ ಬಗೆಯ ಸಂಪ್ರದಾಯಗಳು, ಸಂಸ್ಕೃತಿಗಳು, ಆಚಾರ-ವಿಚಾರಗಳು, ನಂಬಿಕೆ-ನಡಾವಳಿಗಳು ಇಲ್ಲಿನ ಬದುಕಾಗಿದೆ. ಇಷ್ಟಲ್ಲದೆ ಇವೆಲ್ಲವನ್ನೂ ನಿಯಂತ್ರಿಸುವ ವರ್ಣವ್ಯವಸ್ಥೆ ಇಂದಿಗೂ ನಮ್ಮಲ್ಲಿ ಜೀವಂತವಿದೆ. 'ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ' ಎಂದು ಶರಣರು ಸಾರಿದರು. 'ಮಾನವ ಮೂಳೆ ಮಾಂಸದ ತಡಿಕೆ' ಎಂದು ದಾಸರು ಹೇಳಿದರು. ಇಷ್ಟಾದರೂ ಮಡಿ ಮೈಲಿಗೆಗಳ ಕಟ್ಟುಪಾಡುಗಳಲ್ಲಿ ಪವಿತ್ರ- ಅಪವಿತ್ರ, ಪಾಪ- ಪುಣ್ಯಗಳ ಲೆಕ್ಕಾಚಾರ ಹಾಕುವುದು ವರ್ಣವ್ಯವಸ್ಥೆಯ ಮೂಲ ರೋಗವಾಗಿದೆ.

ಹಾಗೆ ನೋಡಿದರೆ ವರ್ಣವ್ಯವಸ್ಥೆಯಲ್ಲಿ ಮಾಂಸಾಹಾರದ ನಿಷೇಧ ಬಂದದ್ದು ಜೈನ- ಬೌದ್ಧ ಧರ್ಮಗಳು ಪ್ರಚಾರ ಮಾಡಿದ ಅಹಿಂಸೆಯ ಪ್ರಭಾವದಿಂದ ಎಂಬುದು ಚಾರಿತ್ರಿಕ ಸತ್ಯ. ಅವರು ಪ್ರತಿಪಾದಿಸಿದ ಅಹಿಂಸೆಯು ಧರ್ಮದ ಹೆಸರಿನಲ್ಲಿ ಯಜ್ಞ-ಯಾಗಗಳಲ್ಲಿ ನಡೆಸುತ್ತಿದ್ದ ಪ್ರಾಣಿಬಲಿಯನ್ನು ವಿರೋಧಿಸುವ ಉದ್ದೇಶ ಹೊಂದಿತ್ತು. ಇದಕ್ಕೂ ಆಹಾರ ನೀತಿಗೂ ಯಾವುದೇ ಸಂಬಂಧವಿಲ್ಲ ಎಂಬುದಕ್ಕೆ ಬುದ್ಧನ ಸೂಕರ ಮಾಂಸ ಸೇವನೆಯ ಪ್ರಸಂಗವೇ ಸಾಕ್ಷಿಯಾಗಿದೆ.

ಆ ಧರ್ಮಗಳ ಪ್ರಭಾವದಿಂದ ತಪ್ಪಿಸಿ ಚಾತುರ್ವರ್ಣ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ವೈದಿಕವು ನಡೆಸಿದ ಪ್ರತಿರೋಧದ ಆಚರಣೆಗಳಲ್ಲಿ 'ಅಹಿಂಸೆ' ಎಂಬುದು ಸಸ್ಯಾಹಾರ ಶ್ರೇಷ್ಠ, ಮಾಂಸಾಹಾರ ಕನಿಷ್ಠ ಎಂಬ ಭಾವಸಂಸ್ಕೃತಿಯ ಆಹಾರ ನೀತಿಯಲ್ಲಿ ಬಂಧಿತವಾಯಿತು. ಇಂಥ ಭಾವವಿಕಾರಗಳನ್ನು ವಿವೇಕಾನಂದರು 'ಮೆಂಟಲ್ ಸ್ಲಂ' ಎಂದು ಕರೆದರು. Mental Slum is very dangerous than the material Slum ಎಂದು ಸಾರಿದರು. ವಿವೇಕಾನಂದರ ಈ ಹೇಳಿಕೆಯು ಸಮೂಹ ಸನ್ನಿಯಂತೆ ಸಾಂಕ್ರಾಮಿಕವಾಗಿ ಹರಡುವ ಧಾರ್ಮಿಕ ಅಮಲಿಗೆ ಅರ್ಥಾತ್ ಧರ್ಮಾಂಧತೆಗೆ ಹೆಚ್ಚು ಅನ್ವಯಿಸುತ್ತದೆ.

ಧರ್ಮವೆಂಬುದು ಮಾನವೀಯ ವಿವೇಕವನ್ನು ಒಳಗೊಂಡಿದ್ದಾಗ ಅದರ ನಡೆನುಡಿಗಳೆಲ್ಲವೂ ಸಹ್ಯವಾಗಿರುತ್ತವೆ. ಅದು ತಪ್ಪಿ ಮತಾಂಧ ಭಾವದಲ್ಲಿ ಅದು ವರ್ತಿಸತೊಡಗಿದಾಗ ನೆರೆಹೊರೆಯ ಅನ್ಯಧರ್ಮಗಳ ಮೇಲೆ ಅದು ದ್ವೇಷದ ಬೆಂಕಿ ಕಾರತೊಡಗುತ್ತದೆ. ಸಹಿಷ್ಣುಭಾವವು ಧರ್ಮದ ಮೂಲದ್ರವ್ಯವಾದರೆ ಪರರ ನಡೆನುಡಿಗಳನ್ನು, ಪರಧರ್ಮದ ಇರುವಿಕೆಯನ್ನು ಅದು ಸಮಾನಶೀಲ ಭಾವದಲ್ಲಿ ಗೌರವಿಸುತ್ತದೆ. ಅಲ್ಲಿಯ ನಡೆನುಡಿಗಳೆಲ್ಲವೂ ಗಂಗೆಯಂತೆ; ಕೊಳೆಯನ್ನು ತೊಳೆಯುವ, ದಾಹವನ್ನು ಪರಿಹರಿಸುವ ಗುಣಧರ್ಮದವುಗಳು. ಅದನ್ನು ಬಿಟ್ಟು ಸ್ವರತಿ ಮೋಹದಲ್ಲಿ ತಾನೇ ಶ್ರೇಷ್ಠ ಉಳಿದವರೆಲ್ಲಾ ನಿಕೃಷ್ಟ ಎಂದು ಬೀಗತೊಡಗಿದರೆ, ಆ ಅಮಲು ಕೊಳಚೆಯಂತೆ ಅಪಾಯಕಾರಿಯಾದುದು. ಕೊಳಚೆ ಚರಂಡಿಯಲ್ಲಿ ಹರಿದು ಹೋಗಲು ಯೋಗ್ಯವಾದುದೇ ವಿನಾ ಬಳಕೆಗೆ ಅರ್ಹವಾದುದಲ್ಲ. ಇದನ್ನೇ ಧರ್ಮಾಂಧತೆ ಎಂದು ಕರೆಯುವುದು.

ಧರ್ಮಾಂಧತೆಯು ಪ್ರಜಾಪ್ರಭುತ್ವದ ಶತ್ರು. ಪ್ರಜಾಪ್ರಭುತ್ವದ ಮೂಲ ಗುಣವೇ ಸಹನೆ, ಸಹಿಷ್ಣುತೆ; ಜಾತ್ಯತೀತವು ಸಮಾಜಹಿತಕಾರಿಯೂ ಆಗಿ ಸಮಾಜವನ್ನು ಮುನ್ನಡೆಸುವುದು. ಭಾರತದಂತಹ ಬಹುತ್ವಗಳ ಸಮಾಜದಲ್ಲಿ ಧರ್ಮಾಂಧತೆ ಎಂಬುದು ಸಾಂಕ್ರಾಮಿಕವಾದರೆ ಅದು ದೇಶದ ಒಕ್ಕೂಟದ ವ್ಯವಸ್ಥೆಗೆ ಧಕ್ಕೆ ತರುತ್ತದೆ. ರಾಜಕಾರಣವೆಂಬುದು ಸತ್ಯ ಶುದ್ಧ ಕಾಯಕ ಪ್ರಜ್ಞೆಯಲ್ಲಿ ಕರ್ತವ್ಯ ನಿರ್ವಹಿಸಬೇಕಾದ ಒಂದು ಸೇವಾ ಕ್ಷೇತ್ರ. ಇಂಥ ಸೇವಾ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸಲು ಬರುವ ಜನಪ್ರತಿನಿಧಿಗಳಿಗೆ ವ್ಯಕ್ತಿಗತ ನೆಲೆಯ ನೈತಿಕ ಪರಿಶುದ್ಧತೆ, ಪಾರದರ್ಶಕ ನಡೆ ಬಹಳ ಮುಖ್ಯವಾದವು. ಅನ್ಯ ಧರ್ಮದ ದ್ವೇಷ, ತನ್ನ ಧರ್ಮದ ಅಂಧಮೋಹ ಇರಬಾರದು. ಸರ್ವಧರ್ಮದ ಸಹಿಷ್ಣು ಗುಣದ ಜೊತೆಗೆ ಜಾತ್ಯತೀತವಾದ ನಡೆನುಡಿಯ ಭಾವಸಂಪನ್ನತೆ ಬಹಳ ಮುಖ್ಯ. ಆಗ ಮಾತ್ರ ಪ್ರಜಾಪ್ರಭುತ್ವ ಉಳಿಯುತ್ತದೆ, ಬೆಳೆಯುತ್ತದೆ.

ಜೀವವನ್ನು ತಿಂದು ಜೀವ ಬದುಕುತ್ತದೆ ಎಂಬುದು ನಿಸರ್ಗ ಸತ್ಯ. ಸಸ್ಯವಾಗಿರಲಿ, ಪ್ರಾಣಿಯಾಗಿರಲಿ ಅದು ಜೀವಸತ್ವದಿಂದ ತಿನ್ನಲು ಯೋಗ್ಯವಾಗಿದ್ದಾಗ ಮಾತ್ರ ಅನ್ನವಾಗಿ ಬಳಕೆಯಾಗುತ್ತದೆ. ಸಸ್ಯಾಹಾರಿಗಳು ಕೆಲವರು ತಾವು ಜೀವವನ್ನು ಕೊಂದು ಜೀವಕ್ಕೆ ಅನ್ನವನ್ನು ತಿನ್ನುತ್ತಿದ್ದೇವೆ ಎಂಬ ಅರಿವಿಲ್ಲದವರಂತೆ ಮಾಂಸಾಹಾರಿಗಳ ಬಗ್ಗೆ ಕೀಳಾಗಿ ಮಾತನಾಡುತ್ತಾರೆ. ಸಸ್ಯದ ನೋವು ಕಾಣದ್ದು, ಕೇಳದ್ದು, ಪ್ರಾಣಿಯ ನೋವು ಕಾಣುವುದು, ಕೇಳುವುದು. ಹೀಗಾಗಿ ಹಿಂಸೆಯ ಬಗ್ಗೆ ಮನುಷ್ಯನ ನಿಲುವು ಭಿನ್ನ ಬಗೆಯಲ್ಲಿದೆ. ಇಷ್ಟಿದ್ದರೆ ಅದಕ್ಕೆ ಯಾರೂ ಆಕ್ಷೇಪಿಸುತ್ತಿರಲಿಲ್ಲ. ಅವುಗಳ ಹಿಂದೆ ಮೇಲು-ಕೀಳು, ಶ್ರೇಷ್ಠ-ಕನಿಷ್ಠ ಎಂಬ ತಾರತಮ್ಯ ಭಾವ ಬೆಳೆದದ್ದು ತಕರಾರಿಗೆ ಮೂಲವಾಗಿದೆ. ಅಷ್ಟೇ ಅಲ್ಲ, ಮಾಂಸಾಹಾರದಲ್ಲಿಯೂ ಮೇಲು-ಕೀಳುಗಳ ಸಮಸ್ಯೆಯನ್ನು ಒಂದು ವರ್ಣದ ಜನ ಹುಟ್ಟುಹಾಕಿದ್ದಾರೆ. ಹೀಗಾಗಿ ಆಹಾರ ನೀತಿಯ ಬಗ್ಗೆ ಒಂದೊಂದು ಧರ್ಮದಲ್ಲಿ ಒಂದೊಂದು ಪ್ರಾಣಿಯ ಬಗೆಗೆ ಅವರದೇ ಆದ ನೀತಿ-ನಿಯಮಗಳ ಹೇರಿಕೆಯಿದೆ. ಇಂದು ಆಹಾರ ಪದ್ಧತಿಯಲ್ಲಿ ರಾಜಕೀಯದ ಹಸ್ತಕ್ಷೇಪ ನಡೆದಿದೆ. ಅದು ಹಿಂದಿನಿಂದಲೂ ನಡೆದುಬಂದ ಹುನ್ನಾರವೇ.



12ನೆಯ ಶತಮಾನದಲ್ಲಿಯೇ ಆಹಾರ ನೀತಿಯ ಬಗ್ಗೆ ಕಾಳವ್ವೆ, ನುಲಿಯ ಚಂದಯ್ಯ, ಅಂಬಿಗರ ಚೌಡಯ್ಯ ಮುಂತಾದ ಶರಣರು ಸ್ಪಷ್ಟ ಮಾತುಗಳಲ್ಲಿ ತಿಳಿಹೇಳಿದ್ದಾರೆ. ಕಾಳವ್ವೆಯ ಒಂದು ವಚನ ಇಂತಿದೆ:

ಕುರಿ ಕೋಳಿ ಕಿರು ಮೀನು ತಿಂಬವರಿಗೆಲ್ಲ ಕುಲಜ ಕುಲಜರೆಂಬರು
ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳುಜಾತಿಯೆಂಬರು
ಅವರೆಂತು ಕೀಳುಜಾತಿಯಾದರು ಜಾತಿಗಳು ನೀವೇಕೆ ಕೀಳಾಗಿರೋ?

ಇಲ್ಲಿ ಮಾಂಸ ತಿನ್ನುವವರಲ್ಲೇ ಕೆಲವರನ್ನು ಸ್ಪೃಶ್ಯರು, ಇನ್ನು ಕೆಲವರನ್ನು ಅಸ್ಪೃಶ್ಯರು ಎಂದು ಕಾಣುವ ವರ್ಣನೀತಿಯ ಅವೈಜ್ಞಾನಿಕತೆಯನ್ನು ತರ್ಕಕ್ಕೊಡ್ಡಿದಂತೆ ಕಾಳವ್ವೆ ಪ್ರಶ್ನಿಸಿದ್ದಾಳೆ. ದನದ ಚರ್ಮದಿಂದ ಮಾಡಿದ ಸಿದ್ದಳಿಕೆ, ಸಗ್ಗಳೆಗಳನ್ನು ತುಪ್ಪ ಮತ್ತು ನೀರು ಸಂಗ್ರಹಕ್ಕೆ ಬಳಸುತ್ತ ದನಭಕ್ಷಣೆಯನ್ನು ವಿರೋಧಿಸುವ ಬುದ್ಧಿಗೇಡಿಗಳನ್ನು ಉಗ್ರವಾಗಿ ಖಂಡಿಸುತ್ತಾಳೆ. 12ನೆಯ ಶತಮಾನದಲ್ಲಿಯೇ ಆಹಾರದ ರಾಜಕಾರಣ ನೀತಿಯನ್ನು ಇಷ್ಟು ಉಗ್ರವಾಗಿ ಖಂಡಿಸಿದ ಕಾಳವ್ವೆಯ ವೈಚಾರಿಕವೂ ವೈಜ್ಞಾನಿಕವೂ ಆದ ತರ್ಕಶುದ್ಧ ಮಾತಿನ ಹಿಂದೆ ಸಾರ್ವಜನಿಕ ಸತ್ಯವಿದೆ.

ಈ ಆಹಾರ ನೀತಿಯ ವಿಕಾರ ಎಲ್ಲಿಗೆ ಬಂದು ನಿಂತಿದೆ ಎಂದರೆ, ಇಂದಿನ ರಾಜಕಾರಣದ ವೋಟು ಗಳಿಕೆಯ ಅಸ್ತ್ರವಾಗಿ ಬಳಕೆಯಾಗುತ್ತಿದೆ. ದೇವಸ್ಥಾನ ಪ್ರವೇಶ ಮಾಡುವಾಗ ಏನು ತಿಂದಿರಬೇಕು, ಏನು ತಿಂದಿರಬಾರದು ಎಂಬ ಭಾವವಿಕಾರಕ್ಕೆ ಪ್ರಚೋದನೆಯಾಗಿದೆ. ಮನುಷ್ಯ ಮಂಗಳನ ಅಂಗಳಕ್ಕೆ ಲಗ್ಗೆ ಇಡುವಷ್ಟು ವಿಜ್ಞಾನದ ಪ್ರಗತಿಯನ್ನು ಸಾಧಿಸುತ್ತಿದ್ದರೂ ಅವನ ಜಡಬುದ್ಧಿ ಇನ್ನೂ ನೆಲದ ಮೇಲಿನ ಗುಡಿಗುಂಡಾರಗಳಲ್ಲಿ ಮಡಿ ಮೈಲಿಗೆಗಳ ವಿಧಿನಿಷೇಧಗಳ ಕುಬ್ಜತೆಯಲ್ಲಿ ನರಳುತ್ತಿದೆ. ವಿಚಿತ್ರವೆಂದರೆ, ವರ್ಣವ್ಯವಸ್ಥೆ ಹೇರಿರುವ ಈ ವಿಧಿನಿಷೇಧಗಳು ಒಂದು ವರ್ಣಕ್ಕೆ ಲಾಭದಾಯಕವಾಗಿವೆ. ಸಾಂಸ್ಕೃತಿಕ, ಬೌದ್ಧಿಕ ಜೀತದಾಳುಗಳಾಗಿರುವ ಮಾಂಸಾಹಾರ ಮೂಲದ ಜನಪ್ರತಿನಿಧಿಗಳು ದೇವಸ್ಥಾನ- ದೇವರು- ಆಹಾರ ನೀತಿಯ ಬಗ್ಗೆ ಮಾತನಾಡುತ್ತಿರುವುದನ್ನು ನೋಡಿದರೆ ಅವರ ಬಗ್ಗೆ ಕನಿಕರವಾಗುತ್ತಿದೆ. ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ, ಸತ್ಯ ಶುದ್ಧವಲ್ಲದುದು ಕಾಯಕವಲ್ಲ. ವ್ರತವೆಂಬುದು ಜೀವನ ಕಳೆ. ಕಾಯಕ ನಿಷ್ಠೆಯ ಆಚಾರದಲ್ಲಿ ಅನುಭಾವಿಕತೆಯನ್ನು ಕಾಣುವುದೇ ನಿಜವಾದ ಆಧ್ಯಾತ್ಮಿಕತೆ.

ಚುರುಮುರಿ

ನಾನ್‌ವೆಜ್ ಟಿ.ವಿ.

• ಆನಂದ

'ಇದೇನ್ರಿ ನಮ್ ಟೀವಿ ನಾನ್‌ವೆಜ್ ಆಗ್ತಾ ಇದೆಯಲ್ಲ?' ಎಂದು ಹೆಂಡತಿ ಕೇಳಿದಾಗ ನನಗೆ ಆಶ್ಚರ್ಯ.

'ಕಲರ್, ಬ್ಲ್ಯಾಕ್ ಆ್ಯಂಡ್ ವೈಟ್, ಎಲ್‌ಸಿಡಿ, ಎಲ್‌ಇಡಿ ಟೀವಿಗಳ ಬಗ್ಗೆ ಕೇಳಿದೀನಿ. ಇದ್ಯಾವುದು ನಾನ್‌ವೆಜ್ ಬ್ರ್ಯಾಂಡ್?' ಎಂದು ಕೇಳಿದೆ.

'ಈಗೀಗ ನ್ಯೂಸ್ ಚಾನೆಲ್ ಆನ್ ಮಾಡಿದರೆ ಸಾಕು ಬರೀ ಚಿಕನ್, ಮಟನ್, ಹಂದಿ, ಕೋಳಿ, ಮೊಟ್ಟೆ ಇದೇ ಸುದ್ದಿ' ಎಂದಳು.

'ಅಂದರೆ ಎಲ್ಲಾ ಚಾನೆಲ್‌ಗಳಲ್ಲೂ ಬರೀ ನಾನ್‌ವೆಜ್ ಹೊಸ ರುಚಿ ಕಾರ್ಯಕ್ರಮಗಳೇ ಬರ್ತಿವೆಯೇನು?'

'ಅಲ್ಲಾರೀ, ಪ್ರತಿದಿನ ಅವರು ಇವತ್ತು ಕೋಳಿ ತಿಂದರು, ಚಿಕನ್ ತಿಂದರು... ಹೀಗೆ ಅವರೆಲ್ಲ ಏನು ತಿಂದರೂಂತ ಗೊತ್ತಾಯಿತಷ್ಟೇ ಅಲ್ಲ, ಯಾವ ದೇವಸ್ಥಾನಕ್ಕೆ ಹೋದರು ಅಂತ ಸಹ ತಿಳಿಯುತ್ತೆ'.

'ಹೋಗಲಿ. ಅವರ ಭಕ್ತಿ ಅವರ ನಂಬಿಕೆ'.

'ಮಾಂಸ ತಿಂದು ದೇವಸ್ಥಾನಕ್ಕೆ ಹೋಗಬಾರದಂತೆ'.

'ಯಾರು ಹೇಳಿದ್ದು?'

'ಯಾರು ಹಾಗೆ ಹೇಳಿದ್ದಾರೋ ಗೊತ್ತಿಲ್ಲ. ಆದರೆ ಅದು ಸಂಪ್ರದಾಯ. ಅದನ್ನು ಪಾಲಿಸಬೇಕು. ಇವರು ಪಾಲಿಸಿಲ್ಲ ಅನ್ನೋದೇ ಕಾಂಟ್ರವರ್ಸಿ'.

'ಅದು ಚಾನೆಲ್‌ನವರಿಗೆ ಬಾಡೂಟದಂತೆ ಆಗಿದೆ ಅನ್ನು'.

'ಕರೆಕ್ಟಾಗಿ ಹೇಳಿದ್ರಿ. ಅದಕ್ಕೇ ಟೀವಿ ಆನ್ ಮಾಡಿದರೆ ಬರೇ ಚಿಕನ್, ಮಟನ್, ಹಂದಿ ಮಾಂಸ ಅಂತಾನೆ ಬರ್ತಾ ಇರುತ್ತೆ'.

'ಬರೀ ಚಿಕನ್, ಮಟನ್ ಅಂತ ಹೇಳ್ತಿದೀಯ? ಮೀನೂಟದ ಬಗ್ಗೆ ಪ್ರಸ್ತಾಪವೇ ಇಲ್ವಾ?'

'ಹೌದೂರಿ, ಫಿಶ್ ಬಗ್ಗೆ ಯಾರೂ ಮಾತೇ ಆಡ್ತಿಲ್ಲ. ಫಿಶ್ ವೆಜ್ಜಾ?'

'ಕರ್ನಾಟಕದಲ್ಲಿ ಫಿಶ್ ನಾನ್‌ವೆಜ್ಜೇ, ಆದರೆ ಬಂಗಾಲ ಕಡೆ ಫಿಶ್ ತರಕಾರಿ ಎಂದೇ ಕೆಲವರು ಭಾವಿಸ್ತಾರೆ'.

'ಫಿಶ್ ತಿಂದು ದೇವಸ್ಥಾನಕ್ಕೆ ಹೋಗಿ ಕೈ ಮುಗಿದ್ರು ಅಂತ ಯಾರೂ ಆಪಾದನೆ ಮಾಡ್ತಿಲ್ಲ'.

'ಯಾವುದು ಮುಖ್ಯ? ಚಿಕನ್, ಮಟನ್ನೋ ಭಕ್ತಿನೋ?'

ಸಂಗತ

ತಡೆಯಬನ್ನಿ ಸವಳು- ಜವಳು ಬಾಧೆ

ನೀರು ನಿರ್ವಹಣೆಗೆ ವೈಜ್ಞಾನಿಕ ವಿಧಾನವನ್ನು ಎಲ್ಲ ರೈತರು ಕಡ್ಡಾಯವಾಗಿ ಪಾಲಿಸದಿದ್ದರೆ ಈ ಸಮಸ್ಯೆಗೆ ಪರಿಹಾರ ಕಷ್ಟಸಾಧ್ಯ

• ಮಲ್ಲಿಕಾರ್ಜುನ ಹೆಗ್ಗಳಗಿ

ಬಾಗಲಕೋಟೆ ಜಿಲ್ಲೆಯ ಇಂಗಳಗಿ ಗ್ರಾಮದ ಯುವ ರೈತಮಿತ್ರರೊಬ್ಬರು ಮೂರು ಎಕರೆ ಭೂಮಿ ಹೊಂದಿದ್ದಾರೆ. ಬೆಳಗಾವಿ ಜಿಲ್ಲೆಯ ಹಿಡಕಲ್ ಜಲಾಶಯದ ಎಡದಂಡೆ ಕಾಲುವೆಯಿಂದ ಅವರ ಭೂಮಿಗೆ ನೀರಾವರಿ ಸೌಲಭ್ಯ ದೊರೆತಿದೆ. ನೋವಿನ ಸಂಗತಿ ಎಂದರೆ, ಅತಿಯಾದ ನೀರಿನ ಬಳಕೆಯಿಂದ ಈ ಭೂಮಿ ಸವಳು- ಜವಳು ಬಾಧೆಗೆ ಒಳಗಾಗಿ ಬರಡಾಗಿ ನಿಂತಿದೆ.

ಕೆಲವು ವರ್ಷಗಳ ಹಿಂದೆ ತನ್ನ ಜಮೀನಿಗೆ ನೀರು ಬಂತು ಎಂದು ಹಿಗ್ಗಿ ಕುಣಿದ ಈ ರೈತ, ಈಗ ಬೇರೆಯವರ ಭೂಮಿಯಲ್ಲಿ ಕೂಲಿ ಮಾಡಿ ಬದುಕು ಸಾಗಿಸಬೇಕಾಗಿ ಬಂದಿದೆ. ಇಂಗಳಗಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಅನೇಕ ರೈತರ ಬವಣೆ ಇದೇ ಮಾದರಿಯಲ್ಲಿದೆ. ರಾಜ್ಯದಲ್ಲಿ ನೀರಾವರಿಗೆ ಒಳಪಟ್ಟ ಪ್ರದೇಶದ ಬಹಳಷ್ಟು ಭೂಮಿಯಲ್ಲಿ ಈ ಸಮಸ್ಯೆ ಉಂಟಾಗಿದೆ.

ರೈತರ ಆದಾಯ ದ್ವಿಗುಣಗೊಳಿಸುವುದಾಗಿ ಕೇಂದ್ರ ಸರ್ಕಾರ ಹೇಳುತ್ತಲೇ ಇದೆ. ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಬೇಕು, ಡ್ಯಾಮ್‌ಗಳನ್ನು ಕಟ್ಟಬೇಕು, ಏತ ನೀರಾವರಿ ಯೋಜನೆಗಳನ್ನು ರೂಪಿಸಬೇಕು, ಕಾಲುವೆಗಳ ಜಾಲ ವಿಸ್ತರಿಸಬೇಕು ಎಂಬ ಬೇಡಿಕೆಗಳ ಕೂಗು ಕೇಳುತ್ತಲೇ ಇದೆ. ವಿಪರ್ಯಾಸವೆಂದರೆ, ಅತಿಯಾದ ನೀರಿನ ಬಳಕೆಯಿಂದ ಕೃಷಿಯೋಗ್ಯ ಶೇಕಡ 20ರಷ್ಟು ಭೂಮಿ ಬರಡಾಗಿ ನಿಂತಿದೆ. ಅಣೆಕಟ್ಟುಗಳ ಅಚ್ಚುಕಟ್ಟು ಪ್ರದೇಶದಲ್ಲಿ ಸವಳು- ಜವಳು ಪ್ರಮಾಣ ಇನ್ನೂ ಹೆಚ್ಚಾಗಿದೆ. ರೈತರು ಬೇಗ ಎಚ್ಚೆತ್ತುಕೊಳ್ಳದಿದ್ದರೆ ಈ ತೊಂದರೆ ಕ್ರಮೇಣ ಹೆಚ್ಚಾಗಲಿದೆ ಎಂದು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.

ಜಲಾಶಯಗಳಲ್ಲಿ ಸಂಗ್ರಹಿಸಿದ ನೀರನ್ನು ಕಾಲುವೆಗಳ ಮೂಲಕ ಬೆಳೆಗಳಿಗೆ ಪೂರೈಸುವ ವಿಧಾನವನ್ನು ಹೆಚ್ಚು ರೈತರು ಅನುಸರಿಸುತ್ತಿದ್ದಾರೆ. ಇದು, ನೀರು ಹರಿಯುವ ಸರಳ ವಿಧಾನ. ಪಂಪ್‌ಸೆಟ್ ಮತ್ತು ವಿದ್ಯುತ್ ಬೇಕಾಗಿಲ್ಲ. ತಮ್ಮ ಭೂಮಿ ಪೂರ್ಣ ನೀರುಂಡಮೇಲೆ ನೀರು ಹರಿದು ಬರುವುದನ್ನು ನಿಲ್ಲಿಸಲು ರೈತರು ಕಾಳಜಿ ವಹಿಸಬೇಕು. ಇದನ್ನು ಪಾಲಿಸದೇ ಇರುವುದರಿಂದ ನೀರು ಪೋಲಾಗುತ್ತದೆ ಮಾತ್ರವಲ್ಲ, ಭೂಮಿ ಹಾಗೂ ಬೆಳೆಗಳು ಹಾಳಾಗುತ್ತವೆ. ಕಾಲುವೆಗಳು ಬಿರುಕು ಬಿಟ್ಟಾಗ, ಒಡೆದಾಗ, ಜಲಾಶಯಗಳು ತುಂಬಿದ ಕಾರಣಕ್ಕೆ ಅಧಿಕ ನೀರು ಹೊರಬಿಟ್ಟಾಗ ಇನ್ನೂ ಹೆಚ್ಚು ನೀರು ರೈತರ ಭೂಮಿಗೆ ನುಗ್ಗುತ್ತದೆ. ಇದನ್ನು ತ್ವರಿತವಾಗಿ ತಡೆಯುವುದು ಬಹಳ ಅವಶ್ಯ.

ನದಿಗಳ ದಂಡೆ, ಬಾವಿ, ಕೆರೆ, ಕೊಳವೆಬಾವಿ ಮೂಲಕ ನೀರಾವರಿ ಸೌಲಭ್ಯ ಮಾಡಿಕೊಂಡ ರೈತರು ಪಂಪ್‌ಸೆಟ್ ಬಳಸಿ ಭೂಮಿಗೆ ನೀರುಣಿಸುತ್ತಾರೆ. ಇವರಲ್ಲಿ ಕೂಡ ಬಹಳ ಜನ ನೀರನ್ನು ಮಿತವಾಗಿ ಬಳಸಲು ಗಮನ ಕೊಡುವುದಿಲ್ಲ. ರೈತರು ವಿದ್ಯುತ್ ಪಂಪ್‌ಸೆಟ್ ಚಾಲೂ ಮಾಡುತ್ತಾರೆ, ಆದರೆ ಬಂದ್ ಮಾಡುವುದೇ ಇಲ್ಲ ಎಂಬ ಮಾತಿದೆ.

ಸವಳು- ಜವಳಿನಿಂದಾಗಿ ಭೂಮಿಯ ಆರೋಗ್ಯ ಕೆಡುತ್ತದೆ, ಕೃಷಿ ಆದಾಯ ಕುಂಠಿತವಾಗುತ್ತದೆ, ರೈತರ ಆರ್ಥಿಕ ಸ್ಥಿತಿ ಹದಗೆಡುತ್ತದೆ, ರೈತರ ವಲಸೆಗೆ ಕಾರಣವಾಗುತ್ತದೆ ಮತ್ತು ವಾತಾವರಣ ಕಲುಷಿತವಾಗುತ್ತದೆ. ಇವೆಲ್ಲ ಸಾಮಾಜಿಕ- ಆರ್ಥಿಕ ದುಷ್ಪರಿಣಾಮಗಳು.

ಕೃಷಿಗೆ ಫಲವತ್ತಾದ ಆರೋಗ್ಯಪೂರ್ಣ ಭೂಮಿ ಬೇಕು. ಮಣ್ಣಿನಲ್ಲಿ ಮೂರು ಕೋಟಿಗಿಂತಲೂ ಅಧಿಕ ಸೂಕ್ಷ್ಮಜೀವಿಗಳಿರುತ್ತವೆ. ಸಾಗುವಳಿ ಭೂಮಿಯಲ್ಲಿ ನೀರು ಮೇಲಕ್ಕೆ ಏರುತ್ತ ಬಂದಂತೆ ಕೆಳಪದರದಲ್ಲಿರುವ ಲವಣಾಂಶಗಳು ಭೂಮಿಯ ಮೇಲ್ಭಾಗಕ್ಕೆ ಬರುತ್ತವೆ. ನೀರು ಆವಿಯಾಗಿ ಹೋಗಿ ಲವಣಾಂಶಗಳು ಭೂಮಿಯ ಮೇಲೆ ಸಂಗ್ರಹವಾಗುತ್ತವೆ. ಅಲ್ಲಿ ಉಪ್ಪಿನ ಪದರು ನಿರ್ಮಾಣವಾಗಿ ಸವಳು- ಜವಳು ಉಂಟಾಗುತ್ತದೆ.

ದೇಶದಲ್ಲಿ ನೀರಾವರಿ ಸೌಲಭ್ಯ ಜಾಲ ನಿರ್ಮಿಸಿದ್ದರಿಂದ ಅನೇಕ ಅನುಕೂಲಗಳಾಗಿವೆ. ಜೊತೆ ಜೊತೆಗೆ ಅವೈಜ್ಞಾನಿಕ ನೀರಿನ ಬಳಕೆಯಿಂದ ದೊಡ್ಡ ಪ್ರಮಾಣದಲ್ಲಿ ಭೂಮಿ ಬರಡಾಗುತ್ತಿರುವುದು ಆತಂಕದ ಸಂಗತಿಯಾಗಿದೆ.

'ಮುಂಜಾಗ್ರತೆಯೇ ಮದ್ದಿಗಿಂತ ಉತ್ತಮ' ಎನ್ನುವಂತೆ, ಈ ಸಮಸ್ಯೆ ಇನ್ನಷ್ಟು ಉಲ್ಬಣಿಸದಂತೆ ನೋಡಿಕೊಳ್ಳಬೇಕು. ಅದಕ್ಕೆ ಅಗತ್ಯ ಕ್ರಮ ಕೈಗೊಳ್ಳುವುದಕ್ಕೆ ಆದ್ಯತೆ ನೀಡುವುದು ಅವಶ್ಯ. ಜಮೀನನ್ನು ನೀರಾವರಿಗೆ ಅಳವಡಿಸುವ ಮುನ್ನ ಮಣ್ಣಿನ ಗುಣಲಕ್ಷಣಗಳನ್ನು ಅರಿತುಕೊಂಡು ಸಮರ್ಪಕವಾಗಿ ನೀರುಣಿಸಬೇಕು. ನಾಲೆಗಳನ್ನು ಸದಾ ಸುಸ್ಥಿತಿಯಲ್ಲಿ ಇಡಬೇಕು. ಬಿರುಕು ಕಂಡರೆ ತಕ್ಷಣ ರಿಪೇರಿ ಮಾಡಬೇಕು. ನೀರು ನಿರ್ವಹಣೆಗೆ ವೈಜ್ಞಾನಿಕ ವಿಧಾನವನ್ನು ಎಲ್ಲ ರೈತರು ಕಡ್ಡಾಯವಾಗಿ ಪಾಲಿಸಬೇಕು.

ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಮರಗೂರ ಗ್ರಾಮದ ರೈತರು ಸಂಘಟಿತರಾಗಿ, ಸವಳು- ಜವಳು ಬಾಧೆಗೆ ಒಳಗಾದ ಸುಮಾರು 500 ಎಕರೆ ಭೂಮಿಗೆ ಮರುಜೀವ ನೀಡಿದ್ದಾರೆ. ಇದು ನಿಜಕ್ಕೂ ಒಂದು ಮಾದರಿ ಕಾರ್ಯವಾಗಿದೆ.

ಸಮಸ್ಯೆಯ ಪರಿಹಾರಕ್ಕೆ ಅನೇಕ ಆವಿಷ್ಕಾರಗಳಾಗಿವೆ. ತಜ್ಞರು ಕೆಲವು ಪರಿಣಾಮಕಾರಿ ಮಾರ್ಗಗಳನ್ನು ಕಂಡುಹಿಡಿದಿದ್ದಾರೆ. ಇವುಗಳಲ್ಲಿ ಮುಖ್ಯವಾಗಿ ತೆರೆದ ಹಾಗೂ ಅಂತರ್ಗತ ಬಸಿಗಾಲುವೆಗಳ ನಿರ್ಮಾಣ ಅತ್ಯಂತ ಪರಿಣಾಮಕಾರಿ ವಿಧಾನವಾಗಿದೆ. ಸರ್ಕಾರ ಮತ್ತು ರೈತರ ಜಂಟಿ ಪ್ರಯತ್ನದ ಮೂಲಕ ಸವಳು- ಜವಳು ಭೂಮಿಗೆ ಮೊದಲಿನ ಶಕ್ತಿ ತುಂಬಬೇಕು ಹಾಗೂ ಭೂಮಿ ಈ ಬಾಧೆಗೆ ಒಳಗಾಗದಂತೆ ಮುಂಜಾಗ್ರತೆ ವಹಿಸಬೇಕು.

ವಾಚಕರ ವಾಣಿ

ಸಿಹಿ ಹಂಚಿದವರ ನಡೆ ಎಂಥದ್ದು?

ಬಿಲ್ಕಿಸ್ ಬಾನು ಪ್ರಕರಣದಲ್ಲಿ ಗುಜರಾತ್ ಸರ್ಕಾರದ ಪ್ರಶ್ನಾರ್ಹ ನಡೆಯನ್ನು ಡಾ. ಗೀತಾ ಕೃಷ್ಣಮೂರ್ತಿ ಚೆನ್ನಾಗಿ ವಿವರಿಸಿದ್ದಾರೆ (ಪ್ರ.ವಾ., ಆ. 25). ಅತ್ಯಾಚಾರ ಮತ್ತು ಕಗ್ಗೊಲೆಗಳಲ್ಲಿ ಭಾಗಿಯಾಗಿದ್ದ ಆ ಹನ್ನೊಂದು ಮಂದಿ ಜೈಲಿನಲ್ಲಿ ಸನ್ನಡತೆ ತೋರಿಸಿದ್ದರೋ ಇಲ್ಲವೋ ಗೊತ್ತಿಲ್ಲ. ಆದರೆ ಜೈಲಿಂದ ಬಿಡುಗಡೆ ಪಡೆದು ಹೊರಬಂದಾಗ ಯುದ್ಧ ಗೆದ್ದು ಬಂದ ವೀರರನ್ನು ಬರಮಾಡಿಕೊಂಡಂತೆ ಅವರಿಗೆ ನಮಸ್ಕರಿಸಿ, ಹೂಮಾಲೆ ಹಾಕಿ, ಸಿಹಿ ಹಂಚಿದವರ ನಡೆ ಎಂಥದ್ದು?

ಆ ಹನ್ನೊಂದು ಜನರ ಮುಖದಲ್ಲಿ ಪಶ್ಚಾತ್ತಾಪದ ಲವಲೇಶ ಇರಲಿಲ್ಲ. ಎಲ್ಲಕ್ಕಿಂತ ಚೋದ್ಯದ ಸಂಗತಿ ಏನೆಂದರೆ, ಅವರಲ್ಲಿ ಮೂರ್ನಾಲ್ಕು ಮಂದಿ ಬೊಜ್ಜು ಬೆಳೆಸಿಕೊಂಡಂತಿತ್ತು. ಕಾರಾಗೃಹಗಳಲ್ಲಿ ಇಂಥವರಿಗೂ ಐಷಾರಾಮಿ ಜೀವನ ನಡೆಸಲು ಅವಕಾಶ ಇರುವುದೇ? ಘೋರ ಅಪರಾಧಿಗಳಿಗೆ ಜೈಲಿನ ಆವರಣದಲ್ಲಿ ಕಲ್ಲು ಒಡೆಯುವುದೊ, ರಾಗಿ ಬೀಸುವುದೊ, ಕೃಷಿ ದುಡಿಮೆಯೊ ಎಂದು ಸಿನಿಮಾಗಳಲ್ಲಿ ತೋರಿಸುವುದೆಲ್ಲ ಸುಳ್ಳು ಎಂದಂತಾಯಿತು. ಭಾರತದ ಜೈಲುಗಳ ಒಳಗೆ ಯಾರ ಯಾರ ದಿನಚರಿ, ಜೀವನಕ್ರಮ ಹೇಗಿರುತ್ತದೆ ಎಂಬುದನ್ನು ಹೊರಗಿನವರಿಗೆ ತೋರಿಸಬಾರದು ಎಂಬ ಕಾನೂನು ಇದೆಯೇ? ಇದ್ದರೆ ವಕೀಲರು, ಮಾಧ್ಯಮ ಪ್ರತಿನಿಧಿಗಳು ಅದನ್ನು ಪ್ರಶ್ನಿಸಬೇಕು. ಯಾವ ಅಪರಾಧಕ್ಕೆ ಶಿಕ್ಷೆ ಹೇಗಿರುತ್ತದೆ ಎಂಬುದನ್ನು ಜನರಿಗೆ ತಿಳಿಸಿ ಹೇಳುವುದೂ ಅಪರಾಧ ತಡೆಯ ಒಂದು ವಿಧಾನ ತಾನೆ?

ಚಂದ್ರಕಾಂತ ಯು. ಪಾಟೀಲ, ಬೆಳಗಾವಿ

ಓಡುತ್ತಲೇ ಇದೆ ಮೂರು ಗಾಲಿಯ ಗಾಡಿ!

ನಲವತ್ತು ಪರ್ಸೆಂಟ್ ಕಮಿಷನ್ ಸರ್ಕಾರ ಎನ್ನುವುದು ಈಗ ದೊಡ್ಡ ಸುದ್ದಿ ಎನ್ನುವಂತೆ ವಿರೋಧ ಪಕ್ಷಗಳೂ ಗುತ್ತಿಗೆದಾರರೂ ಗರ್ಜಿಸುತ್ತಿದ್ದಾರೆ. ಆದರೆ ಜನ ಮಾತ್ರ ತಣ್ಣಗಿದ್ದಾರೆ. ಆದರೆ ಇದೇ ಲಂಚವನ್ನು ಮಾಸ್ಟರ್ ಹಿರಣ್ಣಯ್ಯ ಅವರು 'ಲಂಚಾವತಾರ' ಎಂಬ ನಾಟಕ ಮಾಡಿ, ಅರವತ್ತು ವರ್ಷದ ಹಿಂದೆಯೇ ಕರ್ನಾಟಕದಾದ್ಯಂತ ಜನರಲ್ಲಿ ವಿದ್ಯುತ್ ಸಂಚಲನ ಉಂಟುಮಾಡಿದ್ದರು. ಹೀಗೂ ಉಂಟೆ ಎಂದು ನಾಡು ಬೆಚ್ಚಿತ್ತು. ಜನರಲ್ಲಿ ಜಾಗೃತಿ ಉಂಟಾದರೆ ತಮಗೆ ಉಳಿಗಾಲವಿಲ್ಲ ಎಂದು ರಾಜಕೀಯ ಪಕ್ಷಗಳು ಕಂಗಾಲಾಗಿದ್ದವು. ತುರ್ತು ಪರಿಸ್ಥಿತಿ ಇದ್ದಾಗ ನಾಟಕ ನಿಷೇಧವಾಗಿತ್ತು. ಆದರೆ ಈಗಲೂ ಈ ಅವತಾರ ಮಾತ್ರ ಮುಂದುವರಿದು, ಇಂದು ಪರ್ಸೆಂಟೇಜ್ ಪ್ರಮಾಣ ಹತ್ತು, ಇಪ್ಪತ್ತು, ಮೂವತ್ತು ದಾಟಿ ನಲವತ್ತಕ್ಕೆ ಬಂದಂತಿದೆ. ಆದರೆ ಇದಕ್ಕೆ ಬಲಿಪಶುವಾದ ಜನ ಮಾತ್ರ ಇನ್ನೂ ಮೂಕಪ್ರೇಕ್ಷಕರಾಗಿದ್ದಾರೆ. ಅದರ ಫಲಾನುಭವಿಗಳಾದವರು ಕಮಿಷನ್ ತಮ್ಮ ಕೈಯಿಂದ ಕೊಟ್ಟಂತೆ ಎಗರಾಡುತ್ತಿದ್ದಾರೆ. ತಮಗಿಲ್ಲದ ಭಾಗ್ಯ ಆಡಳಿತ ಪಕ್ಷದವರಿಗೆ ಸಿಕ್ಕಿದೆ ಎಂದು ಅಸೂಯೆಯಿಂದ ಕಂಗೆಟ್ಟು ವಿರೋಧ ಪಕ್ಷಗಳು ಊಳಿಡುತ್ತಿವೆ.

ಎರಡು ಕೈ ಸೇರಿದರೆ ಚಪ್ಪಾಳೆ. ಆದರೆ ಪರ್ಸೆಂಟೇಜ್‌ಗೆ ಎರಡಲ್ಲ ಮೂರು ಕೈ ಸೇರಿವೆ. ರಾಜಕಾರಣಿ, ಗುತ್ತಿಗೆದಾರ ಮತ್ತು ಅಧಿಕಾರಿ. ಇದರಲ್ಲಿ ಒಂದು ಕೈ ಜೋಡಿಸದೆ ಹೋಗಿದ್ದರೂ ಈ ಮೂರು ಗಾಲಿಯ ಗಾಡಿ ಸ್ವಾತಂತ್ರ್ಯ ಬಂದ ದಿನದಿಂದ ಹೀಗೆ ಸಾಗುತ್ತಿದ್ದಿಲ್ಲ.

ಸತ್ಯಬೋಧ, ಬೆಂಗಳೂರು

ಪರಮಾತ್ಮನನ್ನು ಸೀಮಿತ ಮಾಡುವುದೇಕೆ?

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ತಮ್ಮ ಸಂಪುಟದ ಸದಸ್ಯ ಇಸ್ರೇಲ್ ಅಹ್ಮದ್ ಮನ್ಸೂರಿ ಅವರೊಂದಿಗೆ ಗಯಾದ ವಿಷ್ಣುಪಾದ ದೇವಾಲಯಕ್ಕೆ ಭೇಟಿ ನೀಡಿದ್ದಕ್ಕೆ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದೆ. 'ಸನಾತನ ಧರ್ಮದಲ್ಲಿ ನಂಬಿಕೆ ಇರುವವರು ಮಾತ್ರ' ಪ್ರವೇಶಿಸಬಹುದು ಎಂಬ ಫಲಕವನ್ನು ಆಡಳಿತ ಮಂಡಳಿ ಅಲ್ಲಿ ಹಾಕಿದೆ ಎಂದೂ, ಮನ್ಸೂರಿ ಅವರ ದೇವಾಲಯ ಪ್ರವೇಶದ ವಿಷಯ ಮಂಡಳಿಗೆ ತಿಳಿದಿರಲಿಲ್ಲ ಎಂದೂ ಹೇಳಲಾಗಿದೆ.

ದೇವರ ದರ್ಶನಕ್ಕೆ ಏಕೆ ಇಂಥ ಮತನಿರ್ಬಂಧದ ಕಟ್ಟುಪಾಡುಗಳೊ! ಅನ್ಯಮತೀಯನೊಬ್ಬ ಬೇರೆ ದೇವರ ಬಗ್ಗೆ ಯೋಚಿಸುವಂತಿಲ್ಲ ಎಂದು ಈ ದೇಶದ ಸನಾತನ ಧರ್ಮ ಹೇಳುತ್ತದೆಯೇ? ಮನ್ಸೂರಿ ಅವರು ಪ್ರಾಮಾಣಿಕತೆಯಿಂದ ಅಲ್ಲಿಗೆ ಹೋಗಿದ್ದರೆ ತಪ್ಪೇನು? ದೇವಾಲಯದೊಳಗೆ ಪ್ರವೇಶಿಸುವಾಗ ಅನುಸರಿಸಬೇಕಾದ ನಿಬಂಧನೆಗಳಿಗೆ ಅನುಗುಣವಾಗಿ ನಡೆದುಕೊಂಡರೆ ಸಾಕು. ಪರಮಾತ್ಮನನ್ನು ಒಂದು ಮತಕ್ಕೇ ಸೀಮಿತ ಮಾಡುವುದಕ್ಕೆ ಏನಿದೆ ಆಧಾರ?

ಸಾಮಗ ದತ್ತಾತ್ರಿ, ಬೆಂಗಳೂರು

ಕವಲು ಹಾದಿಯಲ್ಲಿ ಕಾಂಗ್ರೆಸ್

ಕಾಂಗ್ರೆಸ್ ಪಕ್ಷ ಈಗ ಕವಲು ಹಾದಿಯಲ್ಲಿದ್ದು, ದೊಡ್ಡ ಬಿಕ್ಕಟ್ಟನ್ನು ಎದುರಿಸುತ್ತಿದೆ. ಈಗ ಬೇರಾವ ಮಾರ್ಗವೂ ಇಲ್ಲದೆ ಅಧ್ಯಕ್ಷರ ಆಯ್ಕೆಗೆ ಮುಂದಾಗಿದೆ. ಕಾಂಗ್ರೆಸ್ ಇಡುತ್ತಿರುವ ಈ ಹೆಜ್ಜೆಯಲ್ಲೂ ಇರುವ ಲೋಪದೋಷಗಳನ್ನು ಎತ್ತಿ ತೋರಿಸಿರುವ ಸಂಪಾದಕೀಯ (ಪ್ರ.ವಾ., ಆ. 25) ಸಮಯೋಚಿತವಾಗಿದೆ. ದಂತಗೋಪುರದಲ್ಲಿರುವವರ ಸಲಹೆ, ಅಭಿಪ್ರಾಯಗಳನ್ನೇ ಹೆಚ್ಚಾಗಿ ಕೇಳಿ, ತನ್ನ ಅಂತಃಸತ್ವವನ್ನೇ ಬರಿದು ಮಾಡಿಕೊಂಡಿರುವ ಈ ಪುರಾತನ ಪಕ್ಷ ಇನ್ನಾದರೂ ಎಚ್ಚೆತ್ತುಕೊಳ್ಳಬೇಕು.

21ನೇ ಶತಮಾನದಲ್ಲಿ ಜಗತ್ತು ಬಹಳಷ್ಟು ಬದಲಾಗಿರುವಾಗ, ಕಾಂಗ್ರೆಸ್ ಮಾತ್ರ 'ಯಥಾಸ್ಥಿತಿ ವಾದ'ಕ್ಕೆ ಜೋತು ಬಿದ್ದಿರುವುದು ದುರಂತ. ಇದರಿಂದ ಬೇಸತ್ತು ಹಲವು ಹಿರಿಯ ನಾಯಕರು ಪಕ್ಷಕ್ಕೆ ವಿದಾಯ ಹೇಳಿದ್ದಾರೆ. ಪಕ್ಷದ ರಾಷ್ಟ್ರೀಯ ವಕ್ತಾರರಾಗಿದ್ದ ಜೈವೀರ್ ಶೇರ್‌ಗಿಲ್, 'ಭಟ್ಟಂಗಿತನವು ಪಕ್ಷವನ್ನು ಗೆದ್ದಲಿನಂತೆ ತಿನ್ನುತ್ತಿದೆ' ಎಂದು ಮುಖಕ್ಕೆ ಹೊಡೆದಂತೆ ಹೇಳಿ, ರಾಜೀನಾಮೆ ಕೊಟ್ಟು ಗುಡ್‌ಬೈ ಎಂದಿದ್ದಾರೆ. ಇದು 'ಅಗ್ರೆಸಿವ್ ಪಾಲಿಟಿಕ್ಸ್'ನ ಯುಗ. ಹೀಗಿರುವಾಗ, ಕಾಂಗ್ರೆಸ್ ತೆವಳುತ್ತಿದೆ! ಜೊತೆಗೆ, ಒಳಗಿಂದೊಳಗೇ ಉಸಿರು ಕಟ್ಟುವಂತಹ ವಾತಾವರಣವನ್ನು ಸೃಷ್ಟಿಸಿಕೊಂಡು, ಸ್ವಯಂಕೃತ ಅಪರಾಧಗಳಿಂದ ತನ್ನಿಂತಾನೇ ಅಪ್ರಸ್ತುತವಾಗುತ್ತಿದೆ. ಪಕ್ಷದ ನಾಯಕರು ಪ್ರಾಮಾಣಿಕವಾಗಿ ಆತ್ಮವಿಮರ್ಶೆ ಮಾಡಿಕೊಂಡು, ಪಕ್ಷಕ್ಕೆ ಜೀವ ತುಂಬಲಿ. ಇಲ್ಲದಿದ್ದರೆ ಇನ್ನು ಕೆಲವೇ ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷದ ಹೆಸರು ಕೇವಲ ನೆನಪಾಗಿ ಪರ್ಯವಸಾನವಾಗುವುದರಲ್ಲಿ ಅನುಮಾನವಿಲ್ಲ.

ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ತೂಗುಗತ್ತಿಯಡಿ ಜಾರ್ಖಂಡ್ ಸರ್ಕಾರ

ಪ್ರಜಾವಾಣಿ ವಾರ್ತೆ

ಈಚಿನ ದಿನಗಳಲ್ಲಿ ಜಾರ್ಖಂಡ್ ಸರ್ಕಾರವು ಒಂದಲ್ಲ ಒಂದು ಬಿಕ್ಕಟ್ಟನ್ನು ಎದುರಿಸುತ್ತಿದೆ. ಆ ಎಲ್ಲಾ ಬಿಕ್ಕಟ್ಟುಗಳು ಸರ್ಕಾರವನ್ನು ಉರುಳಿಸಲು ನಡೆಸಲಾಗುತ್ತಿರುವ ಸಂಚಿನ ಭಾಗ ಎಂದು ಆಡಳಿತಾರೂಢ ಮೈತ್ರಿಕೂಟದ ಎಲ್ಲಾ ಪಕ್ಷಗಳು ಆರೋಪಿಸುತ್ತಿವೆ. ಈ ಸಂಚಿನ ಸೂತ್ರಧಾರ ಎಂದು ಈ ಪಕ್ಷಗಳು ಬಿಜೆಪಿಯತ್ತ ಬಹಿರಂಗವಾಗಿಯೇ ಬೊಟ್ಟು ಮಾಡುತ್ತಿವೆ. ಬಿಜೆಪಿ ಈ ಆರೋಪವನ್ನು ನಿರಾಕರಿಸುತ್ತಲೇ ಬಂದಿದೆ. ಆದರೆ, ಸರ್ಕಾರವು ಮತ್ತೆ ಮತ್ತೆ ಬಿಕ್ಕಟ್ಟಿಗೆ ಸಿಲುಕುತ್ತಿದೆ.

ಆಡಳಿತಾರೂಢ ಮೈತ್ರಿಕೂಟದ ಭಾಗವಾಗಿರುವ ಕಾಂಗ್ರೆಸ್‌ನ ಮೂವರು ಶಾಸಕರು ಕೆಲವೇ ದಿನಗಳ ಹಿಂದೆ ಪಶ್ಚಿಮ ಬಂಗಾಳದಲ್ಲಿ ಭಾರಿ ನಗದಿನೊಂದಿಗೆ ಸಿಕ್ಕಿಬಿದ್ದರು. ಜಾರ್ಖಂಡ್‌ನಿಂದ ಅವರು ಅಸ್ಸಾಂನತ್ತ ಹೊರಟಿದ್ದರು. ಅವರು ಸಂಚರಿಸುತ್ತಿದ್ದ ಎಸ್‌ಯುವಿಯಲ್ಲಿ ಅಪಾರ ಪ್ರಮಾಣದ ನಗದು ಇದೆ ಎಂಬ ಸುಳಿವಿನ ಆಧಾರದಲ್ಲಿ, ಶೋಧ ಕಾರ್ಯ ನಡೆಸಿದಾಗ ಅವರು ಸಿಕ್ಕಿಬಿದ್ದರು ಎನ್ನುತ್ತವೆ ಪೊಲೀಸ್ ದಾಖಲೆಗಳು.

ಈ ಮೂವರು ಶಾಸಕರು ಭಾರಿ ನಗದಿನೊಂದಿಗೆ ಸಿಕ್ಕಿ ಬಿದ್ದಾಗ, ಅದು ಜಾರ್ಖಂಡ್ ಸರ್ಕಾರಕ್ಕೆ ತೀವ್ರ ಮುಜುಗರವನ್ನುಂಟು ಮಾಡಿತ್ತು. ಆ ಮೂವರು ಭ್ರಷ್ಟರು ಎಂದು ವಿರೋಧ ಪಕ್ಷಗಳು ಬಿಂಬಿಸಿದವು. ಆದರೆ, ಕೆಲವೇ ದಿನಗಳಲ್ಲಿ ಈ ಪ್ರಕರಣ ಬೇರೆ ತಿರುವು ಪಡೆದುಕೊಂಡಿತು. 'ಜಾರ್ಖಂಡ್ ಸರ್ಕಾರವನ್ನು ಬೀಳಿಸಲು ಬಿಜೆಪಿ ಯತ್ನಿಸುತ್ತಿದೆ. ಅದರ ಭಾಗವಾಗಿ ಈ ಮೂವರು ಶಾಸಕರಿಗೆ ಹಣ ನೀಡಿ ಅಸ್ಸಾಂಗೆ ಬರಲು ಹೇಳಲಾಗಿತ್ತು. ಅಸ್ಸಾಂ ಮುಖ್ಯಮಂತ್ರಿ ಹಿಮಂತಾ ಬಿಸ್ವಾ ಶರ್ಮಾ ಅವರನ್ನು ಭೇಟಿ ಮಾಡಲು ಅವರು ಹೋಗುತ್ತಿದ್ದಾಗ, ಅವರನ್ನು ಬಂಧಿಸಲಾಗಿದೆ. ಪಕ್ಷದ ಇತರ ಶಾಸಕರನ್ನು ಸೆಳೆಯಲು ತಲಾ ₹10 ಕೋಟಿಯ ಆಮಿಷ ಒಡ್ಡಲಾಗಿದೆ' ಎಂದು ರಾಜ್ಯ ಕಾಂಗ್ರೆಸ್, ಪೊಲೀಸರಲ್ಲಿ ದೂರು ದಾಖಲಿಸಿತು. ಈ ಪ್ರಕರಣದ ತನಿಖೆ ಪ್ರಗತಿಯಲ್ಲಿ ಇದೆ.

ಸರ್ಕಾರವನ್ನು ಉರುಳಿಸಲು ಬಿಜೆಪಿ ಎಲ್ಲಾ ಸ್ವರೂಪದ ಯತ್ನಗಳನ್ನೂ ಮಾಡುತ್ತಿದೆ ಎಂದು ಜಾರ್ಖಂಡ್‌ನ ಆಡಳಿತಾರೂಢ ಪಕ್ಷಗಳು ಆರೋಪಿಸಿವೆ. ಆಡಳಿತ ಪಕ್ಷಗಳ ಶಾಸಕರನ್ನು ಬೇರೆ ಬೇರೆ ಪ್ರಕರಣಗಳಲ್ಲಿ ಸಿಲುಕಿಸಲು ಬಿಜೆಪಿ ಯತ್ನಿಸುತ್ತಿದೆ. ಇದಕ್ಕಾಗಿ ಜಾರಿ ನಿರ್ದೇಶನಾಲಯವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಜೆಎಂಎಂ ಮತ್ತು ಕಾಂಗ್ರೆಸ್ ಆರೋಪಿಸಿದ್ದವು. ರಾಜ್ಯದಲ್ಲಿನ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ನಡೆಸುತ್ತಿರುವ ತನಿಖೆಯನ್ನು ಈ ಆರೋಪಕ್ಕೆ ತಳಕು ಹಾಕಲಾಗಿದೆ.

ವಿಧಾನಸಭೆ ಬಲಾಬಲ



- **81** ಸ್ಥಾನಗಳಿರುವ ಜಾರ್ಖಂಡ್ ವಿಧಾನಸಭೆಯಲ್ಲಿ ಸರ್ಕಾರ ರಚಿಸಲು **41** ಶಾಸಕರ ಬೆಂಬಲ ಅಗತ್ಯವಿದೆ. ಜೆಎಂಎಂ–ಕಾಂಗ್ರೆಸ್ ಮತ್ತು ಆರ್‌ಜೆಡಿ ಮೈತ್ರಿಕೂಟದ ಸರ್ಕಾರಕ್ಕೆ **49** ಶಾಸಕರ ಬೆಂಬಲವಿದೆ.
- ಬಿಜೆಪಿಯಲ್ಲಿ **26** ಶಾಸಕರಿದ್ದಾರೆ. ಆಡಳಿತಾರೂಢ ಮೈತ್ರಿಕೂಟ ಮತ್ತು ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಭಾಗವಾಗದೇ ಇರುವ ಆರು ಶಾಸಕರು ಜಾರ್ಖಂಡ್ ವಿಧಾನಸಭೆಯಲ್ಲಿ ಇದ್ದಾರೆ

ಹೇಮಂತ್ ಅನರ್ಹತೆಗೆ ಆಯೋಗ ಶಿಫಾರಸು?

ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ನಿಯಮಗಳನ್ನು ಉಲ್ಲಂಘಿಸಿದ್ದರಿಂದಾಗಿ ಅವರನ್ನು ಅನರ್ಹಗೊಳಿಸಬೇಕು ಎಂದು ಚುನಾವಣಾ ಆಯೋಗವು ರಾಜ್ಯಪಾಲರಿಗೆ ವರದಿ ಕೊಟ್ಟಿದೆ ಎಂದು ಹೇಳಲಾಗಿದೆ. ಆದರೆ ರಾಜ್ಯಪಾಲ ರಮೇಶ್ ಬೈಸ್ ಅವರ ಕಚೇರಿಯು ಇದನ್ನು ದೃಢಪಡಿಸಿಲ್ಲ.

ದೆಹಲಿಯಲ್ಲಿದ್ದ ರಾಜ್ಯಪಾಲ ಬೈಸ್ ಅವರು ಗುರುವಾರ ಅಪರಾಹ್ನ ರಾಂಚಿಗೆ ಬಂದರು. ವರದಿಯನ್ನು ಪರಿಶೀಲಿಸಿದ ಬಳಿಕವೇ ಪ್ರತಿಕ್ರಿಯೆ ನೀಡುವುದು ಸಾಧ್ಯ ಎಂದು ಅವರು ಹೇಳಿದರು.

ತಮ್ಮದೇ ಹೆಸರಿನಲ್ಲಿದ್ದ ಗಣಿಗಾರಿಕೆ ಗುತ್ತಿಗೆಯನ್ನು ವಿಸ್ತರಣೆ ಮಾಡಿಕೊಂಡಿದ್ದಾರೆ ಎಂಬುದು ಹೇಮಂತ್ ಅವರ ಮೇಲಿರುವ ಆರೋಪ. ಜನಪ್ರಾತಿನಿಧ್ಯ ಕಾಯ್ದೆ 1951ರ ಸೆಕ್ಷನ್ 9ಎ ಅಡಿಯಲ್ಲಿ, ಹೇಮಂತ್ ವಿರುದ್ಧ ಬಿಜೆಪಿ ದೂರು ನೀಡಿತ್ತು. ಸರ್ಕಾರಿ ಗುತ್ತಿಗೆಗಳಿಗೆ ಸಂಬಂಧಿಸಿ ಅನರ್ಹತೆಯ ವಿಚಾರವು 9ಎ ಸೆಕ್ಷನ್‌ನಲ್ಲಿದೆ.

ಜನರ ಬೆಂಬಲವೇ ನನ್ನ ಬಲ. ನೀವು ತನಿಖಾ ಸಂಸ್ಥೆಗಳನ್ನು ಖರೀದಿಸಬಹುದು. ಆದರೆ ಈ ರೀತಿಯ ಜನ ಬೆಂಬಲವನ್ನು ಖರೀದಿಸಲು ಸಾಧ್ಯವೇ?
ಹೇಮಂತ್ ಸೊರೇನ್, ಜಾರ್ಖಂಡ್ ಮುಖ್ಯಮಂತ್ರಿ

ನೈತಿಕತೆ ಇದ್ದರೆ ಹೇಮಂತ್ ಸೊರೇನ್ ರಾಜೀನಾಮೆ ನೀಡಬೇಕು. ರಾಜ್ಯ ವಿಧಾನಸಭೆಯನ್ನು ವಿಸರ್ಜಿಸಬೇಕು. ಎಲ್ಲಾ 81 ಕ್ಷೇತ್ರಗಳಲ್ಲಿ ಚುನಾವಣೆ ನಡೆಯಬೇಕು
ನಿಶಿಕಾಂತ್ ದುಬೆ, ಬಿಜೆಪಿ ಸಂಸದ

ಶಾಸಕರ ಅನರ್ಹತೆ ವಿಚಾರವನ್ನು ಇತ್ಯರ್ಥಪಡಿಸಲು ಸಂವಿಧಾನಬದ್ಧವಾದ ನ್ಯಾಯಾಲಯವು ಸರಿಯಾದ ಸ್ಥಳವೇ ಹೊರತು, ಬಿಜೆಪಿ ನೇಮಕ ಮಾಡಿದ ರಾಜ್ಯಪಾಲರಲ್ಲ
ಜೆ.ಪಿ.ಮಜುಂದಾರ್, ಟಿಎಂಸಿ ವಕ್ತಾರ

ಶಾಸಕರ ಅನರ್ಹತೆಗೆ ಸಂಬಂಧಿಸಿದ ವಿಚಾರಗಳನ್ನು ರಾಜ್ಯಪಾಲರು ನಿರ್ವಹಿಸಬೇಕು. ಅವರು ಚುನಾವಣಾ ಆಯೋಗದ ಅಭಿಪ್ರಾಯ ಪಡೆದು, ಆ ಅಭಿಪ್ರಾಯಕ್ಕೆ ಅನುಗುಣವಾಗಿ ನಡೆದುಕೊಳ್ಳಬೇಕು ಎಂದು ಸಂವಿಧಾನದ 192ನೇ ವಿಧಿಯು ಹೇಳುತ್ತದೆ.

ಸಾಂವಿಧಾನಿಕ ಹುದ್ದೆಯಲ್ಲಿರುವವರು ಮತ್ತು ಸರ್ಕಾರಿ ಸಂಸ್ಥೆಗಳನ್ನು ನಿರ್ಲಜ್ಜವಾಗಿ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹೇಮಂತ್ ಹೇಳಿದ್ದಾರೆ.

ರಾಜ್ಯಪಾಲರಿಗೆ ವರದಿ ಸಲ್ಲಿಸುವುದಕ್ಕೂ ಮುನ್ನ ಆಯೋಗವು ವಿಚಾರಣೆ ನಡೆಸಿತ್ತು. ಹೇಮಂತ್ ಅವರ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ಜನಪ್ರಾತಿನಿಧ್ಯ ಕಾಯ್ದೆಯ 9ಎ ಸೆಕ್ಷನ್ ಅನ್ವಯ ಆಗುವುದಿಲ್ಲ ಎಂದು ಹೇಮಂತ್ ಪರ ವಕೀಲರು ವಾದಿಸಿದ್ದರು.

ಗಣಿಗಾರಿಕೆ ಪ್ರಕರಣದಲ್ಲಿ ಇ.ಡಿ ಜಾಡು

ಜಾರ್ಖಂಡ್‌ನಲ್ಲಿ ಕಳೆದ ಮೂರ್ನಾಲ್ಕು ತಿಂಗಳಿನಿಂದ ಅಕ್ರಮ ಗಣಿಗಾರಿಕೆ ಹಗರಣ ಸದ್ದು ಮಾಡುತ್ತಿದೆ. ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಆಪ್ತರು ಈಗಾಗಲೇ ತನಿಖೆಯ ಬಿಸಿ ಎದುರಿಸಿದ್ದು, ಇದೀಗ ಹೇಮಂತ್ ಕಾಲುಬುಡಕ್ಕೆ ಪ್ರಕರಣ ಬಂದುನಿಂತಿದೆ. ಪ್ರಕರಣವು ಅವರಿಗೆ ಉರುಳಾಗುವ ಸಾಧ್ಯತೆಗಳಿವೆ. ಅಕ್ರಮ ಗಣಿಗಾರಿಕೆ ಪ್ರಕರಣದ ತನಿಖೆ ಆರಂಭಿಸಿದ್ದ ಜಾರಿ ನಿರ್ದೇಶನಾಲಯ ಅಧಿಕಾರಿಗಳು (ಇ.ಡಿ.) ಇದೇ ಮೇ ತಿಂಗಳಿನಿಂದ ಇಲ್ಲಿಯವರೆಗೆ ಸುಮಾರು 60 ಸ್ಥಳಗಳಲ್ಲಿ ಶೋಧ ನಡೆಸಿದ್ದರು. ಹತ್ತಾರು ಕೋಟಿ ರೂಪಾಯಿ ಮೌಲ್ಯದ ಆಸ್ತಿ, ಹಣ, ಶಸ್ತ್ರಾಸ್ತ್ರ, ಮದ್ದುಗುಂಡುಗಳನ್ನು ಮಟ್ಟುಗೋಲು ಹಾಕಿಕೊಂಡಿದ್ದಾರೆ.

ಇ.ಡಿ ಶೋಧ ನಡೆಸಿದಾಗ ಸಿಕ್ಕ ಎರಡು ಎ.ಕೆ. 47 ಬಂದೂಕುಗಳು

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಗುರುವಾರವಷ್ಟೇ (ಆ.25), ಪ್ರೇಮ್ ಪ್ರಕಾಶ್ ಎಂಬ ಮಧ್ಯವರ್ತಿಯನ್ನು ವಶಕ್ಕೆ ಪಡೆದಿದ್ದಾರೆ. ಇದಕ್ಕೂ ಮುನ್ನ, ಹೇಮಂತ್ ಅವರ ಆಪ್ತ ಪಂಕಜ್ ಮಿಶ್ರಾ ಮತ್ತು ಆತನ ಸಹಾಯಕ ಬಚ್ಚು ಯಾದವ್ ಎಂಬುವರನ್ನು ಜುಲೈನಲ್ಲಿ ಇ.ಡಿ ಬಂಧಿಸಿತ್ತು. ದೆಹಲಿ, ಬಿಹಾರ, ತಮಿಳುನಾಡು, ಜಾರ್ಖಂಡ್ ರಾಜ್ಯಗಳಲ್ಲಿ ಪ್ರಕಾಶ್ ಅವರಿಗೆ ಸೇರಿದ 18 ಸ್ಥಳಗಳ ಮೇಲೆ ಬುಧವಾರವಷ್ಟೇ ಇ.ಡಿ ದಾಳಿ ನಡೆಸಿತ್ತು. 2 ಎ.ಕೆ. 47 ಬಂದೂಕು, 60 ಗುಂಡುಗಳನ್ನು ಜಪ್ತಿ ಮಾಡಲಾಗಿತ್ತು. ಈ ಶಸ್ತ್ರಾಸ್ತ್ರ ಜಾರ್ಖಂಡ್‌ನ ಇಬ್ಬರು ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ಸೇರಿದ್ದು, ಅವರನ್ನು ಸೇವೆಯಿಂದ ವಜಾ ಮಾಡಲಾಗಿದೆ. ಪಂಕಜ್ ಮಿಶ್ರಾ ಅವರ ವಿಚಾರಣೆಯಿಂದ ಸಿಕ್ಕ ಸುಳಿವು ಆಧರಿಸಿ, ಈ ಶೋಧ ನಡೆಸಲಾಗಿತ್ತು.

ಜಾರ್ಖಂಡ್‌ನ ಸಾಹಿಬ್‌ಗಂಜ್‌ನ ಬರಹರವಾ ಪೊಲೀಸ್ ಠಾಣೆಯಲ್ಲಿ ಪಂಕಜ್ ಮಿಶ್ರಾ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಆಧರಿಸಿ ಇ.ಡಿ. ತನಿಖೆ ಆರಂಭಿಸಿತ್ತು. ನಂತರ ಅಕ್ರಮ ಗಣಿಗಾರಿಕೆ ಸಂಬಂಧಿಸಿದಂತೆ ಹಲವು ದೂರುಗಳು ದಾಖಲಾದವು. ಇವೆಲ್ಲವನ್ನೂ ಇ.ಡಿ. ತನಿಖೆಗೆ ಒಳಪಡಿಸಿತು. ಪ್ರಕರಣದಲ್ಲಿ ₹100 ಕೋಟಿಗೂ ಹೆಚ್ಚು ಮೌಲ್ಯದ ಹಣ ಹಾಗೂ ಆಸ್ತಿಗಳನ್ನು ಪತ್ತೆ ಮಾಡಲಾಗಿದೆ ಎಂದು ಇ.ಡಿ. ಹೇಳಿದೆ.

ಬೇರೆ ತನಿಖೆಯ ವೇಳೆ ಸಿಕ್ಕಿತು ಗಣಿಗಾರಿಕೆ ಸುಳಿವು!: 2008–10ರಲ್ಲಿ ಜಾರ್ಖಂಡ್‌ನ ಕುಂಟಿಯಲ್ಲಿ ನಡೆದಿದೆ ಎನ್ನಲಾದ ನರೇಗಾ ಹಗರಣದ ತನಿಖೆ ನಡೆಸುತ್ತಿದ್ದ ಜಾರಿ ನಿರ್ದೇಶನಾಲಯಕ್ಕೆ ಅಕ್ರಮ ಗಣಿಗಾರಿಕೆ ಹಾಗೂ ಹಣ ಅಕ್ರಮ ವರ್ಗಾವಣೆ ಸುಳಿವು ಸಿಕ್ಕಿತು. ಗಣಿ ಮತ್ತು ಕೈಗಾರಿಕಾ ಇಲಾಖೆ ಕಾರ್ಯದರ್ಶಿ ಪೂಜಾ ಸಿಂಘಾಲ್ ಹಾಗೂ ಅವರ ಪತಿ, ಉದ್ಯಮಿ ಅಭಿಷೇಕ್ ಝಾ, ಝಾ ಅವರ ಚಾರ್ಟರ್ಡ್ ಅಕೌಂಟೆಂಟ್ ಸುಮನ್ ಕುಮಾರ್ ಅವರಿಗೆ ಸೇರಿದ 36 ಸ್ಥಳಗಳಲ್ಲಿ ಮೇ 6ರಂದು ಇ.ಡಿ. ಶೋಧ ನಡೆಸಿತು.

60 ಸ್ಥಳಗಳಲ್ಲಿ ಶೋಧ ಕಾರ್ಯ

₹5.3 ಕೋಟಿ ನಗದು ವಶ

₹30 ಕೋಟಿ ಮೌಲ್ಯದ ಒಳನಾಡು ಸಾರಿಗೆ ನೌಕೆ ಮುಟ್ಟುಗೋಲು

* ಹಲವು ಸ್ಟೋನ್ ಕ್ರಷಿಂಗ್ ಯಂತ್ರಗಳು ಹಾಗೂ ಟ್ರಕ್‌ಗಳ ಮುಟ್ಟುಗೋಲು

₹13.32 ಕೋಟಿ 50 ಬ್ಯಾಂಕ್ ಖಾತೆಗಳಲ್ಲಿ ಇದ್ದ ಹಣ ವಶ

ಕುಮಾರ್ ಮನೆಯಿಂದ ₹17.76 ಕೋಟಿ ಮೌಲ್ಯದ ಆಸ್ತಿ ದಾಖಲೆಗಳನ್ನು ಇ.ಡಿ. ಮುಟ್ಟುಗೋಲು ಹಾಕಿಕೊಂಡಿತು. ಮೇ 7ರಂದು ಅವರನ್ನು ಬಂಧಿಸಿತು. ಮೇ 11ರಂದು ಪೂಜಾ ಸಿಂಘಾಲ್ ಸಹ ಬಂಧನಕ್ಕೆ ಒಳಗಾದರು. ಸಿಂಘಾಲ್ ಹಾಗೂ ಝಾ ಅವರ ವಿಚಾರಣೆ ವೇಳೆ, ಅಕ್ರಮ ಗಣಿಗಾರಿಕೆ ಹಾಗೂ ಹಣ ಅಕ್ರಮ ವರ್ಗಾವಣೆ ನಡೆದಿರುವ ಸುಳಿವು ಅಧಿಕಾರಿಗಳಿಗೆ ಸಿಕ್ಕಿತ್ತು. ಹೀಗಾಗಿ ತನಿಖೆಯ ವ್ಯಾಪ್ತಿಯನ್ನು ಇ.ಡಿ. ವಿಸ್ತರಿಸಿತು. ತಕ್ಷಣವೇ, ಬರಹೇಟ್ ವಿಧಾನಸಭಾ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಹೇಮಂತ್ ಅವರ ರಾಜಕೀಯ ಪ್ರತಿನಿಧಿಯಾಗಿದ್ದ ಪಂಕಜ್ ಮಿಶ್ರಾ ಹಾಗೂ ಆತನ ಸಹಾಯಕ ಬಚ್ಚು ಯಾದವ್‌ಗೆ ಸಮನ್ಸ್ ನೀಡಿ, ಇಬ್ಬರನ್ನೂ ಬಂಧಿಸಿತು.



ಹೇಮಂತ್ ಸೊರೇನ್

ಆಧಾರ: ಪಿಟಿಐ, ರಾಯಿಟರ್ಸ್

ಮೈತ್ರಿ ಒಗ್ಗಟ್ಟು ಮುರಿಯುವತ್ತ...

ಬುಡಕಟ್ಟು ಸಮುದಾಯದ ದ್ರೌಪದಿ ಮುರ್ಮು ಅವರನ್ನು ಎನ್‌ಡಿಎ ಮೈತ್ರಿಕೂಟದ ರಾಷ್ಟ್ರಪತಿ ಅಭ್ಯರ್ಥಿಯನ್ನಾಗಿ ಬಿಜೆಪಿ ಆಯ್ಕೆ ಮಾಡಿದಾಗ, ಅದನ್ನು ವಿರೋಧ ಪಕ್ಷಗಳ ಒಗ್ಗಟ್ಟನ್ನು ಮುರಿಯುವ ಯತ್ನ ಎಂದು ವಿಶ್ಲೇಷಿಸಲಾಗಿತ್ತು. ರಾಷ್ಟ್ರಪತಿ ಚುನಾವಣೆಯ ಸಂದರ್ಭದಲ್ಲಿ ವಿರೋಧ ಪಕ್ಷಗಳ ಒಗ್ಗಟ್ಟು ಮುರಿಯಿತು.

ದ್ರೌಪದಿ ಮುರ್ಮು ಅವರು ಜಾರ್ಖಂಡ್‌ನ ರಾಜ್ಯಪಾಲರಾಗಿದ್ದರು. ಮೂಲತಃ ಬಿಜೆಪಿಯ ನಾಯಕಿಯಾಗಿದ್ದರೂ, ಅವರ ಅಧಿಕಾರದ ಅವಧಿಯಲ್ಲಿ ರಾಜ್ಯ ಸರ್ಕಾರ ಮತ್ತು ಜೆಎಂಎಂ ಜತೆಗೆ ಅವರು ಉತ್ತಮ ಸಂಬಂಧ ಕಾಯ್ದುಕೊಂಡಿದ್ದರು. ಜಾರ್ಖಂಡ್, ಒಡಿಶಾ, ಪಶ್ಚಿಮ ಬಂಗಾಳ, ಛತ್ತೀಸಗಡದಲ್ಲಿ ಪ್ರಧಾನವಾಗಿರುವ ಸಂತಾಲ ಬುಡಕಟ್ಟಿಗೆ ಸೇರಿರುವ ದ್ರೌಪದಿ ಅವರನ್ನು ಬಿಜೆಪಿ ರಾಷ್ಟ್ರಪತಿ ಅಭ್ಯರ್ಥಿಯನ್ನಾಗಿಸಿತು. ಈ ಎಲ್ಲಾ ರಾಜ್ಯಗಳಲ್ಲಿ ಬಿಜೆಪಿ–ಎನ್‌ಡಿಎಯೇತರ ಪಕ್ಷಗಳ ಸರ್ಕಾರಗಳಿವೆ. ಆದರೆ ಈ ಪಕ್ಷಗಳು ದ್ರೌಪದಿ ಮುರ್ಮು ಅವರನ್ನು ಬೆಂಬಲಿಸಲೇಬೇಕಾದಂತಹ ಅನಿವಾರ್ಯಕ್ಕೆ ಸಿಲುಕಿಸುವಲ್ಲಿ ಬಿಜೆಪಿ ಯಶಸ್ವಿಯಾಯಿತು.

ಜಾರ್ಖಂಡ್ ಆಡಳಿತ ಮೈತ್ರಿಕೂಟದ ಅತ್ಯಂತ ದೊಡ್ಡ ಪಕ್ಷವಾಗಿರುವ ಜೆಎಂಎಂ, ರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಅವರನ್ನು ಬೆಂಬಲಿಸಿತು. ಮೈತ್ರಿಕೂಟದ ಪಕ್ಷವಾದ ಕಾಂಗ್ರೆಸ್ ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿತು. ಒಂದು ಹಂತದಲ್ಲಿ ಆಡಳಿತ ಮೈತ್ರಿಕೂಟದ ಒಗ್ಗಟ್ಟು ಮುರಿಯುವ ಹಂತಕ್ಕೂ ವಾಗ್ವಾದ ನಡೆದಿತ್ತು. ಆದರೆ ಆ ಬಿಕ್ಕಟ್ಟನ್ನು ಮಿತ್ರಪಕ್ಷಗಳು ಬಗೆಹರಿಸಿಕೊಂಡವು. ರಾಷ್ಟ್ರಪತಿ ಚುನಾವಣೆಯಲ್ಲಿ ಕಾಂಗ್ರೆಸ್‌ನ ಕೆಲವು ಶಾಸಕರು ಅಡ್ಡ ಮತದಾನ ಮಾಡಿದ್ದು ಕಾಂಗ್ರೆಸ್‌ನ ಕಳವಳವನ್ನು ಹೆಚ್ಚಿಸಿದ್ದೂ ಹೌದು.

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ರಾಹುಲ್ ಗಾಂಧಿಯವರ ಹಿನ್ನಡೆ, ನಿರಾಕರಣೆಯ ಫಲವಾಗಿ ಅಂತಿಮವಾಗಿ ಕಾಂಗ್ರೆಸ್ ಪಕ್ಷಕ್ಕೆ ಗಾಂಧಿಯೇತರ ಕುಟುಂಬದವರು ಅಧ್ಯಕ್ಷರಾಗುವರೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 209

ಇಂದ್ರನ ಬಂಧಿಸಿದ ವಜ್ರಾಂಗ

ನಾರದಮುನಿಯು ಬ್ರಹ್ಮನನ್ನು 'ದೇವತೆಗಳನ್ನು ಪೀಡಿಸಿದ ತಾರಕಾಸುರ ಯಾರು? ಶಂಕರ ಹೇಗೆ ಮನ್ಮಥನನ್ನು ಭಸ್ಮಮಾಡಿದ? ಪಾರ್ವತಿಯು ಘೋರವಾದ ತಪವನ್ನ ಆಚರಿಸಿ ಶಂಕರನನ್ನು ಹೇಗೆ ಪಡೆದಳು? ಇವೆಲ್ಲವನ್ನೂ ನನಗೆ ಹೇಳು' ಎಂದು ಕೋರುತ್ತಾನೆ.

ಆಗ ಬ್ರಹ್ಮ 'ನಾರದ, ಈಗ ನಾನು ಶಂಕರನನ್ನು ಸ್ಮರಿಸಿ ಅವನ ಚರಿತ್ರೆಯನ್ನು ಸಂಪೂರ್ಣವಾಗಿ ನಿನಗೆ ಹೇಳುವೆ. ಮೊದಲಿಗೆ ನಾನು ತಾರಕಾಸುರನ ಚರಿತ್ರೆಯನ್ನು ಹೇಳುವೆ. ಆ ದೈತ್ಯನನ್ನು ಸಂಹರಿಸಲು ದೇವತೆಗಳು ಏನೆಲ್ಲಾ ಮಹಾಯತ್ನವನ್ನು ಮಾಡಿದರು ಎಂಬುದನ್ನು ಹೇಳುತ್ತೇನೆ ಕೇಳು. ಬ್ರಹ್ಮನ ಪುತ್ರನಾದ ಮರೀಚಿಯ ಪುತ್ರ ಕಶ್ಯಪ. ಬ್ರಹ್ಮನ ಮೊಮ್ಮಗನಾದ ಕಶ್ಯಪಬ್ರಹ್ಮ ಹದಿಮೂರು ದಕ್ಷಬ್ರಹ್ಮನ ಹೆಣ್ಣು ಮಕ್ಕಳನ್ನು ಮದುವೆಯಾದ. ಆ ಕನ್ಯೆಯರಲ್ಲಿ ದಿತಿ ಹಿರಿಯವಳು. ಅವಳು ಎರಡು ಮಕ್ಕಳನ್ನು ಹಡೆದಳು. ಮೊದಲನೆಯವನು ಹಿರಣ್ಯಕಶಿಪು. ಎರಡನೆಯವನು ಹಿರಣ್ಯಾಕ್ಷ. ಈ ಅಣ್ಣತಮ್ಮಂದಿರು ದೇವತೆಗಳನ್ನು ಪೀಡಿಸುತ್ತಿದ್ದರು. ಹರಿಯು ನರಸಿಂಹ ಮತ್ತು ಮಹಾವರಾಹ ಅವತಾರಗಳನ್ನು ಮಾಡಿ ಸಂಹರಿಸಿದ. ಆಗ ದೇವತೆಗಳಿಗೆ ನೆಮ್ಮದಿಯಾಗಿ ಸುಖವಾಗಿದ್ದರು.

ಆದರೆ ಇತ್ತ ಕಶ್ಯಪನ ಪತ್ನಿ ದಿತಿ ತನ್ನ ಪುತ್ರರಾದ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ಮೃತರಾದುದರಿಂದ ತುಂಬಾ ದುಃಖಗೊಂಡಳು. ಅವಳು ಮತ್ತೆ ಕಶ್ಯಪನ ಮೊರೆ ಹೋದಳು. ಭಕ್ತಿಯಿಂದ ಪತಿಯ ಸೇವೆ ಮಾಡಿ, ಅವನ ಅನುಗ್ರಹದಿಂದ ವ್ರತವನ್ನಾಚರಿಸಿ ಗರ್ಭವನ್ನು ಧರಿಸಿದಳು. ದಿತಿ ಗರ್ಭದಲ್ಲಿ ಮತ್ತೊಬ್ಬ ದೈತ್ಯ ಹುಟ್ಟಿ ದೇವತೆಗಳಿಗೆ ಕಂಟಕವಾಗುತ್ತಾನೆಂದು ತಿಳಿದು ದೇವೇಂದ್ರ ಆತಂಕಗೊಂಡ. ಸಮಯ ಸಾಧಿಸಿ ದಿತಿಯ ಗರ್ಭವನ್ನು ಪ್ರವೇಶಿಸಿದ ಇಂದ್ರ, ಆ ಗರ್ಭವನ್ನು ಕತ್ತರಿಸಿದ. ಆದರೆ ದಿತಿಯ ವ್ರತದ ಪ್ರಭಾವದಿಂದ ಗರ್ಭವು ನಾಶವಾಗಲಿಲ್ಲ. ಹೀಗಾಗಿ ದಿತಿಗೆ ಏಳು ಪುತ್ರರು ಜನಿಸಿದರು. ಅವರು ಮರುತ್ತುಗಳೆಂಬ ಏಳು ದೇವತೆಗಳಾದರು. ಅವರೆಲ್ಲರೂ ದೇವೇಂದ್ರನಿಂದ ಗೌರವಿಸಲ್ಪಟ್ಟು ಸ್ವರ್ಗಕ್ಕೆ ತೆರಳಿದರು.

ತನ್ನ ಎಲ್ಲಾ ಏಳು ಮಕ್ಕಳೂ ಸ್ವರ್ಗ ಸೇರಿದ್ದರಿಂದ ದಿತಿಯು ತನ್ನ ಕರ್ಮಕ್ಕಾಗಿ ಪಶ್ಚಾತ್ತಾಪಪಟ್ಟಳು. ಮತ್ತೆ ಪುತ್ರಸಂತಾನಕ್ಕಾಗಿ ತನ್ನ ಪತಿಯಾದ ಕಶ್ಯಪನ ಸೇವೆ ಮಾಡಿ ಪ್ರಸನ್ನಗೊಳಿಸಿದಳು. ಆಗ ಕಶ್ಯಪ ಹೇಳಿದ, 'ಎಲೈ ದಿತಿ, ನೀನು ಶುಚಿಯಾಗಿದ್ದು ಹತ್ತುಸಾವಿರ ವರ್ಷಗಳವರೆಗೆ ತಪವನ್ನ ಆಚರಿಸು; ನಿನಗೆ ಪುತ್ರ ಜನಿಸುವನು' ಎಂದ. ಅದರಂತೆ ದಿತಿ ಹತ್ತುಸಾವಿರ ವರ್ಷಗಳವರೆಗೆ ಶ್ರದ್ಧೆಯಿಂದ ತಪಸ್ಸನ್ನು ಮಾಡಿದಳು. ನಂತರ ಅವಳು ಗರ್ಭವನ್ನು ಧರಿಸಿ, ವಜ್ರಾಂಗನೆಂಬ ಪುತ್ರನನ್ನು ಹಡೆದಳು. ಆ ವಜ್ರಾಂಗನು ಹೆಸರಿಗೆ ತಕ್ಕಂತೆ ವಜ್ರಮಯನಾಗಿದ್ದ. ದೇವತೆಗಳಂತೆ ಬಲಶಾಲಿಯಾಗಿ ಪರಾಕ್ರಮಿಯಾಗಿದ್ದ.

ವಜ್ರಾಂಗನು ತನ್ನ ತಾಯಿಯ ಆದೇಶದಂತೆ ಇಂದ್ರನನ್ನು ಸೆರೆಹಿಡಿದು ಶಿಕ್ಷಿಸಿದ. ಅವನೊಂದಿಗೆ ಇತರೆ ದೇವತೆಗಳನ್ನೂ ಶಿಕ್ಷಿಸಿದ. ದೇವತೆಗಳಿಗಾದ ದುರ್ದಶೆಯನ್ನು ನೋಡಿ ದಿತಿಯು ಸಂತೋಷಪಟ್ಟಳು. ದೇವತೆಗಳು ದುಃಖವನ್ನ ಅನುಭವಿಸಿದರು. ಆಗ ಬ್ರಹ್ಮ ತನ್ನ ಮೊಮ್ಮಗನಾದ ಕಶ್ಯಪನೊಂದಿಗೆ ಬಂದು ವಜ್ರಾಂಗನೊಂದಿಗೆ ಸಂಧಾನ ನಡೆಸಿದ. ಇದರಿಂದ ವಜ್ರಾಂಗನಿಗೆ ಗರ್ಭವತಿಯಾಗಿದ್ದ ತನ್ನ ತಾಯಿಯನ್ನು ಹಿಂಸಿಸಿದ ದೇವತೆಗಳ ಮೇಲೆ ಇದ್ದ ಕೋಪ ಸ್ವಲ್ಪ ತಣ್ಣಗಾಯಿತು. ವಜ್ರಾಂಗನನ್ನು ಮತ್ತಷ್ಟು ಸಮಾಧಾನಪಡಿಸಿದ ಬ್ರಹ್ಮ, ದೇವತೆಗಳನ್ನು ಬಂಧನದಿಂದ ಬಿಡುವಂತೆ ಹೇಳಿದ. ಶಿವಭಕ್ತನಾದ ವಜ್ರಾಂಗನು ಬ್ರಹ್ಮನ ಮಾತಿಗೆ ಮನ್ನಣೆ ಕೊಟ್ಟು, ದೇವತೆಗಳ ಬಿಡುಗಡೆ ಮಾಡಿದ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಮೂವರು ಫುಟ್‌ಬಾಲ್ ಆಟಗಾರರು ಬರಿಗಾಲಿನಲ್ಲಿ ಕ್ರೀಡಾಂಗಣ ಪ್ರವೇಶಿಸುತ್ತಿರುವ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಅದರ ಜತೆಯಲ್ಲಿ, 'ಇದು ಭಾರತೀಯ ಫುಟ್‌ಬಾಲ್ ಆಟಗಾರರ ಚಿತ್ರ. 1948ರಲ್ಲಿ ಯೂರೋಪ್‌ನಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ಭಾರತೀಯ ಫುಟ್‌ಬಾಲ್ ತಂಡ ಭಾಗವಹಿಸಿತ್ತು. ಆದರೆ, ನೆಹರೂ ಸರ್ಕಾರವು ಅವರಿಗೆ ಷೂಗಳನ್ನು ನೀಡಿರಲಿಲ್ಲ. ಷೂಗಳಿಲ್ಲದೇ ಆಟವಾಡಲು ಕಷ್ಟವಾಗಿ ಭಾರತೀಯ ತಂಡವು ಸೋಲಬೇಕಾಯಿತು. ಖಾಸಗಿ ವಿಮಾನದಲ್ಲಿ ಓಡಾಡುತ್ತಿದ್ದ ನೆಹರೂ ಅವರು, ಆಟಗಾರರಿಗೆ ಷೂ ಒದಗಿಸಿರಲಿಲ್ಲ' ಎಂದು ಆರೋಪಿಸಲಾಗಿದೆ.

ಇದು ತಿರುಚಲಾದ ಮಾಹಿತಿ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. '1948ರ ಒಲಿಂಪಿಕ್ಸ್‌ನಲ್ಲಿ ಭಾಗಿಯಾಗಿದ್ದ ಭಾರತೀಯ ಫುಟ್‌ಬಾಲ್ ತಂಡಕ್ಕೆ ಷೂಗಳನ್ನು ಒದಗಿಸಲಾಗಿತ್ತು, ಆದರೆ, ತಂಡದ ಒಂಬತ್ತು ಆಟಗಾರರು ಷೂ ಇಲ್ಲದೇ ಆಟವಾಡುವುದೇ ಅನುಕೂಲ ಎಂದು ಹೇಳಿದ್ದರು. ಹೀಗಾಗಿ ಅವರು ಷೂ ಬಳಸುತ್ತಿರಲಿಲ್ಲ. ಈ ಬಗ್ಗೆ ಪ್ರಶ್ನಿಸಿದಾಗ ತಂಡದ ನಾಯಕ, 'ನಾವು ಫುಟ್‌ಬಾಲ್ ಆಡುತ್ತೇವೆ. ನೀವು ಬೂಟ್‌ಬಾಲ್ ಆಡುತ್ತೀರಿ' ಎಂದು ಹೇಳಿದ್ದರು. ಷೂ ಇದ್ದರೂ ಆಟಗಾರರು ಷೂ ಬಳಸುತ್ತಿರಲಿಲ್ಲ ಎಂಬುದನ್ನು ತಂಡದ ಟ್ರೇನರ್ ಆಗಿದ್ದ ಡಿ.ಬಿ.ಚಟರ್ಜಿ ಹೇಳಿದ್ದರು ಎಂದು 2014ರಲ್ಲಿ ದಿ ಹಿಂದೂ ವರದಿ ಮಾಡಿತ್ತು. ಆದರೆ, ಈ ಮಾಹಿತಿಗಳನ್ನು ತಿರುಚಿ ತಪ್ಪು ಅಭಿಪ್ರಾಯ ಬರುವಂತೆ ಸುಳ್ಳು ಸುದ್ದಿ ಹಂಚಿಕೊಳ್ಳಲಾಗುತ್ತಿದೆ' ಎಂದು ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಲಾಗಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಆಗಸ್ಟ್ 26, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಚತುರ್ದಶಿ ಗಂ. 12-25 ನಕ್ಷತ್ರ: ಆಶ್ಲೇಷ ಗಂ. 18-33 ಯೋಗ: ಪರಿಘ ಗಂ. 26-11, ಕರಣ: ಶಕುನಿ ಗಂ. 12-25, ಸಿಂಹ ಮಾಸದ 09 ನೇ ದಿನ.
ರಾಹುಕಾಲ : ಬೆಳಿಗ್ಗೆ 10:30 – 12:00, ಸೂರ್ಯೋದಯ : 06-22 ಸೂರ್ಯಾಸ್ತ : 06-43
ಮುಸ್ಲಿಂ ದಿನಾಂಕ : 27 ಮೊಹರಮ್, ದಿನ ವಿಶೇಷ : ಸಪ್ತಪುರಿ ಅಮಾವಾಸ್ಯೆ (ಒರಿಸ್ಸಾ), ಪಿತೋರಿ,
ಅದೃಷ್ಟ ಸಂಖ್ಯೆ : 1, 5

ಮೇಷ: ಸರ್ಕಾರಿ ನೌಕರರಿಗೆ ಉದ್ಯೋಗದಲ್ಲಿ ಹೆಚ್ಚಿನ ಸ್ಥಾನ ಮಾನ ದೊರೆಯಲಿದೆ. ಇಂದು ಜಮೀನು ಅಥವಾ ನಿವೇಶನ ಖರೀದಿಸುವ ಬಗ್ಗೆ ಮನೆಯವರೊಂದಿಗೆ ಚರ್ಚೆ ನಡೆಯುವುದು.

ವೃಷಭ: ಸ್ವಯಂ ಉದ್ಯೋಗ ಪ್ರಾರಂಭಿಸುವ ನಿಮ್ಮ ಯೋಚನೆಗೆ ಅತ್ಯಂತ ನಿಯೋಜಿತ ರೀತಿಯಲ್ಲಿ ತಯಾರಿಯ ಹಂತ ಪ್ರಾರಂಭವಾಗುವುದು. ರಾಮನ ಭಜನೆಯ ಫಲವಾಗಿ ಆರೋಗ್ಯ ಮತ್ತು ಆರ್ಥಿಕ ಪರಿಸ್ಥಿತಿಗಳು ತೃಪ್ತಿಕರ.

ಮಿಥುನ: ನಿಮ್ಮ ಕಠಿಣ ಶ್ರಮಕ್ಕೆ ಇಂದು ತಕ್ಕಂತಹ ಪ್ರತಿಫಲ ಕಾಣುವಿರಿ. ಬ್ಯಾಂಕಿಂಗ್ ಉದ್ಯೋಗಸ್ಥರಿಗೆ ಅಥವಾ ಫೈನಾನ್ಸ್‌ಗಳ ಕಾರ್ಮಿಕರಿಗೆ ವರ್ಗಾವಣೆಯಿಂದಾಗಿ ದೂರದೂರಿನಲ್ಲಿ ವಾಸಿಸುವ ಸಂದರ್ಭ ಬರಲಿದೆ.

ಕರ್ಕಾಟಕ: ಮಹಿಳೆಯರಿಗೆ ಆದರ ಮನ್ನಣೆ ಹೆಚ್ಚಲಿದ್ದು, ರಾಜಕೀಯವಾಗಿ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ. ಇಂದು ನಿರುದ್ಯೋಗಿ ಯುವಕರಿಗೆ ಖಾಸಗಿ ಸಂಸ್ಥೆಗಳಲ್ಲಿ ತಾತ್ಕಾಲಿಕ ಉದ್ಯೋಗ ದೊರೆಯಲಿದೆ.

ಸಿಂಹ: ಕ್ರೀಡಾಪಟುಗಳು ಮತ್ತು ಕಲಾವಿದರಿಗೆ ತಮ್ಮ ಪ್ರತಿಭಾ ಪ್ರದರ್ಶನಕ್ಕೆ ಪೂರ್ವ ತಯಾರಿ ಅನಿವಾರ್ಯ. ಮಂಗಳ ಕಾರ್ಯಗಳು ಜರುಗಲಿದೆ.ಉದ್ಯೋಗದಲ್ಲಿ ಎದುರಾಗಿದ್ದ ಚಿಂತೆ ದೂರಾಗುವುದು.

ಕನ್ಯಾ: ಬಹಳ ಹಿಂದಿನಿಂದ ಇದ್ದಂತಹ ಜಮೀನಿನ ತಕರಾರು ವಿಷಯಗಳು ಇತ್ಯರ್ಥಗೊಳ್ಳುವುದು. ಆರಕ್ಷಕ ಅಧಿಕಾರಿಗಳಿಗೆ ಕೆಲಸದಲ್ಲಿ ಒತ್ತಡ ನಿವಾರಣೆಯಾಗಲಿದೆ.

ತುಲಾ: ವಾಣಿಜ್ಯ ಬೆಳೆಗಳ ಮಾರಾಟಗಳಿಂದ ಲಾಭ. ಕಂದಾಯ ಅಧಿಕಾರಿಗಳಿಗೆ ವೃತ್ತಿ ನಿಮಿತ್ತವಾದ ಊರೂರು ಅಲೆದಾಟ ಹೆಚ್ಚುವುದು .ಯಂತ್ರೋಪಕರಣಗಳ ಬಿಡಿ ಭಾಗಗಳ ಮಾರಾಟಗಳಿಂದ ಹೆಚ್ಚು ಲಾಭ.

ವೃಶ್ಚಿಕ: ಪ್ರಮುಖ ಬದಲಾವಣೆಯ ಘಟ್ಟದಲ್ಲಿದ್ದೀರಿ, ಭವಿಷ್ಯದ ದೃಷ್ಟಿಯಿಂದ ಜೀವನ ಶೈಲಿಯಲ್ಲಿ ತಕ್ಷಣ ಕಾರ್ಯೋನ್ಮುಖರಾಗುವುದು ಉತ್ತಮ. ನಿಮ್ಮ ಗುಣ ಧರ್ಮ ಬೆಂಬಲಕ್ಕಿರುತ್ತದೆ.

ಧನು: ಆಮದು ಆಹಾರ ಪದಾರ್ಥಗಳಿಂದ ಲಾಭ ಸಿಗಲಿದೆ. ವೃತ್ತಿಯ ಬದುಕಿನಲ್ಲಿ ಬೆಳಕಿಗೆ ಬರಲು ಅನುಕೂಲವಾಗಿರುವ ಮುಖ್ಯವಾದ ಸಲಹೆಯೊಂದನ್ನು ಪಡೆಯಲಿದ್ದೀರಿ.

ಮಕರ: ವ್ಯವಹಾರದ ವಿಷಯದಲ್ಲಿ ಕಠಿಣ ನಿಲುವು ತೆಗೆದುಕೊಳ್ಳಬೇಕಾದ ಸಂದರ್ಭ ಎದುರಾಗಲಿದೆ. ನಿಮ್ಮ ಮುಂದಿನ ಹಾದಿ ಏನೆಂಬುದು ನಿಮಗೆ ಈ ದಿನ ಸ್ಪಷ್ಟವಾಗುವುದು.

ಕುಂಭ: ವಿದ್ಯಾರ್ಥಿಗಳಿಗೆ ಪ್ರತಿಭಾ ಪ್ರದರ್ಶಕ್ಕೆ ಬೇಕಾದ ಅವಕಾಶಗಳು ಅರಸಿ ಬರಲಿದೆ. ಉಪಯೋಗಿಸಿಕೊಳ್ಳುವ ಜಾಣತನ ನಿಮ್ಮಲ್ಲಿರಲಿ. ಅತಿಯಾದ ಔದಾರ್ಯತನ ತೋರಬೇಕೆನಿಸಿದ್ದಲ್ಲಿ ಹಣಕಾಸಿನ ಸ್ಥಿತಿ ಗಮನಿಸಿಕೊಳ್ಳಿ.

ಮೀನ: ಇಂದು ನಿಮ್ಮ ಸಹೋದ್ಯೋಗಿಗಳ ಮಾತಿನಂತೆ ನಡೆದುಕೊಳ್ಳುವುದು ಉತ್ತಮ. ನೀವು ಕೈಗೆತ್ತಿಕೊಂಡಿರುವ ಕೆಲಸಗಳು ಹೆಚ್ಚಿನ ಖರ್ಚಿಗೆ ಕಾರಣವಾಗಲಿದೆ. ಸಂಜೆಯೊಳಗೆ ಅಚ್ಚರಿ ಸುದ್ದಿಯೊಂದನ್ನು ಕೇಳಲಿರುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಮನೆಯೇ ದೇವಾಲಯ

ಮನೆಯ ಸಂಸಾರದಲಿ ವಾಸವಿರುತಾಗಾಗ |
ನೆನೆದು ನೀಂ ದೇಗುಲಕೆ ಪೋಗಿಬರುವಂತೆ ||
ದಿನವೆಲ್ಲ ದೇವಸನ್ನಿಧಿಯೊಳಿರುತಾಗಾಗ |
ಮನೆಗೆ ಬರುವವನವೊಲಿರು- ಮಂಕುತಿಮ್ಮ || 702

ಪದ-ಅರ್ಥ: ವಾಸವಿರುತಾಗಾಗ = ವಾಸ ವಿರುತ + ಆಗಾಗ, ದೇಗುಲಕೆ = ದೇವಸ್ಥಾನಕ್ಕೆ, ದೇವಸನ್ನಿಧಿಯೊಳಿರುತಾಗಾಗ = ದೇವಸನ್ನಿಧಿಯೊಳು + ಇರುತ + ಆಗಾಗ, ಬರುವವನವೊಲಿರು = ಬರುವನವೊಲ್(ಬರುವವನ ಹಾಗೆ) + ಇರು.

ವಾಚ್ಯಾರ್ಥ: ಮನೆಯ ಸಂಸಾರದಲ್ಲಿ ವಾಸವಾಗಿರುವಾಗ, ಆಗಾಗ ನೆನಪಿಸಿಕೊಂಡು ದೇವಸ್ಥಾನಕ್ಕೆ ಹೋಗಿ ಬರುವಂತೆ, ಇಡೀ ದಿನ ದೇವಸ್ಥಾನದಲ್ಲೇ ಇದ್ದು, ಆಗಾಗ ಮನೆಗೆ ಬರುವವನ ಹಾಗೆ ಇರು.

ವಿವರಣೆ: ಅವರೊಬ್ಬ ಸನ್ಯಾಸಿ. ಸಂ-ನ್ಯಾಸವೆಂದರೆ, ಎಲ್ಲವನ್ನೂ, ನನ್ನದಲ್ಲ ಎಂದು ತ್ಯಜಿಸಿಬಿಡುವವರು ಎಂಬರ್ಥ. ಆದರೆ, ಇವರಿಗೆ ಪುರುಸೊತ್ತೇ ಇಲ್ಲ. ಏನೇನೋ ಕಾರ್ಯಗಳು, ನಿತ್ಯ ಪ್ರವಾಸ. ಒಮ್ಮೆ ಕೆಲವು ಬುದ್ಧಿಜೀವಿಗಳೆನ್ನಿಸಿಕೊಂಡಿದ್ದ ಕೆಲವರು ಯುವಕರು, ಸನ್ಯಾಸಿ ತಲೆಯ ಮೇಲೆ ಒಂದಷ್ಟು ವಸ್ತುಗಳನ್ನು ಹೊತ್ತುಕೊಂಡು ಹೋಗುತ್ತಿರುವುದನ್ನು ಕಂಡರು. ಅವರ ಕೊಂಕು ಬುದ್ಧಿ ಚುರುಕಾಯಿತು. ಸನ್ಯಾಸಿಯ ಬಳಿಗೆ ಹೋಗಿ, "ಸ್ವಾಮಿ,ಸನ್ಯಾಸವೆಂದರೇನು?" ಎಂದು ಕೇಳಿದರು.

ಆತ ಮಾತನಾಡದೆ ತಾನು ಹೊತ್ತಿದ್ದ ಸಾಮಾನುಗಳನ್ನು ರಸ್ತೆಯ ಬದಿಯಲ್ಲಿ ಇಳಿಸಿಬಿಟ್ಟು ನಡೆದುಬಿಟ್ಟರು. ಬುದ್ಧಿಜೀವಿಗಳಿಗೆ ಈ ನಡೆ ಅರ್ಥವಾಗಲಿಲ್ಲ. ಅವರ ಹಿಂದೆಯೇ ಓಡಿ, "ಸ್ವಾಮಿ, ನಮ್ಮ ಪ್ರಶ್ನೆಗೆ ತಾವು ಉತ್ತರ ನೀಡಲಿಲ್ಲ" ಎಂದರು. ಸನ್ಯಾಸಿ ಹೇಳಿದರು, "ನೀವು ನೋಡಲಿಲ್ಲವೆ? ಎಲ್ಲ ವಸ್ತುಗಳನ್ನು ಅಲ್ಲಿಯೇ ಬಿಟ್ಟೆ. 'ನಾನು', 'ನನ್ನದು' ಎನ್ನುವ ಎಲ್ಲ ಚಿಂತನೆಯನ್ನು ಬಿಡುವುದೇ ಸನ್ಯಾಸ". ಒಬ್ಬ ಯುವಕ ಕೊಂಕುನಗೆ ನಕ್ಕು, "ಸ್ವಾಮಿ, ಎಲ್ಲವನ್ನು ತ್ಯಜಿಸಿದ ಮೇಲೆ ಸನ್ಯಾಸಿಯ ಕಾರ್ಯವೇನು?" ಎಂದು ಕೇಳಿದ. ಆಗ ಸನ್ಯಾಸಿ, ಸರಸರನೆ ಹಿಂದೆ ನಡೆದು ಹೋಗಿ, ತಾನು ರಸ್ತೆಯ ಬದಿಯಲ್ಲಿ ಇಟ್ಟಿದ್ದ ವಸ್ತುಗಳನ್ನೆಲ್ಲ ಮತ್ತೆ ಹೊತ್ತುಕೊಂಡು ನಡೆದರು. ಯುವಕರು ಅವರ ಹಿಂದೆ ಓಡಿ ಕೇಳಿದರು, "ಮತ್ತೇಕೆ ಬಿಟ್ಟ ವಸ್ತುಗಳನ್ನು ತೆಗೆದುಕೊಂಡಿರಿ? ಸನ್ಯಾಸ ಎಲ್ಲಿಗೆ ಹೋಯಿತು?". ಸನ್ಯಾಸಿ ಹೇಳಿದರು, " 'ನಾನು', 'ನನ್ನದು' ಎಂಬ ಮಮಕಾರ ಬಿಡದೆ ಸನ್ಯಾಸವಿಲ್ಲ. ನಂತರ ಪ್ರಪಂಚದ ಜನರಿಗಾಗಿ ಹೊತ್ತು ನಡೆಯಬೇಕು. ಹೊರುವುದು ನನಗಲ್ಲ. ಸನ್ಯಾಸಕ್ಕಿಂತ ಮೊದಲು ಪ್ರಪಂಚ ಬಲವಾಗಿ ಹಿಡಿದುಕೊಂಡಿತ್ತು. ಆಗಾಗ ಭಗವಂತನ ನೆನಪಾಗುತ್ತಿತ್ತು. ಸನ್ಯಾಸದ ನಂತರ, ಬದುಕೇ ದೇವಸ್ಥಾನ. ಆದರೆ ಈಗ ಪ್ರಪಂಚ ನನ್ನ ಸ್ವಂತದ್ದಲ್ಲವಾದರೂ ಅದಕ್ಕೆ ದುಡಿಯಬೇಕು", ಯುವಕರಿಗೆ ಸನ್ಯಾಸಿಯ ಬದುಕು ಅರ್ಥವಾಗಿರಬೇಕು. ಕಗ್ಗದ ಈ ನಾಲ್ಕು ಸಾಲುಗಳ ಮರ್ಮ ಇದು. ಮೊದಲು ನಮ್ಮನ್ನು ಮನೆಯ ಮೂಲಕ ಪ್ರಪಂಚ ಬಿಗಿಯುತ್ತದೆ. ಅದರಿಂದ ಕೊಂಚ ಕಾಲ ಬಿಡುಗಡೆ ಪಡೆಯಲು ಮನುಷ್ಯ ದೇವಸ್ಥಾನಕ್ಕೆ ಹೋಗಿ ನೆಮ್ಮದಿಯನ್ನು ಪಡೆಯಬಯಸುತ್ತಾನೆ. ಅಲ್ಲಿರುವಷ್ಟು ಕಾಲ ಮನದಲ್ಲಿ ಶಾಂತಿ ಇಳಿದಿದೆ. ಹೆಚ್ಚು ಶಾಂತಿ ಬೇಕೋ, ಹೆಚ್ಚು ಸಮಯ ದೇವಸ್ಥಾನದಲ್ಲಿ ಕಳೆಯಬೇಕು ಎನ್ನಿಸುತ್ತದೆ. ಅದಕ್ಕೆ ಕಗ್ಗ ಮನಸ್ಸನ್ನು ಶಾಂತಗೊಳಿಸುವ ಉಪಾಯವೊಂದನ್ನು ಹೇಳುತ್ತದೆ. ಆಗಾಗ ದೇವಸ್ಥಾನಕ್ಕೆ ಹೋಗಿ ಬರುವುದರ ಬದಲು, ದೇವಸ್ಥಾನದಲ್ಲೇ ಇರುವವನ ಹಾಗೆ ಮನಸ್ಸನ್ನು ಹದ ಮಾಡಿಕೊ. ಬಿಡಲಾಗದ ಪ್ರಪಂಚದ ಜಂಜಡಗಳಿಗೂ ಆಗಾಗ ಸ್ಥಾನಕೊಡು. ದೇವಸ್ಥಾನದಲ್ಲಿ ದೊರೆಯುವ ಶಾಂತಿ, ಮನೆಯಲ್ಲೇ ದೊರೆಯುವ ಹಾಗೆ ಅಂತರೀಕ್ಷಣೆಯಿಂದ ಮನವನ್ನು ಒಲಿಸಿಕೊಂಡರೆ ಬದುಕು ಬಗ್ಗಡವಾಗುವುದಿಲ್ಲ.

ಪದಬಂಧ 5061

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಡಗಿನ ಚುಕ್ಕಾಣಿ ಹಿಡಿದವನು (4)
3.ಹಿಮದ ಹತ್ತಿರ ತಿರುಗಾಡುತ್ತಿರುವ ಕೋಣ (3)
5.ಶ್ರೀಕೃಷ್ಣನ ಸ್ನೇಹಿತ (3)
7.ಮಕ್ಕಳು ಹುಯಿಲಿಡುವ ಮೊದಲೇ ಬರೆದ ಮರಣಪತ್ರ (3)
8.ಒಂದು ಸಲ ನುಂಗುವಷ್ಟು ಆಹಾರ (2)
9.ಪ್ರೇಮಿಗಳ ಅಗಲಿಕೆಯ ಬೇನೆ (5)
11.ಪ್ರಗತಿಯಲ್ಲೇ ನಕಲು ಹುಡುಕಿ! (2)
12.ನೆಲವನ್ನು ಗೋಮಯದಿಂದ ಸಾರಿಸುವುದು (3)
13.ಕುಮಾರನು ತೋರಿಸುತ್ತಿರುವ ಸೊಕ್ಕು! (3)
16.ನಗ ಖರೀದಿಸಿದ ಷಹರು ಇಲ್ಲಿದೆ (3)
17.ಕತ್ತಿಯ ಅಲುಗು (4)

ಮೇಲಿಂದ ಕೆಳಕ್ಕೆ
1.ಇನ್ನೂ ಕರು ಹಾಕದ ಹಸು (3)
2.ಮನೋರಥದಲ್ಲಿರುವ ತೇರು (2)
3.ಮಡಿಕೋಲು ಹಿಡಿದವಳ ಉಡಿ! (3)
4.ಬರವಿದ್ದಾಗ ಕುಡಿದ ಪಾನಕ (4)
6.ಮನದಿಂದ ಸಲ್ಲಿಸಿದ ಅರ್ಜಿ (3)
7.ಇದು ಕನ್ನಡಿಗನ ಎಕ್ಸಾಂಪಲ್! (5)
10.ಈ ಪರಿ ಕಾಣಿಸಿದ ಆವರಣ (3)
11.ಇದು ಹಾಸ್ಯ ನಾಟಕ (4)
12.ಹತ್ತು ನೂರಿದು (3)
14.ಅಶ್ವ ಇಲ್ಲಿಗೆ ಬಂದಿದೆ (4)
15.ನಖರಾ ತೋರುತ್ತಿರುವವಳ ಉಗುರು! (2)



5060ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪಮಾನ 3.ಅವಸಾನ
5.ಬಿರುಸು 6.ತಲೆ
7.ಒಣಹರಟೆ 10.ಶಾಪ
12.ನೆನಪು 14.ನತದೃಷ್ಟ
15.ವರ್ಧಮಾನ

ಮೇಲಿಂದ ಕೆಳಕ್ಕೆ:
1.ಉಪವೀತ 2.ನವೀಕರಣ
3.ಅಣ್ಣ 4.ನವಸುಮ
5.ಬಿರಟೆ 7.ಒನಪು
8.ರಜತೋತ್ಸವ 9.ಮನೆತನ
11.ಪರಿಜ್ಞಾನ 13.ಕಷ್ಟ

ಸುಡೊಕು 5447

	8			5				
1			6		4		7	3
	5			7			2	
5		8	9					
						7	5	2
4		7			6		8	
2		5		9			3	
	6		3		5	2		7
3		9		6			4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5446 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಷೇರುಪೇಟೆ ವಹಿವಾಟು 310



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,604
ಇಂದಿನ ಅಂತ್ಯ	17,522
▼	82
ದಿನದ ಕನಿಷ್ಠ	17,487

ವಿನಿಮಯ ದರ

$ ಡಾಲರ್	79.92
£ ಪೌಂಡ್	94.6
€ ಯುರೊ	79.87
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹445
12 ಮೊಟ್ಟೆಗೆ ₹60
ಮೈಸೂರು
100 ಮೊಟ್ಟೆಗೆ ₹447

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1720 (1710)
ಸೋಯಾ (ರಿಫೈನ್ಡ್)	₹1270 (1265)
ಸೂರ್ಯಕಾಂತಿ (ರಿಫೈನ್ಡ್)	₹1510 (1510
ಪಾಮೋಲಿನ್	₹1077 (1080)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹388-693
ದ್ವಿತಳಿ (ಬಿ.ವಿ) ₹380-823

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹157
ಆರ್‌ಎಸ್‌ಎಸ್-5 ₹148
ಗುಡ್ ಲಾಟ್ ₹140

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಹತ್ತನೇ ವರ್ಷದ ಪುಣ್ಯಸ್ಮರಣೆ



ಡಾ|| ಹೆಚ್. ಪುಟ್ಟದಾಸ್, ಮಾಜಿ ಶಾಸಕರು
"ನೀವು ನಮ್ಮನ್ನಗಲಿ ಹತ್ತು ವರ್ಷಗಳೇ ಸರಿದಿದ್ದರೂ, ನಿಮ್ಮ ಅಗಲಿಕೆಯ ಕೊರಗು ನಮ್ಮಲ್ಲಿ ಸದಾ ಶಾಶ್ವತ".
– ಪುಟ್ಟದಾಸ್ ಕುಟುಂಬವರ್ಗ

ಸವಿನೆನಪು

ಆರ್. ಸ್ಮಿತಾರೆಡ್ಡಿ (ಚಿನ್ನು) B.E.,
06-05-1981 - 26-8-2007
ಮನಸೆಂಬ ಮಂದಿರದಲ್ಲಿ
ಕನಸೆಂಬ ಸಾಗರದಲ್ಲಿ
ನೆನಪೆಂಬ ಅಲೆಗಳಲ್ಲಿ
ಚಿರಕಾಲ ಮಿನುಗುತ್ತಿರು
ತಂದೆ, ತಾಯಿ, ಮಗ–ಸ್ವಯಂರೆಡ್ಡಿ
ಹಾಗೂ ಕುಟುಂಬದವರು

'10 ಸಾವಿರ ಹೊಸ ಅಂಚೆ ಕಚೇರಿ'

ನವದೆಹಲಿ (ಪಿಟಿಐ): ಸರ್ಕಾರದ ಸೇವೆಗಳನ್ನು ತಂತ್ರಜ್ಞಾನದ ನೆರವಿನಿಂದ ಗ್ರಾಹಕರು ಇರುವಲ್ಲಿಯೇ ನೀಡುವ ಕೆಲಸ ನಡೆಯುತ್ತಿದೆ. ಇದಕ್ಕೆ ಪೂರಕವಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ 10 ಸಾವಿರ ಅಂಚೆ ಕಚೇರಿಗಳನ್ನು ತೆರೆಯಲಾಗುವುದು ಎಂದು ಅಂಚೆ ಇಲಾಖೆಯ ಕಾರ್ಯದರ್ಶಿ ಅಮನ್ ಶರ್ಮಾ ಹೇಳಿದ್ದಾರೆ.

ಸಿಐಐ ಸಮಾವೇಶದಲ್ಲಿ ಮಾತನಾಡಿದ ಅವರು, 'ಜನ ವಾಸ ಇರುವ ಪ್ರದೇಶದ 5 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳು ಲಭ್ಯವಾಗಬೇಕು ಎಂದು ಸರ್ಕಾರ ಬಯಸಿದೆ. ಹೀಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅಂಚೆ ಕಚೇರಿಗಳನ್ನು ತೆರೆಯಲಾಗುತ್ತಿದೆ' ಎಂದು ತಿಳಿಸಿದ್ದಾರೆ.

'ತಂತ್ರಜ್ಞಾನ ಬಳಕೆಯ ಮೂಲಕ ಅಂಚೆ ಕಚೇರಿಗಳನ್ನು ಆಧುನೀಕರಣಗೊಳಿಸಲು ಸರ್ಕಾರವು ₹ 5,200 ಕೋಟಿಯನ್ನು ಇಲಾಖೆಗೆ ನೀಡಿದೆ' ಎಂದು ಮಾಹಿತಿ ನೀಡಿದ್ದಾರೆ.

'ಅಡುಗೆ ಎಣ್ಣೆ: ಪೊಟ್ಟಣದಲ್ಲಿ ತಾಪಮಾನ ಉಲ್ಲೇಖ ಬೇಡ'

ನವದೆಹಲಿ (ಪಿಟಿಐ): ಅಡುಗೆ ಎಣ್ಣೆ ತಯಾರಕರು, ಪ್ಯಾಕ್ ಮಾಡುವವರು ಮತ್ತು ಆಮದು ಮಾಡಿಕೊಳ್ಳುವವರು ಪೊಟ್ಟಣದಲ್ಲಿ ಎಷ್ಟು ಎಣ್ಣೆ ಇದೆ ಎಂಬುದನ್ನು ಪ್ರಮಾಣ ಹಾಗೂ ತೂಕದ ಲೆಕ್ಕದಲ್ಲಿ ತಿಳಿಸಬೇಕು ಎಂದು ಕೇಂದ್ರ ಸರ್ಕಾರವು ಸೂಚಿಸಿದೆ. ಈ ನಿಯಮವು 2023ರ ಜನವರಿ 15ರಿಂದ ಜಾರಿಗೆ ಬರಲಿದೆ.

ಅಡುಗೆ ಎಣ್ಣೆ ತೂಕವು ಬೇರೆ ಬೇರೆ ತಾಪಮಾನದಲ್ಲಿ ಬೇರೆ ಬೇರೆಯಾಗಿ ಇರುತ್ತದೆ. ಹೀಗಾಗಿ ಕಂಪನಿಗಳು ಅಡುಗೆ ಎಣ್ಣೆಯ ಪ್ಯಾಕ್ ಮೇಲೆ ತಾಪಮಾನವನ್ನು ಉಲ್ಲೇಖಿಸದೆಯೇ ಅದರಲ್ಲಿ ಎಷ್ಟು ಎಣ್ಣೆ ಇದೆ ಎಂಬುದನ್ನು ಪ್ರಮಾಣ ಮತ್ತು ತೂಕದ ಲೆಕ್ಕದಲ್ಲಿ ತಿಳಿಸಬೇಕು. ಅಲ್ಲಿ ನಮೂದಿಸಿರುವಷ್ಟೇ ಅಡುಗೆ ಎಣ್ಣೆಯು ಪೊಟ್ಟಣದಲ್ಲಿ ಇರಬೇಕು ಎಂಬುದು ಇದರ ಉದ್ದೇಶ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ಹೇಳಿದೆ.

ಅಡುಗೆ ಎಣ್ಣೆ ಮಾರಾಟ ಮಾಡುವ ಕೆಲವು ಕಂಪನಿಗಳು ನ್ಯಾಯಸಮ್ಮತವಲ್ಲದ ವಹಿವಾಟುಗಳಲ್ಲಿ ತೊಡಗಿಕೊಂಡಿವೆ ಎಂಬ ದೂರುಗಳು ಗ್ರಾಹಕರಿಂದ ಬಂದ ಕಾರಣ ಸಚಿವಾಲಯ ಈ ಸೂಚನೆ ನೀಡಿದೆ.

ಕೆಲವು ಕಂಪನಿಗಳು 60 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಪ್ಯಾಕ್ ಮಾಡಿದಾಗ ಅಡುಗೆ ಎಣ್ಣೆಯ ತೂಕ ಎಷ್ಟು ಎಂಬುದನ್ನು ಪ್ಯಾಕ್ ಮೇಲೆ ನಮೂದಿಸುತ್ತಿವೆ. ವಾಸ್ತವದಲ್ಲಿ ಅಡುಗೆ ಎಣ್ಣೆಯನ್ನು 30 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿ ಪ್ಯಾಕ್ ಮಾಡಬೇಕು.

ಬೆಲೆ ಏರಿಕೆ ತಡೆಯಲು ಸಂಪುಟ ಸಮಿತಿಯ ಸಭೆಯಲ್ಲಿ ತೀರ್ಮಾನ

ಗೋಧಿ ಹಿಟ್ಟು ರಫ್ತಿಗೆ ನಿರ್ಬಂಧ

ನವದೆಹಲಿ (ಪಿಟಿಐ): ಬೆಲೆ ಏರಿಕೆಯನ್ನು ತಡೆಯುವ ಉದ್ದೇಶದಿಂದ ಗೋಧಿ ಹಿಟ್ಟಿನ ರಫ್ತಿನ ಮೇಲೆ ನಿರ್ಬಂಧ ಹೇರಲು ಕೇಂದ್ರ ಸರ್ಕಾರವು ಗುರುವಾರ ತೀರ್ಮಾನಿಸಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಆರ್ಥಿಕ ವ್ಯವಹಾರಗಳಿಗೆ ಸಂಬಂಧಿಸಿದ ಸಂಪುಟ ಸಮಿತಿಯ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

'ಸಂಪುಟದ ತೀರ್ಮಾನದ ಕಾರಣದಿಂದಾಗಿ ಗೋಧಿ ಹಿಟ್ಟಿನ ರಫ್ತಿನ ಮೇಲೆ ನಿರ್ಬಂಧ ವಿಧಿಸಲು ಸಾಧ್ಯವಾಗಲಿದೆ' ಎಂದು ಸರ್ಕಾರದ ಅಧಿಕೃತ ಪ್ರಕಟಣೆ ತಿಳಿಸಿದೆ. ಸಂಪುಟದ ತೀರ್ಮಾನದ ವಿಚಾರವಾಗಿ ವಿದೇಶ ವ್ಯವಹಾರಗಳ ಮಹಾನಿರ್ದೇಶನಾಲಯವು ಅಧಿಸೂಚನೆಯನ್ನು ಹೊರಡಿಸಬೇಕಿದೆ.

ರಷ್ಯಾ ಮತ್ತು ಉಕ್ರೇನ್, ವಿಶ್ವದ ಪ್ರಮುಖ ಗೋಧಿ ರಫ್ತುದಾರ ರಾಷ್ಟ್ರಗಳು. ಎರಡು ದೇಶಗಳ ನಡುವೆ ಯುದ್ಧ ಆರಂಭವಾದ ನಂತರದಲ್ಲಿ ಜಾಗತಿಕ ಮಟ್ಟದಲ್ಲಿ ಗೋಧಿ ಪೂರೈಕೆ ವ್ಯವಸ್ಥೆ ಹಾಳಾಗಿದೆ. ಇದರಿಂದಾಗಿ ಭಾರತದ ಗೋಧಿಗೆ ಬೇಡಿಕೆ ಹೆಚ್ಚಾಗಿದೆ.

ಇದರ ಪರಿಣಾಮವಾಗಿ ದೇಶಿ ಮಾರುಕಟ್ಟೆಯಲ್ಲಿ ಗೋಧಿಯ ಬೆಲೆಯು ಹೆಚ್ಚಾಗಿದೆ. ದೇಶದ ಆಹಾರ ಭದ್ರತೆಯನ್ನು ಕಾಪಾಡುವ ಉದ್ದೇಶದಿಂದ ಕೇಂದ್ರ ಸರ್ಕಾರವು ಗೋಧಿಯ ರಫ್ತಿಗೆ ಮೇ ತಿಂಗಳಲ್ಲಿ ನಿರ್ಬಂಧ ಹೇರಿತು. ಆದರೆ, ಇದರಿಂದಾಗಿ ಗೋಧಿ ಹಿಟ್ಟಿಗೆ ವಿದೇಶಗಳಿಂದ ಬೇಡಿಕೆ ಬರುವುದು ಹೆಚ್ಚಾಯಿತು.

2021ಕ್ಕೆ ಹೋಲಿಸಿದರೆ ಈ ವರ್ಷದ ಏಪ್ರಿಲ್–ಜುಲೈ ಅವಧಿಯಲ್ಲಿ ದೇಶದ ಗೋಧಿ ಹಿಟ್ಟಿನ ರಫ್ತು ಪ್ರಮಾಣದಲ್ಲಿ ಶೇಕಡ 200ರಷ್ಟು ಹೆಚ್ಚಳ ಆಗಿದೆ. ಗೋಧಿ ಹಿಟ್ಟಿಗೆ ಬೇಡಿಕೆ ಹೆಚ್ಚಾದ ನಂತರದಲ್ಲಿ ಅದರ ಬೆಲೆಯು ದೇಶಿ ಮಾರುಕಟ್ಟೆಯಲ್ಲಿ ಗಣನೀಯವಾಗಿ ಏರಿಕೆ ಕಂಡಿದೆ.

ಗೋಧಿ ಹಿಟ್ಟಿನ ರಫ್ತಿಗೆ ಯಾವುದೇ ನಿರ್ಬಂಧ ಹೇರದಿರುವ ನೀತಿ ಈ ಮೊದಲು ಇತ್ತು. ಹೀಗಾಗಿ, ದೇಶದ ಮಾರುಕಟ್ಟೆಯಲ್ಲಿ ಗೋಧಿ ಹಿಟ್ಟಿನ ಬೆಲೆ ಏರಿಕೆಯನ್ನು ನಿಯಂತ್ರಿಸಲು ಮತ್ತು ದೇಶದ ಆಹಾರ ಭದ್ರತೆಯನ್ನು ಖಾತರಿಪಡಿಸಲು ಈ ನೀತಿಯಲ್ಲಿ ಒಂದಿಷ್ಟು ಬದಲಾವಣೆ ಮಾಡುವ ಅಗತ್ಯ ಎದುರಾಯಿತು ಎಂದು ಹೇಳಿಕೆಯು ತಿಳಿಸಿದೆ.



ರಾಜ್ಯದಲ್ಲಿ ಮಾತ್ರ ನವೋದ್ಯಮಕ್ಕೆ ಮೂಲನಿಧಿ: ಅಶ್ವತ್ಥನಾರಾಯಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯವು ನಾವೀನ್ಯ ಮತ್ತು ಸಂಶೋಧನೆಗಳಿಗೆ ಹೆಚ್ಚು ಮಹತ್ವ ನೀಡಿದ್ದು, ಆ ಕುರಿತಾಗಿ ಅಗತ್ಯ ನೀತಿಗಳನ್ನು ಜಾರಿಗೆ ತಂದಿದೆ. ನವೋದ್ಯಮಗಳನ್ನು ಪ್ರೋತ್ಸಾಹಿಸಲು ಮೂಲನಿಧಿಯನ್ನು ಕೊಡುತ್ತಿರುವ ಏಕೈಕ ರಾಜ್ಯ ಕರ್ನಾಟಕ' ಎಂದು ಐ.ಟಿ. ಮತ್ತು ಬಿ.ಟಿ. ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ನಗರದಲ್ಲಿ ಗುರುವಾರ ಆರಂಭವಾದ ಮೂರು ದಿನಗಳ 'ಸಿಐಐ ಇನ್ನೋವರ್ಜ್' ಸಮಾವೇಶದಲ್ಲಿ ಮಾತನಾಡಿದ ಅವರು 'ಇನ್ನು ಮೂರು ವರ್ಷಗಳಲ್ಲಿ ದೇಶದ ಡಿಜಿಟಲ್ ಆರ್ಥಿಕತೆಯು ಒಂದು ಟ್ರಿಲಿಯನ್ ಡಾಲರ್ ತಲುಪಲಿದೆ. ಇದಕ್ಕೆ ಕರ್ನಾಟಕವು 300 ಬಿಲಿಯನ್ ಡಾಲರ್ ಕಾಣಿಕೆ ನೀಡುವ ಗುರಿ ಇಟ್ಟುಕೊಳ್ಳಲಾಗಿದೆ' ಎಂದು ತಿಳಿಸಿದರು.

'ನಾವೀನ್ಯ ಪರಿಸರ ವ್ಯವಸ್ಥೆಯಲ್ಲಿ ನವೋದ್ಯಮಗಳು ಪ್ರಮುಖವಾಗಿವೆ. ಏಷ್ಯಾ–ಪೆಸಿಫಿಕ್ ವಲಯದ ಡೇಟಾ ಸೆಂಟರ್ ಹಬ್ ಆಗುವ ಸಾಮರ್ಥ್ಯ ಭಾರತಕ್ಕಿದೆ. ಈ ನಿಟ್ಟಿನಲ್ಲಿ ಪೂರಕ ವಾತಾವರಣ ಕಲ್ಪಿಸಲಾಗುವುದು' ಎಂದು ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾದ (ಎಸ್‌ಟಿಪಿಐ) ಪ್ರಧಾನ ನಿರ್ದೇಶಕ ಅರವಿಂದ ಕುಮಾರ್ ತಿಳಿಸಿದರು.

'ನಿರ್ದಿಷ್ಟ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಪ್ರೋತ್ಸಾಹಿಸಲು ಎಸ್‌ಟಿಪಿಐ ಈಗಾಗಲೇ 20 ಕೇಂದ್ರಗಳನ್ನು ಸ್ಥಾಪಿಸಿದೆ. ವಿವಿಧ ನಗರಗಳಲ್ಲಿ ಐಒಟಿ ಮತ್ತು ಬ್ಲಾಕ್‌ಚೈನ್ ನಂತಹ ತಂತ್ರಜ್ಞಾನ ಸಾಧನಗಳ ಮೇಲೆ ಕೆಲಸ ಮಾಡಲು ಸ್ಥಳೀಯ ತಜ್ಞರಿಗೆ ಈ ಕೇಂದ್ರಗಳು ಸಹಾಯ ಮಾಡಿವೆ' ಎಂದರು.

ಸಿಐಐ ಮಾಜಿ ಅಧ್ಯಕ್ಷ ಕ್ರಿಸ್ ಗೋಪಾಲಕೃಷ್ಣನ್, ಉಪಾಧ್ಯಕ್ಷ ಕಮಲ್ ಬಾಲಿ ಮತ್ತು ಸಿಐಐ ಕರ್ನಾಟಕದ ಅಧ್ಯಕ್ಷ ಅರ್ಜುನ್ ಎಂ. ರಂಗಾ ಮಾತನಾಡಿದರು.

ಷೇರು ಸ್ವಾಧೀನಕ್ಕೆ ಬೇಕು ಸೆಬಿ ಅನುಮತಿ

ಆರ್‌ಆರ್‌ಪಿಆರ್ ಸ್ಥಾಪಕರಿಗೆ ನಿರ್ಬಂಧ: ಷೇರುಪೇಟೆಗೆ ಎನ್‌ಡಿಟಿವಿ ಮಾಹಿತಿ

ನವದೆಹಲಿ (ಪಿಟಿಐ): ಅದಾನಿ ಸಮೂಹಕ್ಕೆ ಸೇರಿದ ವಿಶ್ವಪ್ರಧಾನ್ ಕಮರ್ಷಿಯಲ್ ಪ್ರೈ.ಲಿ. (ವಿಸಿಪಿಎಲ್) ಕಂಪನಿಯು ಎನ್‌ಡಿಟಿವಿ ಪ್ರವರ್ತಕ ಕಂಪನಿ ಆರ್‌ಆರ್‌ಪಿಆರ್ ಲಿಮಿಟೆಡ್‌ನ ಷೇರುಗಳನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅನುಮೋದನೆ ಅಗತ್ಯವಿದೆ ಎಂದು ಎನ್‌ಡಿಟಿವಿ ಷೇರುಪೇಟೆಗೆ ಮಾಹಿತಿ ನೀಡಿದೆ.

ಆರ್‌ಆರ್‌ಪಿಆರ್ ಲಿಮಿಟೆಡ್‌ನ ಸಂಸ್ಥಾಪಕ, ಪ್ರವರ್ತಕರಾದ ಪ್ರಣಯ್ ರಾಯ್ ಹಾಗೂ ರಾಧಿಕಾ ರಾಯ್ ಅವರಿಗೆ ಷೇರುಗಳ ಖರೀದಿಗೆ, ಮಾರಾಟಕ್ಕೆ, ನೇರವಾಗಿ ಅಥವಾ ಪರೋಕ್ಷವಾಗಿ ಷೇರು ವ್ಯವಹಾರ ನಡೆಸುವುದಕ್ಕೆ 'ಸೆಬಿ'ಯು 2020ರ ನವೆಂಬರ್ 27ರಂದು ಎರಡು ವರ್ಷಗಳ ಅವಧಿಗೆ ನಿರ್ಬಂಧ ಹೇರಿದೆ.

ಈ ನಿರ್ಬಂಧವು 2022ರ ನವೆಂಬರ್ 26ರವರೆಗೆ ಜಾರಿಯಲ್ಲಿ ಇರುತ್ತದೆ. ಈ ಆದೇಶದ ಕಾರಣದಿಂದಾಗಿ 'ಆರ್‌ಆರ್‌ಪಿಆರ್ ಲಿಮಿಟೆಡ್‌ನ ಷೇರುಗಳ ಸ್ವಾಧೀನಕ್ಕೆ ಸೆಬಿ ಅನುಮತಿಯ ಅಗತ್ಯ ಇದೆ' ಎಂದು ಎನ್‌ಡಿಟಿವಿ ಹೇಳಿದೆ. ಈ ವಿಚಾರವನ್ನು ವಿಸಿಪಿಎಲ್‌ಗೂ ತಿಳಿಸಲಾಗಿದೆ ಎಂದು ಎನ್‌ಡಿಟಿವಿ ಹೇಳಿದೆ.

ಎನ್‌ಡಿಟಿವಿ ಕಂಪನಿಯ ಶೇಕಡ 29.18ರಷ್ಟು ಷೇರುಗಳನ್ನು ತಾನು ಸ್ವಾಧೀನಕ್ಕೆ ತೆಗೆದುಕೊಂಡಿರುವುದಾಗಿ ಅದಾನಿ ಸಮೂಹವು ಮಂಗಳವಾರ ಘೋಷಿಸಿದೆ. ಅಲ್ಲದೆ, ಎನ್‌ಡಿಟಿವಿಯಲ್ಲಿನ ಇನ್ನೂ ಶೇ 26ರಷ್ಟು ಷೇರುಗಳನ್ನು ಮಾರುಕಟ್ಟೆಯಿಂದ ಖರೀದಿಸಲು ತಾನು ಬಯಸಿರುವುದಾಗಿಯೂ ಹೇಳಿದೆ.

ಸಾಲ ಕೊಡುವ 2 ಸಾವಿರ ಆ್ಯಪ್ ತೆಗೆದ ಗೂಗಲ್

ನವದೆಹಲಿ (ಪಿಟಿಐ): ಗೂಗಲ್ ಕಂಪನಿಯು ಸಾಲ ಕೊಡುವ ಎರಡು ಸಾವಿರಕ್ಕೂ ಹೆಚ್ಚು ಆ್ಯಪ್‌ಗಳನ್ನು ಭಾರತದ ಪ್ಲೇಸ್ಟೋರ್‌ನಿಂದ ಈ ವರ್ಷ ತೆಗೆದುಹಾಕಿದೆ.

ನಿಯಮ ಉಲ್ಲಂಘನೆ, ಮಾಹಿತಿಯನ್ನು ತಪ್ಪಾಗಿ ನೀಡಿದ್ದು ಹಾಗೂ ಆಫ್‌ಲೈನ್ ವರ್ತನೆ ಪ್ರಶ್ನಾರ್ಹವಾಗಿ ಇದ್ದಿದ್ದು ಈ ಕ್ರಮಕ್ಕೆ ಕಾರಣ ಎಂದು ಕಂಪನಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಾಲ ಕೊಡುವ ಆ್ಯಪ್‌ಗಳಿಂದ ಉಂಟಾದ ಸಮಸ್ಯೆಯು ಇನ್ನು ಮುಂದೆ ಕಡಿಮೆ ಆಗಬಹುದು. ಏಕೆಂದರೆ ಈ ಸಮಸ್ಯೆ ಬಗ್ಗೆ ಬಹಳ ಜನರ ಗಮನ ಹರಿದಿದೆ ಎಂದು ಗೂಗಲ್ ಕಂಪನಿಯ ಏಷ್ಯಾ ಪೆಸಿಫಿಕ್ ಪ್ರದೇಶದ ಹಿರಿಯ ಅಧಿಕಾರಿ ಸೈಕತ್ ಮಿತ್ರಾ ಹೇಳಿದ್ದಾರೆ.

ಸೆನ್ಸೆಕ್ಸ್ 310 ಅಂಶ ಇಳಿಕೆ



ಮುಂಬೈ (ಪಿಟಿಐ): ಐ.ಟಿ, ಹಣಕಾಸು ಮತ್ತು ಬ್ಯಾಂಕಿಂಗ್ ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾಗಿದ್ದರಿಂದ ಷೇರುಪೇಟೆಗಳ ಗುರುವಾರದ ವಹಿವಾಟು ನಕಾರಾತ್ಮಕವಾಗಿ ಅಂತ್ಯ ಕಂಡಿತು.

ಸರ್ಕಾರಿ ಸಾಲಪತ್ರಗಳ ಆಗಸ್ಟ್ ತಿಂಗಳ ವಾಯಿದಾ ವಹಿವಾಟು ಗುರುವಾರ ಅಂತ್ಯವಾಗುವುದು ಹಾಗೂ ರೂಪಾಯಿ ಮೌಲ್ಯ ಇಳಿಕೆ ಸಹ ವಹಿವಾಟಿನ ಮೇಲೆ ಪರಿಣಾಮ ಬೀರಿದವು ಎಂದು ವರ್ತಕರು ಹೇಳಿದ್ದಾರೆ.

ಆರಂಭದಿಂದಲೂ ಸಕಾರಾತ್ಮಕ ಹಾದಿಯಲ್ಲೇ ಇದ್ದ ಬಿಎಸ್‌ಇ ಸೆನ್ಸೆಕ್ಸ್, ವಹಿವಾಟಿನ ಅಂತ್ಯದ ವೇಳೆಗೆ ಮಾರಾಟದ ಒತ್ತಡಕ್ಕೆ ಒಳಗಾಯಿತು. ಹೀಗಾಗಿ ಸೂಚ್ಯಂಕ 310 ಅಂಶ ಇಳಿಕೆ ಕಾಣುವಂತಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 82 ಅಂಶ ಇಳಿಕೆಯಾಗಿ 17,522 ಅಂಶಗಳಿಗೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 0.17ರಷ್ಟು ಏರಿಕೆ ಕಂಡು ಒಂದು ಬ್ಯಾರಲ್‌ಗೆ 101.3 ಡಾಲರ್‌ಗೆ ತಲುಪಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 6 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹79.92ರಂತೆ ವಿನಿಮಯಗೊಂಡಿತು.

ಮುಂಬೈ ಧಾರಣೆ

ಶೇಂಗಾ

25–8–2022

ಜಾವಾ 70/80(ಹೊಸ)	11400-11450
ಜಾವಾ 80/90(ಹೊಸ)	10800-10850
ದಪ್ಪ ಮಧ್ಯಪ್ರದೇಶ(ಹೊಸ)	10100-10150
ದಪ್ಪ ಗುಜರಾತ್(ಹೊಸ)	10800-10850

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1730 (1720)
ಒಂದು ವಾರದ ಡೆಲಿವರಿ	1725 (1715)
ಸೋಯಾ ಕಚ್ಚಾ	1230 (1220)
ಪಾಮ್ ವಾರದ ಡೆಲಿವರಿ	1075 (1078)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1450)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,850 (51,400)
ಬೆಳ್ಳಿ ಕೆ.ಜಿ 55,850 (55,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸೇನಾಪಡೆಯ ಗಾತ್ರ ಹೆಚ್ಚಿಸಲು ಪುಟಿನ್ ನಿರ್ಧಾರ

ಮಾಸ್ಕೊ/ ಪೊಕ್ರೊವ್‌ಸ್ಕ್ (ಎಪಿ): ಉಕ್ರೇನ್‌ನಲ್ಲಿ ಸೇನಾ ಕಾರ್ಯಾಚರಣೆ ನಡೆಯುತ್ತಿರುವಾಗಲೇ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ತಮ್ಮ ಸೇನಾ ಪಡೆಗಳ ಗಾತ್ರ ಹೆಚ್ಚಿಸಲು ನಿರ್ಧರಿಸಿದ್ದು, 2023ರ ವೇಳೆಗೆ ದೇಶದ ಶಸಸ್ತ್ರ ಪಡೆಗಳ ಸಂಖ್ಯೆಯನ್ನು 1.37 ಲಕ್ಷದಷ್ಟು ಹೆಚ್ಚಿಸಲು ಸೇನೆಗೆ ಗುರುವಾರ ಆದೇಶಿಸಿದ್ದಾರೆ.

ಪುಟಿನ್ ಅವರು ಗುರುವಾರ ಸಹಿ ಹಾಕಿದ ಆದೇಶ, ಸೇನಾ ಪಡೆಗಳ ಗಾತ್ರವನ್ನು ಯಾವ ರೀತಿ ಹೆಚ್ಚಿಸಬೇಕೆನ್ನುವುದನ್ನು ವಿವರಿಸಿಲ್ಲ. ಆದರೆ, ಉಕ್ರೇನ್‌ನಲ್ಲಿನ ಸೇನಾ ಕಾರ್ಯಾಚರಣೆಯಲ್ಲಿ ಸ್ವಯಂಪ್ರೇರಿತ ಗುತ್ತಿಗೆ ಸೈನಿಕರು ಮಾತ್ರ ಪಾಲ್ಗೊಳ್ಳುತ್ತಾರೆ ಎಂದು ಪುಟಿನ್ ಆಡಳಿತ ಕಚೇರಿ ಕ್ರೆಮ್ಲಿನ್ ಹೇಳಿದೆ. ಉಕ್ರೇನ್ ಆಕ್ರಮಣಕ್ಕೆ ಬೃಹತ್ ಸಂಖ್ಯೆಯಲ್ಲಿ ಸೈನಿಕರನ್ನು ಸಜ್ಜುಗೊಳಿಸುತ್ತಿರುವ ಆರೋಪಗಳನ್ನು ರಷ್ಯಾ ತಳ್ಳಿಹಾಕಿದೆ.

ರಷ್ಯಾ ಕ್ಷಿಪಣಿ ದಾಳಿಗೆ 25 ನಾಗರಿಕರ ಸಾವು:

ಉಕ್ರೇನ್ ಸ್ವಾತಂತ್ರ್ಯ ದಿನದಂದೇ ಉಕ್ರೇನಿನ ರೈಲು ನಿಲ್ದಾಣ ಗುರಿಯಾಗಿಸಿ ರಷ್ಯಾ ಬುಧವಾರ ನಡೆಸಿದ ಕ್ಷಿಪಣಿ ದಾಳಿಯಲ್ಲಿ 11 ವರ್ಷದ ಬಾಲಕ ಸೇರಿ 25 ನಾಗರಿಕರು ಮೃತಪಟ್ಟಿದ್ದಾರೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ರಷ್ಯಾದಿಂದ ಭೀಕರ ದಾಳಿ ನಡೆಯುವ ಮುನ್ನೆಚ್ಚರಿಕೆ ನೀಡಿದ ಬೆನ್ನಲ್ಲೇ, ನಿಪ್ರೊಪೆಟ್ರೊವ್‌ಸ್ಕ್ ಪ್ರದೇಶದ ಚಾಪ್ಲೀನ್ ಪಟ್ಟಣದಲ್ಲಿನ ರೈಲು ನಿಲ್ದಾಣದ ಮೇಲೆ ಕ್ಷಿಪಣಿ ದಾಳಿಯಾಗಿದೆ. ಘಟನೆಯಲ್ಲಿ 31 ಜನರು ಗಾಯಗೊಂಡಿದ್ದಾರೆ ಎಂದು ಅಧ್ಯಕ್ಷೀಯ ಕಚೇರಿ ಉಪ ಮುಖ್ಯಸ್ಥ ಕಿರಿಲೊ ತೈಮೊಶೆಂಕೊ ಗುರುವಾರ ತಿಳಿಸಿದರು.

ಐಎಂಎಫ್ ಕಾರ್ಯನಿರ್ವಾಹಕ ನಿರ್ದೇಶಕ ಆಗಿ ಸುಬ್ರಮಣಿಯನ್

ನವದೆಹಲಿ (ಪಿಟಿಐ): ಮಾಜಿ ಮುಖ್ಯ ಆರ್ಥಿಕ ಸಲಹೆಗಾರ ಕೃಷ್ಣಮೂರ್ತಿ ಸುಬ್ರಮಣಿಯನ್ ಅವರನ್ನು ಅಂತರರಾಷ್ಟ್ರೀಯ ಹಣಕಾಸು ನಿಧಿಯ ಕಾರ್ಯನಿರ್ವಾಹಕ ನಿರ್ದೇಶಕ (ಭಾರತ) ಆಗಿ ಗುರುವಾರ ನೇಮಕ ಮಾಡಲಾಗಿದೆ.

ಕೇಂದ್ರ ಸಚಿವ ಸಂಪುಟದ ನೇಮಕಾತಿಗಳ ಸಮಿತಿಯು ಸುಬ್ರಮಣಿಯನ್ ಅವರ ನೇಮಕಕ್ಕೆ ಒಪ್ಪಿಗೆ ನೀಡಿದೆ ಎಂದು ಸಿಬ್ಬಂದಿ ಸಚಿವಾಲಯದ ಪ್ರಕಟಣೆ ತಿಳಿಸಿದೆ. ಈ ನೇಮಕವು ನವೆಂಬರ್ 1ರಿಂದ, ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇರಲಿದೆ.

ಗಡಿಯಲ್ಲಿ ಭಾರತ–ಅಮೆರಿಕ ಸಮರಾಭ್ಯಾಸ: ಚೀನಾ ವಿರೋಧ

ಬೀಜಿಂಗ್ (ಪಿಟಿಐ): ಭಾರತ ಮತ್ತು ಅಮೆರಿಕ ಸೇನೆಯ ವಿಶೇಷ ಪಡೆಗಳು ಗಡಿ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿ ಸಮರಾಭ್ಯಾಸ ನಡೆಸಲು ಉದ್ದೇಶಿಸಿದ್ದು, ಇದಕ್ಕೆ ಚೀನಾ ವಿರೋಧ ವ್ಯಕ್ತಪಡಿಸಿದೆ.

'ಗಡಿ ಬಿಕ್ಕಟ್ಟಿನ ವಿಚಾರದಲ್ಲಿ ಮೂರನೇ ವ್ಯಕ್ತಿ ಮಧ್ಯಪ್ರವೇಶಿಸುವುದನ್ನು ನಾವು ವಿರೋಧಿಸುತ್ತೇವೆ. ದ್ವಿಪಕ್ಷೀಯ ಒಪ್ಪಂದದಂತೆ ಭಾರತವು ಎಲ್‌ಎಸಿ ಬಳಿ ಸಮರಾಭ್ಯಾಸ ನಡೆಸುವುದಿಲ್ಲ ಎಂಬ ಭರವಸೆ ಇದೆ' ಎಂದು ಚೀನಾದ ರಕ್ಷಣಾ ಸಚಿವಾಲಯ ಗುರುವಾರ ಹೇಳಿದೆ.

'ಚೀನಾ ಮತ್ತು ಭಾರತದ ನಡುವಣ ಗಡಿ ಬಿಕ್ಕಟ್ಟು ಉಭಯ ದೇಶಗಳಿಗೆ ಸಂಬಂಧಿಸಿದ್ದು. ದ್ವಿಪಕ್ಷೀಯ ಮಾತುಕತೆ ಮೂಲಕ ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಉಭಯ ರಾಷ್ಟ್ರಗಳು ಪ್ರಯತ್ನಿಸುತ್ತಿವೆ' ಎಂದು ಚೀನಾದ ರಾಷ್ಟ್ರೀಯ ಭದ್ರತಾ ಸಚಿವಾಲಯದ ವಕ್ತಾರ ಟಾನ್ ಕೀಫೆ ತಿಳಿಸಿದ್ದಾರೆ.

ಭಾರತ ಮತ್ತು ಅಮೆರಿಕ ಸೇನಾಪಡೆಗಳ 18ನೇ ಆವೃತ್ತಿಯ 'ಯುದ್ಧ ಅಭ್ಯಾಸ'ವನ್ನು ಅಕ್ಟೋಬರ್ 14ರಿಂದ 31ರವರೆಗೆ ನಡೆಸಲು ನಿರ್ಧರಿಸಲಾಗಿದೆ ಎಂದು ರಕ್ಷಣಾ ಸಚಿವಾಲಯದ ಮೂಲಗಳು ತಿಳಿಸಿವೆ.

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ
ಎಸ್. ನಿಜಲಿಂಗಪ್ಪ ರಸ್ತೆ, ರಾಜಾಜಿನಗರ 2ನೇ ಬ್ಲಾಕ್, ಬೆಂಗಳೂರು – 560010.
ಟೆಲಿಫ್ಯಾಕ್ಸ್ : 080–23324216 / 23328105, ವೆಬ್‌ಸೈಟ್:https://www.esisms.karnataka.gov.in
E.S.I.S(M) SERVICES KARNATAKA
ಟೆಂಡರ್ ಸಂಖ್ಯೆ : ಹೊ.ಗು./05/2022–23 ದಿನಾಂಕ : 24.08.2022
ಈ ಇಲಾಖೆಯಲ್ಲಿ ಖಾಲಿ ಇರುವ ಶುಶ್ರೂಷಕರು ಹಾಗೂ ವಿವಿಧ ತಾಂತ್ರಿಕ ಮತ್ತು ಅರೆ ವೈದ್ಯಕೀಯ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಟೆಂಡರ್ ಪ್ರಕಟಣೆ

ಕ್ರ. ಸಂ.	ಹುದ್ದೆಗಳು	ಹುದ್ದೆಗಳ ಸಂಖ್ಯೆ	ಕ್ರ. ಸಂ.	ಹುದ್ದೆಗಳು	ಹುದ್ದೆಗಳ ಸಂಖ್ಯೆ
1.	ಸ್ಟಾಫ್ ನರ್ಸ್	179	5.	ರೇಡಿಯೋಗ್ರಾಫರ್	07
2.	ಸೀನಿಯರ್ ಲ್ಯಾಬ್ ಟೆಕ್ನಿಷಿಯನ್	01	6.	ಜ್ಯೂನಿಯರ್ ರೇಡಿಯೋಗ್ರಾಫರ್	04
3.	ಜ್ಯೂನಿಯರ್ ಲ್ಯಾಬ್ ಟೆಕ್ನಿಷಿಯನ್	32	7.	ಎಕ್ಸ್–ರೇ ಟೆಕ್ನಿಷಿಯನ್	04
4.	ಫಿಸಿಯೋಥೆರಪಿಸ್ಟ್	03		ಒಟ್ಟು ಹುದ್ದೆಗಳ ಸಂಖ್ಯೆ	230

ಇ.ಎಂ.ಡಿ. ಮೊತ್ತ	ರೂ. 16,04,956/-
ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	03.09.2022 ರ ಸಂಜೆ 4.00 ಗಂಟೆಯವರೆಗೆ
ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ ಸ್ವೀಕರಿಸಿದ ಟೆಂಡರ್‌ಗಳ ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ	05.09.2022 ರ ಮಧ್ಯಾಹ್ನ 12.00 ಗಂಟೆಗೆ
ಪೂರ್ವಭಾವಿ ಸಭೆ ದಿನಾಂಕ	29.08.2022 ರ ಮಧ್ಯಾಹ್ನ 12.00 ಗಂಟೆಗೆ ನಿರ್ದೇಶನಾಲಯದ ಕಛೇರಿ, ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು
ಟೆಂಡರ್‌ನ ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ನೋಡಿ	www.eproc.karnataka.gov.in & https://www.esisms.karnataka.gov.in

ಹೆಚ್ಚಿನ ಮಾಹಿತಿಗಾಗಿ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/– ನಿರ್ದೇಶಕರು(ಪ್ರ)
ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳು
ವಾಸಾಸಂಇ/ವಾಪ್ರ/ಜಿಎ/1961/2022–23
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಕಾರ್ಕಳ	
ಹಳತು	40000-47500
ಕುಮಟ	
ಚಿಪ್ಪು	30001-35199
ಕೋಕ	25099-34020
ಹಳೆಚಾಲಿ	48099-48099
ಹೊಸಚಾಲಿ	37099-43079
ಪುತ್ತೂರು	
ಕೋಕ	11000-26000
ಹೊಸತು	34500-47500
ಸಾಗರ	
ಬಿಳಿಗೋಟು	29099-37669
ಚಾಲಿ	37699-42599
ಕೋಕ	30199-38899
ಕೆಂಪುಗೋಟು	35699-45089
ರಾಶಿ	39129-55399
ಸಿಪ್ಪೆಗೋಟು	7796-24519
ಶಿವಮೊಗ್ಗ	
ಬೆಟ್ಟೆ	51099-56319
ಗೊರಬಲು	28409-40599
ರಾಶಿ	49609-57699
ಸರಕು	61169-80696
ಸಿದ್ದಾಪುರ	
ಬಿಳಿಗೋಟು	26669-34899
ಚಾಲಿ	38899-43599
ಕೋಕ	26699-36039
ಕೆಂಪುಗೋಟು	33389-33899
ರಾಶಿ	48899-52509
ತಟ್ಟಿಬೆಟ್ಟೆ	39869-49399
ಶಿರಸಿ	
ಬೆಟ್ಟೆ	37177-50208
ಬಿಳಿಗೋಟು	24020-36709
ಚಾಲಿ	35759-44671
ರಾಶಿ	42869-53199
ಯಲ್ಲಾಪುರ	
ಬಿಳಿಗೋಟು	27069-35299
ಚಾಲಿ	38099-43800
ಕೋಕ	18600-32712
ಕೆಂಪುಗೋಟು	29278-36617
ರಾಶಿ	50009-56965
ತಟ್ಟಿಬೆಟ್ಟೆ	39409-48712

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16900	16000	16600	242.95 ಸೆಂಟ್ಸ್
ಎಸಿ	9100	8500	9250	
ಆರ್‌ಪಿ	10200	9800	9900	ಲಂಡನ್
ಆರ್‌ಸಿ	4800	4600	4825	2340 ಡಾಲರ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವಾಹನ
Four Wheelers Selling
Others

ಉದ್ಯೋಗಾವಕಾಶ
Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೇ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಸುವರ್ಣ ಅವಕಾಶ: ಫಾರಂನಲ್ಲಿ ಅಂಕಿಗಳು ತುಂಬುವ ಮತ್ತು ಬುಕ್ ಬರೆಯುವ ಮೂಲಕ ಗಳಿಸಿ,5 ದಿನಕ್ಕೆ 8,000-9,000/- ಕೊರಿಯರ್ ಸೌಲಭ್ಯವಿದೆ. 9108059956, 9901929956.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

General
ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC,PUC, Degree ಸಂಬಳ15000 to 28000 ಸಂಪರ್ಕಿಸಿ 9980814578, 9980812378

Drivers
ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18,000-20,000 ಪ್ರತಿ ತಿಂಗಳು+ ಕುಟುಂಬಕ್ಕೆ ಖಾಸಗಿ ವಿಮೆ +ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Wanted
ಜೀವಾಂಶ್ ಫಿನ್‌ಕಾಮ್ ನೂತನ ಶಾಖೆಗೆ ಸಿಬ್ಬಂದಿ ಬೇಕಾಗಿದ್ದಾರೆ. ಏಜೆಂಟ್/ಡೀಲರ್‌ಶಿಪ್/ಏರಿಯಾ ಮ್ಯಾನೇಜರ್/ಬ್ಯಾಂಕ್/ ಇನ್ಶೂರೆನ್ಸ್ / ಮೈಕ್ರೊ ಫೈನಾನ್ಸ್ ಅನುಭವಿಗಳಿಗೆ ಸ್ವಾಗತ. ಸಂಪರ್ಕಿಸಿ: 7417283199 / 7895357732.

ಪ್ರವಾಸ
Travel

10.09.2022 26.09.2022 10.10.2022 ವಿಮಾನ/ರೈಲು/ಬಸ್ಸಿನಲ್ಲಿ ದೆಹಲಿ ಅಮೃತ್ಸರ್ ವೈಷ್ಣೋದೇವಿ ಹರಿದ್ವಾರ್ ಚಾರ್‌ಧಾಮ್ ಸಮೇತ 09.10.2022 ನೇಪಾಳ ಮುಕ್ತಿನಾಥ್ ಪೋಖ್ರಾ,ಲುಂಬಿನಿ 09.11.2022 ಸೋಮನಾಥ್ ದ್ವಾರಕಾ ಬಾವನಗರ್ ಓಂಕಾರೇಶ್ವರ್ ದಕ್ಷಿಣ/ಮಧ್ಯ ಭಾರತ ಪ್ರವಾಸಗಳಿಗೆ ಸಂಪರ್ಕಿಸಿ: ಏಷ್ಯನ್ ಟ್ರಾವೆಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು.4 26574131 8317446683 9916408171

03.10.2022 14 ದಿನಗಳು ವಿಮಾನದಲ್ಲಿ ಬದರಿನಾಥ್ ಕೇದಾರನಾಥ್,ಗಂಗೋತ್ರಿ ಯುಮುನೋತ್ರಿ ದೆಹಲಿ ಇತ್ಯಾದಿ. ಊಟ, ವಸತಿಯೊಂದಿಗೆ ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289 9686721196

18.12.2022ರಿಂದ 16/13ದಿನಗಳು ವಿಮಾನ ಮತ್ತು ಎಸಿ ಬಸ್,ಡೀಲಕ್ಸ್ ರೂಮ್ ನೊಂದಿಗೆ ನೇಪಾಳ,ಮುಕ್ತಿನಾಥ, ಭಕ್ತಾಪುರ್,ಚಂದ್ರಗಿರಿಬೆಟ್ಟ,ಪೋಕ್ರ, ಕಾಶಿ ಇತ್ಯಾದಿ.13ದಿನಗಳು ಎಸಿ ಬಸ್,ಎಸಿ ರೂಮ್ ಪಂಚರಾಮ ಕ್ಷೇತ್ರ ಸಮೇತ ಭದ್ರಾಚಲಂ, ಅನ್ನವರಂ,ವಿಶಾಖಪಟ್ಟಣ.ಹಾಗೂ 9ದಿನಗಳ ಕನ್ಯಾಕುಮಾರಿ, ರಾಮೇಶ್ವರ,ನವಗ್ರಹ,ಮದುರೈ ಇತ್ಯಾದಿ..ಏಷ್ಯನ್ ಟ್ರಾವೆಲ್‌ಲೈನ್ಸ್ 164/3,ಆರ್.ವಿ.ರಸ್ತೆ, ಬೆಂಗಳೂರು..04. 8105657052, 26565085.

13.09.2022 06.10.2022 14.11.2022 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 14.10.2022 06.11.2022 ದುಬೈ 5 ದಿನಗಳು. 09.09.2022 19.10.2022 27.11.2022 ನೇಪಾಳ 11 ದಿನಗಳು. 06.10.2022 02.11.2022 06.12.2022 ಕಾಶಿ,ಗಯಾ,ಅಯೋಧ್ಯ 7ದಿನಗಳು. 14.09.2022 13.10.2022 12.11.2022 ಗುಜರಾತ್ 8ದಿನಗಳು. 27.09.2022 21.10.2022 20.11.2022 ರಾಜಸ್ಥಾನ್ 8 ದಿನಗಳು. 07.10.2022 11.11.2022 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. ಜೈನ್ ಟ್ರಾವೆಲ್ಸ್ ಬೆಂಗಳೂರು-3 9448402248 7022547922

★ಶ್ರೇಯಸ್ ಟೂರ್ಸ್★ 14.09.2022 10ದಿನಗಳು 6ವಿಮಾನದಲ್ಲಿ ಮುಕ್ತಿನಾಥ ಸಹಿತ ಅಖಂಡ ನೇಪಾಳರಾಷ್ಟ್ರ 26.09.2022 5ದಿನಗಳು ಅಹೋಬಲ,ಶ್ರೀಶೈಲ,ಮಹಾನಂದಿ ಮಂತ್ರಾಲಯ,ಯಾಗಂಟಿ ಬೇಲಂಗುಹೆ,09.10.2022 5ದಿನಗಳು ಅಷ್ಟವಿನಾಯಕ,ಶಿರಡಿ ಭೀಮಾಶಂಕರ,ಮಹಾಬಲೇಶ್ವರ ಕೊಲ್ಲಾಪುರ.8073824856/ 9206979202/ 6366322639

11.09.2022 ರಿಂದ 13 ದಿನಗಳ ಚಾರ್ಧಾಮ್ (ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ) 14.09.2022 ರಿಂದ 5 ದಿನಗಳ ಕಾಶಿ,ಗಯಾ,ಬುದ್ಧಗಯಾ ಪ್ರಯಾಗ (ಅಲಹಾಬಾದ್) ಪ್ರವಾಸ ವೈಷ್ಣವಿ ಟೂರ್ಸ್ ಅಂಡ್ ಟ್ರಾವೆಲ್ಸ್ ಗಾಂಧಿಬಜಾರ್ ಬೆಂಗಳೂರು.04 26914273 9448683374

ಭವಿಷ್ಯ
Astrology

★||ಶ್ರೀಗುರು ರಾಘವೇಂದ್ರಸ್ವಾಮಿ||★ ಆರಾದನೆಯಿಂದ ಪ್ರೀತಿಪ್ರೇಮ,ವಶೀಕರಣ, ವ್ಯಾಪಾರ,ಸಂತಾನ, ಸಾಲಭಾದೆ, ಕೋರ್ಟ್‌ಕೇಸ್ ಇನ್ನೂ ಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 8317227470

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ವೈಯಕ್ತಿಕ
Change of Name

ಕರ್ನಾಟಕ-561201, ರಾಮನಗರ, ಸಾವನದುರ್ಗ ರಾಜ್ಯ ಅರಣ್ಯ, ಸಾವನದುರ್ಗ,ನಂ.1 ರಲ್ಲಿ ವಾಸಿಸುತ್ತಿರುವ ಹರಿಚರಣ ಕೃಷ್ಣ ಮೂರ್ತಿ (ಪಾಸ್ ಪೋರ್ಟ್ ನಂ F0284744 ಹೊಂದಿರುವ) ನನ್ನ ಹೆಸರನ್ನು ಎಸ್. ಕೆ. ಹರಿಚರಣ್ ಎಂದು ಬದಲಾಯಿಸಿ ಕೊಂಡಿರುತ್ತೇನೆ ದಿನಾಂಕ: 25.08.2022 ರಂದು ನೋಟರಿಯವರಾದ ಮಹೇಶ್ ಜೆ ಜೆ, ರಾಮನಗರ ರವರ ಮುಂದೆ ಪ್ರಮಾಣಕರಿಸಿರುತ್ತೇನೆ

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135
CD Per Sqcm	Single Col	Double Col	Multi Col	
	480	450	475	

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 |
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ರಶ್ದಿ ಮೇಲಿನ ದಾಳಿ ಖಂಡಿಸಿದ ಭಾರತ

ನವದೆಹಲಿ (ಪಿಟಿಐ): ಲೇಖಕ ಸಲ್ಮಾನ್ ರಶ್ದಿ ಅವರ ಮೇಲಿನ ದಾಳಿಯನ್ನು ಭಾರತ ಮೊದಲ ಬಾರಿಗೆ ಗುರುವಾರ ಖಂಡಿಸಿದ್ದು, 'ಇದು ಭಯಾನಕ ದಾಳಿ', ಅವರು ಶೀಘ್ರ ಚೇತರಿಸಿಕೊಳ್ಳಲಿ ಎಂದು ಹಾರೈಸಿದೆ.

ಆ.12ರಂದು ನ್ಯೂಯಾರ್ಕ್‌ನ ಷಟೌಕ್ವಾ ಇನ್‌ಸ್ಟಿಟ್ಯೂಟ್ ಆಯೋಜಿಸಿದ್ದ ಕಲೆ ಮತ್ತು ಸಾಹಿತ್ಯದ ಕಾರ್ಯಕ್ರಮದಲ್ಲಿ ರಶ್ದಿ ಅವರ ಕುತ್ತಿಗೆ ಭಾಗಕ್ಕೆ ಇರಿಯಲಾಗಿತ್ತು.

ಭಾರತ ಯಾವಾಗಲೂ ಹಿಂಸೆ ಮತ್ತು ಉಗ್ರವಾದದ ವಿರುದ್ಧ ನಿಂತಿದೆ. ರಶ್ದಿ ಮೇಲಿನ ಭೀಕರ ದಾಳಿ ಖಂಡಿಸುತ್ತೇವೆ ಮತ್ತು ಶೀಘ್ರ ಚೇತರಿಸಿಕೊಳ್ಳಬೇಕೆಂದು ಬಯಸುತ್ತೇವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಮಾಧ್ಯಮಗೋಷ್ಠಿಯಲ್ಲಿ ತಿಳಿಸಿದ್ದಾರೆ.

ರಶ್ದಿ ಮೇಲಿನ ದಾಳಿಯು ಜಾಗತಿಕ ಖಂಡನೆಗೆ ಕಾರಣವಾಯಿತು. ರಶ್ದಿ ಅವರ 'ದಿ ಸಟಾನಿಕ್ ವರ್ಸಸ್'

ಸಲ್ಮಾನ್ ರಶ್ದಿ

ಕಾದಂಬರಿ ಪ್ರಕಟವಾದ ಬಳಿಕ ಅವರ ಹತ್ಯೆ ಮಾಡುವಂತೆ 1998ರಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯಾತ್ ಉಲ್ಲಾ ಖೊಮೇನಿ ಫತ್ವಾ ಹೊರಡಿಸಿದ್ದರು. ಹಾಗಾಗಿ ಹಲವು ವರ್ಷ ರಶ್ದಿ ತಲೆ ಮರೆಸಿಕೊಂಡಿದ್ದರು.

ದಾಳಿ ನಂತರ ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆಂಟೋನಿ ಬ್ಲಿಂಕೆನ್, 'ರಶ್ದಿ ವಿರುದ್ಧ ಇರಾನ್‌ನ ಸಂಸ್ಥೆಗಳು ಹಿಂಸಾಚಾರ ಪ್ರಚೋದಿಸಿವೆ. ಲೇಖಕರು ಅಭಿವ್ಯಕ್ತಿ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಸಾರ್ವತ್ರಿಕ ಹಕ್ಕುಗಳ ಪರವಾಗಿ ನಿರಂತರವಾಗಿ ನಿಂತಿದ್ದಾರೆ' ಎಂದು ಹೇಳಿದರು.

ಪುಸ್ತಕ ನಿಷೇಧಿಸಿದ ಮೊದಲ ಕೆಲವು ದೇಶಗಳಲ್ಲಿ ಭಾರತವೂ ಸೇರಿದೆ. ದಾಳಿಕೋರನೊಂದಿಗೆ ಯಾವುದೇ ಸಂಬಂಧವನ್ನು ಇರಾನ್ ನಿರಾಕರಿಸಿದೆ.

'ಸರ್ಕಾರದ ಕೆಲವು ಸ್ನೇಹಿತರಿಗೆ' ಭರಪೂರ ಸಾಲ: ಕಾಂಗ್ರೆಸ್ ಆರೋಪ

ನವದೆಹಲಿ (ಪಿಟಿಐ): 'ಸರ್ಕಾರದ ಕೆಲವು ಸ್ನೇಹಿತರಿಗೆ' ಭರಪೂರ ಸಾಲದ ಕೊಡುಗೆ ನೀಡಲಾಗುತ್ತಿದೆ ಎಂದು ಕಾಂಗ್ರೆಸ್ ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರ ಸ್ನೇಹಿತ ಉದ್ಯಮಿಗಳನ್ನು ಪರೋಕ್ಷವಾಗಿ ಗುರಿಯಾಗಿಸಿಕೊಂಡು, ಕೇಂದ್ರದ ವಿರುದ್ಧ ತೀವ್ರ ವಾಗ್ದಾಳಿ ಮಾಡಿದೆ.

ಅದಾನಿ ಸಮೂಹದ ಕಂಪನಿಗಳು ಪಡೆದಿರುವ ಒಟ್ಟಾರೆ ಸಾಲ ಸುಮಾರು ₹2.30 ಲಕ್ಷ ಕೋಟಿಯಷ್ಟಿದೆ. ಅದಾನಿ ಸಮೂಹದ ಋಣಭಾರದ ಬಗ್ಗೆ ವಿಶ್ಲೇಷಣೆ ನಡೆಸಿರುವ ನ್ಯೂಯಾರ್ಕ್ ಮೂಲದ ಕ್ರೆಡಿಟ್ ರಿಸರ್ಚ್ ಫರ್ನರ್ಸ್ ಸಂಸ್ಥೆ ವರದಿಯಲ್ಲಿ ಇಂತಹ ಆಘಾತಕಾರಿ ಅಂಶಗಳು ಹೊರಬಂದಿವೆ ಎಂದಿರುವ ಕಾಂಗ್ರೆಸ್, 'ದೇಶದ ಆರ್ಥಿಕತೆಯನ್ನು ಅಪಾಯಕ್ಕೆ ದೂಡುವ ಇಂತಹ ಸಾಲಗಳ ಮಂಜೂರಾತಿಗಾಗಿ ಬ್ಯಾಂಕ್‌ಗಳ ಮೇಲೆ ಒತ್ತಡ ಹೇರುತ್ತಿರುವವರು ಯಾರೆನ್ನುವುದು ಗೊತ್ತಾಗಬೇಕು' ಎಂದೂ ಒತ್ತಾಯಿಸಿದೆ.

ಎಐಸಿಸಿ ಕೇಂದ್ರ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ವಕ್ತಾರ ಗೌರವ್ ವಲ್ಲಭ್, ದೇಶದ ಆರ್ಥಿಕತೆ ಮತ್ತು ಹಣಕಾಸು ಸ್ಥಿತಿಯನ್ನು ಬಿಜೆಪಿ ಸರ್ಕಾರ ಎಷ್ಟರ ಮಟ್ಟಿಗೆ ಹಾಳುಮಾಡಿದೆ ಎನ್ನುವುದರ ಬಗ್ಗೆ ಯಾರಾದಾರೂ ವಿಶ್ಲೇಷಣೆ ಮಾಡಿದರೆ, ಇದು ದೇಶದ ಪಾಲಿಗೆ ದುಸ್ವಪ್ನವೆಂದು ಹೇಳಲು ಬೇರೆ ಕಾರಣಗಳೇ ಬೇಕಿಲ್ಲ ಎಂದರು.

ದೇಶ ಮೊದಲೇ ಭಾರಿ ಮೊತ್ತದ ಸಾಲದ ಸುಳಿಯಲ್ಲಿ ಸಿಲುಕಿ ಸಂಕಷ್ಟದಲ್ಲಿದೆ. ಪರಿಸ್ಥಿತಿ ಹೀಗಿರುವಾಗ 'ಸರ್ಕಾರದ ಕೆಲವು ಸ್ನೇಹಿತರಿಗೆ' ಭರಪೂರ ಸಾಲ ಕೊಟ್ಟಿರುವುದು ಆತಂಕ ಹೆಚ್ಚಿಸಿದೆ. ರಾಷ್ಟ್ರೀಯ ಆರ್ಥಿಕತೆ ಮತ್ತು ಬ್ಯಾಂಕುಗಳನ್ನು ಭಾರಿ ಅಪಾಯದಲ್ಲಿ ಸಿಲುಕಿಸುವ ದೊಡ್ಡ ಮೊತ್ತದ ಸಾಲ ನೀಡುವಂತೆ ಎಸ್‌ಬಿಐನಂತಹ ಬ್ಯಾಂಕುಗಳ ಮೇಲೆ ಒತ್ತಡ ಹೇರಿದವರು ಯಾರು? ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಇದಕ್ಕೆ ಉತ್ತರಿಸಬೇಕು ಎಂದು ವಲ್ಲಭ್ ಒತ್ತಾಯಿಸಿದರು.

ಎನ್‌ಡಿಟಿವಿ ಸಂಸ್ಥಾಪಕರ ಅನುಮತಿ ಇಲ್ಲದೇ, ಅವರೊಂದಿಗೆ ಚರ್ಚಿಸದೇ ವಾಹಿನಿಯ ಶೇ 29.19ರಷ್ಟು ಪಾಲನ್ನು ಅದಾನಿ ಗ್ರೂಪ್ ಸ್ವಾಧೀನಕ್ಕೆ ತೆಗೆದುಕೊಂಡಿರುವುದು ಹೊಸ ಗಿಮಿಕ್. ಪ್ರಮುಖ ಸುದ್ದಿ ವಾಹಿನಿಯನ್ನು ಹಗೆತನದಿಂದ ಸ್ವಾಧೀನಪಡಿಸಿಕೊಳ್ಳುತ್ತಿರುವುದು ಇಡೀ ದೇಶದಲ್ಲಿ ಚರ್ಚೆಯಾಗುತ್ತಿದೆ. ಹಣಕಾಸು ಸಚಿವಾಲಯ ಮತ್ತು ಸೆಬಿ ಏಕೆ ಈ ವಿಷಯದಲ್ಲಿ ತೆಪ್ಪಗಿವೆ ಎಂದು ಅವರು ಪ್ರಶ್ನಿಸಿದರು.

ಮುಖ್ಯಾಂಶಗಳು
- ನ್ಯೂಯಾರ್ಕ್ ಮೂಲದ ಸಂಸ್ಥೆ ವರದಿಯಲ್ಲಿ ಆಘಾತಕಾರಿ ಅಂಶಗಳು
- ಬ್ಯಾಂಕ್‌ಗಳ ಮೇಲೆ ಒತ್ತಡ ಹೇರುತ್ತಿರುವವರು ಯಾರೆನ್ನುವುದು ಗೊತ್ತಾಗಲಿ
- ಹಣಕಾಸು ಸಚಿವಾಲಯ ಮತ್ತು ಸೆಬಿ ಏಕೆ ತೆಪ್ಪಗೆ ಕುಳಿತಿವೆ?

ಮರುಪರಿಶೀಲಿಸುವಂತೆ 'ಸುಪ್ರೀಂ'ಗೆ ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಸಲ್ಲಿಸಿದ್ದ ಅರ್ಜಿ

ಪಿಎಂಎಲ್‌ಎ: ಕೇಂದ್ರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಹಣ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆಯಡಿ (ಪಿಎಂಎಲ್‌ಎ) ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಗಳನ್ನು ಎತ್ತಿಹಿಡಿದ ತೀರ್ಪು ಮರುಪರಿಶೀಲನೆಗೆ ಸುಪ್ರೀಂ ಕೋರ್ಟ್ ಗುರುವಾರ ಸಮ್ಮತಿಸಿದ್ದು, ಕೇಂದ್ರ ಸರ್ಕಾರಕ್ಕೆ ನೋಟಿಸ್ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠ, ಇಡೀ ತೀರ್ಪು ಮರುಪರಿಶೀಲಿಸುವ ಬದಲು, ಮೇಲ್ನೋಟಕ್ಕೆ ಕಾಣಿಸುವ ಮುಗ್ಧತೆಯ ಊಹೆಯ ವಿಚಾರ ಮತ್ತು ಇ.ಡಿ ಪ್ರಕರಣದ ಮಾಹಿತಿ ವರದಿ (ಇಸಿಐಆರ್) ಒದಗಿಸದಿರುವ ಈ ಎರಡು ಅಂಶಗಳನ್ನು ಪರಿಶೀಲಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದೆ.

ಪಿಎಂಎಲ್‌ಎ ಕಾಯ್ದೆಯಡಿ ಆರೋಪಿಗಳ ಆಸ್ತಿಯನ್ನು ಜಪ್ತಿ ಮಾಡುವುದು ಸೇರಿ ಇ.ಡಿ ಹೊಂದಿರುವ ಮುಕ್ತ ಅಧಿಕಾರವನ್ನು ಸುಪ್ರಿಂಕೋರ್ಟ್ ಎತ್ತಿ ಹಿಡಿದು, ಜುಲೈ 27ರಂದು ತೀರ್ಪು ನೀಡಿತ್ತು.

ಈ ತೀರ್ಪು ಮರುಪರಿಶೀಲಿಸುವಂತೆ ಕೋರಿ ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಅರ್ಜಿ ಸಲ್ಲಿಸಿದ್ದರು. ಅರ್ಜಿದಾರರ ಪರ ಹಿರಿಯ ವಕೀಲರಾದ ಕಪಿಲ್ ಸಿಬಲ್, ಅಭಿಷೇಕ್ ಎಂ. ಸಿಂಘ್ವಿ ಹಾಜರಿದ್ದರು. ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ತೀರ್ಪು ಮರುಪರಿಶೀಲನೆಗೆ ವಿರೋಧ ವ್ಯಕ್ತಪಡಿಸಿದರು.

ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ ಮತ್ತು ಸಿ.ಟಿ. ರವಿಕುಮಾರ್ ಅವರೂ ಇದ್ದ ತ್ರಿಸದಸ್ಯ ಪೀಠ, 'ಕಪ್ಪು ಹಣ ಚಲಾವಣೆ ಮತ್ತು ಹಣ ಅಕ್ರಮ ವರ್ಗಾವಣೆ ಅಪರಾಧಗಳನ್ನು ತಡೆಗಟ್ಟಲು ನ್ಯಾಯಾಲಯ ಸಂಪೂರ್ಣ ಬೆಂಬಲ ನೀಡುತ್ತಿದೆ. ಇಂತಹ ಅಪರಾಧಗಳನ್ನು ರಾಷ್ಟ್ರವು ಸಹಿಸದು. ಹಣ ಅಕ್ರಮ ವರ್ಗಾವಣೆ ಗಂಭೀರ ಅಪರಾಧ. ಇದರ ವಿರುದ್ಧದ ಕಾಯ್ದೆ ಉದಾತ್ತವಾಗಿದೆ. ಕಾಯ್ದೆ ಬಗೆಗಿನ ತೀರ್ಪಿನ ಬಗ್ಗೆ ವಿಸ್ತೃತ ಚರ್ಚೆಯ ಅಗತ್ಯವಿಲ್ಲ. ಆದರೆ, ಇದರಲ್ಲಿ ಅಗತ್ಯವಿರುವ ಎರಡು ಅಂಶಗಳನ್ನು ಮಾತ್ರ ಮರುಪರಿಶೀಲಿಸಲಾಗುವುದು' ಎಂದು ಅಭಿಪ್ರಾಯಪಟ್ಟಿತು.

ಈ ವಿಷಯದಲ್ಲಿ ಏನೇ ಇರಲಿ, ಮಧ್ಯಂತರ ರಕ್ಷಣೆಯನ್ನು ಇನ್ನೂ ನಾಲ್ಕು ವಾರಗಳವರೆಗೆ ವಿಸ್ತರಿಸಲಾಗುವುದು. ಪ್ರಕರಣವನ್ನು ಸೂಕ್ತ ಪೀಠದ ಮುಂದೆ ವಿಚಾರಣೆಗೆ ಪಟ್ಟಿ ಮಾಡಲಾಗುವುದು ಎಂದು ಹೇಳಿದ ಪೀಠ, ಕೇಂದ್ರ ಸರ್ಕಾರಕ್ಕೆ ಪ್ರತಿಕ್ರಿಯೆ ಸಲ್ಲಿಸಲು ನೋಟಿಸ್ ಜಾರಿ ಮಾಡಿತು.

ಸುಪ್ರೀಂ ಕೋರ್ಟ್ ತೀರ್ಪನ್ನು ಪುನರ್ ಪರಿಶೀಲಿಸುವಂತೆ ಕೋರಿ ಕಾರ್ತಿ ಚಿದಂಬರಂ ಅವರು ಕಳೆದ ತಿಂಗಳು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾ ಮಾಡಿತ್ತು. ಕಾರ್ತಿ ಅವರು ಮತ್ತೊಮ್ಮೆ ಸಲ್ಲಿಸಿದ ಪುನರ್ ಪರಿಶೀಲನಾ ಅರ್ಜಿಯಲ್ಲಿ, ಈ ತೀರ್ಪಿನಲ್ಲಿ ದೋಷಗಳಿವೆ ಮತ್ತು ಸಂವಿಧಾನದ ನಿಯಮಗಳಿಗೂ ವಿರುದ್ಧವಾಗಿದೆ ಎಂದು ವಾದಿಸಿದ್ದಾರೆ.

ಮುಖ್ಯಾಂಶಗಳು
- ಮಧ್ಯಂತರ ರಕ್ಷಣೆ ನಾಲ್ಕು ವಾರ ವಿಸ್ತರಣೆ
- 2 ಅಂಶಗಳು ಮಾತ್ರ ಮರುಪರಿಶೀಲನೆ
- ಸೂಕ್ತ ಪೀಠದಲ್ಲಿ ಅರ್ಜಿ ವಿಚಾರಣೆಗೆ ತೀರ್ಮಾನ

ಬಿಲ್ಕಿಸ್ ಬಾನು ಅತ್ಯಾಚಾರಿಗಳ ಬಿಡುಗಡೆ ಕೇಂದ್ರ, ಗುಜರಾತ್ ಸರ್ಕಾರಗಳಿಗೆ ನೋಟಿಸ್

ನವದೆಹಲಿ(ಪಿಟಿಐ): ಬಿಲ್ಕಿಸ್ ಬಾನು ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣದ 11 ಅಪರಾಧಿಗಳ ಬಿಡುಗಡೆ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಿದ ಅರ್ಜಿಯ ವಿಚಾರಣೆ ಆರಂಭಿಸಿರುವ ಸುಪ್ರೀಂಕೋರ್ಟ್, ಕೇಂದ್ರ ಸರ್ಕಾರ ಮತ್ತು ಗುಜರಾತ್ ರಾಜ್ಯ ಸರ್ಕಾರಕ್ಕೆ ಪ್ರತಿಕ್ರಿಯೆ ಸಲ್ಲಿಸುವಂತೆ ಗುರುವಾರ ನೋಟಿಸ್ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರ ನೇತೃತ್ವ ಮತ್ತು ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಹಾಗೂ ವಿಕ್ರಮ್ ನಾಥ್ ಅವರನ್ನು ಒಳಗೊಂಡ ತ್ರಿಸದಸ್ಯ ಪೀಠವು, ಬಿಡುಗಡೆಯಾಗಿರುವ ಎಲ್ಲ 11 ಮಂದಿ ಮತ್ತು ಪ್ರತಿವಾದಿಗಳು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ.

ಸಾಮೂಹಿಕ ಅತ್ಯಾಚಾರದ ಅಪರಾಧಿಗಳ ಬಿಡುಗಡೆ ಪ್ರಶ್ನಿಸಿ ಸಿಪಿಐಎಂ ನಾಯಕಿ ಸುಭಾಷಿಣಿ ಅಲಿ, ಪತ್ರಕರ್ತೆ ರೇವತಿ ಲೌಲ್ ಮತ್ತು ಸಾಮಾಜಿಕ ಕಾರ್ಯಕರ್ತೆ ರೂಪ್ ರೇಖಾ ರಾಣಿ ಅವರು ಸುಪ್ರೀಂಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ಪರ ಹಿರಿಯ ವಕೀಲರಾದ ಕಪಿಲ್ ಸಿಬಲ್ ಹಾಗೂ ಅಪರ್ಣಾ ಭಟ್ ವಾದಿಸುತ್ತಿದ್ದಾರೆ.

'ಅತ್ಯಾಚಾರಿಗಳ ರಕ್ಷಣೆ' ಮೋದಿ ಧೋರಣೆ

'ಬೇಟಿ ಬಚಾವೋ' ಎಂಬ ಹುಸಿ ಘೋಷಣೆ ಹೊರಡಿಸಿದವರು ಈಗ 'ಅತ್ಯಾಚಾರಿಗಳ ರಕ್ಷಣೆ' ಮಾಡುತ್ತಿದ್ದಾರೆ ಎಂದು ಮೋದಿ ಸರ್ಕಾರದ ವಿರುದ್ಧ ಆರೋಪ ಮಾಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಗುಜರಾತ್ ಗಲಭೆಯ ಸಂತ್ರಸ್ತೆ ಬಿಲ್ಕಿಸ್ ಬಾನು ಅವರಿಗೆ ನ್ಯಾಯ ದೊರಕಿಸಬೇಕು ಎಂದು ಗುರುವಾರ ಆಗ್ರಹಿಸಿದ್ದಾರೆ.

ಅತ್ಯಾಚಾರಿಗಳನ್ನು ಗುಜರಾತ್ ಸರ್ಕಾರ ಸನ್ನಡತೆ ಮೇಲೆ ಬಿಡುಗಡೆ ಮಾಡಿರುವುದಕ್ಕೆ ಕಿಡಿಕಾರಿರುವ ರಾಹುಲ್ ಗಾಂಧಿ, 'ಬೇಟಿ ಬಚಾವೋ' ಹುಸಿ ಘೋಷಣೆ, 'ಅತ್ಯಾಚಾರಿಗಳ ರಕ್ಷಣೆ' ಇವರ ಧೋರಣೆ ಎಂದು ಮೋದಿ ಹೆಸರು ಉಲ್ಲೇಖಿಸದೇ ಪರೋಕ್ಷ ವಾಗ್ದಾಳಿ ಮಾಡಿದ್ದಾರೆ.

ತೀಸ್ತಾ ಜಾಮೀನು ಅರ್ಜಿ: 30ಕ್ಕೆ ವಿಚಾರಣೆ

> ಪ್ರತಿಕ್ರಿಯೆ ಸಿದ್ಧವಿದೆ, ಕೆಲವು ತಿದ್ದುಪಡಿ ಮಾಡಬೇಕು ಎನ್ನುತ್ತಿದ್ದೀರಿ. ಆದರೆ, ತೀಸ್ತಾ ಅವರು ಜೈಲಿನಲ್ಲಿದ್ದಾರೆ ಎಂಬುದು ನಿಮ್ಮ ಗಮನದಲ್ಲಿರಲಿ
> **ಸುಪ್ರೀಂ ಕೋರ್ಟ್**

ನವದೆಹಲಿ (ಪಿಟಿಐ): ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್‌ವಾಡ್ ಅವರ ಜಾಮೀನು ಅರ್ಜಿ ವಿಚಾರಣೆಯನ್ನು ಆಗಸ್ಟ್ 30ರಂದು ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ತೀಸ್ತಾ ಅವರ ಜಾಮೀನು ಅರ್ಜಿಯ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಗುಜರಾತ್ ಸರ್ಕಾರಕ್ಕೆ ಹೇಳಿತ್ತು. ಆದರೆ, ಗುಜರಾತ್ ಸರ್ಕಾರದ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ಪ್ರತಿಕ್ರಿಯೆ ಸಿದ್ಧವಿದೆ. ಕೆಲವು ತಿದ್ದುಪಡಿ ಮಾಡಬೇಕಾಗಿರುವುದರಿಂದ ಪ್ರತಿಕ್ರಿಯೆ ಸಲ್ಲಿಸಲು ಸಮಯಾವಕಾಶ ಬೇಕು' ಎಂದು ಮನವಿ ಮಾಡಿದರು.

ಪ್ರತಿಕ್ರಿಯೆಯನ್ನು ಆಗಸ್ಟ್ 27ರ ಒಳಗೆ ಸಲ್ಲಿಸಬೇಕು. ಇನ್ನಷ್ಟು ತಿದ್ದುಪಡಿಗಳಿದ್ದರೆ ಸೋಮವಾರ (ಆಗಸ್ಟ್ 29) ಸಲ್ಲಿಸಬಹುದು ಎಂದು ನ್ಯಾಯಮೂರ್ತಿಗಳಾದ ಯು.ಯು. ಲಲಿತ್, ಎಸ್.ಆರ್. ಭಟ್ ಮತ್ತು ಸುಧಾಂಶು ಧೂಲಿಯಾ ಅವರಿದ್ದ ಪೀಠವು ಮೆಹ್ತಾ ಅವರಿಗೆ ಹೇಳಿತು.

'ಇನ್ನಷ್ಟು ಕಾನೂನಾತ್ಮಕ ಸಾಧ್ಯತೆಗಳನ್ನು ಪರಿಶೀಲಿಸಬೇಕು' ಎಂದು ಮೆಹ್ತಾ ವಾದಿಸಿದರು. 'ತೀಸ್ತಾ ಅವರು ಹೆಚ್ಚುಕಾಲ ಜೈಲುವಾಸ ಅನುಭವಿಸುವುದು ತಪ್ಪಾಗುತ್ತದೆ' ಎಂದು ತೀಸ್ತಾ ಪರ ವಕೀಲ ಕಪಿಲ್ ಸಿಬಲ್ ವಾದಿಸಿದರು.

ಶಾಸಕ ರಾಜಾ ಸಿಂಗ್ ಮತ್ತೆ ಬಂಧನ

ಶುಕ್ರವಾರದ ನಮಾಜ್ ವೇಳೆ ಶಾಂತಿ ಕದಡುವ ಸಾಧ್ಯತೆ: ತೆಲಂಗಾಣ ಪೊಲೀಸ್

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಬಿಜೆಪಿ ಶಾಸಕ ರಾಜಾ ಸಿಂಗ್ ಅವರನ್ನು ಬಿಡುಗಡೆ ಮಾಡಿದ ಎರಡು ದಿನಗಳ ಒಳಗೆ ತೆಲಂಗಾಣ ಪೊಲೀಸರು ಗುರುವಾರ ಮತ್ತೊಮ್ಮೆ ಬಂಧಿಸಿದ್ದಾರೆ. ಮುನ್ನೆಚ್ಚರಿಕಾ ಕ್ರಮವಾಗಿ ಬಂಧನ ಕಾಯ್ದೆ ಅಡಿ ಅವರನ್ನು ಬಂಧಿಸಿರುವ ಪೊಲೀಸರು, ಚೆರಲಾಪಲ್ಲಿ ಕೇಂದ್ರ ಕಾರಾಗೃಹದಲ್ಲಿ ಇರಿಸಿದ್ದಾರೆ.

ಹೈದರಾಬಾದ್‌ನ ಕೋಮು ಸೂಕ್ಷ್ಮ ಪ್ರದೇಶಗಳಲ್ಲಿ ಶುಕ್ರವಾರದ ನಮಾಜ್ ಸಂದರ್ಭದಲ್ಲಿ ಸಂಘರ್ಷ ಏರ್ಪಡುವ ಅಪಾಯ ಒದೆ. ಇದರಿಂದ ನಗರದ ಕಾನೂನು ಸುವ್ಯವಸ್ಥೆ ಹದಗೆಡಬಹುದು ಎನ್ನುವ ಕಾರಣಕ್ಕಾಗಿ ರಾಜಾ ಸಿಂಗ್ ಅವರನ್ನು ಗುರುವಾರವೇ ಬಂಧಿಸಲಾಗಿದೆ. ಮುಸ್ಲಿಂ ಜನಸಂಖ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ ಪ್ರತಿಭಟನೆಗಳು ಹೆಚ್ಚಾಗಿರುವ ಕುರಿತು ವರದಿಗಳಾಗಿವೆ.

'ನಗರದಲ್ಲಿ ಉದ್ಭವಿಸಿರುವ ಕೋಮು ಸಂಘರ್ಷದ ಪರಿಸ್ಥಿತಿಗೆ ರಾಜಾ ಸಿಂಗ್ ಅವರ ಪ್ರಚೋದನಾಕಾರಿ ಭಾಷಣವೇ ಕಾರಣ. ಆದಷ್ಟು ಬೇಗ ಅವರನ್ನು ಬಂಧಿಸಬೇಕು' ಎಂದು ಎಐಎಂಐಎಂನ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಟ್ವೀಟ್ ಮಾಡಿದ್ದರು.

ವಿಡಿಯೊ ಬಿಡುಗಡೆ: ಮಾಧ್ಯಮಗಳ ಮುಂದೆ ಹೇಳಿಕೆ ನೀಡುವುದಕ್ಕೆ ನ್ಯಾಯಾಲಯ ನಿರ್ಬಂಧ ಹೇರಿದ್ದರೂ, ಬಿಜೆಪಿ ಶಾಸಕ ರಾಜಾ ಸಿಂಗ್ ಅವರು ಗುರುವಾರ ಮತ್ತೊಂದು ವಿಡಿಯೊವೊಂದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಬಂಧನಕ್ಕೂ ಕೆಲವು ಗಂಟೆಗಳ ಮೊದಲು ವಿಡಿಯೊ ಹಂಚಿಕೊಂಡಿರುವ ರಾಜ್ ಸಿಂಗ್, 'ಮಾಧ್ಯಮದ ಮುಂದೆ ಮಾತನಾಡದಂತೆ ನ್ಯಾಯಾಲಯ ನನಗೆ ಹೇಳಿದೆ. ಆದರೂ, ಅಪಾಯವನ್ನು ಲೆಕ್ಕಿಸದೇ ನಾನು ಈ ದಿನ ನಿಮ್ಮ ಮುಂದೆ ಬಂದಿದ್ದೇನೆ. ನಗರದ ಪರಿಸ್ಥಿತಿಯು ನನ್ನನ್ನು ನಿಮ್ಮ ಮುಂದೆ ಬರುವಂತೆ ಮಾಡಿತು. ರಾಷ್ಟ್ರ ಮಟ್ಟದ ಮಾಧ್ಯಮಗಳು ಸತ್ಯವನ್ನು ಸರಿಯಾಗಿ ತೋರಿಸುತ್ತಿಲ್ಲ' ಎಂದು ದೂರಿದ್ದಾರೆ.

'ತೆಲಂಗಾಣ ಪೊಲೀಸರು ಅಸಾದುದ್ದೀನ್ ಒವೈಸಿ ಅವರ ಕೈಗೊಂಬೆಯಾಗಿದ್ದಾರೆ. ಕಲ್ಲು ತೂರಾಟ ನಡೆಸಲು ಒವೈಸಿ ಬೆಂಬಲಿಗರಿಗೆ ಸ್ವಾತಂತ್ರ್ಯ ನೀಡಲಾಗಿದೆ. ಅವರ ವಿರುದ್ಧ ಎಫ್‌ಐಆರ್ ಅಥವಾ ಯಾವುದೇ ಪ್ರಕರಣ ದಾಖಲಾಗುವುದಿಲ್ಲ' ಎಂದು ಹೇಳಿದ್ದಾರೆ.

'ನಗರವು ಯಾಕಾಗಿ ಇಂದು ಇಂಥ ಕೋಮುದ್ವೇಷದ ವಾತಾವರಣದಲ್ಲಿದೆ' ಎಂದು ಸಚಿವ ರಾಮರಾವ್, ಗೃಹ ಸಚಿವ ಮಹಮ್ಮದ್ ಅಲಿ ಅವರನ್ನು ರಾಜಾ ಸಿಂಗ್ ಪ್ರಶ್ನಿಸಿದ್ದಾರೆ. ಒವೈಸಿ ಜೊತೆ ಸೇರಿ ಟಿಆರ್‌ಎಸ್ ಮುಸ್ಲಿಂ ಓಲೈಕೆ ರಾಜಕಾರಣ ಮಾಡುತ್ತಿದೆ' ಎಂದಿದ್ದಾರೆ.

ಪ್ರವಾದಿ ಮಹಮ್ಮದರ ಕುರಿತು ಪ್ರಚೋದನಕಾರಿ ಮಾತುಗಳನ್ನಾಡಿದ ವಿಡಿಯೊವೊಂದನ್ನು ಸೋಮವಾರ ರಾಜಾ ಸಿಂಗ್ ಅವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. ಇದಕ್ಕಾಗಿ ಭಾರಿ ವಿರೋಧ ವ್ಯಕ್ತವಾಗಿತ್ತು. ನಂತರ ಮಂಗಳವಾರ ಬೆಳಿಗ್ಗೆ ಅವರನ್ನು ಬಂಧಿಸಲಾಗಿತ್ತು. ಸುಪ್ರೀಂ ಕೋರ್ಟ್‌ನ ಮಾರ್ಗಸೂಚಿಯನ್ನು ಅನುಸರಿಸದೇ ರಾಜಾ ಸಿಂಗ್ ಅವರನ್ನು ಬಂಧಿಸಲಾಗಿದೆ ಎಂದು ಸ್ಥಳೀಯ ನ್ಯಾಯಾಲಯ ಅವರಿಗೆ ಮಂಗಳವಾರವೇ ಜಾಮೀನು ನೀಡಿತ್ತು.

ಕಾರ್ಯಕ್ರಮಕ್ಕೆ ಅನುಮತಿ: ನೆಟ್ಟಿಗರ ವಿರೋಧ

ಮುಸ್ಲಿಂ ಜನಸಂಖ್ಯೆ ಹೆಚ್ಚಿರುವ ಹೈದರಾಬಾದ್‌ನ ಪ್ರದೇಶಗಳಲ್ಲಿ ಪ್ರತಿಭಟನೆಗಳು ಹೆಚ್ಚುತ್ತಿದ್ದಂತೆಯೇ, ಬುಧವಾರ ಸರಣಿ ಟ್ವೀಟ್ ಮಾಡಿದ ಸಚಿವ ಕೆ.ಟಿ. ರಾಮರಾವ್, 'ಶಾಂತಿಯಿಂದಿದ್ದ ತೆಲಂಗಾಣವನ್ನು ಬಿಜೆಪಿಯು ಕೋಮು ದ್ವೇಷದಿಂದ ಹೊತ್ತಿ ಉರಿಯುವಂತೆ ಮಾಡುತ್ತಿದೆ' ಎಂದಿದ್ದರು.

'ಪ್ರಧಾನಿ ಮೋದಿ ಅವರು ಹರ್ ಘರ್, ಹರ್ ದಿಲ್ ಮೆ ಜೆಹೆರ್ (ಪ್ರತಿ ಮನೆ, ಮನಗಳಲ್ಲೂ ವಿಷ) ತುಂಬುತ್ತಿದ್ದಾರೆ' ಎಂದಿದ್ದರು.

ಕೆಟಿಆರ್ ಟ್ವೀಟ್‌ಗಳಿಗೆ ಪ್ರತಿಕ್ರಿಯಿಸಿರುವ ನೆಟ್ಟಿಗರು, ಹಾಸ್ಯ ಕಲಾವಿದ ಮುನವ್ವರ್ ಫಾರೂಕಿ ಅವರ ಕಾರ್ಯಕ್ರಮಕ್ಕೆ ಸರ್ಕಾರವು ಅನುಮತಿ ನೀಡಿದ್ದರ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು.

'ಹಿಂದೂ ದೇವತೆಗಳನ್ನು ಹಾಸ್ಯ ಮಾಡುವ ಕಾರ್ಯಕ್ರಮಕ್ಕೆ ಹೆಚ್ಚಿನ ಭದ್ರತೆಯನ್ನೂ ಒದಗಿಸಿ, ನಿಮ್ಮ ಸರ್ಕಾರ ಅನುಮತಿ ನೀಡಿತು. ಇದನ್ನೇ ಹಿಂದೂಗಳು ಮಾಡಿದರೆ ತಪ್ಪಾಗುತ್ತದೆಯೇ? ಇದು ಯಾವ ನ್ಯಾಯ?' ಎಂದು ಆದಿ ಜಾಂಬವ ಎನ್ನುವವರು ಟ್ವೀಟ್ ಮಾಡಿದ್ದಾರೆ.

101 ಕ್ರಿಮಿನಲ್ ಪ್ರಕರಣಗಳು

2004ರಿಂದ ಇಲ್ಲಿಯವರೆಗೂ ಶಾಸಕ ರಾಜಾ ಸಿಂಗ್ ಅವರ ವಿರುದ್ಧ 101 ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ಕೋಮು ಸಂಘರ್ಷದ 18 ಪ್ರಕರಣಗಳಲ್ಲಿ ಇವರು ಭಾಗಿಯಾಗಿದ್ದಾರೆ ಎಂದು ತೆಲಂಗಾಣ ಪೊಲೀಸರು ಮಾಹಿತಿ ನೀಡಿದ್ದಾರೆ.

ರಾಜಾ ಸಿಂಗ್ ಅವರು ಮಂಗಲ್‌ಹಾಟ್ ಪೊಲೀಸ್ ಠಾಣೆಯ ರೌಡಿ ಪಟ್ಟಿಯಲ್ಲಿದ್ದಾರೆ. ಸಮಾಜದಲ್ಲಿ ಶಾಂತಿ ಕದಡುವ, ಕೋಮು ಸಂಘರ್ಷಕ್ಕೆ ಎಡೆಮಾಡುವಂಥ ಪ್ರಚೋದನಕಾರಿ, ಉದ್ರಿಕ್ತ ಹೇಳಿಕೆಗಳನ್ನು ಅವರು ಈ ಮೊದಲಿನಿಂದಲೂ ಕೊಡುತ್ತಾ ಬಂದಿದ್ದಾರೆ ಎಂದಿದ್ದಾರೆ.

ರಾಜಾ ಸಿಂಗ್

ದೋಣಿ ಸ್ಪರ್ಧೆ ..! ಅಸ್ಸಾಂನ ಕಾಮರೂಪ ಜಿಲ್ಲೆಯ ಹಾಜೊದಲ್ಲಿ ಗುರುವಾರ ಯುವಕರು ಸಾಂಪ್ರದಾಯಿಕ ದೋಣಿ ಸ್ಪರ್ಧೆಯಲ್ಲಿ ಪಾಲ್ಗೊಂಡರು – ಪಿಟಿಐ ಚಿತ್ರ

'ಹಲೊ' ಬದಲು 'ವಂದೇ ಮಾತರಂ' ಕಡ್ಡಾಯ

ಪುಣೆ (ಪಿಟಿಐ): ಅಧಿಕೃತ ಕೆಲಸಕ್ಕೆ ಸಂಬಂಧಿಸಿದ ದೂರವಾಣಿ ಕರೆಗಳಿಗೆ ಉತ್ತರಿಸುವ ಮೊದಲು ಹಲೊ ಬದಲು 'ವಂದೇ ಮಾತರಂ' ಎಂಬುದಾಗಿ ಹೇಳಬೇಕು ಎಂದು ಮಹಾರಾಷ್ಟ್ರ ಸರ್ಕಾರದ ಅರಣ್ಯ ಇಲಾಖೆ ಗುರುವಾರ ಆದೇಶ ಹೊರಡಿಸಿದೆ.

ಸಂಸ್ಕೃತಿ ಮತ್ತು ಅರಣ್ಯ ಸಚಿವ ಸುಧೀರ್ ಮುಂಗಂಟಿವಾರ್ ಅವರು, ಕಚೇರಿಗಳಲ್ಲಿ ದೂರವಾಣಿ ಕರೆಗಳನ್ನು ಸ್ವೀಕರಿಸುವಾಗ 'ಹಲೊ' ಬದಲಿಗೆ 'ವಂದೇ ಮಾತರಂ' ಹೇಳುವಂತೆ ಎಲ್ಲಾ ಸರ್ಕಾರಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಬೆನ್ನಲ್ಲೇ ಈ ಆದೇಶ ಹೊರಡಿಸಲಾಗಿದೆ.

ಪ್ರಧಾನಿ ಭದ್ರತಾ ಲೋಪಕ್ಕೆ ಪೊಲೀಸ್ ವೈಫಲ್ಯ ಕಾರಣ: ನ್ಯಾ.ಮಲ್ಹೋತ್ರಾ ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಜನವರಿಯಲ್ಲಿ ಪಂಜಾಬ್‌ಗೆ ಭೇಟಿ ನೀಡಿದ್ದಾಗ ಉಂಟಾದ ಭದ್ರತಾ ಲೋಪಕ್ಕೆ ಅಲ್ಲಿನ ರಾಜ್ಯ ಪೊಲೀಸ್ ವೈಫಲ್ಯವೇ ಕಾರಣ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಇಂದೂ ಮಲ್ಹೋತ್ರಾ ನೇತೃತ್ವದ ಸಮಿತಿ ತಿಳಿಸಿದೆ.

ಈ ಕುರಿತ ವರದಿಯನ್ನು ಸುಪ್ರೀಂಕೋರ್ಟ್‌ಗೆ ಸಲ್ಲಿಸಿರುವ ಸಮಿತಿಯು, 'ಪ್ರಧಾನಿಗೆ ಸೂಕ್ತ ಭದ್ರತೆ ಒದಗಿಸುವಲ್ಲಿ ಫಿರೋಜ್‌ಪುರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರ್ಮನ್‌ದೀಪ್ ಸಿಂಗ್ ಹನ್ಸ್ ಅವರು ವಿಫಲರಾಗಿದ್ದಾರೆ' ಎಂದು ವರದಿಯಲ್ಲಿ ಉಲ್ಲೇಖಿಸಿದೆ.

ದೇಶದ ಗಣ್ಯರ (ವಿವಿಐಪಿ) ಭದ್ರತೆ ಕುರಿತ ಮಾರ್ಗಸೂಚಿಗಳ ಸಂಗ್ರಹವಾಗಿರುವ 'ಬ್ಲೂ ಬುಕ್' ಅನ್ನು ನಿಯಮಿತವಾಗಿ ಪರಿಷ್ಕರಿಸಲು ಮೇಲುಸ್ತುವಾರಿ ಸಮಿತಿ ಇರಬೇಕು ಎಂದು ಸಮಿತಿ ಸೂಚಿಸಿದೆ.

'ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರ್ಮನ್‌ದೀಪ್ ಸಿಂಗ್ ಹನ್ಸ್ ಅವರು ತಮ್ಮ ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ. ಅಲ್ಲದೆ ಸಾಕಷ್ಟು ಸಮಯ ಇದ್ದರೂ ಅಗತ್ಯ ಭದ್ರತೆ ಒದಗಿಸುವಲ್ಲೂ ಅವರು ವಿಫಲರಾಗಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ' ಎಂದು ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ತಿಳಿಸಿದರು.

ಈ ಕುರಿತು ಅಗತ್ಯ ಕ್ರಮಕ್ಕಾಗಿ ವರದಿಯನ್ನು ಸರ್ಕಾರಕ್ಕೆ ಕಳುಹಿಸಲು ಸುಪ್ರೀಂಕೋರ್ಟ್ ಆದೇಶಿಸಿತು.

'ಲಾಯರ್ಸ್ ವಾಯ್ಸ್' ಎನ್‌ಜಿಒ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಜನವರಿ 15ರಂದು ನಡೆಸಿದ್ದ ಸುಪ್ರೀಂಕೋರ್ಟ್, ಪ್ರಧಾನಿ ಮೋದಿ ಅವರ ಪಂಜಾಬ್ ಭೇಟಿ ವೇಳೆ ಆದ ಭದ್ರತಾ ಲೋಪ ಕುರಿತ ತನಿಖೆಗೆ ನ್ಯಾ. ಮಲ್ಹೋತ್ರಾ ನೇತೃತ್ವದ ಸಮಿತಿಯನ್ನು ರಚಿಸಿತ್ತು.

ಪ್ರಧಾನಿ ಅವರು ಜನವರಿ 5ರಂದು ಫಿರೋಜ್‌ಪುರ ಜಿಲ್ಲೆಗೆ ಭೇಟಿ ನೀಡಿದ್ದಾಗ ಅವರ ಬೆಂಗಾವಲು ಪಡೆ ಸುಮಾರು 20 ನಿಮಿಷಗಳ ಕಾಲ ಮೇಲ್ಸೇತುವೆಯಲ್ಲಿ ಸಿಲುಕಿಕೊಂಡಿತ್ತು. ಇದು ದೊಡ್ಡ ಪ್ರಮಾಣದ ಭದ್ರತಾ ಲೋಪ ಎಂಬ ಆರೋಪ ವ್ಯಕ್ತವಾಗಿತ್ತು.

ಅಗ್ನಿಪಥ: ತಡೆಯಾಜ್ಞೆಗೆ ದೆಹಲಿ ಹೈಕೋರ್ಟ್ ನಕಾರ

ನವದೆಹಲಿ: ಸಶಸ್ತ್ರ ಪಡೆಗಳಿಗೆ ನೇಮಕಾತಿ ನಡೆಸಲು ಕೇಂದ್ರ ಸರ್ಕಾರ ಪ್ರಕಟಿಸಿರುವ ಅಗ್ನಿಪಥ ಯೋಜನೆಗೆ ತಡೆಯಾಜ್ಞೆ ನೀಡಲು ದೆಹಲಿ ಹೈಕೋರ್ಟ್ ಗುರುವಾರ ನಿರಾಕರಿಸಿದೆ.

ಈ ಯೋಜನೆ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳಿಗೆ ನಾಲ್ಕು ವಾರಗಳೊಳಗೆ ಪ್ರತಿಕ್ರಿಯಿಸುವಂತೆ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಮತ್ತು ನ್ಯಾಯಮೂರ್ತಿ ಸುಬ್ರಮಣಿಯಂ ಪ್ರಸಾದ್ ಅವರಿದ್ದ ಪೀಠವು ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಅರ್ಜಿಗಳಿಗೆ ಕ್ರೋಡೀಕೃತ ಉತ್ತರ ಸಲ್ಲಿಸಲು ಮತ್ತು ಅಗ್ನಿಪಥ ಯೋಜನೆ ಪ್ರಕಟಿಸುವ ಮೊದಲು ಸೇನೆ, ನೌಕಾಪಡೆ ಮತ್ತು ವಾಯುಪಡೆಗಳು ನೀಡಿದ್ದ ಜಾಹೀರಾತುಗಳಿಗೆ ಅನುಗುಣವಾಗಿ ನಡೆಯುತ್ತಿರುವ ನೇಮಕಾತಿ ಪ್ರಕ್ರಿಯೆಗಳನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳಿಗೆ ಪ್ರತ್ಯೇಕವಾಗಿ ಪ್ರತಿಕ್ರಿಯೆ ನೀಡುವಂತೆ ನ್ಯಾಯಾಲಯವು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿದೆ.

ಅರ್ಜಿಗಳ ವಿಚಾರಣೆ ಪೂರ್ಣಗೊಳ್ಳುವವರೆಗೆ ಯೋಜನೆಗೆ ತಡೆಯಾಜ್ಞೆ ನೀಡಬೇಕೆಂದು ಅರ್ಜಿದಾರರೊಬ್ಬರ ವಕೀಲರು ನ್ಯಾಯಾಲಯವನ್ನು ಕೋರಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಲಯವು, ಮಧ್ಯಂತರ ಆದೇಶ ನೀಡಲು ಸಾಧ್ಯವಿಲ್ಲ ಎಂದು ತಡೆಯಾಜ್ಞೆಗೆ ನಿರಾಕರಿಸಿತು.

ಸೋನಾಲಿ ಸಾವಿನ ಪ್ರಕರಣ: ಇಬ್ಬರು ಸಿಬ್ಬಂದಿ ಬಂಧನ

ಪ್ರಜಾವಾಣಿ ವಾರ್ತೆ

ಪಣಜಿ: ಹರಿಯಾಣ ಬಿಜೆಪಿ ನಾಯಕಿ ಸೋನಾಲಿ ಪೋಗಾಟ್ ಸಾವಿನ ಪ್ರಕರಣ ಸಂಬಂಧ ಆಕೆಯ ಇಬ್ಬರು ಸಿಬ್ಬಂದಿಗಳಾದ ಸುಧೀರ್ ಸಂಗ್ವಾನ್ ಮತ್ತು ಸುಖ್ವಿಂದರ್ ಸಿಂಗ್ ಅವರನ್ನು ಗೋವಾ ಪೊಲೀಸರು ಗುರುವಾರ ಬಂಧಿಸಿದ್ದಾರೆ. ಅವರ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿದೆ.

ಸೋನಾಲಿ ಅವರ ದೇಹದ ಮೇಲೆ ಮೊಂಡು ವಸ್ತುವಿನಿಂದ ಹಲವು ಬಾರಿ ಹೊಡೆದ ಗಾಯಗಳಿವೆ ಎಂದು ಗುರುವಾರ ಬಂದಿರುವ ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಹೇಳಲಾಗಿದೆ.

'ಸೋನಾಲಿ ಸಾವಿನ ಪ್ರಕರಣದ ತನಿಖೆಗೆ ಡಿಜಿಪಿ ಜಸ್ವಂತ್ ಸಿಂಗ್ ಅವರಿಗೆ ಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ' ಎಂದು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಿದ್ದಾರೆ. ಕುಟುಂಬದವರು ಬಯಸಿದರೆ ಪ್ರಕರಣವನ್ನು ಸಿಬಿಐಗೆ ವಹಿಸುವುದಾಗಿ ಹರಿಯಾಣ ಮುಖ್ಯಮಂತ್ರಿ ಮನೋಹರ್ ಲಾಲ್ ಕಟ್ಟರ್ ಚಂಡೀಗಡದಲ್ಲಿ ಹೇಳಿದ್ದಾರೆ.

'ನನ್ನ ಸಹೋದರಿಯನ್ನು ಆಕೆಯ ಇಬ್ಬರು ಸಿಬ್ಬಂದಿಗಳೇ ಕೊಲೆ ಮಾಡಿದ್ದಾರೆ' ಎಂದು ಸೋನಾಲಿ ಅವರ ಸಹೋದರ ರಿಂಕು ಧಾಕ ಬುಧವಾರ ಗೋವಾ ಪೊಲೀಸರಿಗೆ ದೂರು ನೀಡಿದ್ದರು.

ಉರಿ ಗಡಿಯಲ್ಲಿ ಒಳನುಸುಳಲು ಯತ್ನ: ಮೂವರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಉರಿ ವಲಯದ ಗಡಿ ನಿಯಂತ್ರಣ ರೇಖೆಯ ಬಳಿ (ಎಲ್‌ಒಸಿ) ಒಳನುಸುಳಲು ಯತ್ನಿಸಿದ ಮೂವರು ಉಗ್ರರನ್ನು ಯೋಧರು ಹತ್ಯೆ ಮಾಡಿದ್ದಾರೆ ಎಂದು ಸೇನೆಯ ವಕ್ತಾರರು ಗುರುವಾರ ತಿಳಿಸಿದ್ದಾರೆ.

ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಕಮಲ್‌ಕೋಟ್ ಪ್ರದೇಶದಲ್ಲಿ ಉಗ್ರರು ಒಳನುಸುಳಲು ಯತ್ನಿಸಿದಾಗ ಯೋಧರು ಗುಂಡಿನ ದಾಳಿ ನಡೆಸಿದ್ದಾರೆ. ಈ ವೇಳೆ ನುಸುಳುಕೋರರು ಹತರಾಗಿದ್ದಾರೆ ಎಂದೂ ಹೇಳಿದ್ದಾರೆ.

'ಉಗ್ರರು ಒಳನುಸುಳಲು ಯತ್ನಿಸಿದ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗಿದೆ. ಈ ವೇಳೆ ಮೂವರು ಉಗ್ರರ ಮೃತದೇಹಗಳು ಸಿಕ್ಕಿವೆ. ಎರಡು ಎ.ಕೆ. ರೈಫಲ್‌ಗಳು ಮತ್ತು ಒಂದು ಚೀನಾ ನಿರ್ಮಿತ ಎಂ–16 ರೈಫಲ್ ಪತ್ತೆಯಾಗಿದೆ' ಎಂದಿದ್ದಾರೆ.

ಕಟ್ಟುಕತೆಗಳ ಪ್ರಚಾರದ ವಿರುದ್ಧ ಕ್ರಮ: ಗಡ್ಕರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಕೀಯ ಲಾಭಕ್ಕಾಗಿ ತನ್ನ ವಿರುದ್ಧ ದುರುದ್ದೇಶಪೂರಿತ ಮತ್ತು ಕಟ್ಟುಕತೆಗಳನ್ನು ಹಬ್ಬಿಸುತ್ತಿರುವ ವಿರೋಧಿಗಳಿಗೆ ಎಚ್ಚರಿಕೆ ನೀಡಿರುವ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು, ಕಾನೂನು ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಸರಣಿ ಟ್ವೀಟ್‌ಗಳನ್ನು ಮಾಡಿರುವ ಅವರು, 'ಕೆಲವರು ರಾಜಕೀಯ ಲಾಭಕ್ಕಾಗಿ ನನ್ನ ವಿರುದ್ಧ ದುರುದ್ದೇಶದಿಂದ ಕಟ್ಟುಕತೆ ಪ್ರಚುರಪಡಿಸುತ್ತಿದ್ದಾರೆ. ಈ ಕಾರ್ಯದಲ್ಲಿ ಮುಖ್ಯ ವಾಹಿನಿಯಲ್ಲಿರುವ ಕೆಲ ಮಾಧ್ಯಮಗಳು, ಸಾಮಾಜಿಕ ಮಾಧ್ಯಮಗಳೂ ಸೇರಿವೆ. ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ನಾನು ನೀಡಿದ ಹೇಳಿಕೆಗಳನ್ನು ಸರಿಯಾದ ಉಲ್ಲೇಖವಿಲ್ಲದೆ ತಿರುಚುತ್ತಿವೆ' ಎಂದು ಅವರು ದೂರಿದ್ದಾರೆ.

'ಈ ರೀತಿ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಸರ್ಕಾರ ಮತ್ತು ಪಕ್ಷದ ಹಿತದೃಷ್ಟಿಯಿಂದ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವುದಾಗಿ' ಅವರು ಹೇಳಿದ್ದಾರೆ. ಈ ಕುರಿತ ತನ್ನ ಟ್ವೀಟ್ ಅನ್ನು ಅವರು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಪ್ರಧಾನಿ ಕಚೇರಿಗೆ (ಪಿಎಂಒ) ಟ್ಯಾಗ್ ಮಾಡಿದ್ದಾರೆ. ಕಳೆದ ವಾರವಷ್ಟೇ ಬಿಜೆಪಿ ಸಂಸದೀಯ ಮಂಡಳಿಯಿಂದ ಅವರನ್ನು ಕೈಬಿಡಲಾಗಿತ್ತು.

ನಾಗ್ಪುರದಲ್ಲಿ ನಡೆದ ರಾಷ್ಟ್ರೀಯ ವಯೋಶ್ರೀ ಯೋಜನೆಯಡಿ ಸಾಧನಗಳ ವಿತರಣಾ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಮತ್ತು ಸಮಾಜ ಕಲ್ಯಾಣ ಸಚಿವ ವೀರೇಂದ್ರ ಕುಮಾರ್ ಪಾಲ್ಗೊಂಡಿದ್ದರು ಪಿಟಿಐ ಚಿತ್ರ

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಪ್ರಶಸ್ತಿ ಪ್ರಕಟ

ರಾಮಚಂದ್ರ, ಗೀತಾಗೆ 'ಕರ್ನಾಟಕ ಕಲಾಶ್ರೀ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು 2022–23ನೇ ಸಾಲಿನ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿಗಳನ್ನು ಪ್ರಕಟಿಸಿದ್ದು, 'ಗೌರವ ಪ್ರಶಸ್ತಿ'ಗೆ ಚನ್ನರಾಯಪಟ್ಟಣದ ಗಾಯಕ ಸಿ.ಆರ್. ರಾಮಚಂದ್ರ, ಮಂಗಳೂರಿನ ನೃತ್ಯ ಗುರು ಗೀತಾ ಸರಳಾಯ ಆಯ್ಕೆಯಾಗಿದ್ದಾರೆ.

ಇಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅಕಾಡೆಮಿ ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ ಅವರು ಪಟ್ಟಿ ಬಿಡುಗಡೆ ಮಾಡಿದರು. ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ನೃತ್ಯ ಸೇರಿದಂತೆ ಏಳು ವಿಭಾಗಗಳಿಂದ 16 ಕಲಾವಿದರು ವಾರ್ಷಿಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಗೌರವ ಪ್ರಶಸ್ತಿಯು ತಲಾ ₹50 ಸಾವಿರ ಹಾಗೂ ವಾರ್ಷಿಕ ಪ್ರಶಸ್ತಿ ತಲಾ ₹25 ಸಾವಿರ ನಗದು ಬಹುಮಾನ ಹೊಂದಿದೆ.

'ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಸೆಪ್ಟೆಂಬರ್ ಕೊನೆಯ ವಾರ ಹಮ್ಮಿಕೊಳ್ಳಲಾಗುವುದು' ಎಂದರು.

ಪ್ರಶಸ್ತಿಗೆ ಆಯ್ಕೆಯಾದವರು

ಕರ್ನಾಟಕ ಸಂಗೀತ
1. ಸಿ.ಎ. ನಾಗರಾಜ, ಮೈಸೂರು (ಹಾಡುಗಾರಿಕೆ)
2. ಎಂ. ನಾರಾಯಣ, ಮಂಗಳೂರು (ಹಾಡುಗಾರಿಕೆ)
3. ಪಿ.ಕೆ. ದಾಮೋದರಂ, ಪುತ್ತೂರು (ಸ್ಯಾಕ್ಸೋಫೋನ್)

ಹಿಂದೂಸ್ತಾನಿ ಸಂಗೀತ
1. ಎಂ.ಪಿ. ಹೆಗಡೆ ಪಡಿಗೆರೆ, ಶಿರಸಿ (ಗಾಯನ)
2. ಮಹಾದೇವಪ್ಪ ನಿಂಗಪ್ಪ ಹಳ್ಳಿ, ಗದಗ (ಗಾಯನ)
3. ಹನುಮಂತಪ್ಪ ಬ. ತಿಮ್ಮಾಪೂರ, ಹಾವೇರಿ (ವಯಲಿನ್)
4. ಫಯಾಜ್ ಖಾನ್, ಬೆಂಗಳೂರು (ಸಾರಂಗಿ/ಗಾಯನ)

ನೃತ್ಯ
1. ರೋಹಿಣಿ ಇಮಾರತಿ, ಧಾರವಾಡ
2. ಪುಷ್ಪ ಕೃಷ್ಣಮೂರ್ತಿ, ಶಿವಮೊಗ್ಗ
3. ಪುರುಷೋತ್ತಮ, ಬೆಂಗಳೂರು

ಸುಗಮ ಸಂಗೀತ
1. ಸಿದ್ರಾಮಪ್ಪ ಪೊಲೀಸ್ ಪಾಟೀಲ್, ಕಲಬುರ್ಗಿ
2. ಮಧುರಾ ರವಿಕುಮಾರ್, ಬೆಂಗಳೂರು

ಕಥಾಕೀರ್ತನ
1. ಶೀಲಾ ನಾಯ್ಡು, ಬೆಂಗಳೂರು

ಎಂ.ಪಿ.ಹೆಗಡೆ; ಫಯಾಜ್ ಖಾನ್; ಪ್ರವೀಣ್ ಡಿ. ರಾವ್; ರೋಹಿಣಿ ಇಮಾರತಿ; ಸಿ.ಆರ್. ರಾಮಚಂದ್ರ; ಗೀತಾ ಸರಳಾಯ

ಗಮಕ
1. ಅನಂತ ನಾರಾಯಣ, ಹೊಸಹಳ್ಳಿ
2. ಚಂದ್ರಶೇಖರ ಕೆದಿಲಾಯ, ಉಡುಪಿ

ವಿಶೇಷ ಪ್ರಶಸ್ತಿ
1. ಪ್ರವೀಣ್ ಡಿ. ರಾವ್, ಬೆಂಗಳೂರು (ವಾದಕರು, ಸಂಯೋಜಕರು)

ಪ್ರಣಯ್‌ಗೆ ಮಣಿದ ಸೇನ್

ವಿಶ್ವ ಬ್ಯಾಡ್ಮಿಂಟನ್: ಡಬಲ್ಸ್ ಕ್ವಾರ್ಟರ್‌ಗೆ ಧ್ರುವ–ಅರ್ಜುನ್, ಸೈನಾಗೆ ನಿರಾಸೆ

ಟೋಕಿಯೊ (ಪಿಟಿಐ): ಭಾರತದ ಎಚ್.ಎಸ್. ಪ್ರಣಯ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನಲ್ಲಿ ತಮ್ಮ ಸಹ ಆಟಗಾರ ಲಕ್ಷ್ಯ ಸೇನ್ ಅವರನ್ನು ಸೋಲಿಸಿ ಎಂಟರ ಘಟ್ಟ ಪ್ರವೇಶಿಸಿದರು. ಪುರುಷರ ಡಬಲ್ಸ್‌ನಲ್ಲಿ ಧ್ರುವ ಕಪಿಲ ಹಾಗೂ ಎಂ.ಆರ್. ಅರ್ಜುನ್ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಆದರೆ ಒಲಿಂಪಿಯನ್ ಪದಕ ವಿಜೇತೆ ಸೈನಾ ನೆಹ್ವಾಲ್ ಅವರು ಮಹಿಳೆಯರ ಸಿಂಗಲ್ಸ್‌ನಲ್ಲಿ ನಿರಾಶೆ ಅನುಭವಿಸಿದರು.

ಗುರುವಾರ ನಡೆದ ಪ್ರೀಕ್ವಾರ್ಟ-ರ್‌ಫೈನಲ್‌ನಲ್ಲಿ ಪ್ರಣಯ್ 17–21, 21–16, 21–17ರಿಂದ ಲಕ್ಷ್ಯ ವಿರುದ್ಧ ಗೆದ್ದರು. ಒಂದು ಗಂಟೆ, 15 ನಿಮಿಷಗಳವರೆಗೆ ನಡೆದ ಪಂದ್ಯದಲ್ಲಿ ಭಾರತದ ಇಬ್ಬರೂ ಆಟಗಾರರ ನಡುವೆ ತುರುಸಿನ ಪೈಪೋಟಿ ಕಂಡುಬಂದಿತು.

ಮೊದಲ ಗೇಮ್‌ನಲ್ಲಿ ಲಕ್ಷ್ಯ ವೇಗದ ಸರ್ವ್ ಹಾಗೂ ರಿಟರ್ನ್‌ಗಳ ಆಟವಾಡಿದರು. ಸ್ಮ್ಯಾಷ್‌ಗಳ ಮೂಲಕ ಪಾಯಿಂಟ್‌ಗಳನ್ನು ಹೆಕ್ಕಿದರು. ಆದರೆ ಎರಡು ಮತ್ತು ಮೂರನೇ ಗೇಮ್‌ನಲ್ಲಿ ಶ್ರೇಯಾಂಕರಹಿತ ಆಟಗಾರ ಪ್ರಣಯ್ ಮೇಲುಗೈ ಸಾಧಿಸಿದರು. ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್‌ನಲ್ಲಿ ಇಬ್ಬರೂ ಆಟಗಾರರು ನಾಲ್ಕು ಬಾರಿ ಮುಖಾಮುಖಿಯಾಗಿದ್ದಾರೆ. 2–2ರ ಸಮಬಲ ಸಾಧಿಸಿದ್ದಾರೆ.

ಎಂಟರ ಘಟ್ಟದಲ್ಲಿ ಪ್ರಣಯ್ ಅವರು ಚೀನಾದ ಝಾವೊ ಜುನ್ ಪೆಂಗ್ ವಿರುದ್ಧ ಸೆಣಸುವರು.

ಟೋಕಿಯೊದಲ್ಲಿ ನಡೆಯುತ್ತಿರುವ ವಿಶ್ವ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಎಚ್‌.ಎಸ್‌. ಪ್ರಣಯ್ ಆಟ –ಎಎಫ್‌ಪಿ ಚಿತ್ರ

ಮಹಿಳೆಯರ ಸಿಂಗಲ್ಸ್‌ನಲ್ಲಿ 32 ವರ್ಷದ ಸೈನಾ 17–21, 21–16, 13–21ರಿಂದ ಥಾಯ್ಲೆಂಡ್‌ನ ಬುಸಾನನ್ ಒಂಗ್ಬಾಮ್ರುಂಗಪನ್ ವಿರುದ್ಧ ಸೋಲನುಭವಿಸಿದರು.

ಮುಖ್ಯಾಂಶಗಳು
- ಪ್ರಣಯ್‌ಗೆ 17–21, 21–16, 21–17 ರಲ್ಲಿ ಗೆಲುವು
- ಮುಂದಿನ ಎದುರಾಳಿ ಚೀನಾದ ಝಾವೊ ಜುನ್ ಪೆಂಗ್
- ಸಾತ್ವಿಕ್ –ಚಿರಾಗ್ ಜೋಡಿಗೆ ಜಯ

ಪುರುಷರ ಡಬಲ್ಸ್‌ನಲ್ಲಿ ಧ್ರುವ ಮತ್ತು ಅರ್ಜುನ್ ಜೋಡಿಯು 18–21, 21–15, 21–16ರಿಂದ ಸಿಂಗಪುರದ ಟೆರಿ ಹೀ ಹಾಗೂ ಕೀನ್ ಹೀನ್ ಜೋಡಿಯ ವಿರುದ್ಧ ಜಯಿಸಿದರು.

ಕ್ವಾರ್ಟರ್‌ಫೈನಲ್‌ನಲ್ಲಿ ಧ್ರುವ-ಅರ್ಜುನ್ ಇಂಡೋನೇಷ್ಯಾದ ಮೂರನೇ ಶ್ರೇಯಾಂಕದ ಮೊಹಮ್ಮದ್ ಅಹಸಾನ್ ಮತ್ತು ಹೆಂದ್ರಾ ಸೆತಿಯವಾನ್ ಜೋಡಿಯನ್ನು ಎದುರಿಸಲಿದ್ದಾರೆ.

ಇದೇ ವಿಭಾಗದ ಇನ್ನೊಂದು ಪ್ರೀ-ಕ್ವಾರ್ಟರ್‌ನಲ್ಲಿ ಸಾತ್ವಿಕ್ ಮತ್ತು ಚಿರಾಗ್ ಜೋಡಿಯು 21–12, 21–10ರಿಂದ ನೇರ ಗೇಮ್‌ಗಳಲ್ಲಿ ಡೆನ್ಮಾರ್ಕಿನ ಜೆಪಾ ಬೇ ಹಾಗೂ ಲೆಸಿ ಮೊಹಲೆಡ್ ವಿರುದ್ಧ ಗೆದ್ದರು. 35 ನಿಮಿಷಗಳ ಹಣಾಹಣಿಯಲ್ಲಿ ಭಾರತದ ಜೋಡಿಯು ಸಂಪೂರ್ಣ ಮೇಲುಗೈ ಸಾಧಿಸಿದ್ದು, ಎಂಟರ ಘಟ್ಟದಲ್ಲಿ ಜಪಾನ್‌ನ ತಕುರೊ ಹೊಕಿ -ಯುಗೊ ಕೊಬ್ಯಾಶಿ ವಿರುದ್ಧ ಸೆಣಸುವರು.

ಚುನಾವಣೆ: ಜಿಲ್ಲಾ ಪ್ರತಿನಿಧಿಗಳ ಯಾದಿಯಲ್ಲಿ ‘ಅನ್ಯಾಯ’– ಆರೋಪ

ಹಾಕಿ ಕರ್ನಾಟಕ ವಿರುದ್ಧ ಆಶಿಶ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಕಿ ಕರ್ನಾಟಕ ಸಂಸ್ಥೆಯ ಪದಾಧಿಕಾರಿಗಳ ಚುನಾವಣೆಗಾಗಿ ಸಿದ್ಧಪಡಿಸಲಾಗಿರುವ ಜಿಲ್ಲಾ ಪ್ರತಿನಿಧಿಗಳ ಯಾದಿಯು ‘ನ್ಯಾಯಸಮ್ಮತ’ವಾಗಿಲ್ಲ. ಪ್ರಸ್ತುತ ಅಧಿಕಾರದಲ್ಲಿರುವ ಸಮಿತಿಯು ಜಿಲ್ಲಾಸಂಸ್ಥೆಗಳಿಂದ ಸೂಚಿತ ಪ್ರತಿನಿಧಿಗಳನ್ನು ಕೈಬಿಟ್ಟು, ತಮಗೆ ಆಪ್ತರಾದವರ ಹೆಸರು ಸೇರಿಸಿದೆ ಎಂದು ಭಾರತ ಹಾಕಿ ತಂಡದ ಮಾಜಿ ಗೋಲ್‌ಕೀಪರ್ ಆಶಿಶ್ ಬಲ್ಲಾಳ್ ಆರೋಪಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸೆಪ್ಟೆಂಬರ್ 8ರಂದು ಹಾಕಿ ಕರ್ನಾಟಕದ ಸರ್ವಸದಸ್ಯರ ಸಭೆ ಹಾಗೂ ಚುನಾವಣೆ ನಡೆಯಲಿದೆ. ಅದಕ್ಕಾಗಿ ಜಿಲ್ಲಾ ಸಂಸ್ಥೆಗಳಿಂದ ಒಬ್ಬ ಪುರುಷ ಹಾಗೂ ಒಬ್ಬ ಮಹಿಳಾ ಪ್ರತಿನಿಧಿಯನ್ನು ಸೂಚಿಸುವಂತೆ ಸಂಸ್ಥೆಯು ತಿಳಿಸಿತ್ತು. ಹಾಕಿ ಉಡುಪಿಯು ನನ್ನ ಹೆಸರು ಸೂಚಿಸಿತ್ತು. ಆದರೆ ಇದೀಗ ಪ್ರಕಟವಾಗಿರುವ ಪ್ರತಿನಿಧಿಗಳ ಅಂತಿಮ ಪಟ್ಟಿಯಲ್ಲಿ ನನ್ನ ಹೆಸರು ಕೈಬಿಟ್ಟು, ಬೇರೆಯವರ ಹೆಸರು ಸೇರಿಸಲಾಗಿದೆ. ಇದೇ ರೀತಿ ಬಹಳಷ್ಟು ಜಿಲ್ಲಾ ಸಂಸ್ಥೆಗಳೊಂದಿಗೆ ಆಗಿದೆ’ ಎಂದರು.

ಆಗಸ್ಟ್ 23 (ಸಂಜೆ 5 ರೊಳಗೆ) ಹೆಸರು ಸಲ್ಲಿಕೆಗೆ ಕೊನೆಯ ದಿನವಾಗಿತ್ತು. ಆ ಪ್ರಕಾರ ಉಡುಪಿ ಸಂಸ್ಥೆಯು ಇಮೇಲ್ ಹಾಗೂ ಕೊರಿಯರ್ ಮೂಲಕ ದಾಖಲೆಗಳ ಸಮೇತ ಪ್ರತಿನಿಧಿಗಳ ಪಟ್ಟಿಯನ್ನು ಸಲ್ಲಿಸಿದೆ ಎಂದೂ ಬಲ್ಲಾಳ ಹೇಳಿದರು. ಬುಧವಾರ ಪ್ರಕಟವಾಗಿರುವ ಅಂತಿಮ ಪಟ್ಟಿಯಲ್ಲಿ ಬಲ್ಲಾಳ ಬದಲಿಗೆ ಕಂಚನಪ್ರಸಾದ್ ಹೆಸರು ಸೇರ್ಪಡೆಯಾಗಿದೆ.

ಆಶಿಶ್ ಬಲ್ಲಾಳ್

‘ನನ್ನ ಹೆಸರು ಕೈಬಿಟ್ಟಿರುವುದಕ್ಕೆ ಯಾವುದೇ ಸ್ಪಷ್ಟನೆಯನ್ನು ಹಾಕಿ ಕರ್ನಾಟಕ ನೀಡಿಲ್ಲ. ರಾಜ್ಯದ 7–8 ಜಿಲ್ಲಾ ಸಂಸ್ಥೆಗಳೊಂದಿಗೆ ಈ ರೀತಿ ಅನ್ಯಾಯವಾಗಿದೆ. ತಮಗೆ ಬೇಕಾದ ಹಾಗೆ ಜಿಲ್ಲಾ ಸಂಸ್ಥೆಗಳನ್ನು ರಚಿಸಿಕೊಂಡಿದ್ದಾರೆ. ಸದ್ಯ ಸಿದ್ಧವಾಗಿರುವ ಪ್ರತಿನಿಧಿಗಳ ಪಟ್ಟಿಯಲ್ಲಿರುವವರಲ್ಲಿ ಬಹುತೇಕರು ಹಾಕಿ ಆಟಗಾರರೇ ಅಲ್ಲ’ ಎಂದೂ ಬಲ್ಲಾಳ್ ಆಪಾದಿಸಿದರು.

‘ಎಲ್ಲ ಜಿಲ್ಲೆಗಳಿಗೂ ಸಮಾನ ಪ್ರಾತಿನಿಧ್ಯ ಹಾಗೂ ಚುನಾವಣೆಯಲ್ಲಿ ಪಾರದರ್ಶಕತೆ ಬರಬೇಕು. ಆದರೆ ಹಾಕಿ ಕರ್ನಾಟಕದಲ್ಲಿ ದಶಕಕ್ಕೂ ಹೆಚ್ಚು ಕಾಲದಿಂದ ಒಂದು ಜಿಲ್ಲೆಯ ಜನರೇ ತುಂಬಿಕೊಂಡಿದ್ದಾರೆ. ರಾಜ್ಯದಲ್ಲಿ ವಯೋಮಿತಿ, ಅಂತರಶಾಲಾ ಟೂರ್ನಿಗಳ ಆಯೋಜನೆಯಾಗುತ್ತಿಲ್ಲ. ಯುವ ಪ್ರತಿಭೆಗಳ ಶೋಧ ನಡೆಯುತ್ತಿಲ್ಲ. ರಾಜ್ಯದ ಹಾಕಿ ಸೊರಗಿದೆ. ರಾಷ್ಟ್ರೀಯ ತಂಡದಲ್ಲ ಒಂದು ಸಮಯದಲ್ಲಿ ಕರ್ನಾಟಕದ ಆಟಗಾರರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಈಗ ಒಬ್ಬರೂ ಇಲ್ಲ’ ಎಂದು ಆಕ್ರೋಶವ್ಯಕ್ತಪಡಿಸಿದರು.

‘ಹಾಕಿ ಕರ್ನಾಟಕದ ಅಧ್ಯಕ್ಷರು ತಮಗಿರುವ ವಿವೇಚನಾ ಕೋಟಾ ದುರ್ಬಳಕೆ ಮಾಡಿಕೊಂಡಿದ್ದಾರೆ. ಅರು ಜನ ಪದಾಧಿಕಾರಿಗಳನ್ನು ಅಸಾಂವಿಧಾನಿಕ ರೀತಿಯಲ್ಲಿ ನೇಮಕ ಮಾಡಿದ್ದಾರೆ. ಆಡಳಿತದ ಲೋಪದಿಂದಾಗಿ ಗ್ರಾಮಾಂತರ ಮಟ್ಟದಲ್ಲಿ ಹಾಕಿ ಕ್ರೀಡೆ ಸೊರಗಿದೆ. ಪ್ರತಿಭಾವಂತರಿಗೆ ಅವಕಾಶವೇ ಇಲ್ಲದಂತಾಗಿದೆ. ಆಡಳಿತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಾಜಿ ಆಟಗಾರರು ತೊಡಗಿಕೊಳ್ಳಲಿ ಎಂಬುದು ಕ್ರೀಡಾ ನೀತಿ ಹಾಗೂ ನ್ಯಾಯಾಲಯದ ಆಶಯವಾಗಿದೆ. ಆದರೆ ಅದಕ್ಕೆ ಇಲ್ಲಿ ಆಸ್ಪದ ಕೊಡುತ್ತಿಲ್ಲ’ ಎಂದು ಬಲ್ಲಾಳ ಹೇಳಿದರು.

ತಡವಾಗಿ ತಲುಪಿದ ಅರ್ಜಿ: ಸುಬ್ಬಯ್ಯ

‘ಬಲ್ಲಾಳ ಅವರ ಅರ್ಜಿಯು ನಿಗದಿಯ ಸಮಯಕ್ಕಿಂತ (ಆ.23 ಸಂಜೆ 5) ತಡವಾಗಿ ತಲುಪಿತು. ಎರಡನೇಯದಾಗಿ ಹಾಕಿ ಉಡುಪಿ ಸಂಸ್ಥೆಯು ಸಕ್ರಿಯವಾಗಿರದ ಕಾರಣ ಕೆಲವು ತಿಂಗಳುಗಳ ಹಿಂದೆ ಅನರ್ಹಗೊಂಡಿದೆ. ಅವರು ಯಾವುದೇ ಟೂರ್ನಿಗಳನ್ನೂ ಆಯೋಜಿಸಿಲ್ಲ ಮತ್ತು ಸಭೆಗಳಿಗೂ ಹಾಜರಾಗಿಲ್ಲ. ಈ ರೀತಿ ಇರುವ ಕೆಲವು ಸಂಸ್ಥೆಗಳನ್ನು ಅಮಾನ್ಯಗೊಳಿಸಿದ್ದೇವೆ’ ಎಂದು ಹಾಕಿ ಕರ್ನಾಟಕದ ಮಹಾಪ್ರಧಾನ ಕಾರ್ಯದರ್ಶಿ ಎ.ಬಿ ಸುಬ್ಬಯ್ಯ ಪ್ರತಿಕ್ರಿಯಿಸಿದ್ದಾರೆ.

‘ಬಲ್ಲಾಳ ನನ್ನ ಸ್ನೇಹಿತ. ಅವರು ಎಜಿಎಂಗೆ ಹಾಜರಾಗಲು ಬಯಸಿದ್ದರೆ ನಮ್ಮ ಜೊತೆಗೆ ನೇರವಾಗಿ ಮಾತನಾಡಬಹುದಿತ್ತು’ ಎಂದೂ ಸುಬ್ಬಯ್ಯ ಹೇಳಿದರು.

ಇದಕ್ಕೂ ತಿರುಗೇಟು ನೀಡಿದ ಬಲ್ಲಾಳ, ‘ಬೆಂಗಳೂರು ಗ್ರಾಮೀಣ, ಹಾಕಿ ಬೆಂಗಳೂರು ನಗರ ಸಂಸ್ಥೆಗಳಿಗೂ ಅವರ ಮಾತುಗಳು ಅನ್ವಯಿಸುತ್ತವೆ. ಹಾಕಿ ಬೆಂಗಳೂರು ಗ್ರಾಮೀಣ ಸಂಸ್ಥೆಯಡಿಯಲ್ಲಿ ಒಂದೂ ಕ್ಲಬ್ ಇಲ್ಲ. ಇದುವರೆಗೆ ಒಂದೇ ಒಂದು ಟೂರ್ನಿಯನ್ನೂ ಆಯೋಜಿಸಿಲ್ಲ. ಸುಬ್ಬಯ್ಯ ಅವರಿಗೆ ಆಪ್ತರಾಗಿರುವ ಎಸ್‌.ವಿ.ಎಸ್‌. ಸುಬ್ರಮಣ್ಯ ಗುಪ್ತಾ ಅವರು ಅಧ್ಯಕ್ಷರಾಗಿದ್ದಾರೆ’ ಎಂದರು.

‘ಯಾವುದೇ ಮಾಹಿತಿ ನೀಡದೇ ಅಥವಾ ವಿಚಾರಣೆ ನಡೆಸದೇ ಜಿಲ್ಲಾ ಸಂಸ್ಥೆಯನ್ನು ಅಮಾನ್ಯಗೊಳಿಸಲು ಸಾಧ್ಯವಿಲ್ಲ. ಅದಕ್ಕೊಂದು ರೀತಿ, ನೀತಿ ಹಾಗೂ ನಿಯಮ ಇದೆ. ಆದರೆ ಇಲ್ಲಿ ಯಾವುದನ್ನೂ ಪಾಲನೆ ಮಾಡಿಲ್ಲ’ ಎಂದೂ ಬಲ್ಲಾಳ ಹೇಳಿದ್ದಾರೆ.

ಆಶಿಶ್ ಮತ್ತು ಸುಬ್ಬಯ್ಯ ಅವರಿಬ್ಬರೂ 1992ರ ಬಾರ್ಸಿಲೋನಾ ಒಲಿಂಪಿಕ್ಸ್‌ನಲ್ಲಿ ಆಡಿದ್ದ ಭಾರತ ತಂಡದಲ್ಲಿದ್ದರು.

ಸಂಕ್ಷಿಪ್ತ ಸುದ್ದಿ

ಚೆಸ್: ಅರ್ಜುನ್ ಎರಿಗೈಸಿಗೆ ಪ್ರಶಸ್ತಿ

ಅರ್ಜುನ್

ಅಬುಧಾಬಿ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ಅವರು 28ನೇ ಅಬುಧಾಬಿ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಗುರುವಾರ ನಡೆದ ಒಂಬತ್ತನೇ ಹಾಗೂ ಕೊನೆಯ ಸುತ್ತಿನಲ್ಲಿ 18 ವರ್ಷದ ಅರ್ಜುನ್ ಅವರು ಸ್ಪೇನ್‌ನ ಡೇವಿಡ್ ಆ್ಯಂಟನ್ ಗ್ಯುಜರೊ ಅವರನ್ನು ಮಣಿಸಿದರು. ಒಟ್ಟು 7.5 ಪಾಯಿಂಟ್‌ಗಳೊಂದಿಗೆ ಅವರು ಅಗ್ರಸ್ಥಾನ ಪಡೆದರು.

ಒಂಬತ್ತು ಸುತ್ತುಗಳಲ್ಲಿ ಅವರು ಅಜೇಯರಾಗಿ ಉಳಿದುಕೊಂಡರು. ಆರು ಪಂದ್ಯಗಳನ್ನು ಗೆದ್ದುಕೊಂಡರೆ, ಮೂರನ್ನು ಡ್ರಾ ಮಾಡಿಕೊಂಡರು.

7 ಪಾಯಿಂಟ್ ಕಲೆಹಾಕಿದ ಉಜ್ಬೆಕಿಸ್ತಾನದ ಜಾವೊಖಿರ್ ಸಿಂದ್ರೊವ್ ಎರಡನೇ ಸ್ಥಾನ ಪಡೆದರೆ, ನೆದರ್ಲೆಂಡ್ಸ್‌ನ ಜೋರ್ಡನ್ ವಾನ್ ಫೊರೀಸ್ಟ್ ಮೂರನೇ ಸ್ಥಾನ ಗಳಿಸಿದರು.

ಅರ್ಜುನ್ ಅವರು ಭಾರತದ ರೋಹಿತ್ ಕೃಷ್ಣ, ದೀಪ್ ಸೇನ್‌ಗುಪ್ತ, ರೌನಕ್ ಸಾಧ್ವಾನಿ, ಚೀನಾದ ವಾಂಗ್ ಹವೊ, ಸರ್ಬಿಯದ ಅಲೆಕ್ಸಾಂಡರ್ ಐಂಡ್‌ಜಿಕ್ ಮತ್ತು ಗ್ಯುಜರೊ ವಿರುದ್ಧ ಗೆದ್ದರು.

ಕುಂಬ್ಳೆ ಜತೆಗಿನ ಒಪ್ಪಂದ ನವೀಕರಿಸದ ಪಂಜಾಬ್ ಕಿಂಗ್ಸ್



ಕುಂಬ್ಳೆ

ನವದೆಹಲಿ (ಪಿಟಿಐ): ಮುಖ್ಯ ಕೋಚ್ ಅನಿಲ್ ಕುಂಬ್ಳೆ ಅವರೊಂದಿಗಿನ ಒಪ್ಪಂದವನ್ನು ನವೀಕರಿಸದಿರಲು ಐಪಿಎಲ್ ತಂಡ ಪಂಜಾಬ್ ಕಿಂಗ್ಸ್ ನಿರ್ಧರಿಸಿದೆ. 2020ರ ಐಪಿಎಲ್ ಋತುವಿನಲ್ಲಿ ಪಂಜಾಬ್ ತಂಡ ಕುಂಬ್ಳೆ ಅವರನ್ನು ಮುಖ್ಯ ಕೋಚ್ ಅಗಿ ನೇಮಕ ಮಾಡಿತ್ತು.

ಸಹ ಮಾಲೀಕರಾದ ಬಾಲಿವುಡ್ ನಟಿ ಪ್ರೀತಿ ಜಿಂಟಾ, ಉದ್ಯಮಿಗಳಾದ ಮೋಹಿತ್ ಬರ್ಮನ್, ನೆಸ್ ವಾಡಿಯಾ ಮತ್ತು ಕರಣ್ ಪಾಲ್ ಅವರನ್ನೊಳಗೊಂಡ ತಂಡದ ಆಡಳಿತ ಮಂಡಳಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ನೂತನ ಕೋಚ್ ಹೆಸರನ್ನು ಶೀಘ್ರದಲ್ಲೇ ಪ್ರಕಟಿಸುವ ಸಾಧ್ಯತೆಯಿದೆ.

ಕುಂಬ್ಳೆ ಅವರ ಮಾರ್ಗದರ್ಶನದಲ್ಲಿ ಪಂಜಾಬ್ ತಂಡ ಒಟ್ಟು 42 ಪಂದ್ಯಗಳನ್ನು ಆಡಿದ್ದು, 18 ರಲ್ಲಿ ಗೆಲುವು ಪಡೆದಿದೆ. 22 ಪಂದ್ಯಗಳಲ್ಲಿ ಸೋತಿದ್ದು, ಎರಡು ಪಂದ್ಯಗಳು ‘ಟೈ’ ಆಗಿವೆ.

‘ಕಾಮನ್‌ವೆಲ್ತ್: ಸಿಂಧುಗೆ ಕೋವಿಡ್ ದೃಢಪಟ್ಟಿತ್ತು’

ನವದೆಹಲಿ (ಪಿಟಿಐ): ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ.ಸಿಂಧು ಒಳಗೊಂಡಂತೆ ಭಾರತದ ನಾಲ್ವರು ಕ್ರೀಡಾಪಟುಗಳಿಗೆ ಕಾಮನ್‌ವೆಲ್ತ್ ಕೂಟದ ವೇಳೆ ಕೋವಿಡ್ ದೃಢಪಟ್ಟಿತ್ತು ಎಂದು ಭಾರತ ತಂಡದ ಜತೆ ತೆರಳಿದ್ದ ಮುಖ್ಯ ವೈದ್ಯಕೀಯ ಅಧಿಕಾರಿ ಅರುಣ್ ಬಾಸಿಲ್ ಮ್ಯಾಥ್ಯೂ ಹೇಳಿದ್ದಾರೆ.

ಸಿಂಧು

‘ಸಿಂಧು ಅಲ್ಲದೆ ಪ್ಯಾರಾ ಡಿಸ್ಕಸ್ ಥ್ರೋ ಸ್ಪರ್ಧಿ ಅನೀಶ್ ಕುಮಾರ್ ಪಿಳ್ಳೈ ಮತ್ತು ಹಾಕಿ ಆಟಗಾರ್ತಿ ನವಜ್ಯೋತ್ ಕೌರ್ ಅವರಿಗೆ ಕೋವಿಡ್ ದೃಢಪಟ್ಟಿತ್ತು. ಅವರಿಬ್ಬರು ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿಲ್ಲ‘ ಎಂದಿದ್ದಾರೆ.

‘ಸಿಂಧುಗೆ ಕೋವಿಡ್ ಪಾಸಿಟಿವ್ ಆಗಿದ್ದರೂ, ಅವರ ಸಿ.ಟಿ ವ್ಯಾಲ್ಯೂ ತುಂಬಾ ಹೆಚ್ಚಿತ್ತು (ಸಿ.ಟಿ ವ್ಯಾಲ್ಯೂ ಹೆಚ್ಚಿದ್ದರೆ, ಅವರಿಂದ ಇತರರಿಗೆ ಹರಡುವ ಸಾಧ್ಯತೆ ಕಡಿಮೆ). ಮುಂದಿನ ಪರೀಕ್ಷೆಯಲ್ಲೇ ಕೋವಿಡ್ ನೆಗೆಟಿವ್ ಬಂದಿತ್ತು. ಅವರಿಗೆ ಸೋಂಕಿನ ಯಾವುದೇ ಲಕ್ಷಣಗಳು ಇರಲಿಲ್ಲ. ಆರೋಗ್ಯದಲ್ಲೂ ಏರುಪೇರು ಉಂಟಾಗಿರಲಿಲ್ಲ’ ಎಂದು ತಿಳಿಸಿದ್ದಾರೆ.

ಜನಾಂಗೀಯ ನಿಂದನೆ: ಶಿಸ್ತು ಕ್ರಮ

ಕೋಲ್ಕತ್ತ (ಪಿಟಿಐ): ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದ ವೇಳೆ ಕೇಳಿಬಂದ ಜನಾಂಗೀಯ ನಿಂದನೆ ಆರೋಪಕ್ಕೆ ಸಂಬಂಧಿಸಿದಂತೆ ಸಂಘಟಕರು ತ್ವರಿತಗತಿಯಲ್ಲಿ ಕ್ರಮಕೈಗೊಂಡಿದ್ದಾರೆ. ಇಂಡಿಯನ್ ಏರ್‌ಫೋರ್ಸ್ ಎದುರಿನ ಪಂದ್ಯದ ವೇಳೆ ತಮ್ಮ ಆಟಗಾರನಿಗೆ ಜನಾಂಗೀಯ ನಿಂದನೆ ಮಾಡಲಾಗಿದೆ ಎಂದು ಬಿಎಫ್‌ಸಿ ಆರೋಪಿಸಿತ್ತು.

ಯಾವ ರೀತಿಯ ಶಿಸ್ತುಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಬಗ್ಗೆ ಸಂಘಟಕರು ಯಾವುದೇ ಮಾಹಿತಿ ನೀಡಿಲ್ಲ.

ರಾಜಸ್ತಾನ ವಾರಿಯರ್ಸ್ ಮತ್ತು ಒಡಿಶಾ ಜಗ್ಗರ್‌ನಾಟ್ಸ್ ತಂಡಗಳ ನಡುವಿನ ಪೈಪೋಟಿಯ ದೃಶ್ಯ –ಪಿಟಿಐ ಚಿತ್ರ

ಕೊಕ್ಕೊ: ಒಡಿಶಾ ಜಯಭೇರಿ

ಪುಣೆ (ಪಿಟಿಐ): ಒಡಿಶಾ ಜಗ್ಗರ್‌ನಾಟ್ಸ್ ತಂಡದವರು ಅಲ್ಟಿಮೇಟ್ ಕೊಕ್ಕೊ ಲೀಗ್‌ನಲ್ಲಿ ಗೆಲುವಿನ ಓಟ ಮುಂದುವರಿಸಿದರು.

ಶಿವ ಛತ್ರಪತಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್‌ನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಒಡಿಶಾ 51–45 ರಲ್ಲಿ ರಾಜಸ್ತಾನ ವಾರಿಯರ್ಸ್ ತಂಡವನ್ನು ಮಣಿಸಿತು.

ಅಮೋಘ ಡೈವ್‌ಗಳ ಮೂಲಕ ಮಿಂಚಿದ ಒಡಿಶಾ ತಂಡದ ನೀಲೇಶ್ ಜಾಧವ್ 16 ಪಾಯಿಂಟ್‌ಗಳನ್ನು ಕಲೆಹಾಕಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಡಿಫೆಂಡಿಂಗ್‌ನಲ್ಲಿ ಚುರುಕಿನ ಆಟವಾಡಿದ ದೀಪೇಶ್ ಮೋರೆ ಅವರು ಎರಡು ನಿಮಿಷ 53 ಸೆ.ಗಳಷ್ಟು ಕಾಲ ಎದುರಾಳಿ ತಂಡವನ್ನು ಕಾಡಿದರು.

ಬುಧವಾರ ನಡೆದ ಪಂದ್ಯದಲ್ಲಿ ಒಡಿಶಾ 51–41 ರಲ್ಲಿ ಚೆನ್ನೈ ಕ್ವಿಕ್ ಗನ್ಸ್ ತಂಡವನ್ನು ಮಣಿಸಿತ್ತು. ನೀಲೇಶ್ ಜಾಧವ್ ಈ ಪಂದ್ಯದಲ್ಲೂ ಮಿಂಚಿ 15 ಪಾಯಿಂಟ್ಸ್ ಗಳಿಸಿದ್ದರು.

ಟಿ20: ಪ್ರಶಸ್ತಿಗೆ ಇಂದು ಬ್ಲಾಸ್ಟರ್ಸ್ ಜತೆ ಸೆಣಸು

ಫೈನಲ್‌ಗೆ ಗುಲ್ಬರ್ಗ ಮಿಸ್ಟಿಕ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವದತ್ತ ಪಡಿಕ್ಕಲ್ (ಅಜೇಯ 96) ಅವರ ಅಮೋಘ ಆಟದ ಬಲದಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ನಡೆದ ಎರಡನೇ ಕ್ವಾಲಿಫೈಯರ್‌ನಲ್ಲಿ ಗುಲ್ಬರ್ಗ ತಂಡ ಆರು ವಿಕೆಟ್‌ಗಳಿಂದ ಮೈಸೂರು ವಾರಿಯರ್ಸ್ ತಂಡವನ್ನು ಮಣಿಸಿತು. ಶುಕ್ರವಾರ ನಡೆಯಲಿರುವ ಫೈನಲ್‌ನಲ್ಲಿ ಗುಲ್ಬರ್ಗ ತಂಡ ಬೆಂಗಳೂರು ಬ್ಲಾಸ್ಟರ್ಸ್ ವಿರುದ್ಧ ಪೈಪೋಟಿ ನಡೆಸಲಿದೆ.

ಮೊದಲು ಬ್ಯಾಟ್ ಮಾಡಿದ ಮೈಸೂರು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 157 ರನ್ ಗಳಿಸಿದರೆ, ಗುಲ್ಬರ್ಗ 19.4 ಓವರ್‌ಗಳಲ್ಲಿ 4 ವಿಕೆಟ್‌ಗೆ 158 ರನ್ ಗಳಿಸಿ ಜಯ ಸಾಧಿಸಿತು.

64 ಎಸೆತಗಳಲ್ಲಿ 8 ಬೌಂಡರಿ ಮತ್ತು ಐದು ಸಿಕ್ಸರ್ ನೆರವಿನಿಂದ ಅಜೇಯ 96 ರನ್ ಗಳಿಸಿದ ಪಡಿಕ್ಕಲ್ ಅವರು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಮನೋಜ್ ಭಾಂಡಗೆ (ಅಜೇಯ 35) ಜತೆ ಮುರಿಯದ ಐದನೇ ವಿಕೆಟ್‌ಗೆ 80 ರನ್ ಸೇರಿಸಿ ತಂಡದ ಜಯದ ಹಾದಿ ಸುಗಮಗೊಳಿಸಿದರು.

ಕರುಣ್, ಪವನ್ ಆಸರೆ: ಇದಕ್ಕೂ ಮುನ್ನ ಟಾಸ್ ಗೆದ್ದ ಗುಲ್ಬರ್ಗ ಮಿಸ್ಟಿಕ್ಸ್ ತಂಡದ ನಾಯಕ ಮನೀಷ್ ಪಾಂಡೆ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಕರುಣ್ (42; 32ಎ) ಹಾಗೂ ಪವನ್ (38; 42ಎ) ಅವರು ಮೈಸೂರು ತಂಡಕ್ಕೆ ಆಸರೆಯಾದರು.

ನಿಹಾಲ್ ಉಲ್ಲಾಳ (14 ರನ್) ಅವರೊಂದಿಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ ಕರುಣ್ 27 ರನ್ ಸೇರಿಸಿದರು. ಪ್ರಣವ್ ಭಾಟಿಯಾ ಎಸೆತದಲ್ಲಿ ನಿಹಾಲ್ ಔಟಾದರು. ಇದರಿಂದ ಉಂಟಾದ ಆತಂಕವನ್ನು ಕರುಣ್ ಜೊತೆಗೂಡಿದ ಪವನ್ ದೂರ ಮಾಡಿದರು. ಇಬ್ಬರೂ ಎರಡನೇ ವಿಕೆಟ್ ಜೊತೆಯಾಟದಲ್ಲಿ 57 ರನ್ ಸೇರಿಸಿದರು.

ಕೊನೆಯ ಹಂತದ ಓವರ್‌ಗಳಲ್ಲಿ ಮಿಂಚಿದ ನಾಗಭರತ್ 12 ಎಸೆತಗಳಲ್ಲಿ 27 ರನ್ ಗಳಿಸಿದರು. ಅದರಲ್ಲಿ ಒಂದು ಬೌಂಡರಿ, ಮೂರು ಸಿಕ್ಸರ್‌ಗಳಿದ್ದವು.

ಬ್ಲಾಸ್ಟರ್ಸ್‌ಗೆ ಜಯ: ಗುರುವಾರ ಮಧ್ಯಾಹ್ನ ನಡೆದ ಮಹಿಳೆಯರ ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್ 7 ವಿಕೆಟ್‌ಗಳಿಂದ ಹುಬ್ಬಳ್ಳಿ ಟೈಗರ್ಸ್ ತಂಡವನ್ನು ಮಣಿಸಿತು.

ದೇವದತ್ತ ಪಡಿಕ್ಕಲ್ ಬ್ಯಾಟಿಂಗ್

ಸಂಕ್ಷಿಪ್ತ ಸ್ಕೋರು: ಮೈಸೂರು ವಾರಿಯರ್ಸ್: 20 ಓವರ್‌ಗಳಲ್ಲಿ 5ಕ್ಕೆ157 (ಕರುಣ್ ನಾಯರ್ 42, ಪವನ್ ದೇಶಪಾಂಡೆ 38, ನಾಗ ಭರತ್ ಔಟಾಗದೆ 27, ವಿದ್ವತ್ ಕಾವೇರಪ್ಪ 52ಕ್ಕೆ2, ಕುಶಾಲ್ ವಾಧ್ವಾನಿ 17ಕ್ಕೆ2, ಪ್ರಣವ್ ಭಾಟಿಯಾ 18ಕ್ಕೆ1)
ಗುಲ್ಬರ್ಗ ಮಿಸ್ಟಿಕ್ಸ್: 19.4 ಓವರ್‌ಗಳಲ್ಲಿ 4ಕ್ಕೆ 158 (ದೇವದತ್ತ ಪಡಿಕ್ಕಲ್ ಅಜೇಯ 96, ಮನೀಷ್ ಪಾಂಡೆ 10, ಮನೋಜ್ ಭಾಂಡಗೆ ಅಜೇಯ 35, ಪವನ್ ದೇಶಪಾಂಡೆ 16ಕ್ಕೆ 2)
ಫಲಿತಾಂಶ: ಗುಲ್ಬರ್ಗ ಮಿಸ್ಟಿಕ್ಸ್‌ಗೆ 6 ವಿಕೆಟ್ ಗೆಲುವು
ಇಂದು ಫೈನಲ್: ಬೆಂಗಳೂರು ಬ್ಲಾಸ್ಟರ್ಸ್– ಗುಲ್ಬರ್ಗ ಮಿಸ್ಟಿಕ್ಸ್ (ಸಂಜೆ 7)

ಕಿರಣ್, ಹನುಮಂತಗೆ ಕಂಚು

ಪ್ರಜಾವಾಣಿ ವಾರ್ತೆ

ದಾವಣಗೆರೆ: ರಾಜ್ಯದ ಕುಸ್ತಿಪಟುಗಳಾದ ಕಿರಣ್ ಬಿ.ಎಚ್. ಹಾಗೂ ಹನುಮಂತ ಸಾವಳಗಿ ಅವರು ಹರಿಯಾಣದಲ್ಲಿ ನಡೆದ 20 ವರ್ಷದೊಳಗಿನವರ ರಾಷ್ಟ್ರೀಯ ಫೆಡರೇಷನ್ ಕಪ್ ಕುಸ್ತಿ ಚಾಂಪಿಯನ್‌ಷಿಪ್‌ನ ಗ್ರಿಕೊ ರೋಮನ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

82 ಕೆ.ಜಿ. ವಿಭಾಗದಲ್ಲಿ ದಾವಣಗೆರೆಯ ಕ್ರೀಡಾ ವಸತಿನಿಲಯದ ಕಿರಣ ಬಿ.ಎಚ್. ಅವರು ಹರಿಯಾಣದ ಅಜಯಕುಮಾರ್ ಅವರನ್ನು 8–3ರಲ್ಲಿ ಮಣಿಸುವ ಮೂಲಕ ಕಂಚಿನ ಪದಕವನ್ನು ತಮ್ಮದಾಗಿಸಿಕೊಂಡರು.

ಸದ್ಯ ಬೆಳಗಾವಿಯ ಎಂ.ಎ.ಎಲ್.ಐ.ಆರ್.ಸಿಯ ಕ್ರೀಡಾ ವಸತಿ ಶಾಲೆಯಲ್ಲಿರುವ ಹನುಮಂತ್ ಸಾವಳಗಿ ಅವರು ಮಹಾರಾಷ್ಟ್ರದ ಪವನ್ ಅವರನ್ನು 72 ಕೆ.ಜಿ. ವಿಭಾಗದಲ್ಲಿ 8–5ರಲ್ಲಿ ಸೋಲಿಸುವ ಮೂಲಕ ಕಂಚು ಜಯಿಸಿದ್ದಾರೆ. ಈ ಇಬ್ಬರೂ ಕುಸ್ತಿಪಟುಗಳು ದಾವಣಗೆರೆಯ ಕ್ರೀಡಾ ವಸತಿ ನಿಲಯದಲ್ಲಿ ಕುಸ್ತಿ ತರಬೇತುದಾರ ಶಿವಾನಂದ ಆರ್. ಅವರಿಂದ ತರಬೇತಿ ಪಡೆದುಕೊಂಡಿದ್ದರು.

ಕಿರಣ್ ಬಿ.ಎಚ್. , ಹನುಮಂತ್

ದಕ್ಷಿಣ ಆಫ್ರಿಕಾ ಅಲ್ಪ ಮೊತ್ತ

ಮ್ಯಾಂಚೆಸ್ಟರ್ (ರಾಯಿಟರ್ಸ್): ಇಂಗ್ಲೆಂಡ್ ಕ್ರಿಕೆಟ್ ತಂಡದ ಅನುಭವಿ ‘ವೇಗದ ಜೋಡಿ’ ಜೇಮ್ಸ್ ಆ್ಯಂಡರ್ಸನ್ ಹಾಗೂ ಸ್ಟುವರ್ಟ್ ಬ್ರಾಡ್ ಬಿರುಗಾಳಿಯ ಮುಂದೆ ದಕ್ಷಿಣ ಆಫ್ರಿಕಾ ಕುಸಿಯಿತು.

ಗುರುವಾರ ಆರಂಭವಾದ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಪ್ರವಾಸಿ ದಕ್ಷಿಣ ಆಫ್ರಿಕಾ ತಂಡವು 53.2 ಓವರ್‌ಗಳಲ್ಲಿ 151 ರನ್ ಗಳಿಸಿ ಆಲೌಟ್ ಆಯಿತು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ದಕ್ಷಿಣ ಆಫ್ರಿಕಾ ತಂಡಕ್ಕೆ ಆ್ಯಂಡರ್ಸನ್ (32ಕ್ಕೆ3) ಹಾಗೂ ಬ್ರಾಡ್ (37ಕ್ಕೆ3) ಪೆಟ್ಟು ಕೊಟ್ಟರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ಆಫ್ರಿಕಾ: 53.2 ಓವರ್‌ಗಳಲ್ಲಿ 151 (ಕೀಗನ್ ಪೀಟರ್ಸನ್ 21, ವೆರೇಯನ್ 21, ಕಗಿಸೊ ರಬಾಡ 36, ಜೇಮ್ಸ್ ಆ್ಯಂಡರ್ಸನ್ 32ಕ್ಕೆ3, ಸ್ಟುವರ್ಟ್ ಬ್ರಾಡ್ 37ಕ್ಕೆ3, ಬೆನ್ ಸ್ಟೋಕ್ಸ್ 17ಕ್ಕೆ2)

ಎರಡು ತಿಂಗಳ ಅವಧಿಯಲ್ಲಿ ಎರಡನೇ ದುರ್ಘಟನೆ

ತಲೆಗೆ ಏಟು: ಕಿಕ್ ಬಾಕ್ಸರ್ ಸಾವು

ನವದೆಹಲಿ (ಎಎಫ್‌ಪಿ): ಕಿಕ್ ಬಾಕ್ಸಿಂಗ್ ವೇಳೆ ತಲೆಗೆ ಗಂಭೀರ ಏಟು ಬಿದ್ದ ಪರಿಣಾಮ ಯುವ ಕಿಕ್ ಬಾಕ್ಸರ್‌ವೊಬ್ಬರು ಮೃತಪಟ್ಟಿದ್ದಾರೆ. ದೇಶದಲ್ಲಿ ಎರಡು ತಿಂಗಳ ಅವಧಿಯಲ್ಲಿ ನಡೆದ ಎರಡನೇ ಪ್ರಕರಣ ಇದಾಗಿದೆ.

ಅರುಣಾಚಲ ಪ್ರದೇಶದ 24 ವರ್ಷದ ಯೋರಾ ತಾಡೆ ಅವರು ಮೃತಪಟ್ಟ ಕಿಕ್ ಬಾಕ್ಸರ್. ಚೆನ್ನೈನಲ್ಲಿ ಭಾನುವಾರ ನಡೆದ ರಾಷ್ಟ್ರೀಯ ಕಿಕ್ ಬಾಕ್ಸಿಂಗ್ ಸ್ಪರ್ಧೆಯ ಫೈನಲ್‌ನಲ್ಲಿ ಕೇಶವ್ ಮುದೆಲ್ ಜತೆಗಿನ ಸೆಣಸಾಟದ ವೇಳೆ ತಾಡೆ ಗಾಯಗೊಂಡಿದ್ದರು. ಎದುರಾಳಿ ನೀಡಿದ ‘ಕಿಕ್’ನಿಂದ ಮಿದುಳಿಗೆ ಏಟು ಬಿದ್ದಿತ್ತು.

ಅವರನ್ನು ತಕ್ಷಣವೇ ರಾಜೀವ್ ಗಾಂಧಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯರು ಮಿದುಳಿನ ಶಸ್ತ್ರಕ್ರಿಯೆ ನಡೆಸಿದ್ದರು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಮಂಗಳವಾರ ಮೃತಪಟ್ಟಿದ್ದಾರೆ.

‘ಕಿಕ್ ಬಾಕ್ಸರ್‌ಅನ್ನು ಗಂಭೀರ ಸ್ಥಿತಿಯಲ್ಲಿ ಆಸ್ಪತ್ರೆಗೆ ಕರೆತರಲಾಗಿತ್ತು. ಚಿಕಿತ್ಸೆಯ ವೇಳೆ ಅವರು ಮೃತಪಟ್ಟರು’ ಎಂದು ರಾಜೀವ್ ಗಾಂಧಿ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.

ಮುಖ್ಯಾಂಶಗಳು
- ಅರುಣಾಚಲ ಪ್ರದೇಶದ 24 ವರ್ಷದ ಯೋರಾ ತಾಡೆ ಮೃತಪಟ್ಟ ಕಿಕ್ ಬಾಕ್ಸರ್
- ಚೆನ್ನೈನಲ್ಲಿ ನಡೆದ ರಾಷ್ಟ್ರೀಯ ಚಾಂಪಿಯನ್‌ಷಿಪ್ ವೇಳೆ ಅವಘಡ

ಘಟನೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಸ್ಪರ್ಧೆಯ ವೇಳೆ ಗಾಯಗೊಂಡು ಕಿಕ್ ಬಾಕ್ಸರ್ ಮೃತಪಟ್ಟ ಘಟನೆ ಎರಡು ತಿಂಗಳ ಅವಧಿಯಲ್ಲಿ ಎರಡನೇ ಬಾರಿ ನಡೆದಿದೆ.

ಕಳೆದ ತಿಂಗಳು ಬೆಂಗಳೂರಿನಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಕಿಕ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಗಾಯಗೊಂಡಿದ್ದ ಮೈಸೂರಿನ ಎಸ್. ನಿಖಿಲ್ ಅವರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದರು. ಎದುರಾಳಿಯು ಮುಖಕ್ಕೆ ನೀಡಿದ್ದ ಪಂಚ್‌ನಿಂದ ಅವರು ಗಾಯಗೊಂಡಿದ್ದರು.

ಯುಎಸ್ ಓಪನ್: ಯೂಕಿಗೆ ಜಯ

ನ್ಯೂಯಾರ್ಕ್ (ಪಿಟಿಐ): ಭಾರತದ ಯೂಕಿ ಭಾಂಬ್ರಿ ಅವರು ಯುಎಸ್ ಓಪನ್ ಟೆನಿಸ್ ಟೂರ್ನಿಯ ಅರ್ಹತಾ ಹಂತದ ಎರಡನೇ ಸುತ್ತು ಪ್ರವೇಶಿಸಿದರು.



ಯೂಕಿ ಭಾಂಬ್ರಿ

ಬುಧವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಅವರು 7–6, 6–4 ರಲ್ಲಿ ಮಾಲ್ಡೋವಾದ ರಾಡು ಅಲ್ಬೋಟ್ ಅವರನ್ನು ಮಣಿಸಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 552ನೇ ಸ್ಥಾನದಲ್ಲಿರುವ ಯೂಕಿ, ತನಗಿಂತ ಮೇಲಿನ ಕ್ರಮಾಂಕದಲ್ಲಿರುವ (107ನೇ ರ‍್ಯಾಂಕ್) ಆಟಗಾರನ ವಿರುದ್ಧ ಒಂದು ಗಂಟೆ 34 ನಿಮಿಷಗಳಲ್ಲಿ ಗೆಲುವು ಪಡೆದರು.

ಅರ್ಹತಾ ಹಂತದ ಎರಡನೇ ಸುತ್ತಿನಲ್ಲಿ ಅವರು ಬೆಲ್ಜಿಯಂನ ಜಿಜೌ ಬೆರ್ಗ್ ವಿರುದ್ಧ ಪೈಪೋಟಿ ನಡೆಸುವರು.

ಆದರೆ ಭಾರತದ ರಾಮಕುಮಾರ್ ರಾಮನಾಥನ್ ಮತ್ತು ಸುಮಿತ್ ನಗಾಲ್ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದರು.

241ನೇ ರ‍್ಯಾಂಕ್‌ನ ಆಟಗಾರ ರಾಮಕುಮಾರ್ 3–6, 5–7 ರಲ್ಲಿ ಅಮೆರಿಕದ ಬ್ರೂನೊ ಕುಜುಹರ ಕೈಯಲ್ಲಿ ಪರಾಭವಗೊಂಡರು. ನಗಾಲ್ 6–7, 4–6 ರಲ್ಲಿ ಕೆನಡಾದ ವಸೆಕ್ ಪೊಸ್ಪಿಸಿಲ್ ಎದುರು ಸೋತರು.

ಹಿಂದೆ ಸರಿದ ಜೊಕೊವಿಚ್



ನ್ಯೂಯಾರ್ಕ್ (ಎಪಿ): ಸರ್ಬಿಯದ ನೊವಾಕ್ ಜೊಕೊವಿಚ್ ಅವರು ಸೋಮವಾರ ಆರಂಭವಾಗುವ ಯುಎಸ್ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

ಟೂರ್ನಿಯ ‘ಡ್ರಾ’ ನಿರ್ಧರಿಸಲು ಕೆಲವೇ ಗಂಟೆಗಳಿರುವಾಗ ಅವರು ‘ಟ್ವಿಟರ್’ ಮೂಲಕ ತಮ್ಮ ನಿರ್ಧಾರ ಪ್ರಕಟಿಸಿದ್ದಾರೆ.

ಕೋವಿಡ್ ಲಸಿಕೆ ಪಡೆಯದೇ ಇರುವುದರಿಂದ ಜೊಕೊವಿಚ್ ಅವರು ಟೂರ್ನಿಯಿಂದ ಹಿಂದೆ ಸರಿಯುವುದು ಖಚಿತವಾಗಿತ್ತು. ಕೋವಿಡ್ ಲಸಿಕೆ ಪಡೆಯದ ವಿದೇಶಿಯರಿಗೆ ಅಮೆರಿಕ ಪ್ರವೇಶಿಸುವುದಕ್ಕೆ ಈಗಲೂ ನಿರ್ಬಂಧವಿದೆ. ಈ ನಿಯಮದಲ್ಲಿ ಸಡಿಲಿಕೆ ಆಗದ ಕಾರಣ ಜೊಕೊವಿಚ್, ಹಿಂದೆ ಸರಿದಿದ್ದಾರೆ.

‘ದುಃಖದ ವಿಚಾರವೆಂದರೆ, ಯುಎಸ್ ಓಪನ್‌ನಲ್ಲಿ ಪಾಲ್ಗೊಳ್ಳಲು ನಾನು ಈ ಬಾರಿ ನ್ಯೂಯಾರ್ಕ್‌ಗೆ ಪ್ರಯಾಣಿಸುತ್ತಿಲ್ಲ. ಅವಕಾಶ ಸಿಕ್ಕಾಗ ಮುಂದೆ ಭಾಗವಹಿಸುತ್ತೇನೆ’ ಎಂದು ಅವರು ‘ಟ್ವೀಟ್’ ಮಾಡಿದ್ದಾರೆ.

35 ವರ್ಷದ ಜೊಕೊವಿಚ್ ಒಟ್ಟು 21 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. ಯುಎಸ್ ಓಪನ್‌ನಲ್ಲಿ ಅವರು 2011, 2015 ಮತ್ತು 2018 ರಲ್ಲಿ ಚಾಂಪಿಯನ್ ಅಗಿದ್ದರು.

ಬೈಚುಂಗ್ ಭುಟಿಯಾ ನಾಮಪತ್ರ ಸಲ್ಲಿಕೆ

ನವದೆಹಲಿ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳಲ್ಲಿ ಒಬ್ಬರಾಗಿರುವ ಭಾರತ ತಂಡದ ಮಾಜಿ ನಾಯಕ ಬೈಚುಂಗ್ ಭುಟಿಯಾ ಅವರು ಗುರುವಾರ ಹೊಸದಾಗಿ ನಾಮಪತ್ರ ಸಲ್ಲಿಸಿದರು.

45 ವರ್ಷದ ಭುಟಿಯಾ ಅವರ ಹೆಸರನ್ನು ಆಂಧ್ರ ಫುಟ್‌ಬಾಲ್ ಸಂಸ್ಥೆ ಸೂಚಿಸಿದರೆ, ರಾಜಸ್ತಾನ ಫುಟ್‌ಬಾಲ್ ಸಂಸ್ಥೆ ಅನುಮೋದಿಸಿತು.

‘ಎಐಎಫ್‌ಎಫ್ ಅಧ್ಯಕ್ಷ ಸ್ಥಾನದ ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದೇನೆ. ಆ ಹುದ್ದೆಗೆ ನಾನು ಸೂಕ್ತ ವ್ಯಕ್ತಿ ಎಂಬುದಾಗಿ ಭಾವಿಸಿದ್ದೇನೆ’ ಎಂದು ಭುಟಿಯಾ ಪ್ರತಿಕ್ರಿಯಿಸಿದ್ದಾರೆ. ಎಐಎಫ್‌ಎಫ್ ಚುನಾವಣೆ ಸೆ.2 ರಂದು ನಡೆಯಲಿದೆ.

ದೀರ್ಘಕಾಲಿನ ಕೀಲು ನೋವಿಗೆ ಪರಿಣಾಮಕಾರಿ ಪರಿಹಾರ

- ಕೀಲುನೋವು
- ಬೆನ್ನು ನೋವು
- ಭುಜದ ನೋವು
- ಮಣಿಕಟ್ಟು ನೋವು

ಇವುಗಳ ನಿವಾರಣೆಗೆ ಸಹಕಾರಿ

ಡಾ. ಆರ್ಥೋವನ್ನೇ ಏಕೆ ಕೊಳ್ಳಬೇಕು?

ಭಾರತದಾದ್ಯಂತ ಕಂಡುಬಂದ ಫಲಿತಾಂಶಗಳು


Punjab

ಬಲವಿಂದರ್ ಕುಮಾರ್, 45 ವರ್ಷ, ಐಟಿ ಕ್ಷೇತ್ರದ ಒಂದು ಮಾರ್ಕೆಟಿಂಗ್ ಕಂಪನಿಯ ಉದ್ಯೋಗಿ, ಕೆಲ ವರ್ಷಗಳ ಹಿಂದೆ ನನಗೆ ಬೆನ್ನುನೋವಿನ ಸಮಸ್ಯೆ ಅಧಿಕವಾಗಿತ್ತು. ನಡೆದಾಡಲು ಕೂಡ ನನಗೆ ಕಷ್ಟವಾಗುತ್ತಿತ್ತು. ಒಂದು ದಿನ ಗೆಳೆಯನೊಬ್ಬ ಡಾ.ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ ಬಗ್ಗೆ ಸಾಕಷ್ಟು ಮಾಹಿತಿ ನೀಡಿ, ಅದನ್ನು ಬಳಸಲಿಕ್ಕೆ ಪ್ರೇರೆಪಿಸಿದ. ಇಂದು ನಾನು ಎಲ್ಲಾ ರೀತಿಯಿಂದ ಚೆನ್ನಾಗಿದ್ದೇನೆ ಮತ್ತು ನಿರಂತರವಾಗಿ ಮೂರು ತಿಂಗಳ ಕಾಲ ಡಾ.ಆರ್ಥೋ ಉತ್ಪನ್ನಗಳನ್ನು ಬಳಸಿದ ನಂತರ ನನ್ನ ಬೆನ್ನುನೋವು ಗಣನೀಯವಾಗಿ ಕಡಮೆಯಾಗಿದೆ.


Maharashtra

ದಶರಥ ಅಮರಾವತಿ, 61 ವರ್ಷ ವಯಸ್ಸು, ಬಹು ಕಾಲದಿಂದ ನಾನು ಕಾಲು ನೋವಿನಿಂದ ಬಳಲು ತ್ತಿದ್ದೆ ಮತ್ತು ನೋವಿನಿಂದಾಗಿ ದುಃಖಿತನಾಗುತ್ತಿದ್ದೆ. ನೋವು ಭಯಂಕರವಾಗಿ ಪೀಡಿಸುತ್ತಿದ್ದರಿಂದ, ದೈನಂದಿನ ಚಲನವಲನಗಳಿಗೂ ನನಗೆ ಸಮಸ್ಯೆಯಾಗಿತ್ತು. ಒಂದು ದಿನ ದಿನಪತ್ರಿಕೆಯಲ್ಲಿ ಡಾ.ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ಸ್ ಜಾಹೀರಾತು ನೋಡಿದೆ ಮತ್ತು ನನ್ನ ಸ್ನೇಹಿತನೊಬ್ಬ ಕೂಡ ಇದರ ಬಗ್ಗೆ ತುಂಬಾ ಹೇಳಿದ್ದ. ಈಗ ನಾನು ಸಂಪೂರ್ಣ ಚನ್ನಾಗಿದ್ದೇನೆ ಮತ್ತು ಆರೋಗ್ಯವಾಗಿದ್ದೇನೆ. ಡಾ.ಆರ್ಥೋ ರೆಗ್ಯುಲರ್ ಕೋರ್ಸ್‌ಗೆ ಧನ್ಯವಾದಗಳು.


Rajasthan

ಕಬೀರರಾಮ, 57 ವರ್ಷ, ನಾನೊಬ್ಬ ಟ್ಯಾಕ್ಸಿ ಚಾಲಕ. ದೀರ್ಘಾವಧಿ ಡ್ರೈವಿಂಗ್ ಕೆಲಸದಿಂದಾಗೆ ನನಗೆ ಭಾರಿ ಮಂಡಿ ನೋವಿನ ಸಮಸ್ಯೆ ಉಂಟಾಗಿತ್ತು. ತುಂಬಾ ನೋವು ಅನುಭವಿಸುತ್ತಿದ್ದೆ, ನೋವಿನಿಂದಾಗಿ ನನ್ನ ಉದ್ಯೋಗದ ಮೇಲೂ ಪರಿಣಾಮ ಉಂಟಾಗಿತ್ತು. ನಂತರ ಒಂದು ದಿನ ಪತ್ರಿಕೆಯಲ್ಲಿ ಡಾ.ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ಸ್ ಜಾಹೀರಾತು ನೋಡಿ, ಖರೀದಿಸಿದೆ. ಅದರಲ್ಲಿನ ಸೂಚನೆಗಳ ಪ್ರಕಾರ ಬಳಸತೊಡಗಿದೆ. ಬಳಕೆಯ 2 ವರ್ಷಗಳ ನಂತರ, ನಾನೀಗ ಸಂಪೂರ್ಣ ಆರೋಗ್ಯ ವಾಗಿದ್ದೇನೆ


Bihar

ಖಲೀಲ್ ಅಹ್ಮದ್, 48 ವರ್ಷ ವಯಸ್ಸು, ನಾನೊಬ್ಬ ಬಿಜನೆಸ್‌ಮನ್. ನನಗೆ ತುಂಬಾ ವರ್ಷಗಳಿಂದ ಮಂಡಿ ನೋವಿನ ಸಮಸ್ಯೆ ಇತ್ತು. ಒಂದು ದಿನ ಟಿವಿಯಲ್ಲಿ ಡಾ.ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ಸ್ ಆಡ್ ನೋಡಿ, ನನಗಾಗಿಯೇ ಆರ್ಡರ್ ಮಾಡಿದೆ. ಅದನ್ನು ನಿಯಮಿತವಾಗಿ 2 ತಿಂಗಳು ಬಳಸಿದೆನಷ್ಟೇ, ನನ್ನ ಮಂಡಿ ನೋವಿನ ಸಮಸ್ಯೆ ಮಾಯವಾಗಿತ್ತು. ನನ್ನಂತೆಯೇ ಕೀಲು ನೋವಿರುವ ನನ್ನೆಲ್ಲಾ ಸ್ನೇಹಿತರಿಗೂ ಡಾ.ಆರ್ಥೋ ಬಳಸುವಂತೆ ಸಲಹೆ ನೀಡಿದೆ.


Maharashtra

ಮಾಧವಿ ದೇವರೂಖಕರ್, 59 ವರ್ಷ, ಸ್ವತಃ ಇವರೇ ನಮಗೆ ತಿಳಿಸಿದ ಪ್ರಕಾರ ಮಂಡಿಗಳ ನೋವಿನಿಂದಾಗಿ ಸಾಕಷ್ಟು ಸಮಸ್ಯೆಗಳಿಗೆ ಈಡಾಗಿದ್ದರಂತೆ. ನಿತ್ಯದ ಕೆಲಸ ಕಾರ್ಯ ನಿರ್ವಹಿಸಲು ಕೂಡ ಇವರು ಪಡಿಪಾಟಲು ಪಡುತ್ತಿದ್ದರಂತೆ. ನಂತರ ಒಂದು ದಿನ ಇವರಿಗೆ ಡಾ.ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ಸ್ ಮಾಹಿತಿ ಸಿಕ್ಕಿತಂತೆ. ಅದರ ಮೇಲಿನ ಸೂಚನೆ ಪ್ರಕಾರ ನಿಯಮಿತವಾಗಿ ಬಳಸಿದ್ದರಿಂದ, ಇವರು ಕೀಲುಗಳ ನೋವಿನಿಂದ ಗುಣಮುಖರಾಗಿದ್ದಾರೆ. ಡಾ.ಆರ್ಥೋದಲ್ಲಿ ಉತ್ತಮ ಫಲಿತಾಂಶಗಳಿವೆ ಎನ್ನುತ್ತಾರೆ.


Uttar Pradesh

ಮುಖೇಶಕುಮಾರ್, 44 ವರ್ಷ ವಯಸ್ಸು, ಸುಮಾರು ವರ್ಷಗಳ ಹಿಂದೆ ನನಗೆ ಕೀಲು ನೋವಿನ ಸಮಸ್ಯೆ ಜೋರಾಗಿತ್ತು. ನಾನೂ ಸಹ ಹಲವಾರು ಔಷಧಿಗಳನ್ನು ಸೇವಿಸಿದೆ, ಆದರೂ ಏನೂ ಪ್ರಯೋಜನವಾಲಿಲ್ಲ. ಬಳಿಕ ನನ್ನ ಪರಿಚಯುದವರೊಬ್ಬರು ಡಾ.ಆರ್ಥೋ ತೈಲ ಮತ್ತು ಕ್ಯಾಪ್ಸೂಲ್ಸ್ ಬಳಸಿ ನೋಡಲು ತಿಳಿಸಿದರು. ನಿಯಮಿತವಾಗಿ 6 ತಿಂಗಳು ಬಳಸಿದ ನಂತರ, ನಾನು ಕೀಲುಗಳ ನೋವಿನಿಂದ ಮುಕ್ತನಾಗಿದ್ದೆ. ಈಗ ನಾನು ಮೊದಲಿಗಿಂತಲೂ ಆರೋಗ್ಯವಾಗಿದ್ದೇನೆ ಎಂದೆನಿಸುತ್ತಿದೆ.

24x7 Helpline No.: 7876977777 • www.drorthooil.com • Available at all medical & general stores

ನಕಲಿ ಉತ್ಪನ್ನಗಳಿಂದ ಎಚ್ಚರವಿರಲಿ

ಡಾ. ಆರ್ಥೋ’ರವರ ಎಲ್ಲಾ ಉತ್ಪನ್ನಗಳನ್ನು ‘ಡಾ. ಆರ್ಥೋ’ ಎಂಬ ಹೆಸರಿನಲ್ಲಿಯೇ ಉತ್ಪಾದಿಸಲಾಗುತ್ತದೆ ಮತ್ತು ಮಾರಾಟ ಮಾಡಲಾಗುತ್ತದೆ. ಮಾರುಕಟ್ಟೆಯಲ್ಲಿ ಲಭ್ಯವಿರುವ ಇದೇ ರೀತಿಯ ಹೆಸರನ್ನು ಹೊಂದಿರುವ ಪ್ಯಾಕೇಜಿಂಗ್, ಬಾಟಲ್, ಜಾಹೀರಾತು ಇತ್ಯಾದಿಗಳಿಗೆ ಮಾರು ಹೋಗದಿರಿ.